
ಲಂಕೇಶ್

ಅಕ್ಟೋಬರ್ 3, 2007 ರೂ.10/-

RSS ಕೈವಾಡ



ಚಡ್ಡಿ ಟೆರರಿಸಂಗೆ ಗೌಡಾ ರಕ್ಷಣೆ



ಸ್ಥಳೀಯ ಸಂಸ್ಥೆಗಳ

ಚುನಾವಣೆ ವಿಶೇಷಾಂಕ



ಹುಬ್ಬಳ್ಳಿ
ಬಳ್ಳಾರಿ
ಮಂಗಳೂರು
ಶಿವಮೊಗ್ಗ
ಮಂಡ್ಯ
ಮೈಸೂರು
ಹಾಸನ
ರಾಮನಗರ
ತುಮಕೂರು
ಕೊಪ್ಪಳ
ರಾಯಚೂರು
ದಾವಣಗೆರೆ
ಚಿತ್ರದುರ್ಗ
ಹಾವೇರಿ
ಬಾಗಲಕೋಟೆ
ಬಿಜಾಪುರ
ಗದಗ
ಗುಲ್ಬರ್ಗಾ



ಸಂಘಪರಿವಾರಕ್ಕೆ "ಧರ್ಮಶ್ರದ್ಧೆ" ಮತ್ತು "ರಾಮಭಕ್ತಿ"ಯಾದರೂ ಇದೆಯೇ?

ಚಾರ್ವಾಕ

ಶಿವಸುಂದರ್

ಕಾಂಗ್ರೆಸ್ ಮತ್ತು ಕರುಣಾನಿಧಿ ರಾಮನ ಬಗ್ಗೆ ಲೇವಡಿ ಮಾಡುವ ಹೇಳಿಕೆ ನೀಡಿ ಅನಪೇಕ್ಷಿತವಾಗಿ ಸತ್ತಂತಿದ್ದ ಸಂಘಪರಿವಾರಕ್ಕೆ ಹೊಸ ಜೀವವನ್ನೇ ಕೊಟ್ಟುಬಿಟ್ಟರು. ಇದರಿಂದಾಗಿ ಈಗ ಪರಿವಾರದವರು ರಾಮಸೇತುವನ್ನು ಬಿಟ್ಟು ಮತ್ತೆ ರಾಮನಿಗೆ ಸೇತುವಾಹಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ಯಡಿಯೂರಪ್ಪನವರು ಯಾವುದೇ ಮುಚ್ಚುಮರೆಯಿಲ್ಲದೆ ಹೇಳಿದ ಪ್ರಕಾರ ಈ ವಿಷಯಕ್ಕೆ ರಾಮಜನ್ಮಭೂಮಿಗಿಂತಲೂ ನೂರು ಪಟ್ಟು ಹೆಚ್ಚಿನ ಓಟು ಗಳಿಸುವ ಶಕ್ತಿ ಇದೆಯಂತೆ. ಅದು ಹೌದೋ ಇಲ್ಲವೋ ಎಂದು ನೆರೆ ಸಂತ್ರಸ್ತ ಜನ ಬರಲಿರುವ ನಗರಸಭೆ ಚುನಾವಣೆಗಳಲ್ಲಿ ಹೇಗಿದ್ದರೂ ತೋರಿಸಿಕೊಡಲಿದ್ದಾರೆ.


ಆದರೆ ಬಾಬ್ರಿ ಮಸೀದಿಯಲ್ಲಿ ಕಳೆದು ಹೋದ ರಾಮನನ್ನು ಈಗ ಆಡಂ ಬ್ರಿಡ್ಜ್‌ನಲ್ಲಿ ಹುಡುಕಲು ಹೊರಟಿರುವ ಸಂಘಪರಿವಾರ ರಾಮಸೇತು ಇತ್ತೋ ಇಲ್ಲವೋ ಎಂಬುದಕ್ಕಿಂತ ರಾಮನಿದ್ದನೋ ಇಲ್ಲವೋ ಎಂಬ ವಿಷಯವನ್ನೇ ಪ್ರಧಾನ ಮಾಡುತ್ತಿವೆ. ರಾಮ ಈ ದೇಶದ ಜನರ ಆರಾಧ್ಯ ದೈವವಾದ್ದರಿಂದ ಜನರ ಶ್ರದ್ಧೆಯ ವಿಷಯವನ್ನು ವೈಜ್ಞಾನಿಕ ಮತ್ತು ಐತಿಹಾಸಿಕ ಪರೀಕ್ಷೆಗೆ ಗುರಿ ಮಾಡುವುದೇ ಜನರ ಶ್ರದ್ಧೆಗೆ ಮಾಡುವ ಅವಮಾನವೆಂದು ವಾದಿಸುತ್ತಿದ್ದಾರೆ. ಅದೇರೀತಿ ರಾಮನಿಲ್ಲವೆನ್ನುವ ನಾಸ್ತಿಕ ರಾಜಕಾರಣಿಗಳು ಇದೇ ವೈಜ್ಞಾನಿಕತೆಯನ್ನು ಇದೇ ಬಗೆಯ ಮೌಢ್ಯಗಳಿಂದ ತುಂಬಿರುವ ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳಿಗೆ ವಿಸ್ತರಿಸಬಲ್ಲರೇ ಎಂದು ಪ್ರಶ್ನಿಸುತ್ತಿದ್ದಾರೆ.

ಪ್ರಶ್ನೆಗಳನ್ನು ಈ ರೀತಿ ಫ್ರೇಮ್ ಮಾಡುವುದರಲ್ಲೇ ಸಂಘಪರಿವಾರದ ಕುತಂತ್ರವಿದೆ. ಏಕಕಾಲದಲ್ಲಿ ಅವರು ರಾಮಶ್ರದ್ಧೆಯನ್ನು ಇಡೀ ಹಿಂದೂ ಜನಸಮುದಾಯದ ಏಕೈಕ ಶ್ರದ್ಧೆಯೆಂಬಂತೆ ಚಿತ್ರಿಸುತ್ತಿದ್ದಾರೆ. ಮಾತ್ರವಲ್ಲ, ರಾಮಸೇತುವಿನ ಹಿಂದಿನ ತಮ್ಮ ಚುನಾವಣಾ ರಾಜಕಾರಣವನ್ನು ದೇಶದ ಶ್ರದ್ಧೆಯ ವಿಷಯವೆಂಬಂತೆ ಚಿತ್ರಿಸುತ್ತಿದ್ದಾರೆ. ಅದಕ್ಕೆ ಪೂರಕವಾಗಿ ರಾಮಸೇತುವನ್ನು ರಾಮ ನಿರ್ಮಿಸಿದ್ದ ಎಂಬ ಮೌಢ್ಯವನ್ನು ಲೇವಡಿ ಮಾಡಿದ ಕರುಣಾನಿಧಿಯ ಹೇಳಿಕೆಯನ್ನು ಬಳಸಿಕೊಳ್ಳುತ್ತಿದ್ದಾರೆ. ಅಷ್ಟು ಮಾತ್ರವಲ್ಲ, ರಾಮಸೇತು ನಾಶದ ಪರವಾಗಿರುವವರೆಲ್ಲಾ ನಾಸ್ತಿಕರು ಮತ್ತು ರಾಮಸೇತು ಇರಬೇಕು ಎನ್ನುವವರು ಮಾತ್ರ ಆಸ್ತಿಕರು ಎಂಬಂತೆಯೂ ಪ್ರಚಾರ ಮಾಡುತ್ತಾ ಈ ದೇಶದ ಬಹುಪಾಲು ಆಸ್ತಿಕ ಮತದಾರರ ಓಟಿಗೆ ಲಗ್ಗೆ ಇಡುವ ಪ್ರಯತ್ನ ನಡೆಸಿದ್ದಾರೆ.

ರಾಮಸೇತು ಇತ್ತು ಎಂಬುದು ತಮ್ಮ ಶ್ರದ್ಧೆಯ ವಿಷಯ ಮತ್ತು ಯಾರು ಅದನ್ನು ಕೆಡವಲು ಪ್ರಯತ್ನಿಸುತ್ತಾರೋ ಅವರು ಈ ದೇಶದ ಭಾವನಾತ್ಮಕ ಹಂದರವನ್ನೇ ಅಳಿಸಲು ಪ್ರಯತ್ನಿಸಿದಂತೆ ಎಂದು ಅಬ್ಬರಿಸುತ್ತಿರುವ ಸಂಘಪರಿವಾರ ಕೇವಲ ಯೋಜನೆಯ ಹಂತದಲ್ಲಿದ್ದ ರಾಮಸೇತು ನಾಶದ ಯೋಜನೆಯನ್ನು ಜಾರಿಗೆ ತರಲು ಕ್ರಿಯಾಯೋಜನೆ ರೂಪಿಸಿದ್ದೂ ಮತ್ತು ಅದಕ್ಕೆ ಬಜೆಟ್ಟಿನಿಂದ ಹಣ ತೆಗೆದುಕೊಟ್ಟದ್ದು ಬಿಜೆಪಿ ಸರ್ಕಾರವೇ ಎಂಬುದನ್ನು ಮರೆಸುತ್ತಿದ್ದಾರೆ. ಆಗ ಕರುಣಾನಿಧಿಯವರ ಡಿಎಂಕೆ ಪಕ್ಷವೂ ಅವರ ಜೊತೆಗಿತ್ತು, ರಾಮಭಕ್ತ ಬಿಜೆಪಿ ಮಂತ್ರಿಗಳಾಗಿದ್ದ ಮತ್ತು ಸಂಘಪರಿವಾರದ ಚಡ್ಡಿಗಳನ್ನೂ ಹಾಕಿಕೊಂಡಿದ್ದ ಅರುಣ್ ಜೈಟ್ಲಿ ಗೋಯಲ್ ಮತ್ತು ಶತ್ರುಘ್ನ ಸಿಂಹರೆಲ್ಲರು ರಾಮಸೇತು ನಾಶಕ್ಕೆ ತಮ್ಮ ಯಥಾಶಕ್ತಿ ಕೊಡುಗೆ ನೀಡಿದ್ದರು ಎಂಬುದನ್ನು ಈಗ ಯುಪಿಎ ಸರ್ಕಾರದ ವಿರುದ್ಧ ಮಾಡುತ್ತಿರುವ ಅಬ್ಬರದ ಪ್ರಚಾರದಲ್ಲಿ ಮರೆಸುತ್ತಿದ್ದಾರೆ. ಹೀಗಾಗಿ ಇವರ ರಾಮಭಕ್ತಿ ಕೂಡಾ ಬೂಟಾಟಿಕೆಯದ್ದೇ. ಇದು ಮೊದಲನೇ ವಿಷಯ.

ಇನ್ನೂ ಶ್ರದ್ಧೆ ಮತ್ತು ನಂಬಿಕೆಯ ವಿಷಯ. ಬ್ರಿಟಿಷರು ಈ ದೇಶಕ್ಕೆ ಕಾಲಿಟ್ಟ ನಂತರ ಮಾಹಕುಶಾಹಿ ಪರಿಚಯಿಸಿದ ಆಧುನಿಕ ಸೌಕರ್ಯಗಳ ಲಾಭವನ್ನೆಲ್ಲಾ ಮೊದಲು ಅನುಭವಿಸಿದ್ದು ಈಗ ಸಂಪ್ರದಾಯ ಎಂದು ಬೊಬ್ಬೆ ಹೊಡೆಯುತ್ತಿರುವವರ ಪೂರ್ವಜರೇ ಅಲ್ಲವೇ? ಅದರಲ್ಲೂ 1947ರ ನಂತರ, ವಿಶೇಷವಾಗಿ 1991ರ ನಂತರ ಅಮೆರಿಕದ ಸುಖದ ಸುಖಕ್ಕೆ ವ್ರತ ಭ್ರಷ್ಟರಾದವರೆಲ್ಲಾ ಯಾರು? ಅಷ್ಟೆಲ್ಲಾ ಏಕೆ? ಪುರೋಹಿತರು ಮತ್ತು ಮಠಾಧೀಶರು ಸಮುದ್ರೋಲ್ಲಂಘನೆ ಮಾಡಬಾರದೆಂಬುದು ಒಂದು ಶ್ರದ್ಧೆಯ ವಿಷಯ. ಆದರೆ ಅಮೆರಿಕದಲ್ಲಿ 4000 ದೇವಸ್ಥಾನಗಳಿಗೆ ಪೂಜಾರಿಗಳು ಬೇಕೆಂದು ದಿಮ್ಯಾಂಡ್ ಸೃಷ್ಟಿಯಾದ ತಕ್ಷಣ ಅನುಕೂಲಕ್ಕೆ ತಕ್ಕಂತೆ ಒಂದು ಪ್ರಾಯಶ್ಚಿತ್ತ ವಿಧಾನ ನಡೆಸಿ ವಿಮಾನವೇರಲು ಕ್ಯೂ ಹಚ್ಚಿಲ್ಲವೇ? ಇದೇನೆಂದು ಕೇಳಿದರೆ ವರ್ತಮಾನಕ್ಕೆ ತಕ್ಕಂತೆ ಆಚಾರ ವಿಚಾರಗಳು ಬದಲಾಗಬೇಕೆಂದು ಅವರೇ ಭಾಷಣ ಬಿಗಿಯುತ್ತಾರೆ.

ಮನುಸ್ಮೃತಿಯೆಂಬುದೂ ಅವರ ಶ್ರದ್ಧೆಯ ವಿಚಾರ. ಆದರೆ ಅದನ್ನು ಕ್ರೂರ ಜಾತಿ ಪದ್ಧತಿಯನ್ನು ಉಳಿಸಿಕೊಳ್ಳಲು ಮತ್ತು ದಲಿತ ಶೂದ್ರ ಜಾತಿಗಳನ್ನು ತಮ್ಮ ಅಡಿಯಾಳುಗಳನ್ನಾಗಿ ಇಟ್ಟುಕೊಳ್ಳಲು ಮಾತ್ರ ಬಳಸಿಕೊಳ್ಳುವ ಈ ಸಂಘಪರಿವಾರ ಬ್ರಾಹ್ಮಣ ಜಾತಿಗಳು ಕೇವಲ ಪೌರೋಹಿತ್ಯ ಮಾತ್ರ ಮಾಡಿಕೊಂಡು ದೇವಸ್ಥಾನಗಳಲ್ಲಿ ಕಳೆಯಬೇಕೆಂಬುದಕ್ಕೆ ಮಾತ್ರ ಕಾಲಕ್ಕೆ ತಕ್ಕಂತೆ ತಿದ್ದುಪಡಿ ತಂದುಕೊಳ್ಳುತ್ತದೆ.



ಆಗ ಮಾತ್ರ ಹಿಂದೂ ಧರ್ಮದಲ್ಲಿ ಹೊಡೆದು ಓಡಿಸಬೇಕಾದ ಕೆಲವು ಮೌಢ್ಯಗಳಿವೆ ಎಂದು ಆಧುನಿಕತೆಯ ಚೌಕಟ್ಟಿನಲ್ಲಿ ಸಾಮಾಜಿಕ ಸುಧಾರಣೆಯ ಹರಿಕಾರರಾಗಿ ಬಿಡುತ್ತಾರೆ. ಆದರೆ ಅದೇ ರೀತಿ ದಲಿತ ಮತ್ತು ಶೂದ್ರ ಜಾತಿಗಳ ಜನ ಈ ಮನುಸ್ಮೃತಿ ಅಂಕೆಗಳನ್ನು ಮೀರಿ ಆಧುನಿಕ ಪ್ರಜಾತಂತ್ರದ ಚೌಕಟ್ಟಿನಲ್ಲಿ ತಮ್ಮ ಹಕ್ಕನ್ನು ಪ್ರತಿಪಾದಿಸಲು ಪ್ರಾರಂಭಿಸುತ್ತಿದ್ದಂತೆ ಪರಂಪರೆಯ ನಾಶ, ಕ್ರಿಶ್ಚಿಯನ್ ಧರ್ಮದ ಪ್ರಭಾವ, ಹಿಂದೂ ವಿರೋಧಿ ಷಡ್ಯಂತ್ರಗಳೆಂಬ ವಾದಗಳನ್ನು ಹರಿ ಬಿಡುತ್ತಾರೆ. ಇದೆಲ್ಲದರ ಸಾರಾಂಶವಿಷ್ಟೇ: ಸಂಘಪರಿವಾರ ಇರುವುದೇ ಬ್ರಾಹ್ಮಣೀಯ ವರ್ಗಗಳ ಮತ್ತು ಜಾತಿಗಳ ಆಸಕ್ತಿಯನ್ನು ಕಾಪಾಡಲು. ಅದು ಆಧುನಿಕತೆಯ ಪರ ವಹಿಸಿದಾಗ ಈ ವರ್ಗಗಳೂ ಆಧುನಿಕ ಸೌಲಭ್ಯಗಳನ್ನು ಪಡೆದುಕೊಳ್ಳಲು ಮಾಡಿಕೊಳ್ಳುತ್ತಿರುವ ಬದಲಾವಣೆ ಆಗಿರುತ್ತದೆ. ಅದು ಸಂಪ್ರದಾಯದ ಪರ ನಿಂತು ಆಧುನಿಕತೆಯನ್ನು ಪ್ರತಿಭಟಿಸುವುದು ಶೂದ್ರ ಮತ್ತು ದಲಿತ ಜಾತಿಗಳು ಸಂಪ್ರದಾಯಗಳ ಕಟ್ಟೆಯನ್ನು ಮೀರಿ ಆಧುನಿಕ ಪ್ರಜಾತಂತ್ರದ ಸಮಾನತೆಯುಳ್ಳ ನಾಗರಿಕರಾಗಲು ಹಂಬಲಿಸಿದಾಗ. ರಾಮ ಇವರಿಗೆ ಓಟಿನ ಏಜೆಂಟ್ ಆಗಿರುವಂತೆ ಇವರ ಧರ್ಮಶ್ರದ್ಧೆಯೂ ಬೂಟಾಟಿಕೆಯದ್ದೂ.... ತೋರುಂಭ ಲಾಭ. ದಲಿತ ಮತ್ತು ಶುದ್ರ ಜನತೆಗೆ ಮೋಸ ಮಾಡುವಂಥದ್ದು!

ಆದರೆ ಧಾರ್ಮಿಕ ಶ್ರದ್ಧೆಯ ವಿಷಯದಲ್ಲಿ ಇವರು ಇತರರ ಶ್ರದ್ಧೆಯ ಬಗೆಗೂ ಇದೇರೀತಿ ವಿನಾಯತಿಯನ್ನು ತೋರುವರೇ? ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮಗಳ ಬಗ್ಗೆ ಮತ್ತು ಅದಕ್ಕೆ ಶ್ರದ್ಧೆ ತೋರಿಸುವ ಜನಗಳ ಬಗ್ಗೆ ಇವರದ್ದು ಯಾವ ರೀತಿಯ ಡಬಲ್ ಸ್ಟಾಂಡರ್ಡ್ ಎಂಬುದನ್ನು ಭೈರಪ್ಪನವರ 'ಆವರಣ' ಓದಿದರೆ ಗೊತ್ತಾಗುತ್ತದೆ. ಅದರಲ್ಲಿ ಇಸ್ಲಾಂನಲ್ಲಿನ ಹುಳುಕುಗಳನ್ನು ಎತ್ತಿ ತೋರಿಸಲು ಭೈರಪ್ಪನವರು ವೈಜ್ಞಾನಿಕತೆ ಮತ್ತು ಸಮಾಜವಾದವನ್ನೆಲ್ಲಾ ಬಳಸಿಕೊಂಡು ಇಸ್ಲಾಮ್ ಹೇಗೆ ಒಂದು ಮೌಢ್ಯದ ಗೊಡ್ಡು ಎಂದು ಸಾಬೀತು ಮಾಡಲು ಹರಸಾಹಸ ಪಡುತ್ತಾರೆ. ಆದರೆ ವೈಜ್ಞಾನಿಕತೆ ಮತ್ತು ಸಮಾಜವಾದಿ ತಿಳಿವಳಿಕೆ ಹಿಂದೂ ಧರ್ಮದ ಕ್ರೂರತೆಗಳಿಗೆ ಮತ್ತು ಅದರ ಅಡಿಪಾಯವಾದ ಬ್ರಾಹ್ಮಣ್ಯಕ್ಕೆ ಬಂದಾಗ ಬುದ್ಧಿಪೂರ್ವಕವಾಗಿ ಮರೆಮಾಚಬಡಲಾಗುತ್ತದೆ. ಅದಿರಲಿ. ಅದು ಗೊತ್ತಿರುವ ವಿಷಯ.

ಆದರೆ ಪ್ರಶ್ನೆ ಇರುವುದು ಇವರು ಹಿಂದೂ ಎಂದು ಕರೆದು ತಮ್ಮೊಡನೆ ಸೇರಿಸಿಕೊಳ್ಳ ಬಯಸುವ ಬ್ರಾಹ್ಮಣೇತರ ಶ್ರದ್ಧೆಗಳ ಬಗೆಗೆ ಇವರೂ ಇದೇರೀತಿ ಗೌರವನೀಯವಾದ ನಿಲುವನ್ನು ಹೊಂದಿರುತ್ತಾರೆಯೇ? ಉದಾಹರಣೆಗೆ ಬಸವಣ್ಣ ಬ್ರಾಹ್ಮಣನಲ್ಲ, ತಮ್ಮಂತೆ ಇತರ ಶೂದ್ರ ಜಾತಿಗೆ ಸೇರಿದವನೆಂದು ಬಹಳಷ್ಟು ಶೂದ್ರ ಮತ್ತು ದಲಿತ ಸಮುದಾಯಗಳು ನಂಬಿಕೊಳ್ಳುತ್ತವೆ. ರಾಮನಂತೆ ಬಸವ ಪುರಾಣದ ಕಲ್ಪನೆಯಲ್ಲ, ಐತಿಹಾಸಿಕ ವ್ಯಕ್ತಿ ಎನ್ನುವುದು ನಿಜವೇ ಆದರೂ 12ನೇ ಶತಮಾನದಲ್ಲಿ ಆಗಿಹೋದ ಆತನ ಹುಟ್ಟಿನ ಬಗ್ಗೆ ಪುರಾಣದಷ್ಟೆ ಕಲ್ಪನೆಗಳು ಸುತ್ತುವರೆದುಕೊಂಡಿವೆ. ಹೀಗಾಗಿ ಶ್ರದ್ಧೆಗಳಲ್ಲಿ ನಂಬಿಕೆ ಇರುವವರು ಅವರವರ ಶ್ರದ್ಧೆ ಅವರವರದು ಎಂದು ಏಕೆ ಸುಮ್ಮನಾಗುವುದಿಲ್ಲ? ಏಕೆ ಸಂಘಪರಿವಾರದ ಆಸ್ಥಾನ ವಿದ್ವಾಂಸರಾದ ಚಿದಾನಂದಮೂರ್ತಿಗಳು "ಬಸವ ಒಬ್ಬ ಐತಿಹಾಸಿಕ ವ್ಯಕ್ತಿ ಅವನು ಬಸವನಬಾಗೇವಾಡಿಯಲ್ಲಿ ಬ್ರಾಹ್ಮಣರ ಮನೆಯಲ್ಲೇ ಹುಟ್ಟಿದ" ಎಂದು ಊಹಾಪೋಹಗಳ ಸಂಶೋಧನೆಯ ಮೂಲಕ "ಸಾಬೀತು" ಮಾಡಲು ಯತ್ನಿಸುತ್ತಾರೆ? ಇದು ಶೂದ್ರ ಜಾತಿಗಳ ಶ್ರದ್ಧೆಯ ಮೇಲೆ ಬ್ರಾಹ್ಮಣೀಯ ಆಕ್ರಮಣವಲ್ಲವೇ?

ಅದೇರೀತಿ ಕನಕ ಗೋಪುರವೂ ಸಹ ಅಬ್ರಾಹ್ಮಣ ಜಾತಿಗಳ ಶ್ರದ್ಧೆಯ ವಿಷಯವೇ ಆಗಿತ್ತಲ್ಲವೇ? ಅದನ್ನು ಕೆಡುವುದು ಮತ್ತೊಬ್ಬರ ಶ್ರದ್ಧೆಯನ್ನು ಕೆಡವಿದಂತೆ ಆಗುತ್ತದೆ ಎನ್ನುವುದು ರಾಮಸೇತುವನ್ನು ಶ್ರದ್ಧೆಯ ವಿಷಯಕ್ಕಾಗಿ ಕೆಡವಬಾರದೆನ್ನುವವರಿಗೆ ಏಕೆ ಅರಿವಾಗಲಿಲ್ಲ?

ಇತಿಹಾಸ ಹಾಗೂ ಪುರಾಣಗಳಿಂದ ಇಂಥ ಸಾವಿರ ಉದಾಹರಣೆಗಳನ್ನು ಕೊಡಬಹುದು. ಸಂಘಪರಿವಾರ ಶ್ರದ್ಧೆಯೆಂದು ಗುರುತಿಸುವುದು ಬ್ರಾಹ್ಮಣಿಯ ಶ್ರದ್ಧೆಗಳನ್ನು ಮಾತ್ರ. ಅದೂ ಸಹ ಧಾರ್ಮಿಕ ಶ್ರದ್ಧೆಯಲ್ಲ, ಇತರ ಜನಾಂಗಗಳನ್ನು ತಮ್ಮ ಅಡಿಯಾಳಾಗಿ ಇರಿಸಿಕೊಳ್ಳುವ ರಾಜಕೀಯ ತಂತ್ರ. ಈಗಲೂ ರಾಮಭಕ್ತಿಯನ್ನೇ ದೇಶಭಕ್ತಿಯೆನ್ನುವ ಮೂಲಕ ಇಡೀ ಭಾರತದಲ್ಲಿ ರಾಮನನ್ನು ಆರಾಧಿಸುವ ಶ್ರದ್ಧೆಯೊಂದೇ ಅಧಿಕೃತ ಹಿಂದೂ ಶ್ರದ್ಧೆಯೆಂದು ಏಕರೂಪಿಕರಿಸಲು ಪ್ರಯತ್ನಿಸುತ್ತಿದ್ದಾರೆ. ಆ ಮೂಲಕ ಬ್ರಾಹ್ಮಣ್ಯದ ದಬ್ಬಾಳಿಕೆಯ ವಿರುದ್ಧ ಬಂಡೆದ್ದ ಶೂದ್ರ, ದಲಿತ ಮತ್ತು ಇತರ ಅಬ್ರಾಹ್ಮಣ ಶ್ರದ್ಧೆಗಳಾದ ಜೈನ ಮತ್ತು ಭೌದ್ಧ ಶ್ರದ್ಧೆಗಳನ್ನು ಬಿಜೆಪಿ ರಾಮನೆಂಬ ಆಧುನಿಕ ಬ್ರಾಹ್ಮಣ್ಯದ ಸಂಕೇತದ ಅಡಿ ತಂದು ನವ ವರ್ಣಾಶ್ರಮವನ್ನು ಹೇರುವ ರಾಜಕೀಯ ಹುನ್ನಾರ ನಡೆದಿದೆ. ■

No Comments



"ಕುಮಾರಸ್ವಾಮಿಯವರು ಧರ್ಮರಾಯಸಂಭವರು, ಶಾಂತಿಪ್ರಿಯರು. ಮುಂದಿನ ಅವಧಿಗೂ ಅವರೇ ಮುಖ್ಯಮಂತ್ರಿಯಾಗಲೇ ಬೇಕು."

-ಚನ್ನಿಗಪ್ಪ



"ದೆಹಲಿಯಲ್ಲಿ ಮಹಿಳೆಯರು ಶ್ರೀಮಂತರು ವಾಸಿಸುವ ಪ್ರದೇಶಗಳಿಗಿಂತ ಸ್ಲಂ ಜನರು ವಾಸಿಸುವ ಪ್ರದೇಶಗಳಲ್ಲೇ ಹೆಚ್ಚು ಸುರಕ್ಷಿತರು. ಏಕೆಂದರೆ ಸ್ಲಂ ಜನರಿಗೆ ಪೋಲಿಸರ ಬಗ್ಗೆ ಹೆಚ್ಚಿನ ಭಯವಿದೆ."

-ಕಿರಣ್ ಬೇದಿ

"ಈ ಸರ್ಕಾರ ಮುಂದುವರೆಯುವುದು ವೈಯಕ್ತಿಕವಾಗಿ ನನಗೂ ಇಷ್ಟವಿಲ್ಲ."

-ಬಿ.ಕೆ. ಚಂದ್ರಶೇಖರ

"ಅಧಿಕಾರ ಹಸ್ತಾಂತರ ಮಾಡುತ್ತೇವೆ ಅಥವಾ ಇ... ಎಂದು ಜೆಡಿಎಸ್ ಎಲ್ಲೂ ಹೇಳಿಯೇ ಇಲ್ಲ, ಅದೇ ಮಾಧ್ಯಮದವರ ಸೃಷ್ಟಿ."

-ಮೆರಾಜುದ್ದೀನ್ ಪಟೇ...

ನಂಬಿದ್ರೆನಂಬಿ ಬಿಟ್ರೆಬಿಡಿ

"ತಮಿಳುನಾಡಿಗೆ ಬೆಂಕಿ ಹಚ್ಚಿದ ಪ್ರಕರಣದಲ್ಲಿ ಹಿಂದೂ ಸಂಘಟನೆಗಳ ಕೈವಾಡವಿಲ್ಲ, ಹಿಂದೂ ಸಂಘಟನೆಗ... ಶಾಂತಿಪ್ರಿಯರು."

-ಯಡಿಯೂರಪ್ಪ



"ಮಳೆ ನಿಂತ ಒಂದು ವಾರದೊಳಗೆ ರಸ್ತೆ ರಿಪೇರಿಗೆ ಆದ್ಯತೆ ಕೊಡಲಾಗುವುದು."

-ಬಸವನಗುಡಿ ಶಾಸಕ ಚಂದ್ರಶೇಖರ್

"ರಾಮಜನ್ಮಭೂಮಿ ಹೋರಾಟ ವಿಫಲವಾಗಲು ಬಿಜೆಪಿಯೇ ಕಾರಣ."

-ಪ್ರವೀಣ್ ತೊಗಾಡಿಯ

"ಹಿಮಾಲಯ ಹಿಮಾಲಯವಾಗಿದ್ದರೆ, ಗಂಗಾನ... ಗಂಗಾನದಿಯಾಗಿದ್ದರೆ, ರಾಮ ರಾಮನೆಂಬುದು ನಿಜ..."

-ಕಾಂಗ್ರೆಸ್ ಕಾನೂನು ಮಂತ್ರಿ ಭಾರಧ್ವಾಜ್

"ಹೌದಾದು. ರಾಮನೆಂಬುದು ಹಿಮಾಲಯ ಮ... ಗಂಗೆಯ ಗಾತ್ರದ ದೊಡ್ಡ ಸುಳ್ಳೆಂಬುದು ನಿಜ."

-ಕರುಣಾನಿ...

"ಮುಖ್ಯಮಂತ್ರಿಯಾಗಲು ವಾಟಾಳರೇ ಸೂಕ್ತ ವ್ಯಕ್ತಿ..."

-ಬಿಜೆಪಿ ಮಂತ್ರಿ ರಾಮಚಂದ್ರಗೌ...

ಕುಡುಕ ರಾಮ ನಿಜವೇ?


"ವಾಲ್ಮೀಕಿರಾಮಾಯಣದಲ್ಲಿ ರಾಮನನ್ನು ಕುಡುಕ ಎಂದು ಹೇಳಲಾಗಿದೆಅದನ್ನು ನಾನು ಹೇಳಿದ್ದಲ್ಲ, ಮೊದಲು ಅದ್ವಾ... ವಾಲ್ಮೀಕಿ ರಾಮಾಯಣವನ್ನು ಓದಿಕೊಂಡು ಬರಲಿ."

-ಕರುಣಾನಿ...

ಇಬ್ಬರೂ ಮೀನುಗಾರರ ವಿರೋಧಿಗಳೇ

"ನಾವು ಸೇತು ಸಮುದ್ರಂ ಯೋಜನೆಗೆ ವಿರೋಧಿಗಳ... ರಾಮಸೇತುವೆ ನಾಶ ಹಾಳುಮಾಡಬಹುದಾದ ವಿಶ್ವ... ನಾಶಕ್ಕೆ ಮಾತ್ರ ನಾವು ವಿರೋಧ."

-ಅದ್ವಾನಿ



"ರಾಮಸೇತುವೆ ನಾಶವಾಗಲೇಬೇಕು ಎಂಬುದು ನನ್ನ ಅಭಿಪ್ರಾಯವಲ್ಲ, ಒಟ್ಟಿನಲ್ಲಿ ಅಲ್ಲಿ ಕಡಲ್ಗಾಲುವೆ ಆಗಬೇಕು ಅಷ್ಟೆ."

-ಕರುಣಾನಿಧಿ

ಅವಳಿ-ಜವಳಿ

"ಅಣು ಇಂಧನ ಒಪ್ಪಂದದಿಂದ ಭಾರತದ ಮೇ... ಅಮೆರಿಕದ ನಿಯಂತ್ರಣ ಹೆಚ್ಚುತ್ತದೆ. ಅದರ ಬಗ್ಗೆ ಯಾವುದ... ನಿರ್ಧಾರವನ್ನು ತೆಗೆದುಕೊಳ್ಳುವುದನ್ನು ಕನಿಷ್ಠ ... ತಿಂಗಳಾದರೂ ಮುಂದೂಡಿ."

-ಪ್ರಕಾಶ್ ಕಾರಟ್, ಸಿಪಿಎಂ ಕಾರ್ಯದರ್ಶಿ

"ಅಣು ಇಂಧನ ಒಪ್ಪಂದ ನಮ್ಮ ಶಕ್ತಿಯ ಅಗತ್ಯಗಳನ್ನ... ತೀರಿಸುತ್ತದೆ. ನಾವು ಅಂಥ ಅಮೆರಿಕ ವಿರೋಧಿ ನಿಲುವ... ತಾಳಬಾರದು. ವಿಯೆಟ್ನಾಂನಲ್ಲಿ ಅತಿ ಹೆಚ್ಚು ವಿದೇ... ಬಂಡವಾಳ ಹೂಡಿರುವುದು ಅಮೆರಿಕವೇ. ಹಾಗ... ಅದು ಕಮ್ಯುನಿಸ್ಟ್ ದೇಶವಾಗಿಲ್ಲವೇ?"

-ಬುದ್ಧದೇವ ಮತ್ತು ಜ್ಯೋತಿ ಬಸು ಸಿಪಿಎಂನ ಹಿರಿಯ ನಾಯಕರು

ವಾರದ ವಿವೇಕ

"ಭೂಮಿಯ ವ್ಯಾಪ್ತಿ ಮೀರಿ ಮೇಲೆ ಆಕಾಶದಿಂ... ನೋಡಿದಾಗ ಭೂಮಿಯು ಗಡಿಗಳಿಲ್ಲದ ಗೋಳ... ಉಂಡೆಯಂತೆ ಮಾತ್ರ ಕಾಣುತ್ತದೆ. ಗಡಿಗಳೆಲ್ಲಾ ಮಾನ... ನಿರ್ಮಿತ."


-ಸುನೀತಾ ವಿಲಿಯಮ್... ಗಗನ ಯಾ...

ಮಿಡ್ ಡೆ ಪತ್ರಕರ್ತರ ಜೈಲು ಶಿಕ್ಷೆ ಕುರಿತು....



ಕಂಡಹಾಗೆ

"ಇವತ್ತು ರಾಜಕಾರಣಿಗಳು ಪರಮಭ್ರಷ್ಟರಾಗಿದ್ದಾರೆ. ಹಣ ಮತ್ತು ಹೆಂಡದ ಮೇಲೆ ಚುನಾವಣೆಗಳಲ್ಲಿ ಗೆದ್ದು ಬರುವ 'ಜನ ನಾಯಕರು' ಬೇನಾಮಿ ಹೆಸರುಗಳಲ್ಲಿ ಗುತ್ತಿಗೆಗಳಿಂದ ಹಿಡಿದು ಆಸ್ತಿ ಸಂಗ್ರಹಣೆಯವರೆಗೂ ತೊಡಗಿದ್ದಾರೆ. ಅದಕ್ಕೆ ಸರಿಯಾಗಿ ಕಾರ್ಯಾಂಗವೂ ಹಳ್ಳ ಹಿಡಿದಿದೆ. ಎಷ್ಟು ಲಂಚ ನೀಡುತ್ತಾರೆ ಎಂಬ ಆಧಾರದ ಮೇಲೆ ಇವತ್ತು ಐಎಎಸ್ ಅಧಿಕಾರಿಗಳಿಂದ ಹಿಡಿದು ಸರ್ಕಾರದ ನಾಲ್ಕನೆ ದರ್ಜೆಯ ಗುಮಾಸ್ತನ ಬದುಕೂ ನಿರ್ಧಾರವಾಗುತ್ತದೆ. ನಮ್ಮ ಪ್ರಜಾಪ್ರಭುತ್ವದ ಎರಡು ಮುಖ್ಯ ಅಂಗಗಳು ಹೀಗೆ ಗಬ್ಬುನಾರುತ್ತಿರುವಾಗ ಸಾಮಾನ್ಯ ಜನರಿಗೆ ಆಶಾದೀಪವಾಗುವುದೇ ನ್ಯಾಯಾಂಗ.



ಆದರೆ ನೀತಿ, ನ್ಯಾಯ, ನಿಯಮಗಳನ್ನು ಪಾಲಿಸುವ ನ್ಯಾಯಾಂಗದಲ್ಲೇ ಹಲವು ನ್ಯಾಯಮೂರ್ತಿಗಳು ಭ್ರಷ್ಟಾಚಾರದ ಆರೋಪವನ್ನು ಹೊತ್ತಿದ್ದರೆ?

ಆ ಆರೋಪಗಳನ್ನು ತಕ್ಷಣವೇ ವಿಚಾರಣೆಗೆ ಒಳಪಡಿಸಿ ಜನರು ನ್ಯಾಯಾಂಗದಲ್ಲಿ ಇರಿಸಿರುವ ಭರವಸೆಯನ್ನು ಕಾಪಾಡಬೇಕಲ್ಲವೇ? ಆದರೆ ಹಾಗೆ ಮಾಡದೆ ಸಾಕ್ಷ್ಯಾಧಾರಗಳು ಮತ್ತು ದಾಖಲೆಗಳನ್ನು ಆಧರಿಸಿ ನ್ಯಾಯಮೂರ್ತಿಯೊಬ್ಬರ ವಿರುದ್ಧ ಭ್ರಷ್ಟಾಚಾರದ ಆರೋಪವನ್ನು ಮಾಡಿದ ಪತ್ರಿಕೆಯೊಂದರ ಸಿಬ್ಬಂದಿಗೇ ಶಿಕ್ಷೆ ವಿಧಿಸಿದರೆ ಜನರಲ್ಲಿ ನ್ಯಾಯಾಂಗದ ಬಗ್ಗೆ ಭರವಸೆ ಉಳಿಯುವುದು ಹೇಗೆ?

ಕೆಲ ತಿಂಗಳುಗಳಿಂದ ಇಂತಹದ್ದೇ ಒಂದು ಪ್ರಕರಣ ವಿವಾದವೆಬ್ಬಿಸುತ್ತಾ ಬಂದಿದೆ. ಕಳೆದ ಜನವರಿ ತಿಂಗಳಲ್ಲಿ ನಿವೃತ್ತರಾದ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವೈ.ಕೆ. ಸಬರ್‌ವಾಲ್‌ರವರು ಭ್ರಷ್ಟಾಚಾರ ಮತ್ತು ಸ್ವಜನಪಕ್ಷಪಾತದ ಆರೋಪಗಳನ್ನು ಎದುರಿಸುತ್ತಿದ್ದು ಅವುಗಳ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸಿ ಬರೆದಿದ್ದರು. ನ್ಯಾಯಮೂರ್ತಿಯೊಬ್ಬರ ವಿರುದ್ಧ ತನಿಖಾ ವರದಿಗಳನ್ನು ಬರೆದದ್ದೇ ನ್ಯಾಯಾಂಗನಿಂದನೆ ಎಂದು ಭಾವಿಸಿದ ದೆಹಲಿಯ ಹೈಕೋರ್ಟ್ ಮೊನ್ನೆ ಆ ಪತ್ರಿಕೆಯ ನಾಲ್ವರಿಗೆ ನಾಲ್ಕು ತಿಂಗಳ ಕಾಲ ಜೈಲು ಶಿಕ್ಷೆ ವಿಧಿಸಿದೆ. ಈ ಇಡೀ ಪ್ರಕರಣ ಕುರಿತಂತೆ ಖ್ಯಾತ ಲೇಖಕಿ ಅರುಂಧತಿ ರಾಯ್ ಇತ್ತೀಚಿನ 'ಔಟ್‌ಲುಕ್' ಪತ್ರಿಕೆಯಲ್ಲಿ ಅತ್ಯುತ್ತಮ ಲೇಖನವನ್ನು ಬರೆದಿದ್ದಾರೆ.

ರಾಮಸೇತು ಗದ್ದಲ, ಅಧಿಕಾರ ಹಸ್ತಾಂತರದ ಬಗ್ಗೆ ಗೊಂದಲ, ಸ್ಥಳೀಯ ಚುನಾವಣೆಗಳ ಸದ್ದು, ಈ ವಾರದ ಇಂತಹ ವಿಶೇಷ ಸುದ್ದಿಗಳ ಜೊತೆ ಪ್ರತಿವಾರ ರಾರಾಜಿಸುವ ಭ್ರಷ್ಟಾಚಾರ, ರಾಜಕಾರಣಿಗಳ ಕಾಲೆಳೆದಾಟ ಇತ್ಯಾದಿಗಳು ಇದ್ದರೂ, ಇವೆಲ್ಲವುಗಳ ನಡುವೆಯೂ ಇಂತಹ ಪ್ರಮುಖ ಬೆಳವಣಿಗೆಯತ್ತ ಕನ್ನಡಿಗರ ಗಮನ ಸೆಳೆಯಬೇಕಿರುವುದು ನಮ್ಮ ಜವಾಬ್ದಾರಿ. ಈ ಸಂಚಿಕೆಯಲ್ಲಿ ರಾಯ್‌ರವರ ಲೇಖನವನ್ನು ಅನುವಾದಿಸಿ ಪ್ರತ್ಯೇಕವಾಗಿ ಪ್ರಕಟಿಸಲು ಸ್ಥಳ ಇಲ್ಲದಿರುವುದರಿಂದ ಅದರ ಸಾರಾಂಶವನ್ನು ಅನುವಾದಿಸಿ ಇಲ್ಲಿ ನೀಡುತ್ತಿದ್ದೇನೆ.

* * * * * *

"ಇವತ್ತು ಸುಪ್ರೀಂಕೋರ್ಟ್ ನಮ್ಮೆಲ್ಲರ ಬದುಕಿನ ಪ್ರತಿ ಅಂಶದ ಮೇಲೂ ನಿಯಂತ್ರಣ ಹೊಂದಿದೆ. ಡ್ಯಾಮ್‌ಗಳನ್ನು ಕಟ್ಟಬೇಕೆ, ನದಿಗಳನ್ನು ಜೋಡಿಸಬೇಕೆ, ಪರ್ವತಗಳನ್ನು ಜರುಗಿಸಬೇಕೆ- ಅರಣ್ಯಗಳನ್ನು ಕಡಿಯಬೇಕೆ ಇಂತಹ ವಿಷಯಗಳಿಂದ ಹಿಡಿದು ನಮ್ಮ ನಗರಗಳು ಹೇಗಿರಬೇಕು, ಅಲ್ಲಿ ಎಂಥವರು ವಾಸಿಸಬೇಕು, ಯಾವ ಸ್ಲಮ್‌ಗಳನ್ನು ಎತ್ತಂಗಡಿ ಮಾಡಬೇಕು, ಯಾವ ರಸ್ತೆಯನ್ನು ಅಗಲಿಸಬೇಕು, ಯಾವ ಪ್ರತಿಭಟನೆಯನ್ನು ನಿಷೇಧಿಸಬೇಕು, ಯಾವ ಕಾರ್ಖಾನೆಯನ್ನು ಮುಚ್ಚಬೇಕು/ ಮಾರಬೇಕು/ಸ್ಥಳಾಂತರಿಸಬೇಕು, ಶಾಲಾಪಠ್ಯಗಳಲ್ಲಿ ಏನಿರಬೇಕು, ಯಾವ ಟ್ರಾಫಿಕ್ ನಿಯಮ ಉಲ್ಲಂಘನೆಗೆ ಎಷ್ಟು ದಂಡ ವಿಧಿಸಬೇಕು.... ಇಂತಹ ವಿಷಯಗಳನ್ನು ಕುರಿತಂತೆ ಸುಪ್ರೀಂಕೋರ್ಟ್ ಹಲವಾರು ತೀರ್ಪುಗಳನ್ನು ನೀಡಿದೆ.

ವಿಪರ್ಯಾಸವೆಂದರೆ ರಾಜಕಾರಣಿಗಳ ಲಂಚಕೋರತನದ ಬಗ್ಗೆ ಜನರಲ್ಲಿದ್ದ ಅಸಮಾಧಾನದಿಂದಾಗಿ ನ್ಯಾಯಾಂಗದ ಕ್ರಿಯಾವಾದ ಹುಟ್ಟಿಕೊಂಡಿತು. 1980ರ ದಶಕದಲ್ಲಿ ಅಸಹಾಯಕರ ಪರವಾಗಿ ಜನಸಾಮಾನ್ಯರೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಲು ನ್ಯಾಯಾಂಗ ಅನುವು ಮಾಡಿಕೊಟ್ಟಿತು. ಅದು ಕೆಲಕಾಲ ಜನರಲ್ಲಿ ಆಶೋತ್ತರಗಳನ್ನು ಮೂಡಿಸಿತ್ತು. ತನ್ನ ಕಾರ್ಯವ್ಯಾಪ್ತಿಯಲ್ಲಿ ಹೇಗೆ ಜನರಿಗೆ ಸ್ಥಳಾವಕಾಶವನ್ನು ನೀಡಿತೋ, ಹಾಗೆಯೇ ಜನರ ಬದುಕಿನಲ್ಲೂ ನ್ಯಾಯಾಂಗ ತನ್ನ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಲು ಅನುವು ಮಾಡಿಕೊಂಡಿತು. ಮಾತ್ರವಲ್ಲ, ಅಲ್ಲಿಯತನಕ ನ್ಯಾಯಾಂಗದ ವ್ಯಾಪ್ತಿಯ ಹೊರಗೇ ಉಳಿದಿದ್ದ ಹಲವಾರು ಕ್ಷೇತ್ರಗಳಲ್ಲೂ ಪಾತ್ರ ವಹಿಸುವಂತೆ ಮಾಡಿತು.

ಆದರೆ ತನ್ನ ಕಾರ್ಯವ್ಯಾಪ್ತಿಯನ್ನು ಹೀಗೆ ವಿಸ್ತಾರಗೊಳಿಸಿಕೊಂಡ ನ್ಯಾಯಾಂಗ ತನ್ನ ಹೊಣೆಗಾರಿಕೆಯನ್ನು ನಿಯಂತ್ರಿಸುವ ಯಾವ ನಿಯಮಗಳನ್ನು ರೂಪಿಸಿಕೊಂಡಿಲ್ಲ, ಮಾತ್ರವಲ್ಲ, ಅಂತಹ ನಿಯಮಗಳನ್ನು ಜಾರಿಗೆ ತರುವ ಎಲ್ಲ ಪ್ರಯತ್ನಗಳಿಗೆ ಅಡ್ಡಗಾಲು ಹಾಕುತ್ತಾ ಬಂದಿದೆ. ಉದಾಹರಣೆಗೆ ನ್ಯಾಯಾಂಗ ದುರಾಚಾರ ಕುರಿತಂತೆ ಒಂದು ಸಮಿತಿಯನ್ನು ರಚಿಸಬೇಕು ಎಂಬ ಸಲಹೆಯನ್ನು ತಿರಸ್ಕರಿಸಿದೆ. ಅಷ್ಟೇ ಅಲ್ಲ, ಮಾಹಿತಿ ಹಕ್ಕು ಕಾಯಿದೆ ನ್ಯಾಯಾಂಗಕ್ಕೆ ಅನ್ವಯಿಸದಂತೆ ಎಚ್ಚರ ವಹಿಸಿದೆ. ಆದರೆ ಇದೆಲ್ಲದರೊಂದಿಗೆ 'ನ್ಯಾಯಾಂಗ ನಿಂದನೆ' ಎಂಬ ಕಾಯ್ದೆಯನ್ನು ಮಾತ್ರ ಕಾಪಾಡಿಕೊಂಡು ಬಂದಿದೆ. ಈ ಕಾಯಿದೆ ಅನ್ವಯ ಯಾರೂ ನ್ಯಾಯಾಂಗವನ್ನು ಪ್ರಶ್ನಿಸುವಂತಿಲ್ಲ. ಹಾಗೊಮ್ಮೆ ಪ್ರಶ್ನಿಸಿದರೆ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ.

ಇತ್ತೀಚೆಗೆ ನ್ಯಾಯಾಂಗನಿಂದನೆ ಕಾಯಿದೆಗೆ ಸಂಸತ್ತಿನಲ್ಲಿ ತಿದ್ದುಪಡಿ ತರಲಾಗಿದೆಯಾದರೂ ಇವತ್ತಿನ ಪರಿಸ್ಥಿತಿ ಹೇಗಿದೆ ಎಂದರೆ ನ್ಯಾಯಮೂರ್ತಿಯೊಬ್ಬರ ವಿರುದ್ಧದ ಆರೋಪಗಳು ವಿಚಾರಣೆ ಇಲ್ಲದೆ ಸಾಬೀತಾಗುವುದಿಲ್ಲ, ಸಾಬೀತಾಗಲು ವಿಚಾರಣೆಗೆ ನ್ಯಾಯಾಂಗ ಅನುಮತಿ ನೀಡುವುದಿಲ್ಲ. ಇದರಿಂದಾಗಿರುವ ಪರಿಣಾಮ ಏನೆಂದರೆ ಮಾಜಿ ನ್ಯಾಯಮೂರ್ತಿ ಎಸ್.ಪಿ. ಬರೂಚಾರವರೇ ಇವತ್ತು ನ್ಯಾಯಾಂಗದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ಹರಡಿದೆ ಎಂದು ಹೋಗಿಬಂದಲ್ಲೆಲ್ಲ ಹೇಳುತ್ತಿದ್ದರೂ ನಾವು ಅದನ್ನು ಕೇಳಿಸಿಕೊಳ್ಳದೆ ನಮ್ಮ ನ್ಯಾಯಮೂರ್ತಿಗಳೆಲ್ಲರೂ ದೇವರಿಗೆ ಸಮಾನ, ಅವರೆಲ್ಲರ ಡಿಎನ್‌ಎನಲ್ಲಿಯೇ ನೈತಿಕತೆ, ಪಾರದರ್ಶಕತೆ ಮತ್ತು ನಿಷ್ಠುರತೆ ಹಾಸುಹೊಕ್ಕಿದೆ ಎಂದು ಭಾವಿಸಬೇಕಿದೆ.


ನಮ್ಮ ಗೌರವಕ್ಕೆ ಧಕ್ಕೆಯಾದರೂ ನಾವು ಇವತ್ತು ನ್ಯಾಯಾಂಗದ ಸರ್ವಾಧಿಕಾರಿ ಯುಗದಲ್ಲಿ ಜೀವಿಸುತ್ತಿದ್ದೇವೆ ಎಂಬುದನ್ನು ಒಪ್ಪಿಕೊಳ್ಳಬೇಕಿದೆ. ಇವತ್ತು ಅದೇ ನ್ಯಾಯಾಂಗ ಎಂಬ ಅರಮನೆಯಲ್ಲಿ ಒಂದು 'ಹಗರಣ' ನಡೆದಿದೆ.

ಕಳೆದ ವರ್ಷ (2006) ದೆಹಲಿ ನಗರದ ಮುಖವನ್ನೇ ಬದಲಾಯಿಸುವಂತಹ ಹಲವಾರು ತೀರ್ಪುಗಳನ್ನು ಸುಪ್ರೀಂಕೋರ್ಟ್ ನೀಡಿತು. ವೈ.ಕೆ. ಸಬರ್‌ವಾಲ್ ನೇತೃತ್ವದ ವಿಭಾಗೀಯ ಪೀಠ ನೀಡಿದ ತೀರ್ಪಂತೂ ಸಾವಿರಾರು ಮನೆ ಮತ್ತು ಕಟ್ಟಡಗಳಲ್ಲಿ 'ಅಕ್ರಮ'ವಾಗಿ ತಲೆ ಎತ್ತಿದ್ದ ಅಂಗಡಿ ಮಳಿಗೆಗಳ ನಾಶಕ್ಕೆ ಕಾರಣವಾಗಿತ್ತು. ಇದರ ವಿರುದ್ಧ ಜನ ಪ್ರತಿಭಟಿಸಿದ್ದರು. ಜನರ ಪರವಾಗಿ ದೆಹಲಿ ಸರ್ಕಾರ ನಿಯಮಗಳನ್ನು ಬದಲಾಯಿಸಿ ಆ ಮಳಿಗೆಗಳನ್ನು ಕೆಡವದಂತೆ ಮನವಿ ಸಲ್ಲಿಸಿತ್ತು. ಆದರೆ ಇದ್ಯಾವುದೂ ನ್ಯಾಯಮೂರ್ತಿ ಸಬರ್‌ವಾಲ್‌ರವರ ಮನಸ್ಸನ್ನು ಕರಗಿಸಲಿಲ್ಲ. ಬದಲಾಗಿ ಎಲ್ಲ ಮಳಿಗೆಗಳನ್ನು ಒಡೆದು ಹಾಕಬೇಕೆಂದು ತೀರ್ಪು ನೀಡಿದರು. ಸುಮಾರು ಅದೇ ಹೊತ್ತಿಗೆ ಮತ್ತೊಂದು ನ್ಯಾಯಪೀಠ ಲಕ್ಷಾಂತರ ಜನ ವಾಸಿಸುತ್ತಿದ್ದ ಸ್ಲಮ್‌ಗಳನ್ನು ತೆರವುಗೊಳಿಸುವಂತೆ ಆದೇಶ ನೀಡಿತು. ಹೀಗೆ ಬಡವರನ್ನು ನಿರ್ಗತಿಕರನ್ನಾಗಿಸಿದ ಜಾಗಗಳಲ್ಲಿ ಆಧುನಿಕ, ಹವಾನಿಯಂತ್ರಿತ ಬಹುಮಳಿಗೆಗಳ ಕಟ್ಟಡಗಳು ತಲೆ ಎತ್ತಿ ಮಿಂಚಲಾರಂಭಿಸಿದವು. ಸಬರ್‌ವಾಲ್‌ರವರ ತೀರ್ಪಿನಿಂದ ತಮ್ಮ ಅಂಗಡಿ ಮಳಿಗೆಗಳನ್ನು ಕಳೆದುಕೊಂಡಿದ್ದವರಲ್ಲಿ ಹಲವಾರು ಜನ ಇದೇ ಹೊಸ ಕಟ್ಟಡಗಳಲ್ಲಿ ಜಾಗ ಪಡೆಯಲು ಸಾಲು ನಿಂತರು.

ಸೋಜಿಗದ ವಿಷಯವೆಂದರೆ ಈ ಆಧುನಿಕ ಕಟ್ಟಡಗಳ ಹಲವಾರು ಡೆವಲಪರ್‌ಗಳೇ ಕೆಲ ಸರ್ಕಾರಿ ನಿಯಮಗಳನ್ನು ಉಲ್ಲಂಘಿಸಿದ್ದರು. ಇದರ ಬಗ್ಗೆ ಸಲ್ಲಿಸಲಾಗಿದ್ದ ಫಿರ್ಯಾದನ್ನು ಕುರಿತಂತೆ ನ್ಯಾಯಮೂರ್ತಿಗಳಾದ ಅರಿಜಿತ್ ಪಸಾಯತ್ ಮತ್ತು ಎಸ್.ಎಚ್. ಕಪಾಡಿಯಾರವರು ನೀಡಿದ ತೀರ್ಪು ಹೀಗಿತ್ತು: "ಈ ಕಟ್ಟಡಗಳು ಅಕ್ರಮವಾಗಿದ್ದರೂ, ಅವುಗಳ ನಿರ್ಮಾಣಕ್ಕೆ ಸೂಕ್ತ ಅನುಮತಿಗಳನ್ನು ಪಡೆಯದಿದ್ದರೂ, ಕಟ್ಟಡಗಳನ್ನು ಕೆಡವುವುದು ಉತ್ತರವಲ್ಲ. ಯಾರೋ ವ್ಯಕ್ತಿಯೊಬ್ಬ ಅಥವಾ ಖಾಸಗಿ ಕಂಪನಿಯೊಂದು ಇಂತಹ ಅಕ್ರಮಗಳಲ್ಲಿ ತೊಡಗಿದ್ದರೆ ಅದು ಬೇರೆ ವಿಷಯ. ಆದರೆ ಈ ಕಟ್ಟಡಗಳನ್ನು ನಿರ್ಮಿಸುತ್ತಿರುವವರು ಕಾರ್ಪೊರೇಟ್ ಕಂಪನಿಗಳು ಮತ್ತು ಸಂಸ್ಥೆಗಳಾಗಿರುವುದರಿಂದ ಸೂಕ್ತ ಅನುಮತಿಗಳನ್ನು ಪಡೆಯದೇ ಇದ್ದರೂ ಅವರು ದುರ್ವ್ಯವಹಾರದಲ್ಲಿ ತೊಡಗಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ."

ಅಂದರೆ ನಮ್ಮ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ "ಸೂಕ್ತ ಅನುಮತಿಗಳನ್ನು ಪಡೆಯುವಲ್ಲಿ ವಿಫಲವಾಗುವ ಕಾರ್ಪೊರೇಟ್ ಕಂಪನಿಗಳು ಭ್ರಷ್ಟಾಚಾರದಲ್ಲಿ ತೊಡಗಿರುವ ಸಾಧ್ಯತೆಗಳೇ ಇಲ್ಲ." ನವಸಾಹತು ಸಾಮ್ರಾಜ್ಯದ ವಿರುದ್ಧ ಬೀದಿಗಳಲ್ಲಿ ಪ್ರತಿಭಟಿಸುತ್ತಿರುವ ಜನರಿಗೆ ಈ ತೀರ್ಪು ಹೊರಬಿದ್ದ ನಂತರ ನಾವೇನೆನ್ನಬೇಕು? "ಎನ್ರಾನ್ ಜಿಂದಾಬಾದ್", "ಟಾಟಾ ಬಿರ್ಲಾ ಜಿಂದಾಬಾದ್", "ಕೋಕಾಕೋಲಾಗೆ ನಮ್ಮ ಬೆಂಬಲ" ಎಂದು ದೊಡ್ಡ ದನಿಯಲ್ಲಿ ಅರಚುತ್ತಾ ಅವರೆಲ್ಲರ ಸದ್ದನ್ನು ಅಡಗಿಸಬೇಕೇ?

ಇದೇ ವರ್ಷ ಮೇ ತಿಂಗಳಲ್ಲಿ ಮಿಡ್ ಡೇ ಪತ್ರಿಕೆಯು ನ್ಯಾಯಮೂರ್ತಿ ಸಬರ್‌ವಾಲ್‌ರವರನ್ನು ಕುರಿತಂತೆ ಹಲವಾರು ತನಿಖಾ ವರದಿಗಳನ್ನು ಪ್ರಕಟಿಸಿತು. ಆ ವರದಿಗಳಲ್ಲಿನ ಸತ್ಯಾಂಶಗಳನ್ನು ಹಿರಿಯ ವಕೀಲರು, ನಿವೃತ್ತ ನ್ಯಾಯಮೂರ್ತಿಗಳು, ಅಧ್ಯಾಪಕರು, ಪತ್ರಕರ್ತರು ಇರುವ ಕಮಿಟಿ ಫಾರ್ ಜ್ಯುಡಿಷಿಯಲ್ ಅಕೌಂಟಬಿಲಿಟಿ ಎಂಬ ಸಂಘಟನೆ ದೃಢೀಕರಿಸಿತು. ಸಬರ್‌ವಾಲ್‌ರವರ ವಿರುದ್ಧದ ಆರೋಪಗಳ ಸಂಕ್ಷಿಪ್ತ ವಿವರ ಹೀಗಿದೆ:



ಸಬರ್‌ವಾಲ್ ಪ್ರಕರಣ ಕುರಿತಂತೆ ತನಿಖೆಗೆ ಆಗ್ರಹಿಸಿರುವ ಕೆಜ್ರಿವಾಲ್, ಸ್ವಾಮಿ ಅಗ್ನಿವೇಶ್, ಮಾಜಿ ಕಾನೂನು ಮಂತ್ರಿ ಶಾಂತಿ ಭೂಷಣ್ ಹಾಗೂ ಸುಪ್ರೀಮ್ ಕೋರ್ಟ್ ವಕೀಲ ಪ್ರಶಾಂತ್ ಭೂಷಣ್

1. ಸಬರ್‌ವಾಲ್‌ರವರ ಪುತ್ರರಾದ ಚೇತನ್ ಮತ್ತು ನಿತಿನ್ 'ಪವನ್ ಇಂಪೆಕ್ಸ್', 'ಸಾಬ್ಸ್ ಎಕ್ಸ್‌ಪೋರ್ಟ್ಸ್' ಮತ್ತು 'ಸುಗ್ ಎಕ್ಸ್‌ಪೋರ್ಟ್ಸ್' ಎಂಬ ಕಂಪನಿಗಳನ್ನು ಹೊಂದಿದ್ದು ಮೊದಲು ಅವುಗಳ ಕಚೇರಿ ಅವರ ಸ್ವಂತ ಮನೆಯಲ್ಲಿದ್ದು ಆನಂತರ ಸಬರ್‌ವಾಲ್‌ರವರ ಸರ್ಕಾರಿ ನಿವಾಸಕ್ಕೆ ವರ್ಗಾಯಿಸಿದ್ದರು.

2. ಸಬರ್‌ವಾಲ್‌ರವರು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗುವ ಮುನ್ನ, ಅಂದರೆ ಅವರಿನ್ನೂ ನ್ಯಾಯಮೂರ್ತಿಯಾಗಿದ್ದಾಗ ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ದೆಹಲಿಯಲ್ಲಿನ ಅಕ್ರಮ ಅಂಗಡಿಗಳನ್ನು ಕುರಿತ ವ್ಯಾಜ್ಯವು ತಮ್ಮ ಮುಂದೆ ಬರುವಂತೆ ಆದೇಶಿಸಿದ್ದರು.

3. ಅದೇ ಹೊತ್ತಿಗೆ ಅವರ ಪುತ್ರರು ದೊಡ್ಡ ಮಾಲ್‌ಗಳನ್ನು ಕಟ್ಟುತ್ತಿದ್ದ ಇಬ್ಬರು ಡೆವಲಪರ್ಸ್‌ಗಳೊಂದಿಗೆ ಸಹಭಾಗಿತ್ವ ಒಪ್ಪಂದಕ್ಕೆ ಸಹಿ ಹಾಕಿದರು. ಸಬರ್‌ವಾಲ್‌ರವರು ಅಂಗಡಿಗಳನ್ನು ಕೆಡುವುವಂತೆ ತೀರ್ಪು ನೀಡಿದ್ದರಿಂದ ಈ ಮಾಲ್‌ಗಳಲ್ಲಿ ಜಾಗಗಳಿಗೆ ಬೇಡಿಕೆ ಹೆಚ್ಚಾಯಿತು. ಇದರಿಂದಾಗಿ ಸಬರ್‌ವಾಲ್‌ರವರ ಪುತ್ರರಿಗೆ ಅಪಾರ ಲಾಭವುಂಟಾಯಿತು.

4. ತಮ್ಮ ಪುತ್ರರೇ ಈ ಯೋಜನೆಗಳಲ್ಲಿ ಸಕ್ರಿಯವಾಗಿದ್ದರಿಂದ ಸಬರ್‌ವಾಲ್‌ರವರು ಈ ಕೇಸಿನಿಂದ ಸ್ವಯಂ ಪ್ರೇರಿತರಾಗಿ ಹಿಂದೆ ಸರಿಯಬೇಕಿತ್ತು. ಅವರು ಹಾಗೆ ಮಾಡಲಿಲ್ಲ ಮಾತ್ರವಲ್ಲ, ಮಳಿಗೆಗಳನ್ನು ಕುರಿತ ವ್ಯಾಜ್ಯ ತಮ್ಮ ಮುಂದೆ ಬರುವಂತೆ ಅಕ್ರಮವಾಗಿ ನೋಡಿಕೊಂಡರು.

5. ಅಮರ್‌ಸಿಂಗ್ ಎಂಬ ರಾಜಕಾರಣಿಯ ಟೇಪ್ ಹಗರಣ ಕುರಿತಂತೆ ಸಬರ್‌ವಾಲ್‌ರವರು ವಿಚಾರಣೆ ನಡೆಸುತ್ತಿದ್ದಾಗ (ಆ ಟೇಪುಗಳಲ್ಲಿನ ಸಂಭಾಷಣೆ ಪ್ರಕಟಗೊಳ್ಳಬಾರದೆಂದು ನಿಷೇಧ ಹೇರಿದರು) ಅಮರ್‌ಸಿಂಗ್‌ರವರ ರಾಜಕೀಯ ಗಾಡ್‌ಫಾದರ್ (ಅಂದಿನ ಉತ್ತರ ಪ್ರದೇಶದ ಮುಖ್ಯಮಂತ್ರಿ) ಮುಲಾಯಂಸಿಂಗ್‌ರವರು ಸಬರ್‌ವಾಲ್‌ರವರ ಪುತ್ರರಿಗೆ ಪ್ರತಿಷ್ಠಿತ ನೋಯಿಡಾ ಪ್ರದೇಶದಲ್ಲಿ ಹಲವಾರು ಕೈಗಾರಿಕೆ ಮತ್ತು ವಾಣಿಜ್ಯ ಜಾಗಗಳನ್ನು ಕಡಿಮೆ ದರದಲ್ಲಿ ದಯಪಾಲಿಸಿದ್ದರು.

6. ಅವರ ಪುತ್ರರು 15.46 ಕೋಟಿ ರೂಪಾಯಿಗಳಿಗೆ ಬಂಗಲೆಯೊಂದನ್ನು ಖರೀದಿಸಿದರು. ಆದರೆ ಅಷ್ಟೊಂದು ಹಣ ಎಲ್ಲಿಂದ ಬಂತು ಎಂಬುದಕ್ಕೆ ವಿವರಣೆಗಳಿಲ್ಲ. ಅಂದಹಾಗೆ, ತಮ್ಮ ಕಂಪನಿಗಳ ಕಚೇರಿಗಳನ್ನು ತಂದೆಯ ಸರ್ಕಾರಿ ನಿವಾಸದಲ್ಲಿ ನಡೆಸುತ್ತಿದ್ದ ಪುತ್ರರಿಬ್ಬರು ಈ ಬಂಗಲೆ ಖರೀದಿಗೆ ಸಂಬಂಧಪಟ್ಟ ದಾಖಲೆಗಳಲ್ಲಿ ಮಾತ್ರ ತಮ್ಮ ತಂದೆಯ ಹೆಸರನ್ನು 'ಯೋಗೇಶ್ ಕುಮಾರ್' ಎಂದು ನಮೂದಿಸಿದ್ದಾರೆ.

ಈ ಎಲ್ಲ ಆರೋಪಗಳಿಗೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು, ಆರೋಪಗಳನ್ನು ಕುರಿತಂತೆ ಸಬರ್‌ವಾಲ್‌ರವರೊಂದಿಗೆ 'ಮಿಡ್ ಡೆ' ವರದಿಗಾರ ನಡೆಸಿದ ಸಂಭಾಷಣೆಗಳ ರೆಕಾರ್ಡುಗಳನ್ನು ದೆಹಲಿ ನ್ಯಾಯಾಲಯಕ್ಕೆ ನೀಡಲಾಗಿದೆ. ಇವೆಲ್ಲವನ್ನು ಪರಿಶೀಲಿಸಿದಾಗ ದೆಹಲಿಯ ಬಡ ಜನ ಬೀದಿಪಾಲಾಗುತ್ತಿದ್ದಾಗ, ಅಂಗಡಿಗಳು ನಾಶವಾಗುತ್ತಿದ್ದಾಗ, ಅದೇ ಅಂಗಡಿಗಳಲ್ಲಿ ಕೆಲಸ ಮಾಡುತ್ತಿದ್ದ ಜನ ನಿರುದ್ಯೋಗಿಗಳಾಗುತ್ತಿದ್ದಾಗ, ಸಬರ್‌ವಾಲ್‌ರವರ ಪುತ್ರರು ಲಾಭದ ಹೊಳೆಯನ್ನೇ ಕಾಣುತ್ತಿದ್ದರು ಎಂಬುದು ಅರಿವಾಗುತ್ತದೆ. ಅಷ್ಟೇ ಅಲ್ಲ, 'ನವಭಾರತ' ಹೇಗೆ ರೂಪಗೊಳ್ಳುತ್ತಿದೆ ಎಂಬುದರ ಬಗ್ಗೆಯೂ ಆ ದಾಖಲೆಗಳು ವಿವರ ನೀಡುತ್ತವೆ.


ಈ ಹಗರಣ ಹೊರಬಿದ್ದಾಗ ನಿವೃತ್ತ ನ್ಯಾಯಮೂರ್ತಿಗಳಾದ ಜೆ.ಎಸ್. ವರ್ಮಾರವರು "ಈ ಆರೋಪಗಳು ನಿಜವೇ ಆಗಿದ್ದಲ್ಲಿ ವಿಚಾರಣೆ ನಡೆಸಬೇಕು.

(7ನೇ ಪುಟಕ್ಕೆ)

ಮೈಸೂರು: ಸಿದ್ಧು-ರೇವಣ್ಣರ ರಣಕಾಳಗ

ಆರ್ಥ ಪವರ್ ಡೌಡಿಗಳು, ಇನ್ನರ್ಧ ಪವರ್ ಬದ್ಧಿ ಕೋರರು ಮತ್ತು ಅಷ್ಟೇ ಮೊತ್ತದ ಲ್ಯಾಂಡ್ ಕ್ರಿಮಿಗಳಿಂದಾಗಿ ಚುನಾವಣೆಯೇ ಹಾದಿತಪ್ಪಿದೆಯೋ ಅಥವಾ ಮೈಸೂರು ನಗರಪಾಲಿಕೆಗೇ ಕೇಡು ವಕ್ಕರಿಸಿದೆಯೋ ನಿರ್ಧರಿಸುವ ವಸ್ತಾದರು?

ಚುನಾವಣೆಗಿನ್ನೂ ಕೆಲ ದಿನ ಬಾಕಿ ಇರುವಾಗಲೇ ಕಾಂಗ್ರೆಸ್ ನಾಯಕ ತನ್ವೀರ್ ಸೇಠ್ ಮತ್ತು ರೌಡಿ ಅರ್ಜುನನ ಬೆಂಬಲಿಗರ ಮಧ್ಯೆ ನಡುರಸ್ತೆಯಲ್ಲೇ ಕತ್ತಿ ವರಸೆ ನಡೆಯಿತು. ಮಚ್ಚು, ಲಾಂಗುಗಳನ್ನು ಹಿಡಿದು ಬಡಿದಾಡುತ್ತಿರುವ ಕಾಂಗ್ರೆಸ್ ಪಂಟರ್‌ಗಳ ಫೋಟೋ ಸಹಿತ ವರದಿ ಪತ್ರಿಕೆಗಳ ಮುಖಪುಟದಲ್ಲಿ ಅಚ್ಚಾಗಿತ್ತು. ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ವಾಸೇಗೌಡನನ್ನು ಯುವ ಕಾಂಗ್ರೆಸ್ ನಾಯಕ ಶೌಕತ್ ಅಲಿ ಗ್ಯಾಂಗ್ ಬೆಂಗಳೂರಿನ ಮೌರ್ಯ ಹೋಟೆಲ್ಲಿ ಹಿಡಿದು ಮುಖಾಮೂತಿ ಚಚ್ಚುತ್ತಿದ್ದರೆ, ಅದೇ ಶೌಕತ್ ಅಲಿಯನ್ನು ಆತನ ಶಿಷ್ಯ ಚಂದ್ರು ಪಟಾಲಂ ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲೇ ನೆಲಕ್ಕೆ ಹಾಕಿ ತುಳಿಯುತ್ತಿತ್ತು!




ಇದು ಟಿಕೆಟ್ಟಿಗಾಗಿ ಕಾಂಗ್ರೆಸ್ ಅಧಿಪತಿಗಳ ನಡುವೆಯೇ ಎಂಥಾ ಜಿದ್ದಾಜಿದ್ದಿಯಿದೆ ಎಂಬುದಕ್ಕೆ ಕೆಲ ಸ್ಯಾಂಪಲ್ಲುಗಳಷ್ಟೇ. ಹೇಳುಕೇಳುವವರಿಲ್ಲದ ಮೈಸೂರು ಕಾಂಗ್ರೆಸ್ಸಿಗೆ ಸಿದ್ಧರಾಮಯ್ಯ ಕಾಲಿಟ್ಟದ್ದೇ ಲಕ್ಕು ಮತ್ತು ಸೊಕ್ಕು ಒಟ್ಟೊಟ್ಟಿಗೇ ಉಕ್ಕಿ ಹರಿಯುತ್ತಿದೆ.

ಮೈಸೂರು ನಗರದ ಒಟ್ಟು 65 ವಾರ್ಡುಗಳ ಪೈಕಿ ಪ್ರತಿ ವಾರ್ಡಿನಲ್ಲೂ ಕಾಂಗ್ರೆಸ್ಸಿನ ಒಬ್ಬನ ವಿರುದ್ಧ ಐದಾರು ಮಂದಿ ಬಂಡಾಯ ಅಭ್ಯರ್ಥಿಗಳಿದ್ದದ್ದು ಒಂದೆಡೆಯಾದರೆ ಇನ್ನೊಂದೆಡೆ ಜೆಡಿಎಸ್, ಬಿಜೆಪಿಗಳಿಗೆ ನಾಮಕಾವಸ್ಥೆಗೂ ಕ್ಯಾಂಡಿಡೇಟುಗಳಿರಲಿಲ್ಲ, ಕೆಲ ಕಾಂಗ್ರೆಸ್ ಟಿಕೆಟ್ ವಂಚಿತರನ್ನೇ ಹಿಡಿತಂದು ಜೆಡಿಎಸ್, ಅಭ್ಯರ್ಥಿಗಳನ್ನಾಗಿಸುವ ಹೊತ್ತಿಗೆ ಜೀಟಿ ದೇವೇಗೌಡರಿಗೆ ಸಾಕುಸಾಕಾಗಿ ಹೋಯ್ತು. ಇಷ್ಟಾಗ್ಯೂ ಬಿಜೆಪಿಗೆ ಇನ್ನೂ ಎಂಟು ವಾರ್ಡುಗಳಿಗೆ ಅಭ್ಯರ್ಥಿಗಳೇ ಇಲ್ಲ, ಬಹುಜನ ಸಮಾಜ ಪಕ್ಷ ಸರಿಸುಮಾರು 25 ವಾರ್ಡುಗಳಿಗೆ ಅಭ್ಯರ್ಥಿಗಳನ್ನು ಹಾಕುವಷ್ಟಕ್ಕೇ ತೃಪ್ತಿ ಪಟ್ಟುಕೊಂಡರೆ, ವಾಟಾಳ್, ಮೂಗೂರು, ತಾಯೂರು ಇತ್ಯಾದಿ ಕಡೆ ಕನ್ನಡ ಕುಮಾರರ್‍ಯಾರೂ ಅಡ್ರೆಸ್ಸಿಗೇ ಇಲ್ಲ!

ಇನ್ನು ಸಮಾಜವಾದಿ ಪಾರ್ಟಿಯ ದುರ್ಗತಿ ಯಾವ ಮಟ್ಟಕ್ಕಿದೆಯೆಂದರೆ, ಬಂಗಾರಪ್ಪನವರ ಪರಮಾಪ್ತ ಪಿ. ಗೋವಿಂದರಾಜು ಖಾಸಾ ತಮ್ಮ ಪಿ. ದೇವರಾಜನೇ ಅಣ್ಣನಿಗೆ ಟಾಟಾ ಹೇಳಿ 57 ನೇ ವಾರ್ಡಿಗೆ ಕಾಂಗ್ರೆಸ್ ಅಭ್ಯರ್ಥಿಯಾಗಿಬಿಟ್ಟಿದ್ದಾನೆ!

ಡೀಕೆ ಬಲಗೈ ಬಂಟ ಮಚ್ಚೆಗೆ ಅಶೋಕನಿಗೆ ಇದೇ 57 ನೇ ವಾರ್ಡ್ ಅಂದರೆ ವಿದ್ಯಾನಗರದಿಂದ ಕಾಂಗ್ರೆಸ್ ಟಿಕೆಟ್ ಕಟ್ಟಿಟ್ಟ ಬುತ್ತಿಯಂತಿತ್ತು. ಕೊನೇ ಗಳಿಗೆಯಲ್ಲಿ ದೇವರಾಜು ತನ್ನ ಜಾತಿಬಾಂಧವರಾದ ಕಾಗೋಡು ತಿಮ್ಮಪ್ಪ ಮತ್ತು ಬಿ.ಕೆ. ಹರಿಪ್ರಸಾದರ ಕಾಲಿಗೆ ಬಿದ್ದು 'ಬಿ' ಫಾರ್ಮ್ ಲಪಟಾಯಿಸಿಬಿಟ್ಟ. ವಿಧಿಯಿಲ್ಲದೇ ಅಶೋಕ್ ತನ್ನ ನಾಮಪತ್ರ, ವಾಪಸ್ಸು ಪಡೆದುಕೊಂಡನಾದರೂ ದೇವರಾಜ್ ಪಾಲಿಗೆ ಅಪಾಯ ಮಾತ್ರ ತಪ್ಪಿಲ್ಲ, ಇಲ್ಲಿ ಜೆಡಿಎಸ್‌ನ ನೀಲಕಂಠ ಮತ್ತು ಬಿಜೆಪಿಯ ಕಿಟ್ಟಪ್ಪ ದೇವರಾಜ್ ಪಾಲಿಗೆ ಸಮಸ್ಯೆಯಲ್ಲದಿರಬಹುದು, ಆದರೆ ಅಸಲೀ ಆಪತ್ತಿರುವುದು ಬಹುಜನ ಸಮಾಜ ಪಕ್ಷದ ಅನಿಲ್‌ರಾಜ್‌ರಿಂದ. ಅಶೋಕ್ ಖೇಣಿ ಅಭಿಮಾನಿಗಳ ಸಂಘದ ಅಧ್ಯಕ್ಷನಾಗಿ ಆ ಕಾಲದಿಂದಲೂ ಒಂದಲ್ಲ ಒಂದು ಸಮಾಜಸೇವೆ ಮಾಡಿಕೊಂಡೇ ಬಂದ ಅನಿಲ್‌ರಾಜ್ ಇಲ್ಲಿ ಕಾಂಗ್ರೆಸ್ಸಿನ ದೇವರಾಜ್ ನಿದ್ದೆ ಕೆಡಿಸಿದ್ದಾರೆ.



ಅರ್ಜುನ್ ಕುಮಾರ್




ಸಿದ್ಧರಾಜು



ಚಿಕ್ಕಣ್ಣ




ದೇವರಾಜ್



ಸಾ.ರಾ. ಮಹೇಶ್

ಎಸ್.ಎಂ. ಕೃಷ್ಣರ ಕಾಲದಲ್ಲಿ ಡಿ. ಮಾದೇಗೌಡರು ಮೈಸೂರು ಕಾಂಗ್ರೆಸ್ಸಿಗೆ ಅಧ್ಯಕ್ಷರಾಗಿದ್ದಾಗಲೇ ಕಾಂಗ್ರೆಸ್ 24 ಸ್ಥಾನಗಳನ್ನು ಗೆದ್ದಿತ್ತು, ಆಗಿನ್ನೂ ಸಿದ್ಧು ಜೆಡಿಎಸ್‌ನಲ್ಲಿದ್ದರು. ಮೈಸೂರಿನ ಮತ್ತೊಬ್ಬ ದಿಗ್ಗಜ ಶ್ರೀನಿವಾಸ್‌ಪ್ರಸಾದ್ ಕೂಡ ಸಂಯುಕ್ತ ಜನತಾದಳದಲ್ಲಿದ್ದರು. ಈಗ ಶಕ್ತಿ ಕೇಂದ್ರಗಳಂತಿದ್ದ ಇವರಿಬ್ಬರೂ ಕಾಂಗ್ರೆಸ್ಸಿಗೆ ಕಾಲಿಟ್ಟದ್ದರಿಂದಾಗಿ ಜೆಡಿಎಸ್-ಬಿಜೆಪಿ ಪಾಳಯವಿಡೀ ಖಾಲಿ ಹೊಡೆಯುತ್ತಿದೆ. ಕೇವಲ 65 ವಾರ್ಡುಗಳಿಗೆ ಕಾಂಗ್ರೆಸ್ಸೊಂದಕ್ಕೇ 1500 ಅರ್ಜಿಗಳಿದ್ದವು. ಸದ್ಯ ಒಂದೆರಡು ವಾರ್ಡುಗಳ ಹೊರತಾಗಿ ಮಿಕ್ಕೆಲ್ಲ ಬಂಡಾಯ ಕಾಂಗ್ರೆಸ್ ಅಭ್ಯರ್ಥಿಗಳೂ ತಮ್ಮ ನಾಮಪತ್ರ ವಾಪಸ್ಸು ಪಡೆದಿದ್ದಾರೆ.



ಕಾಂಗ್ರೆಸ್ ಪಾಲಿಗೆ ಯಡವಟ್ಟು ಅಂತಾಗಿರುವುದು 6 ನೇ ವಾರ್ಡ್ ಚಿಕ್ಕಮುಂಡಪುರದಲ್ಲಿ ಮಾತ್ರ. ಇಲ್ಲಿ ಮಾಜಿ ಕಾರ್ಪೋರೇಟರ್ ಎಂ.ಸಿ. ಚಿಕ್ಕಣ್ಣನಿಗೇ ಕಾಂಗ್ರೆಸ್ ಟಿಕೆಟ್ ದಕ್ಕಬೇಕಿತ್ತು, ಆದರೆ ಲೋಕಲ್ ಲಿಂಗಾಯತರ ನಾಯಕ ರೇವಣಸಿದ್ಧಯ್ಯನವರಿಗೆ ಮಣೆ ಹಾಕಲು ಹೋಗಿ ಓಂಕಾರ ಪ್ರಸಾದ್‌ಗೆ 'ಬಿ' ಫಾರ್ಮ್ ಕೊಡಲೇಬೇಕೆಂದು ಬೆಂಕಿ ಮಾದೇವು ಹಠಕ್ಕೆ ಬಿದ್ದರು. ರೊಚ್ಚಿಗೆದ್ದ ಚಿಕ್ಕಣ್ಣ ಕಾಂಗ್ರೆಸ್ ಬಾವುಟಕ್ಕೇ ಬೆಂಕಿಯಿಟ್ಟ. ತಾನು ಕುರುಬನಾಗಿದ್ದರಿಂದಲೇ ತನ್ನನ್ನು ತುಳಿಯುತ್ತಿದ್ದಾರೆಂದು ಚಿಕ್ಕಣ್ಣ ಸಿದ್ಧರಾಮಯ್ಯನವರಿಗೆ ಧಿಕ್ಕಾರ ಕೂಗಿಸಿದ. ಜೆಡಿಎಸ್‌ನ ಶ್ರೀನಿವಾಸಮೂರ್ತಿಯಾಗಲಿ, ಬಿಜೆಪಿಯ ರಾಂಪ್ರಸಾದ್ ಆಗಲಿ ಇಲ್ಲಿ ಕಾಂಗ್ರೆಸ್‌ಗೆ ಲೆಕ್ಕಕ್ಕಿಲ್ಲ, ಇಲ್ಲೇನಿದ್ದರೂ ಬಂಡಾಯ ಕಾಂಗ್ರೆಸ್‌ನ ಚಿಕ್ಕಣ್ಣನದೇ ಅಸಲೀ ಆರ್ಭಟ.

44 ನೇ ವಾರ್ಡು ಬನ್ನಿಮಂಟಪಕ್ಕೆ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದ ಜೆ.ಎಸ್. ಮಂಜನಾಥ್ ತನ್ವೀರ್ ಸೇಠ್‌ರ ನಂಬಿಕಸ್ಥ ಬಂಟನಿರಬಹುದು. ಆದರೆ ಮೈಸೂರು ಸಿಟಿ ಕೋ-ಆಪರೇಟಿವ್ ಬ್ಯಾಂಕನ್ನೇ ದಿವಾಳಿಯೆಬ್ಬಿಸಿದ ಪುಣ್ಯವಂತ ಅದೇನು ದೌರ್ಬಲ್ಯವೋ ಗೊತ್ತಿಲ್ಲ ಕಳೆದ ಬಾರಿ ಇಲ್ಲಿಂದ ಗೆದ್ದಿದ್ದ ಆರ್. ನಾಗರಾಜ್‌ಗೆ ಟಿಕೆಟ್ ತಪ್ಪಿಸಿ ಈ ಮಂಜನಿಗೇ ತನ್ವೀರ್ ಸೇಠ್ ಟಿಕೆಟ್ ಕೊಡಿಸಿದ್ದಾರೆ. ರೊಚ್ಚಿಗೆದ್ದ ಜನ ಆರ್. ನಾಗರಾಜ್‌ರನ್ನೇ ಪಕ್ಷೇತರ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದ್ದಾರೆ. ಕಾಂಗ್ರೆಸ್ ಕಚ್ಚಾಟದಲ್ಲಿ ಜೆಡಿಎಸ್‌ನ ಗೋಪಾಲ್ ಅಥವಾ ಬಿಎಸ್‌ಪಿಯ ಬಸವರಾಜಪ್ಪ ಯಾರಿಗಾದರೂ ಲಾಭವಾಗಬಹುದು.

ಸಿದ್ಧು ಗುಡ್‌ಬೈ ಹೇಳಿದ ನಂತರ ಅಕ್ಷರಶಃ ತಾಯಿಲ್ಲದ ತಬ್ಬಲಿಯಂತಾಗಿದ್ದ ಜೆಡಿಎಸ್‌ಗೆ ಜಿಲ್ಲಾ ಉಸ್ತುವಾರಿ ಮಂತ್ರಿ ಜಿ.ಟಿ. ದೇವೇಗೌಡರ ಹೊರತಾಗಿ ಬೇರೆ ಗತಿಯಿರಲಿಲ್ಲ, ಜೀಟಿಯ ಮುಖ ಕಂಡರೇನೇ ಅನೇಕ ಜೆಡಿಎಸ್ ಕಾರ್ಯಕರ್ತರಿಗೆ ಅಸಹ್ಯ ಇಂಥಾ ಸ್ಥಿತಿಯಲ್ಲಿದ್ದ ಸಾ.ರಾ. ಮಹೇಶನನ್ನು ಬುಟ್ಟಿಗೆ ಹಾಕಿಕೊಂಡ ಕುಮಾರಣ್ಣ ಆತನನ್ನೇ ಮೂಡಾ ಪಟಕ್ಕೇರಿಸಿಬಿಟ್ಟರು. ಮೈಸೂರಿನ ಇಂಚಿಂಚನ್ನೂ ಬಲ್ಲ ಮಹೇಶ ಯಾವ್ಯಾವುದೋ ಪಕ್ಷದಿಂದ ಒಂದಷ್ಟು ಅಭ್ಯರ್ಥಿಗಳನ್ನು ಹಿಡಿತಂದು ಜೆಡಿಎಸ್ ಬಾವುಟ ಕೊಟ್ಟಿದ್ದಾನೆ. ಚಾಮರಾಜಕ್ಕೆ ಬಸವೇಗೌಡನನ್ನೂ, ಎನ್ನಾರ್ ಕ್ಷೇತ್ರಕ್ಕೆ ಸಂದೇಶ್ ನಾಗರಾಜ್‌ರನ್ನೂ ಮತ್ತು ಕೃಷ್ಣರಾಜಕ್ಕೆ ಸ್ವತಃ ಸಾ.ರಾ. ಮಹೇಶ್‌ನನ್ನೇ ಉಸ್ತುವಾರಿ ಬಿಟ್ಟು ಇಡೀ ಮೈಸೂರು ಪಾಲಿಗೆ ಚುನಾವಣೆಯನ್ನೇ ಮಣ್ಣಿನ ಮೊಮ್ಮಗ ಎಚ್.ಡಿ. ರೇವಣ್ಣನ ಹೆಗಲಿಗೆ ಹಾಕಿದ್ದಾರೆ.

ರೇವಣ್ಣ ಜೀಟಿ, ಸಾರಾ, ಸಂದೇಶ್ ಎಲ್ಲರ ಗುರಿಯೂ ಒಂದೇ. ಚಾಮುಂಡೇಶ್ವರಿಯ ಸೋಲನ್ನು ತೀರಿಸಿಕೊಳ್ಳುವುದು. ಅದರಲ್ಲೂ ಸಿದ್ಧರಾಮಯ್ಯನವರ ಮನೆಯಿರುವ ರಾಮಕೃಷ್ಣ ನಗರಕ್ಕೆ ಬಳ್ಳಾರಿಯ ಗ್ರಾನೈಟ್ ಖದೀಮ ಶಶಿಧರನನ್ನೇ ಜೆಡಿಎಸ್ ಅಭ್ಯರ್ಥಿಯನ್ನಾಗಿ ಮಾಡಿದ್ದಾರೆ. ಒಂದು ಕೋಟಿ ಸುರಿದಾದರೂ ಗೆಲ್ಲಲೇಬೇಕೆಂದು ಪಣತೊಟ್ಟ ಶಶಿಧರ ಅದಕ್ಕೊಂದು ನಟೋರಿಯಸ್ ಸ್ಯಾಂಟ್ರೋ ರವಿಯ ಸಹಚರ ದಿನೇಶ್ ಗೌಡನನ್ನು ಜೊತೆಹಾಕಿಕೊಂಡು ಕಂಡಕಂಡ ಗಣೇಶೋತ್ಸವಕ್ಕೆಲ್ಲ ಯಥೇಚ್ಛವಾಗಿ ಕಾಸು ಬಿಚ್ಚುತ್ತಲೇ ಇದ್ದಾನೆ. ಕಾಂಗ್ರೆಸ್‌ನ ಚನ್ನಬಸವೇಗೌಡ ಇಲ್ಲಿ ಲೆಕ್ಕಕ್ಕಿಲ್ಲ, ಆದರೆ ಬಿಜೆಪಿಯ ಆರ್.ಟಿ.ಓ. ಶಂಕ್ರ ಲೋಕಲ್ಲಾಗಿ




ಮಂಡ್ಯ ನಗರಸಭೆ: ಕಾಂಗ್ರೆಸ್ ಕಚ್ಚಾಟ ಚಲುವನ ಕಳ್ಳಾಟ



ಮಂಡ್ಯದ ಕಾಂಗ್ರೆಸ್ ದುರಂತವೇ ಹಾಗಿರುವಾಗ ಅದಕ್ಕೆ ಶತ್ರುಗಳಾದರೂ ಏಕೆ ಬೇಕು?

ಇತ್ತ ಅಂಬಿ ಪಟಾಲಮ್ಮನ್ನು ಮುಗಿಸಲು ಮಾದೇಗೌಡರ ಶಿಷ್ಯರೂ ಮತ್ತೊಂದೆಡೆ ಆತ್ಮಾನಂದರನ್ನು ತುಳಿಯಲು ರಮೇಶ್ ರಾಜು-ಶ್ರೀಕಾಂತ್ ಎಂಬ ಬ್ರದರ್‌ಗಳೂ ಬೆನ್ನಲ್ಲಿ ಚೂರಿ ಹಿಡಿದೇ ನಿಂತಿದ್ದಾರೆ. ಒಬ್ಬನ ಬೆಂಬಲಿಗನಿಗೆ 'ಬಿ' ಫಾರ್ಮ್ ಸಿಕ್ಕರೆ ಆತನ ವಿರುದ್ಧ ಮತ್ತೊಬ್ಬ ತನ್ನ ಶಿಷ್ಯನನ್ನು ಪಕ್ಷೇತರನಾಗಿ ನಿಲ್ಲಿಸುತ್ತಾನೆ. ಇನ್ನೊಬ್ಬ ಒಳಗೊಳಗೇ ಶತ್ರುವಿನ ಜೊತೆ ಕೈಜೋಡಿಸುತ್ತಾನೆ. ರೊಕ್ಕದ ಸೊಕ್ಕು, ಅಧಿಕಾರದ ಕೊಬ್ಬು ನತಮಸ್ತಕ ತುಂಬಿ ತುಳುಕುತ್ತಿರುವ ಕಾಂಗ್ರೆಸ್ಸಿಗೆ ಕಾಂಗ್ರೆಸ್ಸೇ ವೈರಿಯಾಗಿರುವಾಗ ಮಂಡ್ಯ ನಗರಸಭೆಯ ಮೇಲೆ ಜೆಡಿಎಸ್ ಬಾವುಟ ಹಾರಿಸುವುದು ಎಷ್ಟು ಹೊತ್ತು?



ಅರುಣ್ ಕುಮಾರ್



ರವೀಂದ್ರ



ಶಂಕರ್

ಇದು ಮಂಡ್ಯ ಜಿಲ್ಲಾ ಉಸ್ತುವಾರಿ ಮಂತ್ರಿ ಚಲುವರಾಯನ ಲೆಕ್ಕಾಚಾರ. ಜೊತೆಗೆ ಮಂಡ್ಯದ ಎಮ್ಮೆಲ್ಲೇ ಶ್ರೀನಿವಾಸ ತಲೆಯೂ ಕೆಲಸ ಮಾಡಿಬಿಟ್ಟರೆ ಕಾಂಗ್ರೆಸ್ಸನ್ನು ಸಾಕ್ಷಾತ್ ಸೋನಿಯಾ ಗಾಂಧಿಯೇ ಬಂದರೂ ಉಳಿಸುವುದು ಕಷ್ಟವೆ!


ಮಂಡ್ಯದ ಒಟ್ಟು 35 ವಾರ್ಡುಗಳ ಪೈಕಿ ಕಾಂಗ್ರೆಸ್ ಎಲ್ಲಕ್ಕೂ ಅಭ್ಯರ್ಥಿಗಳನ್ನು ಹಾಕಿದೆ ನಿಜ. ಹಾಗಂತ ಯಾವುದಾರುವ ಹಾಗಿಲ್ಲ. ಉದಾಹರಣೆಗೆ ಸುಭಾಶ್‌ನಗರವನ್ನೇ ತೆಗೆದುಕೊಂಡರೆ ಅಲ್ಲಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದ ವೆಂಕಟಾಚಲಮೂರ್ತಿ ಉರ್ಫ್ ತರಕಾರಿ ವೆಂಕಟಾಚಲ ಹೇಳಿಕೇಳಿ ಆತ್ಮಾನಂದರ ಛೇಲಾ. ಆತ್ಮಾನಂದರ ತಮ್ಮ ಸತ್ಯಪ್ಪನಿಗೆ ಮಸ್ಕಾ ಹೊಡೆದುಕೊಂಡಿದ್ದನ್ನು ಬಿಟ್ಟರೆ ಯಾವತ್ತೂ ಜನಕ್ಕೆ ಉಪಕರಿಸಿದವನಲ್ಲ, ಇಂಥ ಮಸ್ಕಾ ಗಿರಾಕಿಯ ಬದಲಿಗೆ ವಿಶ್ವಕರ್ಮರ ಚಲುವರಾಜುಗೇ ಟಿಕೆಟ್ ಕೊಡಿ ಎಂದು ಮಂಡ್ಯದ ಕಾಂಗ್ರೆಸ್ಸಿನ ಆಧಾರಸ್ತಂಭಗಳಂತಿದ್ದ ಎಂ.ಬಿ. ಶ್ರೀಕಾಂತ್ ಮತ್ತು ಎಂ.ಡಿ. ರಮೇಶ್ ರಾಜು ಸಹೋದರರು ಇನ್ನಿಲ್ಲದಂತೆ ಪಟ್ಟು ಹಿಡಿದರು. ಚಲುವರಾಜು ನಿಷ್ಠೆಯೇನಿದ್ದರೂ ಶ್ರೀಕಾಂತ್‌ಗೇ ತಾನೆ? ಆತ ಗೆದ್ದುಬಿಟ್ಟರೆ ಶ್ರೀಕಾಂತ್‌ಗೆ ಕೋಡು ಬಂದಂತಾಗುತ್ತದೆ ಎಂದು ಅಂಬಿ ಬಂಟ ರವಿಶಂಕ್ರೇಗೌಡ ಮತ್ತು ಆತ್ಮಾನಂದ ಕ್ಯಾತೆ ತೆಗೆದರು.

ಇದರ ಫಲವೆಂಬಂತೆ ತರಕಾರಿ ವೆಂಕಟಾಚಲನೇ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿಬಿಟ್ಟ. ಯಾವತ್ತು ನಿಜಕ್ಕೂ ಗೆಲ್ಲುವ ಯೋಗ್ಯತೆಯಿದ್ದ ಚಲುವರಾಜುಗೆ ಕಾಂಗ್ರೆಸ್ 'ಬಿ' ಫಾರ್ಮ್ ಗಿಟ್ಟಲಿಲ್ಲವೋ 'ನಿಮ್ಮಿಷ್ಟ ಏನು ಬೇಕಾದ್ರೂ ಮಾಡ್ಕೊಳ್ಳಿ, ತಾಕತ್ತಿದ್ರೆ ತರಕಾರಿ ವೆಂಕ್ಟನ್ನು ನೀವೇ ಗೆಲ್ಲಿಸಿಕೊಳ್ಳಿ....' ಎಂದಿದ್ದೇ ಶ್ರೀಕಾಂತ್-ರಮೇಶ್ ರಾಜು ಕೈಮಿಲಾಯಿಸಿ ಚಲುವರಾಜುವನ್ನು ಬಂಡಾಯ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಹಾಕಿಬಿಟ್ಟರು.

ಸದ್ಯ ಸುಭಾಶ್‌ನಗರದಲ್ಲಿ ಪೈಪೋಟಿಯೇನಿದ್ದರೂ ಕಾಂಗ್ರೆಸ್ ಅಭ್ಯರ್ಥಿ ವೆಂಕಟಾಚಲ ಮತ್ತು ಬಂಡಾಯ ಕಾಂಗ್ರೆಸ್ ಅಭ್ಯರ್ಥಿ ಚಲುವರಾಜು ನಡುವೆಯೇ ಹೊರತು ಜೆಡಿಎಸ್ ಅಭ್ಯರ್ಥಿ ಪಿ. ಶ್ರೀನಿವಾಸ್ ಇಲ್ಲಿ ಲೆಕ್ಕಕ್ಕಿಲ್ಲ, ಬಿಜೆಪಿಯಿಂದ ನೆಪಕ್ಕಷ್ಟೇ ವೈ.ಎಸ್. ಸ್ವಾಮಿ ನಿಂತಿದ್ದಾನೆ. ಕಾಂಗ್ರೆಸ್ ಕಚ್ಚಾಟದಲ್ಲಿ ಜೆಡಿಎಸ್‌ಗೇನಾದರೂ ಲಾಭವಾದರಷ್ಟೇ ಶ್ರೀನಿವಾಸ್ ಗೆಲ್ಲಬಹುದು. ಅಥವಾ ಬಂಡಾಯ ಕಾಂಗ್ರೆಸ್ಸಿಗ ಚಲುವರಾಜುವನ್ನು ಗೆಲ್ಲಿಸುವಲ್ಲಿ ಶ್ರೀಕಾಂತ್-ರಮೇಶ್ ರಾಜು ಬ್ರದರ್ಸ್ ಯಶಸ್ವಿಯೂ ಆಗಬಹುದು. ಏನೇ ಆದರೂ ಅದರ ಲಾಭ ಜೆಡಿಎಸ್‌ಗೇ ಹೊರತು ಕಾಂಗ್ರೆಸ್ಸಿಗಲ್ಲ!



ನಂಜುಂಡಪ್ಪ



ಸೋಮಶೇಖರ್


ಇದು ಮಂಡ್ಯ ನಗರಸಭೆಯ ಒಂದು ವಾರ್ಡಿನ ಕತೆಯೇನಲ್ಲ, ಪಕ್ಕದ ವಿಜಯನಗರದ ಹನ್ನೊಂದನೇ ವಾರ್ಡಿಗೆ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿದ ಟಿ. ಶಂಕರ್ ಕೂಡ ಆತ್ಮಾನಂದರ ಶಿಷ್ಯನೆ. ಎಮ್ಮೆಲ್ಲೇ ಶ್ರೀನಿವಾಸ್ ಬಲಗೈ ಬಂಟ ಎಂ.ಪಿ. ಅರುಣ್ ಕುಮಾರ್ ಇಲ್ಲಿ ಜೆಡಿಎಸ್ ಅಭ್ಯರ್ಥಿ. ಬಿಜೆಪಿಯಿಂದ ತಿರುಮಲಾಚಾರ್ ಕಾಟಾಚಾರಕ್ಕಷ್ಟೇ ಕಣಕ್ಕಿಳಿದಿದ್ದಾನೆ. ಹಣಾಹಣಿಯೇನಿದ್ದರೂ ಅರುಣ್‌ಕುಮಾರ್ ಮತ್ತು ಶಂಕರ್ ಎಂಬ ಇಬ್ಬರು 'ಲಿಕ್ಕರ್' ದಾಯಾದಿಗಳ ಮಧ್ಯೆಯೇ.. ಕಾಂಗ್ರೆಸ್‌ನ ಕರ್ಮ ಹೇಗಿವೆಯೆಂದರೆ ಇಲ್ಲೂ ಕೂಡ ರಮೇಶ್‌ರಾಜು, ಶ್ರೀಕಾಂತ್ ಕೂಟ ಆತ್ಮಾನಂದರ ಕಾಲೆಳೆಯಲು ಹೊಂಚು ಹಾಕುತ್ತಿದೆ. ಜೊತೆಗೆ ಸಾಕ್ಷಾತ್ ಎಮ್ಮೆಲ್ಲೇ ಶ್ರೀನಿವಾಸ್‌ರೇ ತನ್ನ ಬಂಟ ಅರುಣ್‌ಕುಮಾರ್‌ನ ಪರವಾಗಿ ಕಾಸು ಬಿಚ್ಚುತ್ತಿದ್ದಾರೆ. ಇಲ್ಲೂ ಕೂಡ ಕಾಂಗ್ರೆಸ್ಸಿಗೆ ಕಾಂಗ್ರೆಸ್ಸೇ ವೈರಿ.

ಇನ್ನು ಹೌಸಿಂಗ್ ಬೋರ್ಡ್, ಕುವೆಂಪುನಗರ, ಚಂದಗಾಲು ಲೇಔಟ್‌ಗಳನ್ನೊಳಗೊಳ್ಳುವ ಹದಿನೇಳನೇ ವಾರ್ಡಿಗೆ ನೆಟ್ಟಗೊಬ್ಬ ಅಭ್ಯರ್ಥಿಯೇ ಕಾಂಗ್ರೆಸ್ಸಿಗೇ ಗತಿಯಿಲ್ಲ, ಇಲ್ಲಿ ಹಸ್ತದ ಗುರುತಿಗೆ ನಿಂತಿರುವ ಎಚ್.ಸಿ. ಬೋರೇಗೌಡರು ಕಳೆದ ಬಾರಿ ಕೌನ್ಸಿಲರ್ ಆಗಿದ್ದದ್ದು ಪಕ್ಕದ ಹೊಸಳ್ಳಿ ವಾರ್ಡಿನಿಂದಲೇ ಹೊರತು ಈ ಏರಿಯಾ ಅವರಿಗೆ ಅಪರಿಚಿತವೆ. ಇದು ಸಾಮಾನ್ಯ ಕ್ಷೇತ್ರವೇ ಆದರೂ ಇಲ್ಲಿಗೆ ಜೆಡಿಎಸ್ ಅಭ್ಯರ್ಥಿಯಾಗಿರುವ ಸೋಮಶೇಖರ್ ದಲಿತ. ಸ್ಥಳೀಯ 'ಕೆಮ್ಮುಗಿಲು' ಎಂಬ ದಿನಪತ್ರಿಕೆಯ ಸಂಪಾದಕರಾಗಿರುವ ಸೋಮಶೇಖರ್ ದಲಿತ ಸಂಘರ್ಷ ಸಮಿತಿಯ ನಾಯಕರಾಗಿದ್ದು ಹೋರಾಟದಲ್ಲಿ ಪಳಗಿದವರು. ಓರ್ವ ಪತ್ರಕರ್ತನಾಗಿ, ದಲಿತ ಹೋರಾಟಗಾರನಾಗಿ ಮೇಲ್ಜಾತಿಯ ಪ್ರಾಬಲ್ಯದ ವಾರ್ಡೊಂದಕ್ಕೆ ಜೆಡಿಎಸ್ ಅಭ್ಯರ್ಥಿಯಾಗುವುದು ತಮಾಷೆಯೇ?

ಮಂತ್ರಿ ಚಲುವನ ಥೈಲಿ ಮತ್ತು ಎಮ್ಮೆಲ್ಲೇ ಶ್ರೀನಿವಾಸ್ ಭುಜಬಲ ಎರಡೂ ಮೇಳೈಸಿಬಿಟ್ಟರೆ ಸೋಮಶೇಖರ್ ಗೆಲುವು ಕಷ್ಟವೇನಲ್ಲ, ಆದರೆ ತಾಪತ್ರಯವಿರುವುದು ಬಹುಜನ ಸಮಾಜ ಪಕ್ಷದ ವಕೀಲ ಸಂತೋಷ್‌ರಿಂದ. ಮಂಡ್ಯದ ಮತ್ತೊಬ್ಬ ದಲಿತ ನಾಯಕ ಗುರುಪ್ರಸಾದ್ ಕೆರಗೋಡುಗೆ ಶತಗತಾಯ ಸೋಮಶೇಖರ್‌ರನ್ನು ಸೋಲಿಸಬೇಕಿದೆ. ಅದಕ್ಕೆಂದೇ ಬಿಎಸ್‌ಪಿಯಿಂದ ಸಂತೋಷ್‌ರನ್ನು ಕಣಕ್ಕಿಳಿಸಿದ್ದಾರೆಂದು ಜೆಡಿಎಸ್ ಆರೋಪಿಸುತ್ತಿದೆ. ಹಾಗೊಂದು ಪಕ್ಷ ಸಂತೋಷ್ ಕಾಂಗ್ರೆಸ್ ಬುಟ್ಟಿಯ ದಲಿತರ ಓಟುಗಳನ್ನೇ ಕಿತ್ತುಬಿಟ್ಟರೆ?

ಪಭಾವಿಯೇ.

ಏನೇ ಲಾಗ ಹಾಕಿದರೂ ಇಲ್ಲಿ ಶಶಿಧರ್ ಗೆಲ್ಲುವುದು ಕಷ್ಟವೇ. ಇಂಥದ್ದೇ ಚಾಳಿಯನ್ನು ಮುಂದುವರಿಸಿದ ಜೇಟ ದೇವೇಗೌಡರು ಒಂಟಿಕೊಪ್ಪಲಿನಿಂದ ತನ್ನ ನಟೋರಿಯಸ್ ಶಿಷ್ಯ ಅವ್ವಾ ಮಾದೇಶನಿಗೆ ಜೆಡಿಎಸ್ ಟಿಕೆಟ್ ಕೊಡಿಸಿದ್ದಾರೆ. ಮೈಸೂರು ಕಂಡ ಭಯಾನಕ ರೌಡಿಗಳ ಪೈಕಿ ಅವ್ವಾ ಮಾದೇಶನ ಹೆಸರಿಗೆ ಮಿಕ್ಕೆಲ್ಲರಿಗಿಂತಲೂ ದೊಡ್ಡ ನಟೋರಿಟಿಯಿದೆ. ಈತನ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಪ್ರಕಾಶ್ ಹೇಳಿಕೇಳಿ ಮಾಜಿ ಮೇಯರ್ ವಾಸು ಬಲಗೈ ಬಂಟ. ಬಿಜೆಪಿಯಿಂದ ಅವ್ವಾ ಮಾದೇಶನೇ ತನ್ನ ಛೇಲಾ ಪ್ರೇಮ್‌ಕುಮಾರ್ ಎಂಬ ಹಾಲು ಹಾಕುವ ಹುಡುಗನನ್ನು ನಿಲ್ಲಿಸಿದ್ದಾನೆ. ಬಿಎಸ್‌ಪಿಯ ಸಿ.ಆರ್. ಹಿಮಾಂಶು ಒಂದಷ್ಟು ಕಾಂಗ್ರೆಸ್ ಓಟುಗಳನ್ನು ಕೀಳಬಹುದು. ಆದರೆ ಅವ್ವಾ ಮಾದೇಶನಿಗೆ ಅಸಲೀ ಅಪಾಯ ಎದುರಾಗಿರುವುದು ಕನ್ನಡ ಗೆಳೆಯರ ಬಳಗದ ಅಭ್ಯರ್ಥಿ ಕೆ. ಮಾದೇಶರಿಂದ. ಈತ ಪೈಲ್ವಾನ್ ಚಿಕ್ಕಪುಟ್ಟಯ್ಯ ಖಾಸಾ ತಮ್ಮ. ಇಬ್ಬರು ಮಾದೇಶರ ಹಣಾಹಣಿ ಯಾವ ಮಟ್ಟಕ್ಕೆ ಹೋಗುವುದೊ?


ಸಂದೇಶ್ ನಾಗರಾಜ್

ಹಾಗಂತ ಕಾಂಗ್ರೆಸ್ ಕೈಕಟ್ಟಿ ಕೂತಿಲ್ಲ. ಎನ್ನಾರ್ ಮೊಹಲ್ಲದಿಂದ ಇನ್ನೊಬ್ಬ ರೌಡಿ ಅರ್ಜುನನನ್ನು ಕಣಕ್ಕಿಳಿಸಿದೆ. ಅರ್ಜುನನ ರೌಡಿ ಪಡೆಯ ಆರ್ಭಟದ ಮುಂದೆ ಜೆಡಿಎಸ್‌ನ ಪುಟ್ಟಲಿಂಗು ಬಿಜೆಪಿಯ ರಮೇಶ್, ಬಿಎಸ್‌ಪಿಯ ಜಯಕುಮಾರ್ ಥರದವರು ಅಡ್ರೆಸ್ಸಿಗೇ ಇಲ್ಲದಂತಾಗಿ ಬಿಟ್ಟಿದ್ದಾರೆ.

ಶ್ರೀನಿವಾಸ್ ಪ್ರಸಾದ್, ಸಿದ್ಧರಾಮಯ್ಯನವರಂಥ ಘಟಾನುಘಟಗಳಿಂದಾಗಿ ಈ ಬಾರಿ ಮೈಸೂರು ನಗರಪಾಲಿಕೆ ಕಾಂಗ್ರೆಸ್ ಪಾಲಾಗುವುದರಲ್ಲಿ ಯಾರಿಗೂ ಅನುಮಾನಗಳಿಲ್ಲ ನಿಜ. ಹಾಗಂತ ದೇವೇಗೌಡರು ಜಿದ್ದು ಬಿಟ್ಟಿಲ್ಲ. ಮಗ ರೇವಣ್ಣನನ್ನೇ ಸೇನಾಪತಿಯನ್ನಾಗಿಸಿ ಸಿದ್ಧು ಹಣಿಯಲು ಹೊರಟಿದ್ದಾರೆ. ಎಲ್ಲೆಲ್ಲಿ ತಮ್ಮ ಅಭ್ಯರ್ಥಿಗಳಿಲ್ಲವೋ ಅಲ್ಲೆಲ್ಲ ಬಿಜೆಪಿ ಜೆಡಿಎಸ್ ಅನ್ನು ಬೆಂಬಲಿಸುತ್ತಿದೆ. ಆದಕ್ಕೆ ಬಿಜೆಪಿ ನಾಯಕ ಶಂಕರಲಿಂಗೇ ಗೌಡರೇ ನಿಂತು ಫರ್ಮಾನು ಹೊರಡಿಸಿದ್ದಾರೆ.

ಸಿದ್ಧು-ರೇವಣ್ಣನ ರಣಕಾಳಗದಲ್ಲಿ ಮೈಸೂರಿನ ಗತಿ ಏನಾಗುತ್ತೋ?

■ ರಾ. ಸೋಮನಾಥ್


ಸಂದೇಶ್ ಸ್ವಾಮಿ


ವಾಸು

ಸಂದೇಶ್-ವಾಸು ಹಣಾಹಣಿ?

ಮೈಸೂರಿನ ನಿಜವಾದ ಕುಸ್ತಿ ಆಖಾಡ ಅಂತಿದ್ದರೆ ಅದು ಗಾಯಿತ್ರಿಪುರಂ ವಾರ್ಡು. ಕಾಂಗ್ರೆಸ್ ಅಧಿಕಾರ ಇದ್ದಷ್ಟೂ ದಿನ ಲಾಭದೋಚಿದ ಸಂದೇಶ್ ನಾಗರಾಜ್ ಜೆಡಿಎಸ್ ಅಧಿಕಾರಕ್ಕೆ ಬರುತ್ತಿದ್ದಂತೆ ತಮ್ಮ ಪರಮಾಪ್ತ ಅಂಬಿಗೆ ಕೈಕೊಟ್ಟರು. ಒಡೆಯರ್, ಕೃಷ್ಣ ಎಸ್ಸೆಮ್ ಶಂಕರ್ ಇತ್ಯಾದಿಗಳೆಲ್ಲರ ಹಂಗನ್ನೇ ತೊರೆದು ಕುಮಾರಣ್ಣನ ಕಾಲಿಗೆ ಬಿದ್ದರು. ಒಬ್ಬ ದಲ್ಲಾಳಿಯಾಗಿ, ವ್ಯಾಪಾರಿಯಾಗಿ ಸಂದೇಶ್ ಬೇರೆ ಏನು ತಾನೇ ಮಾಡಲು ಸಾಧ್ಯ?

ಕಾಂಗ್ರೆಸ್ಸಿಗರಿಗೆ ಇದು ಅರ್ಥವಾಗಬೇಕಲ್ಲ? ನಾಳೆ ಕಾಂಗ್ರೆಸ್ ಅಧಿಕಾರಕ್ಕೆ ಬಂತೆಂದರೆ ಇದೇ ಸಂದೇಶ್‌ರ ಜೆಡಿಎಸ್ ನಿಷ್ಠೆ ಹೀಗೆ ಇರುತ್ತಾ?

ಸದ್ಯ ಸಂದೇಶ್ ತಮ್ಮ ಎಸ್. ಸತೀಶ್ ಉರ್ಫ್ ಸಂದೇಶ್‌ಸ್ವಾಮಿಯೇ ಗಾಯಿತ್ರಿಪುರಂ ವಾರ್ಡಿಗೆ ಜೆಡಿಎಸ್ ಅಭ್ಯರ್ಥಿ. ಒಂದು ಕೋಟಿ ಸುರಿದಾದರೂ ತಮ್ಮನನ್ನು ಕೌನ್ಸಿಲರ್ ಮಾಡಲು ಥೈಲಿ ಹಿಡಿದೇ ನಿಂತಿದ್ದಾನೆ ಅಣ್ಣ ಸಂದೇಶ್. ಕಾಂಗ್ರೆಸ್ಸಿನ ಸಿದ್ಧು ಜಾಲಪ್ಪ ಒಡೆಯರ್ ಇತ್ಯಾದಿಗಳಿಗೆಲ್ಲ ಮೊದಲೇ ಸಂದೇಶ್ ಹೆಸರೆಂದರೆ ಅಸಹ್ಯವಾಗಿ ಬಿಟ್ಟಿದೆ. ಅದರಲ್ಲೂ ಮಾಜಿ ಮೇಯರ್ ವಾಸುಗೂ ಸಂದೇಶ್‌ಗೂ ಹಾವು-ಮುಂಗುಸಿಯಂಥ ವೈರತ್ವವಿದೆ. ಅದಕ್ಕೆಂದೇ ತನ್ನ ಪರಮಾಪ್ತ ಎಸ್. ಚಂದ್ರಶೇಖರ್‌ಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿ ಕಣಕ್ಕಿಳಿಸಿದ ವಾಸು ಪಾಲಿಗೆ ಗಾಯಿತ್ರಿಪುರಂ ಎಂಬುದು ತನ್ನ ಅಳಿವುಉಳಿವಿನ ಪ್ರಶ್ನೆಯಾಗಿಬಿಟ್ಟಿದೆ.


ಚಂದ್ರಶೇಖರ್ ಹೇಳಿಕೇಳಿ ಮೈಸೂರು ವಸ್ತು ಪ್ರದರ್ಶನದ ಗುತ್ತಿಗೆದಾರ. ಪ್ರಖ್ಯಾತ ಶಿಲ್ಪಾ ಸಿಲ್ಕ್‌ನ ಮಾಲೀಕ. ಕಳೆದ ಬಾರಿ ಇದೇ ವಾರ್ಡಿನಿಂದ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿ ಗೆದ್ದಿದ್ದ ಸಂದೇಶ್ ಸ್ವಾಮಿಯನ್ನು ಏನಾದರೂ ಮಾಡಿ ಸೋಲಿಸಲು ಕಾಂಗ್ರೆಸ್ ಪಣತೊಟ್ಟಿದೆ. ಹಾಗಂತ ಸಂದೇಶ್ ಸೋತುಬಿಟ್ಟರೆ ಮೈಸೂರಿನ ಇಡೀ ಸಂದೇಶ್ ಸಾಮ್ರಾಜ್ಯವೇ ಅಲ್ಲಾಡುತ್ತದೆ.

ಯುದ್ಧ ಗತಸ್ಸಿದ್ಧ!

ಮಂಗಳೂರು ಮಹಾನಗರ ಪಾಲಿಕೆ ಚುನಾವಣೆ


ಮತ್ತೆ ಹಳೇ ಗಂಡನೇ ಗತಿ!

ಮಗು ಬಿಕ್ಕಿಬಿಕ್ಕಿ ಅತ್ತಂತೆ ಆಗೊಮ್ಮೆ ಈಗೊಮ್ಮೆ ಹನಿಯಾಗುವ ತುಂತುರು ಮಳೆಯ ಹಿಮ್ಮೇಳದಲ್ಲಿ ಮಂಗಳೂರಿನ ಬೀದಿ - ಬಡಾವಣೆಗಳಲ್ಲಿ ರಾತ್ರಿ ಹಗಲೆನ್ನದೆ ಕಾರ್ಪೊರೇಟರ್ ಆಗುವ ಕನಸು ಹೊತ್ತವರು ಮತಯಾಚನೆಯ ತರಹೇವಾರಿ ವರಸೆಗಳನ್ನು ಶುರುಹಚ್ಚಿಕೊಂಡಿದ್ದಾರೆ. ಧಂ...ಧಂ... ಡೋಲಿನ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಮಲ್ಲಿಗೆ ಹಂಚಿ ಮರುಳು ಮಾಡುವ ಜನಾರ್ದನ ಪೂಜಾರಿಯ ಗಿಮಿಕ್ಕಿಗೂ ಚಾಲನೆ ದೊರೆತಿದೆ.




ಮಹಾನಗರ ಪಾಲಿಕೆಯ ಕಾರ್ಪೊರೇಟರ್ ಆಗುವುದೆಂದರೆ ಜನರ ಸೇವೆ ಮಾಡಲು, ತಮ್ಮ ವಾರ್ಡಿನ ಅಭಿವೃದ್ಧಿಯನ್ನು ಮಾಡಲು ಒಂದು ಅವಕಾಶ ಎನ್ನುವ ಕಾಲ ಬಹಳ ದಿನಗಳ ಹಿಂದೆಯೇ ಹೊರಟುಹೋಗಿದೆ. ಈಗ ಅದು ಕಾರ್ಪೊರೇಟರ್‌ಗಳಿಗೆ ಭಾರಿ ಆದಾಯ ತರುವ ಲಾಭದಾಯಕ ಹುದ್ದೆಯಾಗಿ ಬಿಟ್ಟಿದೆ. ಏಕೆಂದರೆ, ಒಮ್ಮೆ ಕಾರ್ಪೊರೇಟರ್ ಆಗಿ ಆಯ್ಕೆಯಾದವನು ತನ್ನ ಜೀವಮಾನವಿಡೀ ಕೂತು ತಿನ್ನುವಷ್ಟು ಸಾರ್ವಜನಿಕ ಹಣವನ್ನು ಕೊಳ್ಳೆಹೊಡೆದು ಬಿಡುತ್ತಾನೆ. ಹಾಗಾಗಿಯೇ ಈ ಲಾಭದಾಯಕ ಹುದ್ದೆಗೇರಲು ಭಾರಿ ಪೈಪೋಟಿ ನಡೆದಿದೆ. 'ಅಂಗುಟ ಛಾಪು'ಗಳೂ ಸೀಟು ಗಿಟ್ಟಿಸಲು ಕಸರತ್ತು ನಡೆಸಿದ್ದಾರೆ. ಲಕ್ಷಗಟ್ಟಲೇ ತೆತ್ತು ಸೀಟು ಖಾತರಿ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೊಂದು ಉದಾಹರಣೆ ನೀಡುವುದಾದರೆ, ಬಿಜೈ ವಾರ್ಡ್‌ನಲ್ಲಿ ತನಗೆ ಅನುಕೂಲವಾಗುವಂತೆ ಮೀಸಲಾತಿಯನ್ನು ಸರಿಪಡಿಸಿ ಕೊಳ್ಳುವುದಕ್ಕೆ ಮಾಜಿ ಉಪ ಮೇಯರ್ ಲ್ಯಾನ್ಸಿ ಲಾಟ್ ಪಿಂಟೋ ಎರಡು ಲಕ್ಷ ತೆತ್ತಿದ್ದಾರೆ!

ಕಳೆದ ಮ.ನ.ಪಾ. ಕೌನ್ಸಿಲ್‌ನಲ್ಲಿ ಕಾಂಗ್ರೆಸ್‌ನ 44, ಬಿಜೆಪಿಯ 14 ಮತ್ತು ಪಕ್ಷೇತರರ 2 ಬಲಾಬಲವಿತ್ತು. ಚರಂಡಿ ದುರಸ್ತಿಯಲ್ಲಿ ಶೆ. 30, ಹೊಸ ಚರಂಡಿಯಲ್ಲಿ ಶೇ. 15 ಮತ್ತು ಇತರೇ ಕಾಮಗಾರಿಯಲ್ಲಿ ಶೇ 10 -ಹೀಗೆ 60 ವಾರ್ಡುಗಳಲ್ಲಿ ಆಜುಬಾಜು ತಲಾ ಒಂದು ಕೋಟಿ ಅನುದಾನದ ಕಾಮಗಾರಿ ನಡೆದಿದೆ. ಅಂದರೆ ಮೇಲೆ ತಿಳಿಸಿದ ಶೇಕಡಾವಾರು ಕಮೀಷನ್ ಕಾರ್ಪೊರೇಟರುಗಳ ಪಾಲಾಗಿದೆ ಎಂದರ್ಥ. ಅದು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳೆಂಬ ತಾರತಮ್ಯವಿಲ್ಲದೇ ಸಂಪ್ರದಾಯದಂತೆ ಸಂದಾಯವಾಗಿದೆ. ಇಷ್ಟೊಂದು ಆದಾಯ ಬರುತ್ತಿರುವುದೇ ಈ ಹುದ್ದೆಗಳನ್ನೇರಲು ಇಷ್ಟೊಂದು ಪೈಪೋಟಿ ನಡೆದಿರುವುದು.



ಟಿಕೆಟ್ ವಂಚಿತರ ಪಡೆ

ಪ್ರತಿಷ್ಠಿತ ಮ.ನ.ಪಾ. ಚುನಾವಣೆಗಾಗಿ ಟಿಕೆಟ್ ಹಂಚುವುದೆಂದರೆ ಕಾಂಗ್ರೆಸ್‌ನಲ್ಲಿ ಮೊಯ್ಲಿ-ಪೂಜಾರಿ ಬಣದ ಶಕ್ತಿ ಪ್ರದರ್ಶನದಂತಿರುತ್ತಿತ್ತು. ಆದರೆ, ಈ ಬಾರಿ ಹರಕೆ ಹೊತ್ತವರಂತೆ ಇಬ್ಬರೂ ಒಮ್ಮತಕ್ಕೆ ಬಂದು ನನ್ನದೊಂದಿಷ್ಟು-ನಿನ್ನದೊಂದಿಷ್ಟು ಎಂದು ಸರಿಮಾಡಿಕೊಂಡರು. ಈ ಇಬ್ಬರ ನಡುವೆ ಆಗ ತಾನೆ ಡಿ.ಸಿ.ಸಿ. ಅಧ್ಯಕ್ಷರಾಗಿದ್ದ ರಮಾನಾಥ ರೈ ಬರೀ ರಬ್ಬರ್ ಸ್ಟಾಂಪ್ ಮಾತ್ರ ಆಗಿದ್ದರು. ಈ ಬಾರಿ ಟಿಕೆಟ್ ವಂಚಿತ ಪ್ರಮುಖರಲ್ಲಿ ಮಾಜಿ ಮೇಯರ್ ದಿವಾಕರ್ ಕೂಡ ಒಬ್ಬರು. ಈತ ತನ್ನ ಕಾಲದಲ್ಲಿ ಮಾಡಿದ್ದಕ್ಕಿಂತ ಆಡಿದ್ದೇ ಹೆಚ್ಚು. ಎಡಿಬಿಯ ಮುನ್ನೂರು ಕೋಟಿ ಸಾಲದ ಬಗ್ಗೆ ಮ.ನ.ಪಾ. ಸಭೆಗಳಲ್ಲಿ ಕಿರುಚಿ ಗಮನ ಸೆಳೆಯುತ್ತಿದ್ದಾಗ, ಅದೇನು ನಡೆಯಿತೋ ಎಡಿಬಿಯ ಅಧ್ಯಯನಕ್ಕೆಂದು ಮನಿಲಾಗೆ ಜಾಲಿ ಟ್ರಿಪ್ ಮಾಡಿ ಬಂದ ಮೇಲೆ ತಿಕಕ್ಕೊಂದು ಮುಖಕ್ಕೊಂದು ಕೈಯಿಟ್ಟು ತೆಪ್ಪಗಾದರು. ಎಡಿಬಿಯವರೇ ತೊಡಿಸಿದ್ದ ಸೂಟು ಬೂಟು ಹಾಕಿಕೊಂಡು ಇವರಂತೆಯೇ ಆಸ್ಟ್ರೇಲಿಯ ಪ್ರವಾಸ ಮಾಡಿಬಂದಿದ್ದ ಮಾಜಿ ಮೇಯರ್ ಅಶ್ರಫ್‌ಗೆ ಈ ಬಾರಿ ಮತ್ತೆ ಟಿಕೆಟ್ ಸಿಕ್ಕಿದೆ. ದಿವಾಕರ್‌ಗೆ ಟಿಕೆಟ್ ತಪ್ಪಲು ಆತ ಮಾಡಿದ ಭ್ರಷ್ಟಾಚಾರವಾಗಲೀ, ಅವನ ಜಾಲಿ ಟ್ರಿಪ್ ಆಗಲೀ ಕಾರಣವಲ್ಲ. ಬಿಜೆಪಿಯ ಮಂತ್ರಿ ನಾಗರಾಜ್ ಶೆಟ್ಟರ್ ಮನೆಯಲ್ಲಿಯೇ ಬೆಳಗಿನ ಬ್ರೇಕ್‌ಫಾಸ್ಟ್ ಮುಗಿಸುತ್ತಿದ್ದ ಅವನ ಬಿಜೆಪಿ ಸಖ್ಯ.



ತನ್ನ ವಾರ್ಡ್ ಒಂದರಲ್ಲಿಯೇ ಅಘೋಷಿತ 'ಬಿಲ್'ಗಾರಿಕೆಯ ಪ್ರದರ್ಶನದಿಂದ ಒಂದು ಕೋಟಿ ಇಪ್ಪತ್ತು ನಾಲ್ಕು ಲಕ್ಷ ರೂಪಾಯಿಗಳ ಚರಂಡಿ ಕಾಮಗಾರಿ ನಡೆಸಿ ರಾಜ್ಯದಲ್ಲೇ ದಾಖಲೆ ಮಾಡಿದ ಚಿಕನ್ ಟಿಕ್ಕಾದ ಹಸನ್ ಭಾವ, ಮೂರು ಲಕ್ಷ ಕೊಡದ್ದಕ್ಕೆ ಚಿಕ್ಕ ಅಂಗಡಿಯನ್ನೇ ಎತ್ತಂಗಡಿ ಮಾಡಿ ಛೀ...ಥೂ... ಎಂದು ಉಗಿಸಿಕೊಂಡ ಪೂಜಾರಿ ಶಿಷ್ಯ ಪುರಂದರದಾಸ ಕೂಳೂರುಗೆ ಟಿಕೆಟ್ ವಂಚನೆಯಾಗಲು ಆತ ರಾಕೇಶ್ ಮಲ್ಲಿ ಜೊತೆ ಸಖ್ಯ ಹೊಂದಿದ್ದೇ ಕಾರಣ. ಮಲ್ಲಿಯ ಸಾಂಪ್ರದಾಯಿಕ ಶತ್ರು ರಮಾನಾಥ ರೈಯೇ ಪುರಂದರನಿಗೆ ಟಿಕೆಟ್ ಕೊಡದಂತೆ ಪೂಜಾರಿಯ ಕಿವಿಯೂದಿದ್ದರು. ಸತತ ಮೂರು ಬಾರಿ ಕಾರ್ಪೊರೇಟರ್ ಆಗಿದ್ದ ಪದ್ಮನಾಭ, ಅಮೀನ್ ಅಫ್ರೂಫ್, ಎ. ವಿಶ್ವನಾಥ್ ಎಂಬುವವರು ಇತರ ಟಿಕೆಟ್ ವಂಚಿತ ಘಟಾನುಘಟಿಗಳು.

ಬಿಜೆಪಿಗೆ 'ಮಾರಿ'ಯಾದ ಮರಿಯಮ್ಮ ಥೋಮಸ್

ಬಿಜೆಪಿಯ ಕಾರ್ಪೊರೇಟರ್‌ಗಳ ಪೈಕಿಯೇ ತನ್ನ ಒರಟು ವರ್ತನೆಗೆ ಹೆಸರುವಾಸಿಯಾದವಳೆಂದರೆ ಮರಿಯಮ್ಮ ಥೋಮಸ್. ಮಾತೆ ಅಮೃತಾನಂದಮಯಿಗೆ ವಾಚಾಮಗೋಚರ ಬೈದದ್ದು, ಕುಂದಾಪುರದ ಪಾದ್ರಿಗಳ ಮೇಲಿನ ಭಜರಂಗಿಗಳ ಹಲ್ಲೆಗೆ ವಿರುದ್ಧವಾಗಿ ನಡೆದ ಪ್ರತಿಭಟನಾ ಸಭೆಯಲ್ಲಿ ಕಾಣಿಸಿಕೊಂಡದ್ದು ಇತ್ಯಾದಿಗಳಿಂದ ಬಿಜೆಪಿಗಳಿಗೆ ಉರಿಹತ್ತಿಕೊಂಡಿತ್ತು. ಈ ಬಾರಿ ಆಕೆಗೆ ಟಿಕೆಟ್ ನೀಡುವುದಿರಲಿ, ಪಕ್ಷದಿಂದಲೇ ಗೇಟ್‌ಪಾಸ್ ಕೊಟ್ಟು ಕಳಿಸಲು ಕಲ್ಲಡ್ಕದ ಪ್ರಭಾಕರ್ ಭಟ್ಟರೇ ಫರ್ಮಾನು ಹೊರಡಿಸಿದ್ದಾರೆ. ವಿನಾಶಕಾಲೇ ವಿಪರೀತ ಬುದ್ಧಿ ಎನ್ನುವಂತೆ ಇತ್ತೀಚೆಗೆ ಒಂದು ದಿನ ಮ.ನ.ಪಾ.ದ ಆರೋಗ್ಯ ವಿಭಾಗದ ಬ್ರಾಹ್ಮಣ ಅಧಿಕಾರಿಯೋರ್ವನ ಮೇಲೆ ಏರಿಹೋದ ಮರಿಯಮ್ಮ ರಣಚಂಡಿಯಂತೆ ಆತನ ಕಾಲರ್ ಹಿಡಿದು ಜಗ್ಗಿದ್ದಕ್ಕೆ ಒಳಗಿದ್ದ ಜನಿವಾರವೇ ಕಿತ್ತುಹೊಗಿತ್ತು. ಆತ ಸೀದಾ ಹೋಗಿ ಕಲ್ಲಡ್ಕ ಪ್ರಭಾಕರ್ ಭಟ್ಟರಲ್ಲಿ ದೂರಿದರೆ ಕನಲಿ ಕೆಂಡವಾದ ಭಟ್ಟರು 'ಆ ಬಾಯಮ್ಮ'ನಿಗೆ ಬ್ರಾಹ್ಮಣರ ಜನಿವಾರಕ್ಕೆ ಕೈಹಾಕುವ ಧೈರ್ಯವೇ ಎಂದು ಆಕೆಯನ್ನು ಬಿಜೆಪಿಯಿಂದ ಒದ್ದೋಡಿಸಲು ಸ್ಕೆಚ್ ರೆಡಿಮಾಡಿದ್ದಾರೆ. ಮರಿಯಮ್ಮ ಸುಮ್ಮನಿರಬೇಕಲ್ಲ, ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾಳೆ. ಅಲ್ಲದೇ ಕಂಟೋನ್ಮೆಂಟ್ ವಾರ್ಡ್‌ನ ಸುರೇಶ್ ರಂಜನ್, ಪಣಂಬೂರಿನ ಸುಧಾಕರ ಶೆಟ್ಟಿ, ಅಳಕೆಯ ಉಮೇಶ್ ಶೆಟ್ಟಿರಂತಹ ಟಿಕೆಟ್ ವಂಚಿತರನ್ನು ಪಕ್ಷೇತರ ಅಭ್ಯರ್ಥಿಗಳಾಗಿ ಕಣಕ್ಕಿಳಿಯಲು ಪ್ರೇರೇಪಿಸಿ ಬಿಜೆಪಿಗೆ ಬಗಣಿ ಗೂಟ ಬಡಿಯುತ್ತಿದ್ದಾಳೆ.

ಕಾಂಗ್ರೆಸ್‌ನಿಂದ ಗೆಟ್-ಔಟ್ ಆದ ಕರಾಟೆ ಕವಿತಾ!

ಕಳೆದ ಬಾರಿ ಮರಕಡದಿಂದ ಕಾರ್ಪೊರೇಟರ್ ಆದ ಕವಿತಾ ಸನಿಲ್ ಎನ್ನುವ ಕರಾಟೆ ಪಟು ಪೂಜಾರಿ ಶಿಷ್ಯೆ. ಕರಾಟೆಗಾಗಿ ಪೂಜಾರಿ ದೆಸೆಯಿಂದ ರಾಜ್ಯೋತ್ಸವ ಪ್ರಶಸ್ತಿ, ಡಾಲರ್ಸ್ ಕಾಲೊನಿಯಲ್ಲಿ 10 ಕೋಟಿ ತೂಗುವ ಸೈಟುಗಿಟ್ಟಿಸಿಕೊಂಡಿರುವ ಕವಿತಾ, ಕಾರ್ಪೊರೇಷನ್‌ನಲ್ಲಿ ಕಮಾಯಿಸುವುದರಲ್ಲಿಯೂ ಅಗ್ರ ಪಟ್ಟ ಪಡೆದುಕೊಂಡವಳು. ತಮ್ಮನ ನಕಲಿ ಸಾರಾಯಿ ದಂಧೆ ಬಿಟ್ಟರೆ ಹೇಳಿಕೊಳ್ಳಲು ಒಂದು ಆದಾಯದ ಮೂಲವಿಲ್ಲದ ಕವಿತಾ ಎಲ್ಲರೂ ನೋಡುನೋಡುತ್ತಿದ್ದಂತೆಯೇ ಬೋಳ್ಪುಗುಡ್ಡೆ ಎಂಬಲ್ಲಿ 20 ಸೆಂಟ್ಸು ಆಯಕಟ್ಟಿನ ಜಾಗ ಖರೀದಿಸಿದಳು. ಅದರಲ್ಲಿ ಎಪ್ಪತ್ತು ಲಕ್ಷ ಬಾಳುವ ಮನೆಯೊಂದನ್ನು ಎಬ್ಬಿಸಿದ್ದಾಳೆ. ಮ.ನ.ಪಾ.ದ ಎಂಜಿನಿಯರ್ ಅರುಣ್ ಎಂಬಾತನ ಜತೆಯೇ ಸಂಬಂಧ ಕುದುರಿ ಮದುವೆಯೂ ಆಯ್ತು. ಮ.ನ.ಪಾ.ದ ಕೊನೆಯ ಮೇಯರ್ ಅವಧಿಯಲ್ಲಿ ಪೊಗದಸ್ತಾದ ಆಮದನಿಯ ಮೂಲ ನಗರ ಸ್ಥಾಯಿ ಸಮಿತಿ ಅಧ್ಯಕ್ಷಗಿರಿ ಮೇಲೆ ಕಣ್ಣಿಟ್ಟಿದ್ದಳು. ಪಕ್ಷದ ಸಹಕಾರದಿಂದ ಅದು ತಪ್ಪುತ್ತದೆ ಎಂದು ಗೊತ್ತಾದ ತಕ್ಷಣ ಬಿಜೆಪಿಯ ಜತೆ ಕೈಜೋಡಿಸಿ ಅಧ್ಯಕ್ಷೆಯಾಗಿಯೇ ಬಿಟ್ಟಳು. ಈ ಪಕ್ಷವಿರೋಧಿತನಕ್ಕೆ ಕಾಂಗ್ರೆಸ್‌ನಿಂದ ಉಚ್ಚಾಟಿತಳಾದ ಕವಿತಾ ಮ.ನ.ಪಾ.ದ ಆಡಳಿತದ ಕೊನೆಯ ಒಂದೇ ಒಂದು ದಿನದಲ್ಲಿ 620 ಫೈಲ್‌ಗಳಿಗೆ ಮಂಜೂರಾತಿ ನೀಡಿ ದಾಖಲೆ ನಿರ್ಮಿಸಿದ್ದಾಳೆ. ಆದರೆ, ಅದಕ್ಕೀಗ ತಡೆ ಬಂದಿದೆ. ಅಂದಹಾಗೆ, ಈಕೆ ಈ ಹಿಂದೆ ಮಂಗಳೂರಿನಲ್ಲಿದ್ದ ಕಡು ಭ್ರಷ್ಟ ಡಿ.ಸಿ. ಮೊನ್ನಪ್ಪರ ಹೆಂಡತಿಗೆ ಕರಾಟೆ ಕಲಿಸಲು ಹೋಗಿ, ಜೊತೆಗೆ ಮನ್ನಪ್ಪರಿಗೂ ಇನ್ನೇನೋ ಕಲಿಸಿರುವ ಬಗ್ಗೆ ರಂಜಕ ಉಪಕಥೆಗಳಿವೆ. ಅದಿರಲಿ, ಇದೀಗ ಮರಕಡ ವಾರ್ಡ್‌ನಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಕವಿತಾ ಸನಿಲ್ ಇಡುಗಂಟು ಕಳೆದುಕೊಳ್ಳುವುದು ಗ್ಯಾರಂಟಿ.

ಒಟ್ಟಾರೆ ಚುನಾವಣಾ ಚಿತ್ರ ನೋಡುವುದಾದರೆ, ಈ ಬಾರಿ ಕಾಂಗ್ರೆಸ್ಸೇ ಮತ್ತೆ ಗದ್ದುಗೆಗೇರುವ ಸೂಚನೆ ಕಾಣುತ್ತಿದೆ. ಬಿಜೆಪಿಯೊಳಗಿನ ಬಂಡಾಯ, ಇತರ ಪಕ್ಷಗಳ ನಾಯಕತ್ವದ ಕೊರತೆ ಕಾಂಗ್ರೆಸ್ ಪಾಲಿಗೆ ವರದಾನವಾಗಲಿದೆ.

■ ವರದಿಗಾರ

ಕಾಂಗ್ರೆಸ್ ಕಚ್ಚಾಟವೇ ಜೆಡಿಎಸ್‌ಗೆ ಲಾಭವಾದರೆ?


ಜೆಡಿಎಸ್‌ನಲ್ಲಿ ಕಚ್ಚಾಟ ಇಲ್ಲ ಎಂದಲ್ಲ. ಏಳನೇ ವಾರ್ಡ್ ಕಲ್ಲಹಳ್ಳಿಯ ಜೆಡಿಎಸ್ ಅಭ್ಯರ್ಥಿ ಕೆ.ಎಲ್. ನಾಗೇಂದ್ರ ಹಿಂದೊಮ್ಮೆ ಕೌನ್ಸಿಲರ್ ಆಗಿದ್ದವರೆ. ಜನಪರ ಹೋರಾಟದ ಹಿನ್ನೆಲೆಯೂ ಇದೆ. ಹಕೀಕತ್ತೆಂದರೆ ಹಳೇ ರೌಡಿ ಅಶೋಕ್ ಪೈ ಎಂಬಾತನೂ ಇಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ನಾಮಪತ್ರ ಹಾಕಿಬಿಟ್ಟಿದ್ದ. ಅಶೋಕ್ ಪೈ ಏನಾದರೂ ಫೀಲ್ಡಿಗಿಳಿದನೆಂದರೆ ಕಲ್ಲಳ್ಳಿ ನಾಗೇಂದ್ರ ನೆಲ ಕಚ್ಚುವುದು ಗ್ಯಾರಂಟಿ. ಅದಕ್ಕೆ once again ಮದ್ದು ಮಾಡಿದ್ದು ಚಲುವರಾಯನೇ!

ಒಂದು ಮೂಲದ ಪ್ರಕಾರ ಚಲುವಣ್ಣ ಅಶೋಕ್ ಪೈಗೆ ನಾಮಪತ್ರ ವಾಪಸ್ಸಿಗೆಂದು ಐದು ಲಕ್ಷದ ಗಂಟು ಕೊಟ್ಟಿದ್ದಾನೆ. ನಾಗೇಂದ್ರನ ವಿರುದ್ಧ ಕಾಂಗ್ರೆಸ್ಸಿನ ಕೆ.ಆರ್. ರವೀಂದ್ರ ಸಭ್ಯನಾದರೂ ರೌಡಿ ಅಶೋಕ್ ಪೈ ಮತ್ತು ನಾಗೇಂದ್ರನ ತಾಕತ್ತಿನ ಮುಂದೆ ತಿಣುಕಾಡಲೇಬೇಕು. ಕಾವೇರಿ ನಿಗಮದ ಇಂಜಿನಿಯರ್ ತಿಮ್ಮೇಗೌಡರ ಪತ್ನಿ ಮಂಗಳಾರ ಬೆಂಬಲ ಮತ್ತು ಅಂಬಿ ಶ್ರೀರಕ್ಷೆಯೇನಾದರೂ ಫಲಿಸಿದರಷ್ಟೇ ರವೀಂದ್ರ ಗೆಲ್ಲಲು ಸಾಧ್ಯ.

19 ನೇ ವಾರ್ಡಿನಲ್ಲಿ ಜೆಡಿಎಸ್‌ನ ಶಿವಪ್ರಕಾಶ್ ಬಾಬು ಮತ್ತು ಕಾಂಗ್ರೆಸ್ಸಿನ ಕೃಪಾನಿಧಿ ಮಧ್ಯೆ ನೇರ ಹಣಾಹಣಿಯಿದೆ. 13 ನೇ ವಾರ್ಡಿನಲ್ಲಿ ಬಹುಜನ ಸಮಾಜ ಪಕ್ಷದ ಮಹೇಶ್ ಕೃಷ್ಣ ಗೆಲ್ಲುವ ಸಾಧ್ಯತೆಗಳೇ ಹೆಚ್ಚು, 3 ನೇ ವಾರ್ಡಿನಲ್ಲಿ ಲಿಕ್ಕರ್ ರಂಗಸ್ವಾಮಿಯ ಮಗ ಆರ್. ಶ್ರೀನಿವಾಸ್‌ನೇ ಕಾಂಗ್ರೆಸ್ ಅಭ್ಯರ್ಥಿಯಾದ್ದರಿಂದ ಆತನ ಕುಖ್ಯಾತಿ ಬಿಜೆಪಿಯ ನಂಜುಂಡಯ್ಯನಿಗೆ ಲಾಭವಾಗಬಹುದು. 35 ವಾರ್ಡುಗಳ ಪೈಕಿ ಬಹುಜನ ಸಮಾಜ ಪಕ್ಷ ಕನಿಷ್ಠ ಎರಡು ಸ್ಥಾನಗಳನ್ನಾದರೂ ಗೆಲ್ಲಬಹುದು. ಪಕ್ಷೇತರರೇ ನಾಲ್ಕು ಮಂದಿ ಗೆಲ್ಲುತ್ತಾರೆಂಬ ಲೆಕ್ಕಾಚಾರವಿದೆ. ಕಚ್ಚಾಟ ಬಿಟ್ಟು ಒಗ್ಗಟ್ಟಾಗಿ ದುಡಿದರಷ್ಟೇ ಮಂಡ್ಯ ನಗರಸಭೆ ಕಾಂಗ್ರೆಸ್ ಪಾಲಾಗುತ್ತದೆ. ಇಲ್ಲವಾದರೆ ಜೆಡಿಎಸ್ ಖಂಡಿತ ಅದರ ಲಾಭ ಪಡೆದೇ ತೀರುತ್ತದೆ.

ಆದರೆ ಕಾಂಗ್ರೆಸ್ ಪಾಳೇಗಾರರನ್ನು ಒಂದುಗೂಡಿಸುವ ನರಾದರೂ ಯಾರು?

■ ರಾ. ಸೋಮನಾಥ್



ಮಂಡ್ಯದ ನಾಶಕ್ಕೆ ಉಳಿದವನೇ ಜಡೇಜಾ!

ಅದನ್ನು ಮಂಡ್ಯದ ದುರಂತವೆನ್ನಿ ಕಾಂಗ್ರೆಸ್‌ನ ದುರ್ಬುದ್ಧಿಯೆನ್ನಿ. ಚೀರನಹಳ್ಳಿ ಶಂಕ್ರನನ್ನು ಕೊಂದು ಜೈಲಲ್ಲಿದ್ದುಕೊಂಡೇ ಆತನ ತಮ್ಮ ಶಿವರಾಮನನ್ನು ಕೊಲ್ಲಿಸಿದವನು ಜಡೇಜಾ ರವಿ. ಇಂಥ ಹಂತಕನಿಗೆ ಮಂಡ್ಯದ ನಾಲ್ಕನೇ ವಾರ್ಡ್ ಶಂಕರಮಠಕ್ಕೆ ಕಾಂಗ್ರೆಸ್ ಟಿಕೆಟ್ ಕೊಡುತ್ತದೆಯೆಂದರೆ; ಅದನ್ನು ಪ್ರಶ್ನಿಸಿದ ಪತ್ರಕರ್ತರನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ.ಬಿ. ಚಂದ್ರಶೇಖರ್. 'ಜಡೇಜಾ ರವಿ ಕ್ರಿಮಿನಲ್ ಅನ್ನೋದಕ್ಕೆ ಏನ್ರೀ ಸಾಕ್ಷಿಯಿದೆ?' ಎಂದು ದಬಾಯಿಸುತ್ತಾನೆಂದರೆ ಅದು ಕಾಂಗ್ರೆಸ್‌ನ ದುರ್ಗತಿಯಲ್ಲದೆ ಮತ್ತೇನು?

ಅಷ್ಟಕ್ಕೂ ರೌಡಿ ಜಡೇಜನ ಬೆನ್ನಿಗಿರುವವನು ಕಾಂಗ್ರೆಸ್ ನಾಯಕ ಆತ್ಮಾನಂದರ ತಮ್ಮ ಸತ್ಯಪ್ಪ. ಹಿಂದೆ ಮಂಡ್ಯದ ಡಾನ್ ಆಗಿದ್ದ ಎಸ್.ಕೆ. ರಾಮಣ್ಣನನ್ನೂ ಈತನೇ ಪೋಷಿಸಿಕೊಂಡು ಬಂದ. ಅಂಥಾ ರಾಮಣ್ಣನನ್ನು ಚಿಲ್ರೆ ಹುಡುಗರು ನಡುರಸ್ತೆಯಲ್ಲೇ ಕತ್ತರಿಸಿಕೊಂದ ನಂತರವಾದರೂ ಸತ್ಯಪ್ಪನಿಗೆ ಬುದ್ಧಿಬರಬೇಕಿತ್ತು. ಈಗ ಆ ಜಾಗಕ್ಕೆ ಜಡೇಜಾನನ್ನು ತರಲು ಹವಣಿಸುತ್ತಿದ್ದಾನೆ. ಜಡೇಜಾನ ವಿರುದ್ಧ ಜೆಡಿಎಸ್ ಮಹ್ಮದ್ ಆಲಿ ಜಿನ್ನಾ ಎಂಬ ಸಭ್ಯನನ್ನು ನಿಲ್ಲಿಸಿದೆ. ಬಹುಸಂಖ್ಯಾತ ಮುಸ್ಲಿಮರನ್ನು ಒಡೆಯಲೆಂದೇ ಜಡೇಜಾ ಖಲೀಲ್ ಅಹ್ಮದ್ ಎಂಬ ಡಮ್ಮಿಯನ್ನು ಕಣಕ್ಕಿಳಿಸಿದ್ದಾನೆ. ಸಿಕ್ಕಾಪಟ್ಟೆ ಕಾಸು ಬಿಚ್ಚುತ್ತಿದ್ದಾನೆ. ಜಡೇಜನ ಜೊತೆ ಸಿಕ್ಕಾಪಟ್ಟೆ ಪೋರ್ಕಿಗಳ ಹಿಂಡೇ ಇದೆ. ಆದರೆ ಜನ ಓಟು ಕೊಡಬೇಕಲ್ಲ?

ಜಡೇಜಾ ಗೆದ್ದರೆ ಮಂಡ್ಯದಲ್ಲಿ ಮಾನವಂತರಿಗೆ ಉಳಿಗಾಲವಿಲ್ಲ.


ಒಬ್ಬ ಮೂರ್ಖ! ಇನ್ನೊಬ್ಬ ಮುಠ್ಠಾಳ!
ಇವರಿಬ್ಬರ ನಡುವೆ ಸಜ್ಜನಿಕೆಯ ಒಪ್ಪಂದವಂತೆ!
ಅದನ್ನು ಪಾಲಿಸುವುದು ರಾಜ ಧರ್ಮವಂತೆ!
(ಅದೂ ವಿಜಯ ಕರ್ನಾಟಕದ ಪ್ರಕಾರ).
ಕಳ್ಳರಿಗೂ ಒಂದು ನಿಯತ್ತು ಇರಬೇಕು
ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ
ಕುಮಾರಸ್ವಾಮಿ ಮತ್ತು ಯಡಿಯೂರಪ್ಪ
ಯಾರನ್ನು ಕೇಳಿ ಅಧಿಕಾರ ಹಸ್ತಾಂತರದ
ಒಪ್ಪಂದ ಮಾಡಿಕೊಂಡರು?
ಕತ್ತೆ ಹಾದರಕ್ಕಿಂತ ಹೊಲಸಾದ
ಇವರ ಮೈತ್ರಿಗೆ ಕರ್ನಾಟಕದ ಪ್ರಜೆಗಳ
ಒಪ್ಪಿಗೆ ಇತ್ತಾ? ಮುಖ್ಯಮಂತ್ರಿ ಪದವಿ
ಎನ್ನುವುದು ಕೈ ಸಾಲವೂ ಅಲ್ಲ;
ಮದುವೆಯ ನಿಶ್ಚಿತಾರ್ಥವೂ ಅಲ್ಲ.
ಅಧಿಕಾರಕ್ಕಾಗಿ ದಾಯಾದಿಗಳಂತೆ
ಕಚ್ಚಾಡಿಕೊಳ್ಳುವುದಕ್ಕೆ ಕರ್ನಾಟಕ
ಕುಮಾರಸ್ವಾಮಿ ಮತ್ತು
ಯಡಿಯೂರಪ್ಪನವರ
ಪಿತ್ರಾರ್ಜಿತ ಆಸ್ತಿ ಅಲ್ಲ.

■ ಜಿ. ರಾಜಶೇಖರ



ಅಧಿಕಾರ ಹಸ್ತಾಂತರ:
‘ಉತ್ತಮ ಪ್ರಭುತ್ವ ಲೊಳಲೊಟ್ಟೆ’

“ಲೊಳಲೊಟ್ಟೆ ಎಲ್ಲಾ ಲೊಳಲೊಟ್ಟೆ ॥ಪ॥ಆನೆ ಕುದುರೆ ಒಂಟೆ ಲೊಳಲೊಟ್ಟೆ ।ಬಲು। ಸೇನೆ ಭಂಡಾರವು ಲೊಳಲೊಟ್ಟೆ॥ ಮಾನಿನಿಯರ ಸಂಗ ಲೊಳಲೊಟ್ಟೆ। ದೊಡ್ಡ। ಕ್ಷೋಣೀಶನೆಂಬುದು ಲೊಳಲೊಟ್ಟೆ ॥1॥) ಮುತ್ತು ಮಾಣಿಕ್ಯ ಲೊಳಲೊಟ್ಟೆ। ಚಿನ್ನ। ಛತ್ರಚಾಮರಧ್ವಜ ಲೊಳಲೊಟ್ಟೆ॥ ಸುತ್ತಗಲಕೋಟೆಲೊಳ ಲೊಟ್ಟೆ ।ಮತ್ತೆ। ಉತ್ತಮ ಪ್ರಭುತ್ವ ಲೊಳಲೊಟ್ಟೆ ॥2॥ ಕಂಟಕ ರಂಬೋದ ಲೊಳಲೊಟ್ಟೆ ।ನಮ್ಮ। ನೆಂಟರು ಇಷ್ಟರು ಲೊಳ ಲೊಟ್ಟೆ॥ ಉಂಟಾದ ಗುಣನಿಧಿ ಪುರಂದರ ವಿಟ್ಠಲನ್ನ ।ಬಂಟನಾಗದವ ಲೊಳಲೊಟ್ಟೆ ॥3॥ (ಪುರಂದರ ದಾಸರ ಹಾಡುಗಳು, ಸಂಪುಟ 1. ಸಂ: ಡಾ. ಅರಳುಮಲ್ಲಿಗೆ ಪಾರ್ಥಸಾರಥಿ ಬೆಂಗಳೂರು, 2000 ಪುಟ 393).




ತನ್ನ ಈ ಪದ್ಯದಲ್ಲಿ ಪುರಂದರ ಪ್ರಭುತ್ವದ ಸೈನ್ಯ, ಅಧಿಕಾರ, ಸಂಪತ್ತು, ವೈಭೋಗ ಮುಂತಾದವುಗಳನ್ನು ಲೊಳಲೊಟ್ಟೆ ಎಂದು ಹೀಯಾಳಿಸಿರುವುದನ್ನು ಹೆಚ್ಚು ತೊಡಕಿಲ್ಲದೆ ಅರ್ಥ ಮಾಡಿಕೊಳ್ಳಬಹುದು. ಆದರೆ ಪದ್ಯದ ಕೊನೆಯಲ್ಲಿ ಬರುವ, ಉತ್ತಮ ಪ್ರಭುತ್ವ ಲೊಳಲೊಟ್ಟೆ ಎಂಬ ಸಾಲಿನಲ್ಲಿ ಅವರು ಏನು ಹೇಳ ಹೊರಟಿದ್ದಾರೆ? ಪ್ರಭುತ್ವವೊಂದು ಉತ್ತಮವಾಗಿದ್ದಾಗಲೂ ಅದರಿಂದ ಹೆಚ್ಚಿನದ್ದೇನನ್ನೂ ನಿರೀಕ್ಷಿಸಲಾಗದು ಎಂದೆ? ಅಥವಾ ದುಷ್ಟತನ ಪ್ರಭುತ್ವದಲ್ಲೇ ಸೇರಿಹೋಗಿದ್ದು ಉತ್ತಮ ಪ್ರಭುತ್ವವೆಂಬ ಕಲ್ಪನೆಯೇ ಅಸಂಗತವೆ? ಪುರಂದರದಾಸರು ವಿಜಯನಗರ ಸಾಮ್ರಾಜ್ಯದ ಸಮಕಾಲೀನರು, ಆ ಸಾಮ್ರಾಜ್ಯದ ವೈಭವವನ್ನು ಕಣ್ಣಾರೆ ಕಂಡವರು. ನಮ್ಮ ಶಾಲ್ಸನೆಯ ದರ್ಜೆಯ ಇತಿಹಾಸಕಾರರು ಕರ್ನಾಟಕದ ಸ್ವರ್ಣಯುಗ ಎಂದು ಕರೆಯುವ ಆ ಕಾಲಘಟ್ಟದ ಪ್ರಭುತ್ವವನ್ನೇ ಪುರಂದರರು ಲೊಳಲೊಟ್ಟೆ ಎಂದು ಕರೆದಿರಬಹುದೆ? ಅವರ ಪದ್ಯ ಈ ಎಲ್ಲ ಅರ್ಥಗಳನ್ನು ಹೊಳೆಯಿಸಿಯೂ ನಿಗೂಢವಾಗಿದೆ. ಪ್ರಭುತ್ವದ ದುರ್ವಿಪಾಕಗಳಿಗೆ ಸುಲಭ ಪರಿಹಾರಗಳನ್ನು ಒಲ್ಲದ ಕವಿಯ ಆಧ್ಯಾತ್ಮಿಕ ಸಂಕಟವನ್ನು ಗ್ರಹಿಸುವುದಕ್ಕೆ ಈಗ ಹಲವು ಭ್ರಮೆ ಮತ್ತು ಹುಸಿ ಆಶಾವಾದದ ರಾಜಕೀಯ ಸಿದ್ಧಾಂತಗಳು ಅಡ್ಡ ಬರುತ್ತವೆ. ಹಾಗಾಗಿ ಪದ್ಯ ಕಡೆಗೂ ನಮ್ಮ ಅರಿವಿಗೆ ಮೀರಿದ್ದಾಗಿಯೇ ಉಳಿಯುತ್ತದೆ.

ಅಧಿಕಾರ ಹಸ್ತಾಂತರ ಕುರಿತು ರಾಜ್ಯದ ಮಾಧ್ಯಮಗಳು ಕಳೆದ ಹಲವು ತಿಂಗಳುಗಳಿಂದ ಸೃಷ್ಟಿಸಿರುವ ಅಂತೆಕಂತೆಗಳನ್ನೂ, ಪ್ರಜೆಗಳಲ್ಲಿ ಅವು ಹುಟ್ಟುಹಾಕಿರುವ ಹುಸಿ ನಿರೀಕ್ಷೆಯನ್ನೂ ಕಂಡಾಗ ಪುರಂದರರ ಮೇಲಿನ ಪದ್ಯ ನೆನಪಾಗುತ್ತದೆ. ಬರುವ ಅಕ್ಟೋಬರ್ 3 ರಂದು ಮುಖ್ಯಮಂತ್ರಿ ಕುಮಾರಸ್ವಾಮಿ, ಸಿಂಹಾಸನವನ್ನು (ಹೌದು ಅದೇ ಸರಿಯಾದ ಶಬ್ದ) ಯಡಿಯೂರಪ್ಪನವರಿಗೆ ಬಿಟ್ಟುಕೊಡುತ್ತಾರೋ ಇಲ್ಲವೋ ಎಂಬುದರ ಮೇಲೆ ಕರ್ನಾಟಕದ 5 ಕೋಟಿ ಪ್ರಜೆಗಳ ಪ್ರಾಣ ನಿಂತಿದೆ ಎಂಬ ಭ್ರಮೆಯನ್ನು ಸೃಷ್ಟಿಸಿ, ಕೆಲವು ತಿಂಗಳುಗಳಿಂದ ಅದೇ ಅದೇ ಮಾತನ್ನು ಮಾಧ್ಯಮಗಳು ಮತ್ತೆ ಮತ್ತೆ ಹೇಳುತ್ತಿವೆ. 20 ತಿಂಗಳ ಕೆಳಗೆ ಅಧಿಕಾರ ಹಸ್ತಾಂತರದ ಬಗ್ಗೆ ಅವರಿಬ್ಬರ ನಡುವೆ ಒಂದು ‘ಸಜ್ಜನಿಕೆಯ ಒಪ್ಪಂದ’ವಾಗಿತ್ತಂತೆ! (ವಿಜಯ ಕರ್ನಾಟಕದ ಒಂದು ವರದಿ ಪ್ರಕಾರ). ಒಬ್ಬ ಮೂರ್ಖ! ಇನ್ನೊಬ್ಬ ಮುಠ್ಠಾಳ! ಇವರಿಬ್ಬರ ನಡುವೆ ಸಜ್ಜನಿಕೆಯ ಒಪ್ಪಂದವಂತೆ! ಅದನ್ನು ಪಾಲಿಸುವುದು ರಾಜ ಧರ್ಮವಂತೆ! (ಅದೂ ವಿಜಯ ಕರ್ನಾಟಕದ ಪ್ರಕಾರ). ಕಳ್ಳರಿಗೂ ಒಂದು ನಿಯತ್ತು ಇರಬೇಕು ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಯಾರನ್ನು ಕೇಳಿ ಅಧಿಕಾರ ಹಸ್ತಾಂತರದ ಒಪ್ಪಂದ ಮಾಡಿಕೊಂಡರು? ಕತ್ತೆ ಹಾದರಕ್ಕಿಂತ ಹೊಲಸಾದ ಇವರ ಮೈತ್ರಿಗೆ ಕರ್ನಾಟಕದ ಪ್ರಜೆಗಳ ಒಪ್ಪಿಗೆ ಇತ್ತಾ?

ಯಡಿಯೂರಪ್ಪನವರಿಗೆ ಮುಖ್ಯಮಂತ್ರಿ ಪದವಿಯ ಹಸ್ತಾಂತರವಾದರೆ ಮಾತ್ರ ರಾಜ್ಯದಲ್ಲಿ ಸತ್ಯ, ನ್ಯಾಯ, ಧರ್ಮಗಳು ಉಳಿಯುತ್ತವೆ ಎಂದು ವಿಜಯ ಕರ್ನಾಟಕ ದಿನಪತ್ರಿಕೆ ಒಂದು ಪ್ರಚಾರ ಆಂದೋಲನವನ್ನೇ ಕೈಕೊಂಡಿದೆ. ಅಧಿಕಾರ ಹಸ್ತಾಂತರ ಕುರಿತು ಆ ಪತ್ರಿಕೆ ನಾಡಿನ ಹಲವು ಈ ‘ಗಣ್ಯ’ರ ಅಭಿಪ್ರಾಯಗಳನ್ನು ಧಾರಾವಾಹಿಯಾಗಿ ಪ್ರಕಟಿಸುತ್ತಿದ್ದು ಅವರೆಲ್ಲರೂ ಸಿಂಹಾಸನಕ್ಕೆ ಯಡಿಯೂರಪ್ಪನವರೇ ಯೋಗ್ಯ ಉತ್ತರಾಧಿಕಾರಿ ಎಂದು ಸಾರಿದ್ದಾರೆ. ಈ ‘ಗಣ್ಯ’ರ ಕೆಲವು ನುಡಿಮುತ್ತುಗಳು ಹೀಗಿವೆ- “ಕೊಟ್ಟ ಭಾಷೆ ಮರೆಯುವುದು ತರವಲ್ಲ”, “20 ತಿಂಗಳು ನೀವು, 20 ತಿಂಗಳು ನಾವು ಎಂಬ ಸಜ್ಜನಿಕೆಯ ಒಪ್ಪಂದ ಮುರಿಯಕೂಡದು”, “ಕೈ ಕೊಡಬಾರದು”, “ಮೆಚ್ಚನಾ ಪರಮಾತ್ಮ”. ಯಡಿಯೂರಪ್ಪನಿಗೆ ಅಡ್ವಾನ್ಸ್ ಆಗಿ ‘ಭೋಪರಾಕ್’ ಹೇಳಿದ ಈ ‘ಗಣ್ಯ’ರಲ್ಲಿ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪ ನಿರ್ದೇಶಕ ಟಿ.ಎನ್. ಸೀತಾರಾಂ, ನಿವೃತ್ತ ನ್ಯಾಯಮೂರ್ತಿ ಮತ್ತು ಹಾಲಿ ಸರ್ವಜ್ಞ, ರಾಮಾಜೋಯಿಸ, ನಿವೃತ್ತ ಸರ್ಕಾರಿ ಅಧಿಕಾರಿ ಮತ್ತು ಹಾಲಿ ಪರಿಸರಾಸಕ್ತ ಯಲ್ಲಪ್ಪ ರೆಡ್ಡಿ, ನ್ಯಾಯವಾದಿ ಹೇಮಲತಾ ಮಹಿಷಿ ಮುಂತಾದವರ ಜೊತೆ ಕೆ.ಎನ್. ಸೋಮಯಾಜಿ ಎಂಬ ಮಹನೀಯರೂ ಇದ್ದಾರೆ. ಇವರು ಜ್ಯೋತಿಷಿ ಕಂ ವಾಸ್ತುತಜ್ಞರಂತೆ!

ಕರ್ನಾಟಕದ ಪತ್ರಿಕೆಗಳ ಇತಿಹಾಸದಲ್ಲಿ ವಿಜಯ ಕರ್ನಾಟಕ ಒಂದು ಹೊಸ ಅಧ್ಯಾಯವನ್ನೇ ತೆರೆದಿದೆ. ಹಿಂದೆ ಎಂದೂ ಕನ್ನಡದ ಯಾವ ಜನಪ್ರಿಯ ದಿನ ಪತ್ರಿಕೆಯೂ ಇಷ್ಟು ನಿರ್ಲಜ್ಜವಾಗಿ ಅಧಿಕಾರಸ್ಥ ಪಕ್ಷವೊಂದರ ಲಾಬಿ ಮಾಡಿದ್ದಿಲ್ಲ. ಈ ಪತ್ರಿಕೆಯ ನೈತಿಕತೆ ಹಾಳಾಗಿ ಹೋಗಲಿ, ಶಬ್ದಗಳಿಗೆ ಇರುವುದು ಸಂದರ್ಭಾನುಸಾರಿಯಾದ ಅರ್ಥ ಎಂಬ ಪ್ರಾಥಮಿಕ ಜ್ಞಾನವೂ ವಿಜಯ ಕರ್ನಾಟಕದ ಸಂಪಾದಕರಿಗೆ ಇರಬೇಡವೆ? “ಕೊಟ್ಟ ಮಾತು” “ಮಾತು ಉಳಿಸಿಕೊಳ್ಳುವುದು”- ಇತ್ಯಾದಿ ಪದಪ್ರಯೋಗವನ್ನು ರಾಜ್ಯವೊಂದರ ಆಳ್ವಿಕೆಗೆ ಅನ್ವಯಿಸಬಹುದೆ? ಮುಖ್ಯಮಂತ್ರಿ ಪದವಿ ಎನ್ನುವುದು ಕೈ ಸಾಲವೂ ಅಲ್ಲ; ಮದುವೆಯ ನಿಶ್ಚಿತಾರ್ಥವೂ ಅಲ್ಲ, ಅಧಿಕಾರಕ್ಕಾಗಿ ದಾಯಾದಿಗಳಂತೆ ಕಚ್ಚಾಡಿಕೊಳ್ಳುವುದಕ್ಕೆ ಕರ್ನಾಟಕ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನವರ ಪಿತ್ರಾರ್ಜಿತ ಆಸ್ತಿ ಅಲ್ಲ, ಈಗ ಇವರಲ್ಲಿ ಒಬ್ಬ ಇನ್ನೊಬ್ಬನಿಗೆ ಕೊಟ್ಟ ಮಾತು ಉಳಿಸಿಕೊಳ್ಳಬೇಕಂತೆ! ಹಾಗೆಂದು ನಿನ್ನೆ ತಾನೆ ಪೇಜಾವರ ಮಠಾಧೀಶರು ಕೂಡ ಹೇಳಿಕೆ ನೀಡಿದ್ದಾರೆ.

ಕರ್ನಾಟಕದ ಹಾಲಿ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಮಾತ್ರವಲ್ಲ, ಇವರ ಪಕ್ಷಗಳ ಇತರ ಮಂತ್ರಿ/ಶಾಸಕರುಗಳು ಚುನಾವಣೆಗೆ ಮುನ್ನ ಜನತೆಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದಾರಾ? ಅದು ಹೋಗಲಿ, ಅಧಿಕಾರದ ಪ್ರಮಾಣವಚನದ ಸಂದರ್ಭದಲ್ಲಿ ‘ಸಂವಿಧಾನವನ್ನು ರಕ್ಷಿಸುತ್ತೇವೆ; ಕಾನೂನಿನ ಪ್ರಕಾರ ಆಳ್ವಿಕೆಯನ್ನು ನಡೆಸುತ್ತೇವೆ’ ಎಂದು ಇವರು ಕೊಟ್ಟ ಮಾತನ್ನು ಎಷ್ಟು ಪಾಲಿಸಿದ್ದಾರೆ?



ನಂಬಿಕೆ, ವಿಶ್ವಾಸ, ಕೊಟ್ಟ ಮಾತು-ಇವೆಲ್ಲ ಇರುವುದು ಅಧಿಕಾರಾರೂಢ ರಾಜಕಾರಣಿಗಳಿಗೆ ಮಾತ್ರವಲ್ಲ, ಪತ್ರಿಕೆಗಳಿಗೂ “ಕೊಟ್ಟ ಮಾತು” ಎಂಬುದೊಂದಿದೆ. ದುಡ್ಡು ಕೊಟ್ಟು ಕೊಳ್ಳುವ ಓದುಗರು ಅವುಗಳಲ್ಲಿ ಇರಿಸಿದ ವಿಶ್ವಾಸವೇ ಪತ್ರಿಕೆಗಳ ಜೀವಧಾತು. ಪ್ರಾಮಾಣಿಕವಾಗಿ ಸುದ್ದಿ/ಮಾಹಿತಿ/ವಿಶ್ಲೇಷಣೆಗಳನ್ನು ಒದಗಿಸುತ್ತೇವೆ ಎಂಬುದು ಪತ್ರಿಕೆಗಳು ಓದುಗರಿಗೆ ‘ಕೊಡುವ ಮಾತು’-ಅಲಿಖಿತ ಆಶ್ವಾಸನೆ. ಇತ್ತೀಚಿಗಿನ ದಿನಗಳಲ್ಲಿ ಕನ್ನಡದ ಯಾವ ಜನಪ್ರಿಯ ದಿನಪತ್ರಿಕೆ ಈ ವೃತ್ತಿಧರ್ಮವನ್ನು ಪಾಲಿಸುತ್ತಿದೆ? ಕಳೆದ 20 ತಿಂಗಳುಗಳಿಂದ-ವಾಸ್ತವವಾಗಿ ಅದಕ್ಕೆ ಬಹಳ ಹಿಂದಿನಿಂದಲೂ-ಕರ್ನಾಟಕದ ಅರಣ್ಯ ಮತ್ತು ಖನಿಜ ಸಂಪತ್ತು ಲೂಟಿಯಾಗುತ್ತಿದ್ದಾಗ, ರಾಜ್ಯದ ಶಿಕ್ಷಣ ವ್ಯವಸ್ಥೆ ವಾಣಿಜ್ಯ ಮಳಿಗೆಯಾಗಿ ಮಾರ್ಪಡುತ್ತಿದ್ದಾಗ, ಅಧಿಕಾರಿಗಳು, ರಾಜಕಾರಣಿಗಳು ಮತ್ತು ಮಠಾಧಿಪತಿಗಳು ಸಾರ್ವಜನಿಕ ಆಸ್ತಿಯ ಹಗಲು ದರೋಡೆಯಲ್ಲಿ ತೊಡಗಿಕೊಂಡಾಗ, ಪೊಲೀಸರೇ ಪ್ರಜಾ ಪೀಡಕರಂತೆ ವರ್ತಿಸಿದಾಗ, ಕರ್ನಾಟಕದ ಯಾವ ದಿನಪತ್ರಿಕೆಗೂ ಇದೆಲ್ಲ ವರದಿ ಮಾಡಬೇಕಾದ ವಿದ್ಯಮಾನ ಎಂದೇ ಅನ್ನಿಸಲಿಲ್ಲ, ಬದಲಿಗೆ, ಈ ಪತ್ರಿಕೆಗಳಿಗೆ ಹಾಲಿ ಮುಖ್ಯಮಂತ್ರಿಯ ಗ್ರಾಮವಾಸ್ತವ್ಯವೇ ಮಹತ್ವದ ಸಂಗತಿಯಾಗಿ ಕಂಡಿತು. ಗ್ರಾಮಗಳಿಗೆ ಭೇಟಿ ಮಾಡಿ, ರಾತ್ರಿ ಅಲ್ಲೇ ಉಂಡು ಕಾಲುಚಾಚಿದ ದೊರೆಯಿಂದಾಗಿ ಭಾರತ ಗ್ರಾಮಗಳ ದೇಶ ಮತ್ತು ಗ್ರಾಮಗಳಲ್ಲಿ ಬಡವರು ವಾಸವಾಗಿರುತ್ತಾರೆ ಎಂಬ ಸತ್ಯ ಕನ್ನಡದ ಪತ್ರಿಕೆಗಳಿಗೆ ಗೊತ್ತಾಯಿತು!

ಅಂಥಾ ಮೈಸೂರು ಮಹಾರಾಜರೇ ಮೂಲೆ ಗುಂಪಾದ ಮೇಲೆ ‘ದೊರೆ’ ಇರುವುದು ನೇಪಾಳ ಬಿಟ್ಟರೆ (ನೇಪಾಳದಲ್ಲೂ ಆತನನ್ನು ಮೂಲೆಗೆ ತಳ್ಳಲಾಗುತ್ತಿದೆ) ಇಸ್ಪೀಟ್ ಪ್ಯಾಕಿನಲ್ಲಿ ಮಾತ್ರ ಎಂದು ನಾವು ಭಾವಿಸಿದ್ದೆವು. ಆದರೆ ಕನ್ನಡ ದಿನಪತ್ರಿಕೆಗಳು ಮುಖ್ಯಮಂತ್ರಿಯನ್ನೇ ‘ದೊರೆ’ ಎಂದು ಸಂಬೋಧಿಸಿದವು ಮತ್ತು ದೇವರಾಣೆಗೂ ಅದರಲ್ಲಿ ವ್ಯಂಗ್ಯದ ಲವಲೇಶವೂ ಇರಲಿಲ್ಲ. ಈ ‘ದೊರೆ’, ತನ್ನ ನಾಡಿನಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಮುಂದುವರಿಸಿದರೆ ಸಿಂಹಾಸನ ತ್ಯಾಗ ಮಾಡುತ್ತೇನೆ ಎಂದು ಜನರೆದುರು ಥೇಟು ದೊರೆಯ ಗತ್ತಿನಲ್ಲೇ ಪ್ರತಿಜ್ಞೆ ಮಾಡಿದರು. ಆನಂತರ ಹಲವು ರೈತರು ಆತ್ಮಹತ್ಯೆ ಮಾಡಿಕೊಂಡರೂ ದೊರೆಗೆ ತನ್ನ ಪ್ರತಿಜ್ಞೆ ನೆನಪಾಗಲಿಲ್ಲ, ಅದನ್ನು ದೊರೆಗೆ ನೆನಪಿಸುವ ಕರ್ತವ್ಯ ಪ್ರಜ್ಞೆಯನ್ನು ವಿಜಯ ಕರ್ನಾಟಕವೂ ಸೇರಿದಂತೆ ಯಾವ ದಿನಪತ್ರಿಕೆಯೂ ತೋರಲಿಲ್ಲ. ಈಗ ಇದ್ದಕ್ಕಿದ್ದ ಹಾಗೆ ಈ ಪತ್ರಿಕೆಗಳಿಗೆ ಕೊಟ್ಟ ಮಾತು ಉಳಿಸಿಕೊಳ್ಳುವ ಮೌಲ್ಯದ ಬಗ್ಗೆ ಅತೀವ ಶ್ರದ್ಧೆ ಮೂಡಿಬಿಟ್ಟಿದೆ.

ಕರ್ನಾಟಕದ ಬಡವರು, ದಲಿತರು ಮತ್ತು ಅಲ್ಪಸಂಖ್ಯಾತರ ಪಾಲಿಗೆ ಇವು ಕೆಟ್ಟ ದಿನಗಳು. ಬರಲಿರುವ ದಿನಗಳು ಅಧಿಕಾರ ಹಸ್ತಾಂತರ ಆಗಲಿ, ಬಿಡಲಿ-ಇನ್ನಷ್ಟು ಕರಾಳವಾಗಿರುತ್ತವೆ ಎಂದು ಹೇಳಲು ಜ್ಯೋತಿಷಿಯೇ ಬೇಕೆಂದಿಲ್ಲ. ಈ ಸನ್ನಿವೇಶದಲ್ಲಿ ನಮ್ಮ ಪತ್ರಿಕೆಗಳು ಮತ್ತು ಇತರ ಮಾಧ್ಯಮಗಳು ಜನರಿಗೆ ಸತ್ಯ ಸಂಗತಿಗಳನ್ನು ತಿಳಿಸುತ್ತವೆ ಎಂದು ನಿರೀಕ್ಷಿಸುವುದೇ ಮೂರ್ಖತನ. ಯಾಕೆಂದರೆ ನಮ್ಮ ಮಾಧ್ಯಮಗಳೂ ಈ ಸನ್ನಿವೇಶದ ಭಾಗವೇ ಆಗಿವೆ. ಹಾಗಾಗಿ ಕರ್ನಾಟಕದ ಕೆಲವು ಬುದ್ಧಿಜೀವಿಗಳು ಈಗಲೂ ಪ್ರಜಾಪ್ರಭುತ್ವ, ಅಹಿಂಸೆ ಇತ್ಯಾದಿಯಾಗಿ ಬಡಬಡಿಸುತ್ತಿರುವುದು ಏಕಕಾಲಕ್ಕೆ ಕರುಣಾಜನಕವೂ, ಹಾಸ್ಯಾಸ್ಪದವೂ ಆಗಿದೆ.

ಇತ್ತೀಚೆಗೆ ನಮ್ಮ ಜಿ.ಕೆ. ಗೋವಿಂದರಾವ್, ಕನ್ನಡದ ಇನ್ನೊಂದು ‘ಜನಪ್ರಿಯ ದಿನಪತ್ರಿಕೆ’ಯಲ್ಲಿ ಇದೇ ಮಾತುಗಳನ್ನು ಹೇಳಿದ್ದಾರೆ. ಈ ನಾಡಿನಲ್ಲಿ ಬಗೆಬಗೆಯ ಹಿಂಸೆ, ಶೋಷಣೆಗಳಿಗೆ ಬಲಿಯಾಗುತ್ತಿರುವವರ ಮಟ್ಟಿಗೆ ಸ್ವಾತಂತ್ರ್ಯವೂ ಇಲ್ಲ; ಪ್ರಜಾಪ್ರಭುತ್ವವೂ ಇಲ್ಲ; ಹಿಂಸಾತ್ಮಕ/ಅಹಿಂಸಾತ್ಮಕ ಯಾವ ಹೋರಾಟದ ಮಾರ್ಗ ಸಹ ಅವರಿಗೆ ತೆರೆದುಕೊಂಡಿಲ್ಲ ಎಂಬ ಸತ್ಯ ಗೋವಿಂದರಾವ್ ಅವರಿಗೆ ಗೊತ್ತಿದೆ. ತನಗೆ ಅದು ಗೊತ್ತಿದೆ ಎಂದು ಓದುಗರಿಗೆ ಮನವರಿಕೆ ಮಾಡಿಕೊಡಲು ಅವರು ಭಾಷೆಯಲ್ಲಿ ಮಾಡಬಹುದಾದ ಕಸರತ್ತುಗಳನ್ನೆಲ್ಲ ಮಾಡುತ್ತಾರೆ. ಆದರೆ ಅದೇ ವೇಳೆಗೆ, ಈ ಸಮಾಜಕ್ಕೆ ಹಿಡಿದ ರೋಗಕ್ಕೆ ಅವರ ಜೇಬಿನಲ್ಲಿ ಎರಡು ಮಾತ್ರೆಗಳಿವೆ! -ಪ್ರಜಾಪ್ರಭುತ್ವ ಮತ್ತು ಅಹಿಂಸೆ.

ಇವೆರಡನ್ನೂ ಪೂರ್ವಪಕ್ಷವಾಗಿಟ್ಟುಕೊಂಡು ಅವರು ನಕ್ಸಲೀಯರನ್ನೂ ಕೋಮುವಾದಿಗಳನ್ನೂ ಸಮಾನ ಶತ್ರುಗಳು ಎಂದು ಪರಿಗಣಿಸುತ್ತಾರೆ! ಕರ್ನಾಟಕವನ್ನು ಗುಜರಾತ್ ಮಾಡುವ ಹುಮ್ಮಸ್ಸಿನಲ್ಲಿರುವ ಪರಿವಾರದವರ ದೊಡ್ಡ ನಾಯಕ, ಇನ್ನೇನು ರಾಜ್ಯದ ಮುಖ್ಯಮಂತ್ರಿಯಾಗುತ್ತಾರೆ ಎನ್ನುವ ಕ್ಷಣದಲ್ಲೇ ಗೋವಿಂದರಾವ್ ತರಹದ ಬುದ್ಧಿಜೀವಿಗಳಿಗೆ ಹೀಗೆ ಅನ್ನಿಸುತ್ತಿರುವುದು ಸಹ ಕರ್ನಾಟಕದ ಸದ್ಯದ ಸ್ಥಿತಿಯ ಒಂದು ವಿಪರ್ಯಾಸವಲ್ಲವೇ? ಈ ಸ್ಥಿತಿ, ಮೊದಲು ಕಾಣಿಸಿದ ಪುರಂದರರ ಪದ್ಯದ ಹಾಗೆ ಬಸವಣ್ಣನವರ ಒಂದು ಸುಪ್ರಸಿದ್ಧ ವಚನವನ್ನೂ ನೆನಪಿಗೆ ತರುತ್ತಿದೆ.

“ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲು ಬಾರದು.
ಏರಿ ನೀರುಂಬಡೆ, ಬೇಲಿಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ,
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ!”


(ವಚನ ಪ್ರವೇಶ-ಸಂ.ಎಂ.ಎಸ್. ಆಶಾದೇವಿ-ಅಕ್ಷರ ಪ್ರಕಾಶನ, ಹೆಗ್ಗೋಡು 2006, ಪುಟ 103).

ಈ ವಚನದ ಕೊನೆಯ ಸಾಲನ್ನು ಸೂಕ್ಷ್ಮವಾಗಿ ಗಮನಿಸಿ, ಬಸವಣ್ಣ ಕೂಡಾ ಪುರಂದರದಾಸರು ಹೇಳಿದ ಮಾತನ್ನೇ ಬೇರೆ ಶಬ್ದಗಳಲ್ಲಿ ಹೇಳುತ್ತಿದ್ದಾರೆ. ಪರಿಹಾರಗಳಿಲ್ಲದ, ಬಿಡುಗಡೆಯ ಹೊರ ದಾರಿಗಳೂ ಇಲ್ಲ ಎನ್ನಿಸುವಂತಹ ಈ ಸ್ಥಿತಿಯನ್ನು ಗ್ರಹಿಸುವುದು ಮಾತ್ರ ಬುದ್ಧಿಜೀವಿಗಳಿಗೆ ಇರುವ ಕರ್ತವ್ಯ ಮತ್ತು ಜವಾಬ್ದಾರಿ. ಇವರು ಮುಗ್ಧತೆಯಲ್ಲೋ ಪೆದ್ದುತನದಲ್ಲೋ ಸೂಚಿಸುವ ಹುಸಿ ಪರಿಹಾರಗಳು ಈ ಸ್ಥಿತಿಯನ್ನು ಇನ್ನಷ್ಟು ವಿಷಮಗೊಳಿಸಬಹುದು. ■

ಗುಲ್ಬರ್ಗಾ: ನಾಲಿಗೆ ಚಾಚಿರುವ ಕಾಂಗ್ರೆಸಿಗರು?!

ಕಲಬುರ್ಗಿ ಮಹಾನಗರ ಪಾಲಿಕೆಗೆ ಜೆ.ಡಿ.ಎಸ್. ಪಕ್ಷದಿಂದ ಸ್ಪರ್ಧಿಸಲು ಟಿಕೆಟ್ ಆಕಾಂಕ್ಷಿಗಳೇ ಇರಲಿಲ್ಲವೆಂದರೆ ಯಾರೂ ನಂಬಲಿಕ್ಕಿಲ್ಲ. ಆದರೆ ಇದು ಸತ್ಯದ ಮಾತಾಗಿತ್ತು. ಏನೊಂದೂ ಗೊತ್ತಿಲ್ಲದ ಕೆಲವರನ್ನು ಕರೆದು ಟಿಕೆಟ್ ಕೊಟ್ಟರೆ, ಕಾಂಗ್ರೆಸ್ಸಿನ ಟಿಕೆಟ್ ಸಿಗದೆ ಅತೃಪ್ತಿಯಿಂದ ತಿರುಗುತ್ತಿದ್ದ ನಂದಕುಮಾರ ಪಾಟೀಲ್‌ನಂತವರಿಗೂ ರಾತ್ರೋರಾತ್ರಿ ಪಕ್ಷದ ಟಿಕೆಟ್ ನೀಡಿಯಾಗಿದೆ. ಹಾಗೆ ನೋಡಿದರೆ ಕಳೆದ ಐದು ವರ್ಷಗಳ ಅವಧಿಯಲ್ಲಿ ಕಾಂಗ್ರೆಸಿನ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಮಹಾಪೌರರು ಮಾಡಿದ ಬಾರಾ ಬಾನಗಡಿ ಕೆಲಸಗಳು ಒಂದೆರಡಲ್ಲ. ನಗರ ನೀರು ಸರಬರಾಜು ಮಾಡುವ ನೆವದ ಗುತ್ತೇದಾರಿಕೆಯಲ್ಲಿ ತಿಂದು ಹಾಕಿದ ಅಮೇಧ್ಯದ ಬಗ್ಗೆ ಸಾಕಷ್ಟು ರಂಪ ಉಂಟಾಗಿತ್ತು. ಅಲ್ಲದೆ ಕುಡಿಯುವ ನೀರಿಗಾಗಿ ಜನ ಖಾಲಿ ಕೊಡಗಳನ್ನು ನಗರ ಪಾಲಿಕೆಯ ಅಧಿಕಾರಿಗಳ ಮುಖಕ್ಕೆ ಇಕ್ಕಿ ಹೈರಾಣಾಗಿದ್ದರು.

ಈ ಎಲ್ಲಾ ನೆಗೆಟಿವ್ ಕಾರಣಗಳನ್ನು ಮುಂದಿಟ್ಟುಕೊಂಡು ಚಾಣಾಕ್ಷತನದಿಂದ ನಗರಪಾಲಿಕೆ ಚುನಾವಣೆ ಎದುರಿಸಬೇಕಾದ ಜೆ.ಡಿ.ಎಸ್. ನಿತ್ರಾಣದ ಸ್ಥಿತಿಗೆ ಬಂದು ನಿಂತಿದೆ. ಇದಕ್ಕೆಲ್ಲ ಬಹು ಮುಖ್ಯ ಕಾರಣ ಶರಣಬಸಪ್ಪ ದರ್ಶನಾಪುರರೇ ಎಂದು ಹೇಳಬೇಕಾಗಿದೆ. ಕಲಬುರ್ಗಿ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಎಸ್.ಕೆ.ಕಾಂತ ಎಂಬ ನಿಗರ್ವಿ, ನಿಷ್ಕಳಂಕ ವ್ಯಕ್ತಿಯನ್ನು ಸಂಪೂರ್ಣ ಕಡೆಗಣಿಸಿದ್ದು ಒಂದು ಪ್ರಮುಖ ಕಾರಣ. ಹಾಗೆ ನೋಡಿದರೆ ದರ್ಶನಾಪುರನಿಗೆ ಹಿಂದೊಂದು ಸಂದರ್ಭದಲ್ಲಿ ಶಹಾಪುರ ಮತಕ್ಷೇತ್ರದಿಂದ ನಿಂತು ಸ್ಪರ್ಧಿಸಲು ಟಿಕೆಟ್ ತೆಗೆದುಕೊಟ್ಟವರೇ ಕಾಂತಾ. ಗೆದ್ದು ಬರುತ್ತಲೇ ಹಣದ ಥೈಲಿಯ ಕಡೆಗೆ ಆದ್ಯ ಗಮನ ಹರಿಸಿದ ದರ್ಶನಾಪುರ ತನ್ನ ಸುತ್ತಲೂ ಮುಕ್ಕುವವರ ಟೋಳಿಯನ್ನೇ ಕಟ್ಟಿಕೊಂಡ. ಮಜರ ಹುಸೇನ, ಸೋಮಶೇಖರ ಗೋನಾಯಕನ, ಶಾಮರಾವ ಸೂರಣ್ಣ ಅಣ್ಣಾರಾವ್ ದುತ್ತರಗಾಂವ್ ಹಾಗೂ ಬಸವರಾಜ ತಡಕಲ್‌ನಂಥ ಚೇಲಾಗಳನ್ನು ಎದುರಿಗಿಟ್ಟುಕೊಂಡು ಆಟವಾಡತೊಡಗಿದ.


ಸುರೇಶ್ ಮಡ್ಡಿ

ಇದು ಸಹಜವಾಗಿಯೇ ಕಾಂತಾನಂಥ ತಾತ್ವಿಕ ನಡತೆಯ ಮನುಷ್ಯನಿಗೆ ಇರುಸುಮುರುಸಾಯಿತು. ಇದೇ ಸಂದರ್ಭದಲ್ಲಿ ದರ್ಶನಾಪುರ ತಡವಾಗಿ ಲೋಕಾಯುಕ್ತಕ್ಕೆ ನೀಡಿದ್ದ ಆಸ್ತಿ ವಿವರ ಕುರಿತಂತೆ ಕಾಂತಾ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದು, ತರುವಾಯ ನಡೆದ ಸಂಗತಿಗಳೆಲ್ಲ ಎಲ್ಲರಿಗೂ ಗೊತ್ತಿರುವಂಥದ್ದೇ ಆಗಿವೆ. ಹೀಗಾಗಿ ದರ್ಶನಾಪುರ ಎಸ್.ಕೆ. ಕಾಂತಾ ಆಟ ಕಲಬುರ್ಗಿಯಲ್ಲಿ ನಡೆಯಲೇ ಬಾರದೆಂದು ತನ್ನ ಚೇಲಾ ಆಗಿರುವ ಬಸವರಾಜ ತಡಕಲ್ ಮೂಲಕ ಕಾಂತಾನನ್ನೇ ಪಕ್ಷದಿಂದ ಹೊರಗೆ ಕಳಿಸುವ ಎತ್ತಂಗಡಿಯಲ್ಲಿ ತೊಡಗಿದರು.

ಇದೆಲ್ಲದರಿಂದ ಸಹಜವಾಗಿ ಕಲಬುರ್ಗಿ ಜೆ.ಡಿ.ಎಸ್. ಪಕ್ಷದಲ್ಲಿ ಅನುಗಾಲದಿಂದಲೂ ಕೆಲಸ ಮಾಡುತ್ತ ಬಂದ ಪ್ರಾಮಾಣಿಕ ಕಾರ್ಯಕರ್ತ ದೂರ ಸರಿದ. ಇದರಿಂದ ಪಾಲಿಕೆ ಚುನಾವಣೆ ಘೋಷಣೆಯಾಗುತ್ತಿರುವಂತೆ ಕಾಂಗ್ರೆ ಹಾಗೂ ಬಿ.ಜೆ.ಪಿ ಪಕ್ಷದ ಕಚೇರಿಗಳು ಟಿಕೆಟ್ ಆಕಾಂಕ್ಷಿಗಳಿಂದ ಗಿಜಿಗುಡುತ್ತಿದ್ದರೆ ಜಾತ್ಯತೀತ ಜನತಾದಳ ಕಚೇರಿಯತ್ತ ಮುಖ ಮಾಡುವವರಿರಲಿಲ್ಲ. ಮಂತ್ರಿಯಾದರೂ ದರ್ಶನಾಪುರನಿಗೆ ಕಲಬುರ್ಗಿ ಜೆ.ಡಿ.ಎಸ್. ಪಕ್ಷಕ್ಕೆ ಕಾಯಕಲ್ಪ ಒದಗಿಸಬಲ್ಲ ವ್ಯಕ್ತಿತ್ವವಾಗಲಿ, ಜಿಗುಟುತನವಾಗಲಿ ಇಲ್ಲ. ಈತನ ವರ್ಚಸ್ಸು ತನ್ನ ಸುತ್ತಮುತ್ತ ಮುಕುರಿಕೊಂಡಿರುವ ತನ್ನ ಬಂದುಬಳಗದವರ ಖೊಟ್ಟಿ ಬಿಲ್ಲುಗಳನ್ನು ಎತ್ತುವುದಕ್ಕೆ ಮಾತ್ರ ಬಳಕೆಯಾಗುತ್ತಿದೆ.


ಅದೇನು ಕಾರಣವೋ ಕಲಬುರ್ಗಿಯ ಲಿಂಗಾಯತರು ಬಿ.ಜೆ.ಪಿಯನ್ನು ಮೌಢ್ಯದಿಂದ ತಮ್ಮ ಪಕ್ಷವೆಂದು ತಿಳಿದುಕೊಂಡು ಅಪ್ಪಿಕೊಳ್ಳುವ ಭರಾಟೆಯಲ್ಲಿದ್ದಾರೆ. ಅವರಿಗೆ ಕೊಡಲಿಗಾಲೆಂದರೆ ಅದೇ ಪಕ್ಷದ ಶಾಸಕ ಚಂದ್ರಶೇಖರ ಪಾಟೀಲ ರೇವೂರ. ನಗರಕ್ಕೆ ಶುದ್ಧವಾದ ನೀರನ್ನು ಒದಗಿಸಿ ಕೊಡುತ್ತೇನೆ ಎಂಬ ಆಶ್ವಾಸನೆಯಿಂದ ಗೆದ್ದು ಬಂದ ಶಾಸಕ ಅತ್ತ ಕಡೆ ತಿರುಗಿಯೂ ನೋಡಿದಿಲ್ಲ. ತನ್ನ ಸುತ್ತ ಮುತ್ತ ಯಾವತ್ತೂ ಗಿರಕಿ ಹೊಡೆಯುವವರಿಗೆ ಈ ಸಲ ನಗರ ಪಾಲಿಕೆಯ ಟಿಕೆಟ್ ನೀಡಿದ್ದಾನೆ. ಆದರೂ ಬಿ.ಜೆ.ಪಿಯ ಅಮರನಾಥ ಪಾಟೀಲ, ವಿಧಾನ ಪರಿಷತ್ ಸದಸ್ಯ ಶಶಿಲ್ ನಮೋಶಿ ಚುನಾವಣೆಯ ಹುಬ್ಬುಗಳನ್ನು ಬಳಸುವ ಸಾಧ್ಯತೆಗಳು ದಟ್ಟವಾಗಿವೆ. ಇದರಿಂದ ಸಹಜವಾಗಿಯೆ ಬಿ.ಜೆ.ಪಿ. ಚಿಗುರೊಡೆಯುತ್ತದೆ.


ಅಲ್ಲಮಪ್ರಭು ಪಾಟೀಲ

ಕಾಂಗ್ರೆ, ಬಿ.ಜೆ.ಪಿ.ಗಳ ಆಂತರಿಕ ಕಚ್ಚಾಟಗಳನ್ನು ಸ್ವಲ್ಪ ಮಟ್ಟಿಗೆ ಜೆ.ಡಿ.ಎಸ್. ಎನ್‌ಕ್ಯಾಶ್ ಮಾಡಿಕೊಳ್ಳುವುದೇ ಆದರೆ ಜೆ.ಡಿ.ಎಸ್. ಚೇತರಿಸಿಕೊಳ್ಳುತ್ತದೆ. ಇಲ್ಲದೆ ಹೋದರೆ ಅದು ದರ್ಶನಾಪುರರ ಕ್ರಮಾಕ್ಷಿತ್ವದಿಂದ ಜಳ- ಜಳವಾಗ ಬಲ್ಲದು. ಇದನ್ನೆಲ್ಲ ಸರಿಯಾಗಿ ಅರಿತವರಂತೆ ಕಾಂಗ್ರೆಸಿಗರು ತಮ್ಮ ನಾಲಿಗೆಯನ್ನು ಮತ್ತೆ ಪಾಲಿಕೆಯತ್ತ ಚಾಚಿ ಎಲ್ಲವನ್ನೂ ನೆಕ್ಕಿ ಹಾಕಲು ಆಗಲೇ ಸ್ಕೆಚ್ ಹಾಕಿದ್ದಾರೆ. ಬಿ.ಜೆ.ಪಿ.ಯವರೂ ಈ ಸಲದ ನಗರ ಸಭೆಯ ರಚನೆಯಲ್ಲಿ ನಿರ್ಣಾಯಕ ಪಾತ್ರವಹಿಸುವ ಉಮೇದಿನಲ್ಲಿರುವುದು ಸ್ಪಷ್ಟವಾಗಿದೆ. ಹೀಗಾಗಿ ನಗರದ ಬಹುತೇಕ ಕಡೆ ಕಾಂಗ್ರೆಸ್-ಬಿಜೆಪಿ ನೇರ ಹಣಾಹಣಿಯಲ್ಲಿದೆ. ಅಲ್ಲಲ್ಲಿ ಜೆ.ಡಿ.ಎಸ್. ಅಭ್ಯರ್ಥಿಗಳು ಗೆದ್ದು ಬಂದರೆ ಅವರ ಪರ್ಸನಲ್ ವರ್ಚಸ್ಸೇ ಕಾರಣವಾಗಿರುತ್ತದೆಯೇ ಹೊರತಾಗಿ, ಪಕ್ಷದ ವರ್ಚಸ್ಸಂತೂ ಖಂಡಿತ ಕಾರಣವಾಗುವುದಿಲ್ಲ.

ಸಂದಿಗ್ಧ ಸ್ಥಿತಿಯಲ್ಲಿ ಯಾದಗಿರಿ


ಬಸವಣ್ಣನವರನ್ನು ಗುತ್ತಿಗೆ ಹಿಡಿದು ಬಸವ ಸಮಿತಿಯನ್ನು ಆವರಿಸಿರುವ ವಿಶ್ವನಾಥರೆಡ್ಡಿ ಮುದ್ನಾಳರ ಸಹೋದರನ ಮಗ ಡಾ. ವೀರಬಸವಂತರೆಡ್ಡಿ ಭಿನ್ನಬಗೆಯ ವ್ಯಕ್ತಿತ್ವ ಬೆಳೆಸಿಕೊಂಡಾತ. ಜೆಡಿಎಸ್ ಟಿಕೆಟ್ ಕೊಡದಿದ್ದಾಗ ಪಕ್ಷೇತರ ಅಭ್ಯರ್ಥಿಯಾಗಿಯೂ ಕಾಂಗ್ರೆ-ಜೆಡಿಎಸ್ ಪೈಪೋಟಿಯನ್ನು ಎದುರಿಸಿ ಗೆದ್ದು ಬಂದಿರುವವರು ಡಾ. ವೀರಬಸವಂತರೆಡ್ಡಿ ಮುದ್ನಾಳ್. ಹೇಳಿಕೇಳಿ ಸಂಭಾವಿತ ಮನುಷ್ಯ. ಶ್ರೀಸಾಮಾನ್ಯನೊಂದಿಗೆ ಬೆರೆಯಬೇಕು, ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗಿರಬೇಕು. ಸಾಧ್ಯವಾದಷ್ಟು ಜನಸಮ್ಮುಖದಲ್ಲಿ ಕೆಲಸಗಳನ್ನು ಮಾಡಬೇಕು ಎಂಬ ಹಂಬಲವುಳ್ಳವ. ತಮ್ಮ ಮೂರು ವರ್ಷದ ಅವಧಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಕೆಲಸವನ್ನು ಯಾವುದೇ ಐಬುಗಳಿಲ್ಲದೆ ಮಾಡಿದ್ದಾರೆ. ಆದರೆ ವಿಶ್ವನಾಥ್ ರೆಡ್ಡಿ ಮುದ್ನಾಳರ ಹ್ಯಾಂಗೋವರ್‌ನಿಂದ ಹೊರಬರದಿದ್ದರಿಂದ ಸ್ವತಂತ್ರ ಅಸ್ತಿತ್ವದಿಂದ ಗುರುತಿಸಲಾಗುತ್ತಿಲ್ಲ.


ದೊಡ್ಡಪ್ಪಗೌಡ

ಇದರಿಂದಾಗಿ ಶಾಸಕನ ಸಹೋದರ ಸಂಬಂಧಿಗಳಾದ ರಾಚಣ್ಣಗೌಡ ಮುದ್ನಾಳ್, ವೆಂಕಟರೆಡ್ಡಿ ಮುದ್ನಾಳನ ಘನಂದಾರಿ ಕೆಲಸಗಳು ಯಾವ ಎಗ್ಗಿಲ್ಲದೆ ನಡೆದಿವೆ. ತಾಲ್ಲೂಕಿನ ಕಚೇರಿಗಳ ತುಂಬೆಲ್ಲ ಇವರುಗಳದೆ ಕಾರುಬಾರು. ಜಿಲ್ಲಾ ಪಂಚಾಯತ್ ಸದಸ್ಯನಾಗಿ ಬೆಂಡೆಗುಂಬಳಿಯಿಂದ ಆಯ್ಕೆಯಾದ ಶ್ರೀನಿವಾಸರೆಡ್ಡಿ, ಬೆಳಗುಂದಿ ವಿರುಪಣ್ಣ, ಶರಣಗೌಡ ಗೊಂದೇಡಗಿ ಹಾಗೂ ಬಾಡಿಯಾಲದ ಶರಣಗೌಡನ ಆಟಾಟೋಪಗಳು ಮೇರೆ ಮೀರಿವೆ. ಇದು ಹಾಲಿ ಶಾಸಕನ ಅಸಹಾಯಕತೆಯೋ? ಅನಿವಾರ್ಯವೋ? ತಿಳಿಯುತ್ತಿಲ್ಲ.


ನಾಗರತ್ನ

ಯಾಕೆಂದರೆ ಇಲ್ಲಿಯ ಜನ ಯಾವತ್ತೂ ಜನನಾಯಕರಿಗೆ ಮುಖಾಮುಖಿಯಾಗಿ ಹೇಳುವವರಲ್ಲ. ತಮ್ಮ ಅಭಿಪ್ರಾಯವೇನಿದ್ದರೂ ಅದನ್ನು ತಮ್ಮ ಮತ ಚಲಾವಣೆಯ ಸಂದರ್ಭದಲ್ಲಿ ಸ್ಪಷ್ಟವಾಗಿ ತೋರಿಸಬಲ್ಲರು. ಹಿಂದೆ ವಿಶ್ವನಾಥರೆಡ್ಡಿ ಮುದ್ನಾಳರ ಐಲುತನಗಳನ್ನು ಸೂಕ್ಷ್ಮವಾಗಿ ಗಮನಿಸಿ, ಅವರ ಸಹವಾಸವೇ ಬೇಡವೆಂದು ಸೀದಾ ಮನೆಯ ದಾರಿ ಹಿಡಿಸಿದವರು.


ರಾಜಶೇಖರ

ಆರೋಗ್ಯ ಸಚಿವರಾಗಿದ್ದ ಎ.ಬಿ. ಮಲಕರೆಡ್ಡಿ ಎಷ್ಟೇ ಸರಳವಾಗಿದ್ದರೂ ಅವರ ಶ್ರೀಮತಿ ಡಾ. ಮಹಾದೇವಿ ಮಲಕರೆಡ್ಡಿಯವರ ರಾಜಕೀಯ ಹಸ್ತಕ್ಷೇಪ ಶ್ರೀಸಾಮಾನ್ಯರಿಗೆ ನುಂಗಲಾಗದ ತುತ್ತಾಗಿತ್ತು. ಡಾ. ಎ.ಬಿ. ಮಲಕರೆಡ್ಡಿಯವರು ಇದನ್ನು ಗಮನಿಸಲಿಲ್ಲ. ತರುವಾಯ ಜನರೆ ಅವರನ್ನು ಶಾಸನ ಸಭೆಯ ಚುನಾವಣೆಯಲ್ಲಿ ಬೆಚ್ಚಿಬೀಳಿಸಿದರು.

ಎಂದೂ ಕಾಲು ಮುರಿದುಕೊಂಡು ಯಾದಗಿರಿಯಲ್ಲಿ ಕುಳಿತುಕೊಳ್ಳದ ಡಾ. ಮಲಕರೆಡ್ಡಿಯವರು ಇದೀಗ ಯಾದಗಿರಿಯಲ್ಲೇ ಠಿಕಾಣಿ ಹೂಡಿದ್ದಾರೆ. ದಾಳ-ಪ್ರತಿದಾಳವನ್ನು ಎಸೆಯುತ್ತ ರಾಜಕೀಯ ನಡೆಸಿದ್ದಾರೆ. ಮಾಜಿ ವಿಧಾನ ಪರಿಷತ್ ಸದಸ್ಯ ಚನ್ನಾರೆಡ್ಡಿ ತುನ್ನೂರು, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಮಲ್ಲಣ್ಣಗೌಡ ಕೌಳೂರು, ಶರಣಗೌಡ ಮಲ್ಹಾರ, ಸಿದ್ಧಲಿಂಗರೆಡ್ಡಿ ಉಳ್ಳೆಸೂಗೂರು ಪ್ರಚಾರದಲ್ಲಿ ತೊಡಗಿದ್ದಾರೆ. 31 ವಾರ್ಡುಗಳನ್ನು ಹೊಂದಿರುವ ಯಾದಗಿರಿ ನಗರಸಭೆಗೆ ಪ್ರತ್ಯೇಕ ಅಸ್ತಿತ್ವ ಇರುವಂತೆ ಕಂಡುಬರುತ್ತದಾದರೂ ಅದರ ಎಲ್ಲಾ ಮುಗಿದಾಣಿಗಳು ಹಾಲಿ ಶಾಸಕ, ಮಾಜಿ ಶಾಸಕರ ಕೈಯಲ್ಲಿಯೇ ಇವೆ. ಪುರಸಭೆಯಲ್ಲಿ ಏನೇ ಗೋಲ್‌ಮಾಲ್ ಜರುಗಿದರೂ, ಅವ್ಯವಹಾರ ನಡೆದರೂ, ಅವು ನೇರ ಶಾಸಕರ ಅಸ್ತಿತ್ವಕ್ಕೆ ಕೊಡಲಿಪೆಟ್ಟು ಹಾಕುತ್ತವೆ. ಹಾಗಾಗಿ ನಗರಸಭೆಯ ಅಧ್ಯಕ್ಷಗಿರಿಯನ್ನು ಅನುಭವಿಸಿದ ಶರಣಗೌಡ ಅರಕೇರಿ, ಶ್ರೀಮತಿ ಶಶಿರೇಖಾಳ ದುರಾಡಳಿತ ಕಾಂಗ್ರೆಸ್ಸಿಗೆ ನುಂಗಲಾರದ ತುತ್ತಾಗಿದೆ. ಗಾರ್ಡನ್ ಎಂಕ್ಟನನ್ನೇ ತನ್ನ ಕಾಲ ಕೆಳಗೆ ಹಾಕಿ ತುಳಿದು ಸರ್ಕಾರಿ ಜಾಗಗಳನ್ನು ಹೊಡಕೊಂಡ ತೇಜಪ್ಪಗೌಡ ಮುಂತಾದವರಿಂದ ಡಾ. ಮಲಕರೆಡ್ಡಿಯವರ ಚರಿಷ್ಮಾವೇ ಹಾರಿ ಹೋಗುತ್ತಿದೆ.

ಇದನ್ನೆಲ್ಲ ಬಂಡವಾಳ ಮಾಡಿಕೊಂಡು ಹೊರಹೊಮ್ಮಬೇಕಾಗಿದ್ದ ಶಾಸಕ ಮುದ್ನಾಳ್, ಗಡಂಗಿನ ಛಾಯೆಯಲ್ಲಿ ಸೊರಗುತ್ತಿದ್ದಾರೆ. ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ನಾಗಣ್ಣಗೌಡ ಕಂದಕೂರು, ಹಾಲು ಒಕ್ಕೂಟದ ಅಧ್ಯಕ್ಷ ಸಿದ್ಧಣ್ಣ ಕಾಡಮನೂರು, ಇತರರು ಇದ್ದಾರಾದರೂ ಪರಸ್ಪರ ಹೊಂದಾಣಿಕೆಯ ಕೊರತೆ ಇದೆ. ಇದರ ಲಾಭ ಪಡೆಯಲು ಕಾಂಗ್ರೆಸ್ ಮತ್ತೆ ಹಾತೊರೆಯತೊಡಗಿದೆ. ಬಿಜೆಪಿ ಈ ಬಾರಿ ಅರ್ಧಕ್ಕಿಂತ ಹೆಚ್ಚು ವಾರ್ಡುಗಳಲ್ಲಿ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿ ತನ್ನ ಜಾಣತನ ಪ್ರದರ್ಶಿಸುತ್ತಿದೆ. ಕಾಂಗ್ರೆಸ್-ಜೆಡಿಎಸ್ ಪಕ್ಷಗಳ ನಾಯಕರ ವರ್ತನೆಯನ್ನು ಸರಿಯಾಗಿ ಗ್ರಹಿಸಿರುವ ಮತದಾರ ಬಿಜೆಪಿಯತ್ತ ಕೊಂಚ ವಾಲುವ ಸಾಧ್ಯತೆಗಳು ಅಲ್ಲಗಳೆಯಲಾಗುವುದಿಲ್ಲ. ಆದರೂ ಅಲ್ಪಸಂಖ್ಯಾತರ ಮತಗಳು ಯಾವ ಕಡೆಗೆ ಹೊರಳುತ್ತವೋ ಆ ಪಕ್ಷದ ಲಕ್ ಖುಲಾಯಿಸಿತೆಂದೆ ಹೇಳಬೇಕು. ನಗರಸಭೆಗೆ ಆಯ್ಕೆಯಾಗಿ ಕೆಲಸ ಮಾಡಬೇಕೆಂಬ ಹುಮ್ಮಸ್ಸಿನಲ್ಲಿರುವ ಶ್ರೀಮತಿ ನಾಗರತ್ನ ಮೂರ್ತಿ, ಸುರೇಶ್ ಮಡ್ಡಿ, ನಾಗಪ್ಪ ಬೆನಕಲ್, ರಾಜಶೇಖರ ಬಾನಾ ಗೆದ್ದುಬರುವುದು ಅಷ್ಟೇ ಅವಶ್ಯವಾಗಿದೆ.

'ಧ್ರುಮ್‌ಸಿಂಗ್' ರಾಜಕೀಯಕ್ಕೆ ಬಲಿಯಾದ ಜೇವರ್ಗಿ

ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಅವರ ತವರು ಮನೆಯಾದ ಜೇವರ್ಗಿಯ ಪುರಸಭೆ ನೋಡುತ್ತಲೇ ನಿಮಗೆ ಅದರ ಬಯೋಡಾಟ್ ಕಂಪ್ಲೀಟ್ ಅರ್ಥವಾಗತೊಡಗುತ್ತದೆ. ಅವರ ಬೇಜವಾಬ್ದಾರಿತನ, ಹಿಂಬಾಲಕರ ಮುಕ್ಕುವಿಕೆಯನ್ನು ನೋಡಿಯೂ ನೋಡದಂತಹ ಜಾಣ ಮೌನದಿಂದ ಪುರಸಭೆ ಅಕ್ಷರಶಃ ನರಕದ ಪ್ರತಿರೂಪವಾಗಿದೆ. ಶಾಸಕ ಸ್ಥಾನವನ್ನು ಉಂಬಳಿಯೆಂಬಂತೆ ಅನುಭವಿಸುತ್ತಿರುವ ಧ್ರುಮ್‌ಸಿಂಗ್ ತಾವು ಬೆಳೆದರೆ ಹೊರತು, ಜೇವರ್ಗಿ ನಗರವನ್ನು ಬೆಳೆಸಲಿಲ್ಲ. ಇವರ ಜೊತೆ ಇಷ್ಟು ವರ್ಷಗಳ ಕಾಲ ಕಾಂಗ್ರೆಗೆ ಮಣ್ಣು ಹೊತ್ತು ಹೊತ್ತೆ ಬಹಳಷ್ಟು ಜನ ಹೈರಾಣಾಗಿ ಹೋಗಿದ್ದಾರೆ. ಅವರಲ್ಲಿ ವಡಿಗೇರಿಯ ಅಮೃತಗೌಡ ಪಾಟೀಲ, ಅಂದೋಲಾದ ಶಂಕರಗೌಡ, ಜೇವರ್ಗಿಯ ಗೌನಳ್ಳಿ ಬಸ್ಸಣ್ಣ ಮುಂತಾದವರಿದ್ದಾರೆ.

ಧ್ರುಮ್‌ಸಿಂಗ್ ತರಹೇವಾರಿ ರಾಜಕೀಯದಿಂದ ಇಲ್ಲಿ ಹೇಳಿಕೊಳ್ಳುವ ಒಬ್ಬಾನೊಬ್ಬ ರಾಜಕೀಯ ಮುತ್ಸದ್ಧಿ ಕೂಡ ಬೆಳೆಯಲಿಲ್ಲ. ನರಬೋಳಿಯ ಶಿವಲಿಂಗಪ್ಪ ಪಾಟೀಲ್‌ರೇನೋ ಕೆಲವು ಕಾಲ ಸೆಡ್ಡು ಹೊಡೆದು ಧರ್ಮಸಿಂಗ್‌ರನ್ನು ದಾಟಿ ಮುಂದೆ ಹೋಗಲು ಯತ್ನಿಸಿ ಸೋತು ಸುಣ್ಣವಾಗಿ ಹೋದರು. ಆದರೆ ಅವರ ಪುತ್ರ ದೊಡ್ಡಪ್ಪಗೌಡ ನರಬೋಳಿ ಧ್ರುಮ್‌ಸಿಂಗ್‌ರಿಂಗೆ ಸವಾಲೆಂಬಂತೆ ಬೆಳೆಯತೊಡಗಿದ್ದಾನೆ.

ಜೆ.ಡಿ.ಎಸ್‌ನ ಕೇದಾರಲಿಂಗಯ್ಯ ಹಿರೇಮಠ ಎಂಬ ಪಾರ್ಟ್‌ಟೈಂ ರಾಜಕಾರಣಿ, ಫುಲ್‌ಟೈಮ್ ಕಂಟ್ರಾಕ್ಟರನಿಂದಾಗಿ, ಅಶೋಕ ಸಾಹು ಮುಂತಾದವರಿಂದ ಧರ್ಮಸಿಂಗ್‌ರ ಒಂದೇ ಒಂದು ಕೂದಲನ್ನು ಕದಲಿಸುವುದಕ್ಕೆ ಆಗುವುದಿಲ್ಲ. ಹೀಗಾಗಿ ಇಲ್ಲಿ ಜೆಡಿಎಸ್ ಅನಿವಾರ್ಯವಾಗಿ ಬಿಜೆಪಿ ಜೊತೆ ಮೈತ್ರಿಗೆ ಇಳಿದಿದೆ. ಜೋಪಡಿಪಟ್ಟಿ ಏರಿಯಾದಲ್ಲಿ ತನ್ನಷ್ಟಕ್ಕೆ ತಾನು ದಿನವೊಂದಕ್ಕೆ 50 ರಿಂದ 60 ಸಾವಿರ ವ್ಯಾಪಾರ ಮಾಡುತ್ತ ಬದುಕು ದೂಡುತ್ತಿದ್ದ ಜಾಫರಶೇಟ್‌ನನ್ನು ಹಿಡಿತಂದು ಪುರಸಭೆಗೆ ನಿಲ್ಲಿಸಿದರು. ಆನಂತರ ಅಧ್ಯಕ್ಷಗಿರಿಗಾಗಿ ನಡೆದ ರಾಜಕೀಯದ ಲಾಬಿಯಲ್ಲಿ ಇವನನ್ನು ಮುಂದೆ ತಳ್ಳಿ ಹಿಂದೆ ನಿಂತು ಮಜಾ ನೋಡಿದರು. ಈಗ ಜಾಫರಸೇಟ್ ಬರೀ ಹೆಸರಿಗೇ ಮಾತ್ರ ಶೇಟ್ ಆಗಿ ಉಳಿದಿದ್ದಾನೆ. ಜೇವರ್ಗಿಯ ಗಲ್ಲಿಗಳಲ್ಲಿ ಇಷ್ಟು ವರ್ಷಗಳ ತರುವಾಯ ಸಿ.ಸಿ.ರೋಡ್ ಕಾಮಗಾರಿಗಳೇನೋ ನಡೆದು ತಿರುಗಾಡಲು ಸ್ವಲ್ಪ ಅನುಕೂಲವಾಗಿದ್ದರೆ ಅದು ಜಾಫರ್ ಶೇಟ್‌ನ ಕಾಲಗುಣದಿಂದ.

ಕಂಟ್ರಾಕ್ಟರ್ ಕೆಲಸಗಳಲ್ಲಿ ಸಂಪೂರ್ಣ ತೊಡಗಿಸಿಕೊಂಡಿರುವ ಕೇದಾರಲಿಂಗಯ್ಯನ ಕೈಚಳಕವೂ ಇಲ್ಲಿ ಕೆಲಸ ಮಾಡಲಾರದು. ಇದನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಸಜ್ಜಾಗಿನಿಂತ ಬಿಜೆಪಿಯ ದೊಡ್ಡಪ್ಪಗೌಡ ಯಾವುದೇ ರಾಗದ್ವೇಷಗಳಿಲ್ಲದೆ ರಾಜಕೀಯ ನಡೆಸಿದರಾದರೆ ಮತದಾರ ಅವರ ಕೈಬಿಡಲಾರ.

■ ವಿಶ್ವಾರಾಧ್ಯ ಸತ್ಯಂಪೇಟೆ

ಮಿಡ್ ಡೆ ಪತ್ರಕರ್ತರ ಜೈಲು ಶಿಕ್ಷೆ ಕುರಿತು

(3ನೇ ಪುಟದಿಂದ)

ಪ್ರಜಾಪ್ರಭುತ್ವದಲ್ಲಿ ಅಧಿಕಾರ ಹೊಂದಿರುವವರೆಲ್ಲರೂ ಅಂತಿಮವಾಗಿ ಪ್ರಜೆಗಳಿಗೆ ಉತ್ತರ ನೀಡಬೇಕು" ಎಂದರಲ್ಲದೆ ಈ ಆರೋಪಗಳು ಸಾಬೀತಾದರೆ ಅಂಗಡಿ ಮಳಿಗೆಗಳನ್ನು ಕೆಡವಬೇಕೆಂದು ನೀಡಿದ್ದ ತೀರ್ಪನ್ನೇ ಪುನರ್‌ವಿಮರ್ಶೆಗೆ ಒಳಪಡಿಸಬೇಕು ಎಂದಿದ್ದಾರೆ.

ನಾನು ಸಬರ್‌ವಾಲ್‌ರವರ ಜಾಗದಲ್ಲಿ ಇದ್ದಿದ್ದರೆ, ಯಾವುದನ್ನೂ ಬಚ್ಚಿಡುವ ಅಗತ್ಯ ನನಗಿಲ್ಲದಿದ್ದರೆ, ಈ ಇಡೀ ಪ್ರಕರಣ ಕುರಿತಂತೆ ವಿಚಾರಣೆ ನಡೆಯಲಿ ಎಂದು ಆಹ್ವಾನಿಸುತ್ತಿದ್ದೆ. ಅಷ್ಟೇ ಅಲ್ಲ, ಮುಖ್ಯ ನ್ಯಾಯಮೂರ್ತಿಗಳು ಒಂದು ತನಿಖಾ ಸಮಿತಿಯನ್ನೇ ರಚಿಸಬೇಕೆಂದು ಮನವಿ ಮಾಡಿಕೊಂಡು ನನ್ನ ವಿರುದ್ಧ ಇಂತಹ ಆರೋಪಗಳನ್ನು ಮಾಡಿರುವವರ ವಿರುದ್ಧ ಸೂಕ್ತ ಸಾಕ್ಷ್ಯಗಳನ್ನು ಸಂಗ್ರಹಿಸಿ ಅವರ ಆರೋಪಗಳೆಲ್ಲ ಸುಳ್ಳು ಎಂದು ಸಾಬೀತುಪಡಿಸುತ್ತಿದ್ದೆ.

ಹಾಗೆಯೇ ನಾನು ಮುಖ್ಯ ನ್ಯಾಯಮೂರ್ತಿಗಳಾಗಿದ್ದರೆ, ನ್ಯಾಯಾಂಗದ ಮರ್ಯಾದೆಯನ್ನು ಎತ್ತಿ ಹಿಡಿಬಯಸುವ ಜಾಗದಲ್ಲಿದ್ದಿದ್ದರೆ, ವರದಿ ಮಾಡಿದ್ದವರನ್ನೇ ಶಿಕ್ಷಿಸಿ ಇಡೀ ಪ್ರಕರಣವನ್ನೇ ಚಾಪೆಯ ಅಡಿ ಬಚ್ಚಿಟ್ಟರೆ ಪರಿಣಾಮ ಸರಿ ಇರುವುದಿಲ್ಲ ಎಂದೂ ಅರಿತುಕೊಂಡಿರುತ್ತಿದ್ದೆ. ಅಷ್ಟೇ ಅಲ್ಲ, ತಕ್ಷಣವೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಒಬ್ಬರ ವಿರುದ್ಧದ ಆರೋಪಗಳೊಂದಿಗೆ ಪ್ರಾರಂಭವಾದ ಹಗರಣ ಇಡೀ ನ್ಯಾಯಾಂಗವನ್ನೇ ವ್ಯಾಪಿಸಿಕೊಳ್ಳುತ್ತಿದೆ ಎಂದೂ ಕಾಳಜಿ ವಹಿಸುತ್ತಿದ್ದೆ.

ಆದರೆ ಎಲ್ಲರ ದೃಷ್ಟಿಕೋನಗಳೂ ಒಂದೇ ಆಗಿರುವುದಿಲ್ಲ, ಆದ್ದರಿಂದಲೇ ದೆಹಲಿಯ ಹೈಕೋರ್ಟ್ 'ಮಿಡ್ ಡೆ' ಪತ್ರಿಕೆಯ ಸಿಬ್ಬಂದಿಗೆ ಜೈಲು ಶಿಕ್ಷೆ ನೀಡಿದೆ. ಅವರು ಮಾಡಿದ ಅಪರಾಧವೇನು? ಸಬರ್‌ವಾಲ್‌ರವರ ಬಗ್ಗೆ ಪತ್ರಿಕೆಯು ಮಾಡಿದ್ದ ಆರೋಪಗಳ ಸತ್ಯಾಸತ್ಯತೆಯನ್ನೇ ಗಣನೆಗೆ ತೆಗೆದುಕೊಳ್ಳದ ಹೈಕೋರ್ಟ್ ಸಬರ್‌ವಾಲ್‌ರೊಂದಿಗೆ ವಿಭಾಗೀಯ ಪೀಠದಲ್ಲಿದ್ದ ಇತರೆ ನ್ಯಾಯಮೂರ್ತಿಗಳ ವಿರುದ್ಧ ನಿಂದನೆ ಮಾಡಿದೆ ಎಂದೇ ತೀರ್ಪು ನೀಡಿದೆ. "ವರದಿ ಮಾಡಿರುವ ಶೈಲಿ ಹೇಗಿದೆ ಎಂದರೆ ಓರ್ವ ಸದಸ್ಯನ ಪರವಾಗಿ ಇಡೀ ಸುಪ್ರೀಂ ಕೋರ್ಟ್‌ನ ದುರ್ಬಳಕೆಯಾಗಿದೆ ಎನ್ನುವ ರೀತಿಯಲ್ಲಿದೆ. ಇದು ನ್ಯಾಯಾಂಗದ ನಿಂದನೆಯಾಗುತ್ತದೆ ಮತ್ತು ಈ ಸಂಸ್ಥೆಯ ಬಗ್ಗೆ ಜನರ ವಿಶ್ವಾಸವನ್ನು ಕುಗ್ಗಿಸುತ್ತದೆ."

ಆದರೆ ಮಿಡ್ ಡೆ ಪತ್ರಿಕೆಯು ಎಲ್ಲೂ ಇತರೆ ನ್ಯಾಯಮೂರ್ತಿಗಳ ಬಗ್ಗೆ ಪ್ರಸ್ತಾಪಿಸಿಯೇ ಇಲ್ಲ. ಆದರೂ ನ್ಯಾಯಾಂಗ ನಿಂದನೆ ಆರೋಪ ಹೊತ್ತು ಶಿಕ್ಷೆಗೆ ಗುರಿಯಾಗಿದ್ದಾರೆ. ಇದರರ್ಥ ಏನೆಂದರೆ ಹಲವಾರು ನ್ಯಾಯಮೂರ್ತಿಗಳು ವಿಭಾಗೀಯ ಪೀಠವೊಂದರಲ್ಲಿದ್ದು, ಅವರುಗಳಲ್ಲಿ ಒಬ್ಬರ ಭ್ರಷ್ಟಾಚಾರದ ಬಗ್ಗೆ ಸಾಕ್ಷಿ ಇದ್ದರೂ, ಪೀಠದಲ್ಲಿರುವವರೆಲ್ಲರ ವಿರುದ್ಧ ಸಾಕ್ಷಿಗಳಿಲ್ಲದಿದ್ದರೆ ಯಾರೂ ಚಕಾರವೆತ್ತುವಂತಿಲ್ಲ.

ಬೇರೆ ದೇಶಗಳಲ್ಲಿ ನ್ಯಾಯ ನೀಡುವ ಪ್ರಕ್ರಿಯೆಯಲ್ಲಿ ಲೋಪದೋಷಗಳು ನಡೆದಿವೆ ಎಂದು ತಪ್ಪಾಗಿ ಆರೋಪಿಸಿದರೆ ಮಾತ್ರ ನ್ಯಾಯಾಂಗ ನಿಂದನೆ ಆಗುತ್ತದೆ. ಆದರೆ ಇಲ್ಲಿ ನ್ಯಾಯಾಂಗಕ್ಕೆ "ಆಘಾತ ಉಂಟು ಮಾಡುವುದು" ಮತ್ತು "ಅಧಿಕಾರ ಕುಗ್ಗಿಸುವುದು" ಎಂಬ ವಿಚಿತ್ರವಾದ ಮತ್ತು ಅಪಾಯಕಾರಿಯಾದ ಕಲ್ಪಿತ ಸೆನ್ಸರ್‌ಗಿರಿ ಮಾಡಿ ಜನರೆಲ್ಲರ ಬುದ್ಧಿವಂತಿಕೆಗೆ ಅವಮಾನ ಮಾಡಲಾಗುತ್ತಿದೆ.

ಮಿಡ್‌ಡೆಯ ಪತ್ರಕರ್ತರು ಒಂದು ಮುಖ್ಯವಾದ ಮತ್ತು ಧೈರ್ಯವಾದ ಕೆಲಸವನ್ನೇ ಮಾಡಿದ್ದಾರೆ. ಹಲವು ಪತ್ರಿಕೆಗಳೂ ಅದರೊಂದಿಗೆ ಒಗ್ಗಟ್ಟನ್ನು ಪ್ರದರ್ಶಿಸಿ ಈ ಪ್ರಕರಣ ಕುರಿತಂತೆ ಹಲವು ವರದಿಗಳನ್ನು ಪ್ರಕಟಿಸಿವೆ. ಹಲವಾರು ಗಣ್ಯರು ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ಇಂಟರ್‌ನೆಟ್‌ನಲ್ಲಿ ತನಿಖೆಗೆ ಕೋರಿ ಒಂದು ಮನವಿ ಚಾಲನೆಯಲ್ಲಿದೆ. ಹಾಗೊಮ್ಮೆ ಸರ್ಕಾರವಾಗಲಿ ಅಥವಾ ನ್ಯಾಯಾಲಯವೇ ಆಗಲಿ ಈ ಹಗರಣ ಕುರಿತು ಒಂದು ವಿಶ್ವಾಸಾರ್ಹ ತನಿಖೆಯನ್ನು ಆದೇಶಿಸದಿದ್ದರೆ, ಹಿರಿಯ ವಕೀಲರು ಮತ್ತು ನಿವೃತ್ತ ನ್ಯಾಯಮೂರ್ತಿಗಳಿರುವ ಗುಂಪೊಂದು ಸಾರ್ವಜನಿಕ ಟ್ರಿಬ್ಯುನಲ್‌ಅನ್ನು ರಚಿಸಿ ವಿಚಾರಣೆ ನಡೆಸಲಿದ್ದಾರೆ. ಇದೆಲ್ಲ ಶೀಘ್ರದಲ್ಲೇ ಜರುಗಲಿದೆ.

ಮುಚ್ಚಳ ತೆರೆದುಕೊಂಡು ಒಳಗಿರುವುದೆಲ್ಲ ಕಾಣುತ್ತಿದೆ, ಕೊನೆಗೂ...

(ಅರುಂಧತಿ ರಾಯ್ ಲೇಖನದ ಸಂಕ್ಷಿಪ್ತ ಅನುವಾದ)

■ ಗೌರಿ ಲಂಕೇಶ್

ಗಣಿ ರೆಡ್ಡಿ ಸಹೋದರರ ಸುತ್ತ ಸೆಣೆಸಾಟ

ಬಳ್ಳಾರಿ

ಬಳ್ಳಾರಿಯ ಮಹಾನಗರ ಪಾಲಿಕೆಯ ರಾಜಕೀಯಕ್ಕೀಗ ರಾಜ್ಯಮಟ್ಟದ ವರ್ಚಸ್ಸು ಬಂದಿದೆ. ಕಳೆದ ಬಾರಿ ಅನಾಯಾಸವಾಗಿ ಕಾಂಗ್ರೆಸ್‌ನ್ನು ಹಿಂದಕ್ಕೆ ಸರಿಸಿ, ಜೆಡಿಎಸ್‌ನಿಂದ ಗೆದ್ದಿದ್ದ ಇಬ್ಬರು ಕಾರ್ಪೊರೇಟರುಗಳನ್ನು ಖರೀದಿಸಿ ಅಧಿಕಾರ ಚುಕ್ಕಾಣಿಯನ್ನಿಡಿದಿದ್ದ ಬಜೆಪಿಗೀಗ ಜೆಡಿಎಸ್‌ನ ಪೈಪೋಟಿಯನ್ನು ಗಂಭೀರವಾಗಿ ಪರಿಗಣಿಸಬೇಕಾದ ಪರಿಸ್ಥಿತಿ ಎದುರಾಗಿದೆ.

ಬಳ್ಳಾರಿಯ ಮಟ್ಟಿಗೆ ರಾಜಕೀಯವಾಗಿ ಅಜಾತಶತ್ರುಗಳಂತೆ ತಮ್ಮ ರಾಜಕೀಯ ಹಿಡಿತವಿರಿಸಿಕೊಂಡಿದ್ದ ಬಜೆಪಿಯ ರೆಡ್ಡಿ ಸಹೋದರರಿಗೆ 'ಗಣಿ ಲಂಚ ಪ್ರಕರಣ' ವಿವಾದ ಸಾರ್ವಜನಿಕವಾಗಿ ಒಂದಿಷ್ಟು ಡ್ಯಾಮೇಜ್ ಮಾಡಿದೆ.

ಗಣಿಲಂಚ ಪ್ರಕರಣದ ನೇರ ಟಾರ್ಗೆಟ್ ಗೌಡರ ಕುಟುಂಬವಾಗಿದ್ದರೂ ಅದರಿಂದಾದ ಹಲವು ಪರಿಣಾಮಗಳು ಇಲ್ಲಿನ ಗಣಿ ಉದ್ದಿಮೆದಾರರಿಗೆ, ಅದನ್ನವಲಂಬಿಸಿದವರಿಗೆ ವ್ಯತಿರಿಕ್ತ ಪ್ರಭಾವ ಬೀರಿವೆ. ಇದನ್ನೆ ಅಸ್ತ್ರವಾಗಿ ಮಾಡಿಕೊಂಡು ಜೆಡಿಎಸ್ ಮುನ್ನುಗ್ಗುವ ತಂತ್ರ ರೂಪಿಸಿದೆ.

ಪಾಲಿಕೆ ಚುನಾವಣೆಯಲ್ಲಿ ಇಂತಹ ವಿಷಯಗಳು ಯಾವ ಮಟ್ಟಕ್ಕೆ ಪ್ರಭಾವಿಸಬಲ್ಲವು ಎಂಬ ಪ್ರಶ್ನೆ ಇದ್ದರೂ ಜೆಡಿಎಸ್ ಮಾತ್ರ ಅದನ್ನೇ ನೆಚ್ಚಿ ಕೂತಿದೆ. ಕುರುಗೋಡು ಶಾಸಕ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಸೂರ್ಯನಾರಾಯಣ ರೆಡ್ಡಿ ಪಾಲಿಗೆ ಚುನಾವಣೆ ಪ್ರತಿಷ್ಠೆಯ ಪ್ರಶ್ನೆಯಾಗಿಬಿಟ್ಟಿದೆ.

ಪಾಲಿಕೆ ಚುನಾವಣೆಯಲ್ಲಿ ಜೆಡಿಎಸ್‌ನ್ನು ಮುಂಚೂಣಿಗೆ ತಂದರೆ ಅದರಿಂದ ಒಂದಿಷ್ಟಾದರೂ ಯಶಸ್ಸು ದಕ್ಕಿದರೆ ಅದರ ಪೂರ್ತಿ ಕ್ರೆಡಿಟ್ ಸೂರ್ಯ ನಾರಾಯಣರೆಡ್ಡಿ ಅಕೌಂಟಿಗೆ ಜಮೆಯಾಗುತ್ತದೆ. ಇದರಿಂದ ಒಂದು ಕಡೆ ಗಣಿರೆಡ್ಡಿ ಸಹೋದರರಿಗೆ ಸವಾಲು ಹಾಕಿದಂತೆಯೂ ಆಗುತ್ತದೆ. ಮತ್ತೊಂದು ಕಡೆ ಗೌಡರ ಕುಟುಂಬವನ್ನು ಸಂತೃಪ್ತಗೊಳಿಸಿ ವೈಯಕ್ತಿಕ ವರ್ಚಸ್ಸನ್ನು ಹೆಚ್ಚಿಸಿ ಕೊಳ್ಳಬಹುದೆಂಬ ಲೆಕ್ಕಾಚಾರ ಸೂರ್ಯ ನಾರಾಯಣರೆಡ್ಡಿಯನ್ನು ಪುಳಕಗೊಳಿಸಿದೆ.

ಕಾಂಗ್ರೆಸ್‌ನದು ಅತ್ಯಂತ ದೈನೇಸಿ ಪರಿಸ್ಥಿತಿ. ಸ್ಪರ್ಧಿಸಲು ಕ್ಯಾಂಡಿಡೇಟುಗಳೇ ಇಲ್ಲದ ಸ್ಥಿತಿ. ಕ್ಯಾಂಡಿಡೇಟುಗಳ ಕತೆ ಇದಾದರೆ ಆ ಪಕ್ಷದ ಮುಖಂಡರುಗಳಿಗೇ ಮುನ್ನುಗ್ಗಿ ಕೆಲಸ ಮಾಡಬೇಕೆಂಬ ಉಮೇದಿದ್ದಂತಿಲ್ಲ. ಕಾಂಗ್ರೆಸ್‌ನ 'ಬಿ' ಫಾರಂಗಳನ್ನು ಯಾರು ಹಂಚ ಬೇಕೆಂಬ ಗೊಂದಲ ಕೊನೆವರೆಗೂ ಕಾಡಿ, ವಾಪಾ ಸಾಗಿದ್ದಾರೆ, ದಿವಾಕರ ಬಾಬು ಅಲ್ಲಲ್ಲಿ ಅಭ್ಯರ್ಥಿಗಳ ಪರವಾಗಿ ರೋಡ್ ಶೋ ಕೊಡುತ್ತಿದ್ದಾರೆ. ಕಾಂಗ್ರೆಸ್ ನಾಯಕರ ನಿರಾಸಕ್ತಿ, ಚುನಾವಣಾ ತಂತ್ರಗಾರಿಕೆಯ ಕೊರತೆ ಎರಡೂ ಎದ್ದು ಕಾಣುತ್ತಿದೆ.

ಸ್ಥಳೀಯವಾಗಿ ಜೆಡಿಎಸ್-ಕಾಂಗ್ರೆಸ್ ಪಕ್ಷ ಗಳೆರಡೂ ಪರಸ್ಪರ ತಿಳಿವಳಿಕೆಯಿಂದ ಕೆಲ ವಾರ್ಡುಗಳಲ್ಲಿ ಮೈತ್ರಿ ಮಾಡಿಕೊಳ್ಳುವ ತಂತ್ರ ರೂಪಿಸಿವೆಯೆನ್ನಲಾಗಿದೆ. ಇದು ನೇರ ಮೈತ್ರಿ ಯಲ್ಲ. ಜೆಡಿಎಸ್ ಪ್ರಬಲವಾಗಿರುವ ಕಡೆ ವೀಕ್ ಕಾಂಗ್ರೆಸ್ ಕ್ಯಾಂಡಿಡೇಟ್-ಕಾಂಗ್ರೆಸ್ ಪ್ರಬಲ ವಾಗಿರುವ ಕಡೆ ವೀಕ್ ಜೆಡಿಎಸ್ ಕ್ಯಾಂಡಿಡೇಟ್‌ನ್ನು ಕಣಕ್ಕಿಳಿಸುವ ಅಘೋಷಿತ ಒಪ್ಪಂದ ಮಾಡಿಕೊಂಡಿದ್ದಾರೆಂದು ಹೇಳಲಾಗುತ್ತಿದೆ. ಈ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ, ಏಕೆಂದರೆ ಗಣಿ ರೆಡ್ಡಿ ಸಹೋದರರು ಕಾಂಗ್ರೆಸ್‌ನ ಮಾಜಿ ಸಚಿವ ದಿವಾಕರ ಬಾಬು ಹಾಗೂ ಶಾಸಕ ಸೂರ್ಯನಾರಾಯಣರೆಡ್ಡಿಯ ಪೊಲಿಟಿಕಲ್ ಟಾರ್ಗೆಟ್‌ಗಳಾಗಿರುವುದು ಇದಕ್ಕೆ ಕಾರಣವಾಗಿರ ಬಹುದು.

ಜೆಡಿಎಸ್-ಕಾಂಗ್ರೆಸ್‌ನ ಈ ಚುನಾವಣಾ ಕಾರ್ಯತಂತ್ರ ನಿರೀಕ್ಷಿತ ಫಲ ಕೊಡುವ ಸಾಧ್ಯತೆಗಳು ಇಲ್ಲ, ಏಕೆಂದರೆ ಎರಡೂ ಪಕ್ಷಗಳಲ್ಲಿ ಮೂಲಭೂತವಾಗಿ ಅಭ್ಯರ್ಥಿಗಳ ಆಯ್ಕೆಯಲ್ಲೇ ಎಡವಿದ್ದಾರೆ.


ಜೆಡಿಎಸ್‌ನ ಸೂರ್ಯನಾರಾಯಣರೆಡ್ಡಿಯದು ಒನ್‌ಮ್ಯಾನ್‌ಶೋ. ಸಾಲದ್ದಕ್ಕೆ ಹೊಗಳುಭಟ್ಟರ ತಂಡದ ಬುಡಾ ಅಧ್ಯಕ್ಷ ರವೀಂದ್ರ ಬಾಬು, ಮಿಲ್ಸ್ ಯೂನಿಯನ್ ಅಧ್ಯಕ್ಷ ಎಚ್. ಹನುಮಂತಪ್ಪ, ಬೆಸ್ಟ್ ಸ್ಕೂಲ್ ಕೋನಂಕಿ ರಾಮಪ್ಪ, ಸರ್ಕಾರಿ ಆಸ್ತಿ ಮಾರಾಟದ ಲಾಬಿ ಏಜೆಂಟ್ ಕುರುಗೋಡಿನ ಆನಂದ್ ಚೌಧರಿ, ಕಾಂಗ್ರೆಸ್ ಬಿಟ್ಟು ಜೆಡಿಎಸ್‌ಗೆ ಸೇರ್ಪಡೆಯಾಗಿರುವ ಎಡಬಿಡಂಗಿ ಹುಮಾಯೂನ್ ಖಾನ್‌ನಂಥವರು ವಾಸ್ತವ ಸ್ಥಿತಿ ಏನೆಂದು ಹೇಳದೆ ದಿಕ್ಕುತಪ್ಪಿಸುತ್ತಿದ್ದಾರೆ.


ಇಡೀ ಜೆಡಿಎಸ್ ಪಾಳೆಯ ಮುಖ್ಯಮಂತ್ರಿ ಕುಮಾರಸ್ವಾಮಿ ಆಗಮನಕ್ಕಾಗಿ ಚಾತಕಪಕ್ಷಿಯಂತೆ ಕಾಯುತ್ತಿದೆ. ತಮ್ಮ ರಾಜಕೀಯ ವಿರೋಧಿಗಳಾಗಿರುವ ಗಣಿರೆಡ್ಡಿಗಳ ಪ್ರಾಬಲ್ಯವನ್ನು ಸ್ಥಳೀಯವಾಗಿ ಕುಗ್ಗಿಸಲು ಮುಖ್ಯಮಂತ್ರಿ ಕುಮಾರಸ್ವಾಮಿ ಬಳ್ಳಾರಿಗೆ ಬಂದು ಚುನಾವಣಾ ಪ್ರಚಾರ ನಡೆಸುತ್ತಾರೆಂಬ ನಿರೀಕ್ಷೆ ಬಹಳ ಇದೆ. ಇದೇ 25, 26 ರಂದು ಎಚ್.ಡಿ. ಕುಮಾರಸ್ವಾಮಿ ಜಿಂದಾಲ್ ಗೆಸ್ಟ್ ಹೌಸಿಗೆ ಬಂದು ಚುನಾವಣಾ ಕಾರ್ಯತಂತ್ರ ರೂಪಿಸು ತ್ತಾರೆಂದೂ, ಶಾಸಕ ಅನಿಲ್‌ಲಾಡ್, ಆನಂದ್ ಸಿಂಗ್ ಸೇರಿದಂತೆ ಕೆಲ ಗಣಿ ಉದ್ಯಮಿಗಳು ಚುನಾವಣಾ ವೆಚ್ಚಕ್ಕೆ ದೊಡ್ಡಮೊತ್ತದ ಹಣ ಸಂಗ್ರಹಿಸಿ ಕೊಡಲಿದ್ದಾರೆಂಬ ರೂಮರುಗಳು ಮಹತ್ವ ಪಡೆದುಕೊಂಡಿವೆ. ಒಂದಂತೂ ನಿಜ. ಮುಖ್ಯಮಂತ್ರಿ ಕುಮಾರಸ್ವಾಮಿ ಭೇಟಿಗೆ ಇನ್ನಿಲ್ಲದ ಮಹತ್ವ ಬಂದಿದೆ.

ಬಜೆಪಿಯ ಗಣಿ ರೆಡ್ಡಿ ಸಹೋದರರಂತೂ ತುಂಬಾ ವ್ಯವಸ್ಥಿತವಾಗಿ ಅಖಾಡಕ್ಕಿಳಿದಿದ್ದಾರೆ. ಅಭ್ಯರ್ಥಿಗಳ ಆಯ್ಕೆಯಲ್ಲಿ ಎಲ್ಲಾ ಆಯಾಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಂತಿಮಗೊಳಿಸಿದ್ದಾರೆ. ಅಭ್ಯರ್ಥಿಯ ಜಾತಿ ಹಿನ್ನೆಲೆ, ಜನಸಂಪರ್ಕ, ಹಣಕಾಸು ಪರಿಸ್ಥಿತಿ ಹೀಗೆ ಪ್ರತಿಯೊಂದನ್ನು ಅಳೆದು ತೂಗಿ-ಶತಾಯಗತಾಯ ಗೆಲ್ಲಲೇಬೇಕೆಂಬ ಉದ್ದೇಶದಿಂದ ಕಣಕ್ಕಿಳಿಸಿದಿದ್ದಾರೆ. ಪ್ರಮುಖವಾಗಿ ಮಂತ್ರಿ ಶ್ರೀರಾಮುಲು ಅನ್ನೂ ಚುನಾವಣಾ ಪ್ರಚಾರದ ಮುಂಚೂಣಿಯಲ್ಲಿ ನಿಲ್ಲಿಸಿ ನಾಯಕ ಸಮುದಾಯದ ಓಟು ಕ್ಯಾಪ್ಚರ್ ಮಾಡುವ ತಂತ್ರ ರೂಪಿಸಿದ್ದಾರೆ. ಈ ಬಾರಿ ಓಬಳಾಪುರಂ ಮೈನಿಂಗ್ ಕಾರ್ಪೊರೇಷನ್‌ನ ಡೈರೆಕ್ಟರ್ ರಾಮ ಚಂದ್ರ ರೆಡ್ಡಿ ಕೂಡಾ ಸಕ್ರಿಯ ಪ್ರಚಾರಕ್ಕಿಳಿದಿದ್ದಾರೆ. ಪ್ರಚಾರಕ್ಕೂ ವ್ಯವಸ್ಥಿತ ಜಾಲ ರೂಪಿಸಿದ್ದಾರೆ.



ಗೋವಿಂದರಾಜು


ಬಸವರಾಜ


ಕೇಶವ ರೆಡ್ಡಿ


ಗಡಪ್ಪ


ಭಾಗ್ಯಮ್ಮ


ಯಲಪ್ಪ

ಗಣಿ ರೆಡ್ಡಿ ಸಹೋದರರು ಚುನಾವಣೆಗಾಗಿ ಖರ್ಚು ಮಾಡಬಹುದಾದ ಹಣದ ಎದುರು ಈಜಲು ಸಾಧ್ಯವೇ ಎಂಬ ಆತಂಕ ಜೆಡಿಎಸ್-ಕಾಂಗ್ರೆಸ್ ಎರಡೂ ಪಕ್ಷಗಳನ್ನು ಕಾಡುತ್ತಿದೆ. ಈ ಬಾರಿಯೂ ತುಸು ಪ್ರಯಾಸವಾದರೂ ಬಜೆಪಿ ಪಾಲಿಕೆಯ ಗದ್ದುಗೆ ಹಿಡಿಯಲಿದೆ ಎಂಬುದರ ಬಗ್ಗೆ ಯಾರಿಗೂ ಅನುಮಾನವಿದ್ದಂತಿಲ್ಲ. ಗಣಿ ರೆಡ್ಡಿಗಳು 'ಇದು ಪಾಲಿಕೆ ಚುನಾವಣೆ ತಾನೇ' ಎಂದು ನಿರ್ಲಕ್ಷ್ಯ ಮಾಡದೆ ತಿರುಗುವಂತೆ ಮಾಡಿರುವುದೇ ಜೆಡಿಎಸ್ ಸಾಧನೆ.

ಪಾಲಿಕೆ ಚುನಾವಣೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳ ವೈಯಕ್ತಿಕ ವರ್ಚಸ್ಸು, ಪ್ರಭಾವ, ಸಾಮರ್ಥ್ಯಗಳ ಬಗ್ಗೆ ಮಾತನಾಡುವ ಪರಿಸ್ಥಿತಿಯೇ ಇಲ್ಲ, ಎಲ್ಲವೂ ನಾಯಕಗಣ ಕೇಂದ್ರಿತ ಲೆಕ್ಕಾಚಾರಗಳೇ.

ಬಜೆಪಿಯಿಂದ ಮಾಜಿ ಮೇಯರ್ ಸೋಮಶೇಖರ ರೆಡ್ಡಿ, ವಿ.ಎಸ್. ಮರಿದೇವಯ್ಯ, ಜಿ. ಪದ್ಮಾವತಿ ಯಾದವ್, ಎಂ.ಎಂ. ಸಂಜಯ್, ಮಲ್ಲನಗೌಡ, ಜೆಡಿಎಸ್‌ನಿಂದ ಎಪಿಎಂಸಿ ಮಾಜಿ ಅಧ್ಯಕ್ಷ ಜಾನಕುಂಟೆ ಬಸವರಾಜ್, ತಿಮ್ಮಪ್ಪ ಯಾದವ್, ಹುಂಡೇಕರ್ ರಮೇಶ್, ಕಾಂಗ್ರೆಸ್‌ನಿಂದ ಬೆಣಕಲ್ ಬಸವರಾಜಗೌಡ, ಗಾದೆಪ್ಪ ಮುಂತಾದವರು ಚುನಾವಣಾ ಕಣದಲ್ಲಿದ್ದಾರೆ.

■ ವರದಿಗಾರ



ರೇವಣ್ಣನ ಬುಡಕ್ಕೆ ಸೈಲೆಂಟ್ ಕೊಳ್ಳಿ

ಹಾಸನ

ಹಾಸನ ನಗರಸಭೆ ಚುನಾವಣೆ ಈ ಬಾರಿ ಯಾರ್ಯಾರನ್ನು ಗದ್ದುಗೆಗೇರಿಸುತ್ತೋ, ಯಾರ್ಯಾರನ್ನು ಗುದ್ದಿ ಮನೆಗೆ ಕಳಿಸುತ್ತೋ ಆ ಮತದಾರನೇ ಬಲ್ಲ. ಏನೇ ಆದರೂ, ರೇವಣ್ಣ ಮತ್ತವನ ಪುಂಡ ಮಹಾತ್ಮರು ಮಾಡುತ್ತಿರುವ ರಗಳೆಗಳ ಕಾರಣದಿಂದಾಗಿ ಈ ಚುನಾವಣೆಯಲ್ಲಿ ಜೆಡಿಎಸ್ ಸೋತು ಸುಣ್ಣವಾಗುವುದಂತೂ ಸತ್ಯ.

ಜಿಲ್ಲೆಯ ಎಲ್ಲಾ ಎಂಟು ತಾಲ್ಲೂಕುಗಳ ಸ್ಥಳೀಯ ಸಂಸ್ಥೆಗಳ ಚುನಾವಣೆ ಜೆಡಿಎಸ್‌ಗೆ ನುಂಗಲಾರದ ತುತ್ತಾಗಿದೆ. ರಾಜಕೀಯ ವರ್ಚಸ್ಸಿನಿಂದ ಗೆಲ್ಲಲು ಸಾಧ್ಯವಿಲ್ಲ ಎಂದರಿತ ಪಕ್ಷದ ನಾಯಕಮಣಿಗಳು ತಮ್ಮ ಅಧಿಕಾರವನ್ನೇ ದುರುಪಯೋಗ ಪಡಿಸಿಕೊಂಡು ಸರ್ಕಾರಿ ಯಂತ್ರಾಂಗದ ಮೂಲಕ ಗದ್ದುಗೆಗೇರುವ ತಂತ್ರವನ್ನು ಅನುಸರಿಸುತ್ತಿದ್ದಾರೆ. ಅದೂ ಕೂಡ ಪಕ್ಷದ ಬಲವನ್ನು ಮತ್ತಷ್ಟು ಕುಗ್ಗಿಸುತ್ತಿದೆಯೇ ಹೊರತು ಚುನಾವಣೆಯಲ್ಲಿ ಲಾಭ ತರುವ ಲಕ್ಷಣಗಳು ಕಾಣುತ್ತಿಲ್ಲ.

ಮೊನ್ನೆ ಶುಕ್ರವಾರ ನಡೆದ ಹಾಸನ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಸಮರ್ಥರು ಹಾಗೂ ಹಿರಿಯ ಸದಸ್ಯರೂ ಆದ ಜಿ.ಪಂ. ಸದಸ್ಯ ರಾಜಶೇಖರ್‌ಗೆ ಅಧ್ಯಕ್ಷ ನೀಡದೆ ತಮ್ಮ ಸಂಬಂಧಿಗಳಿಗೆ ಆ ಸ್ಥಾನವನ್ನು ದಯಪಾಲಿಸಿದ ಸಚಿವ ರೇವಣ್ಣನ ವಿರುದ್ಧ ಜಿಲ್ಲೆಯ ಲಿಂಗಾಯತರಲ್ಲಿ ಸಿಟ್ಟು ನೆತ್ತಿಗೇರಿದೆ. ಅದರಲ್ಲೂ ಲಿಂಗಾಯತರೇ ಪ್ರಾಬಲ್ಯ ಹೊಂದಿರುವ ಅರಸಿಕೆರೆ ಪುರಸಭೆಯ ಚುನಾವಣೆ ಮೇಲೆ ಇದು ನೇರವಾಗಿ ಪರಿಣಾಮ ಬೀರಲಿದೆ. ಜಿಲ್ಲೆಯಾದ್ಯಂತ ಈಗಾಗಲೇ ರೇವಣ್ಣನ ವಿರುದ್ಧ ಲಿಂಗಾಯತರು, ದಾಸಒಕ್ಕಲಿಗರು ಕುದಿಯುತ್ತಿದ್ದು ಅದು ಈ ಚುನಾವಣೆ ಯಲ್ಲಿ ಜೆಡಿಎಸ್ ಭವಿಷ್ಯದ ಮೇಲೆ ಪ್ರಭಾವ ಬೀರಲಿದೆ. ಅಲ್ಲದೆ, ಕೋಮುವಾದಿ ಬಜೆಪಿಯೊಂದಿಗೆ ಕೈಜೋಡಿಸಿ ದ್ದರಿಂದ ಈ ಬಾರಿ ಅಲ್ಪಸಂಖ್ಯಾತರು ಜೆಡಿಎಸ್‌ಗೆ ಕೈ ಕೊಡುವುದು ಗ್ಯಾರಂಟಿ.

ಹಾಸನ ನಗರಸಭೆ

35 ವಾರ್ಡ್‌ಗಳನ್ನು ಹೊಂದಿರುವ ಹಾಸನ ನಗರಸ[ಭೆ] ಯಾವತ್ತೂ ಒಂದೇ ಪಕ್ಷಕ್ಕೆ ಮೀಸಲಾಗಿಲ್ಲ. ಒಮ್ಮೆ ಕಾಂಗ್ರೆ[ಸ್] ಗೆದ್ದರೆ ಮತ್ತೊಮ್ಮೆ ದಳ ಗೆಲ್ಲುತ್ತದೆ. ಕಳೆದ ಬಾರಿ ಕಾಂಗ್ರೆ[ಸ್] ಅಧಿಕಾರದಲ್ಲಿತ್ತು. ಆ ಅಧಿಕಾರಾವಧಿಯಲ್ಲಿ ಹಾಸ[ನ] ಅಭಿವೃದ್ಧಿಯನ್ನಂತೂ ಕಾಣಲಿಲ್ಲ. ರಸ್ತೆಯ ಗುಂಡಿಗಳ[ು] ಹೊಂಡಗಳಾಗಿ ಹತ್ತಾರು ಮಂದಿಯನ[್ನು] ಬಲಿತೆಗೆದುಕೊಂಡಿದ್ದನ್ನೇ ನೋಡಿದರೆ ಸಾಕ[ು] ಅದರ ಅಧಿಕಾರದ ಗಮ್ಮತ್ತು ಗೊತ್ತಾಗುತ್ತ[ದೆ].

ಇನ್ನೊಂದೆಡೆ ಸಚಿವ ಮಣ್ಣಿ[ನ] ಮೊಮ್ಮಗ ರೇವಣ್ಣ ರಸ್ತೆ ಅಗಲೀಕರಣದ ಹೆಸರಲ್ಲಿ ತಮ[್ಮ] ಗಾಗದ ಅಮಾಯಕರ ಕಟ್ಟಡಗಳನ್ನು ನೀತಿನಿಯಮ[ಗಳನ್ನು] ಉಲ್ಲಂಘಿಸಿ ಒಡೆಸಿಹಾಕಿದ. ಅದೇ ಸಮಯದಲ್ಲಿ ತಮ[್ಮ] ಆತ್ಮೀಯ ಅನುಯಾಯಿಗಳ ಕಟ್ಟಡಗಳಿಗೆ ಭಕ್ಷೀಸು ನೀಡಿದ[.] ಇದೇ ಕಾಮಗಾರಿಯ ಹೆಸರಿನಲ್ಲಿ ಆತ ನಗರಕ್ಕೆ ಹೊಂದಿ ಕೊಂಡಿರುವ ಸೈಟುಗಳೂ ಸೇರಿದಂತೆ ಸಣ್ಣ ರೈತ[ರ] ಭೂಮಿಯನ್ನೂ ಕಿತ್ತುಕೊಂಡಿದ್ದಾನೆ. ಜತೆಗೆ, ದಾಸಒಕ್ಕಲಿಗ[ರ] ಪ್ರಾಬಲ್ಯವಿರುವ ಈ ನಗರದಲ್ಲಿ ಅವರ ಮೇಲೆ ರೇವಣ[್ಣ] ನಡೆಸಿದ ದೌರ್ಜನ್ಯಗಳು, ಅವರಿಗೆ ಕೊಡುತ್ತಿರುವ ಕಿರುಕುಳಗಳು, ನೌಕರರ ಸಾಮೂಹಿಕ ವರ್ಗಾವಣೆಗಳು ಜನರನ್ನು ಕೆರಳಿಸಿವೆ. ಹಾಸನದ ಜನ ಅವನಿಗೆ ಬುದ್ಧಿ ಕಲಿಸುವುದಕ್ಕಾಗಿ ಸಮಯ ಕಾಯುತ್ತಿದ್ದರು. ಈಗ ಸ್ಥಳೀಯ ಸಂಸ್ಥೆಗಳ ಚುನಾವಣೆ ನೆಪದಲ್ಲಿ ಆ ಸಮಯ ಬಂದಿದೆ.

ಇದು ಸಾಕಾಗದೆಂಬಂತೆ ಜೆಡಿಎಸ್‌ನ ಸ್ಥಳೀಯ ಮುಖಂಡರುಗಳಾದ ಮಾಜಿ ರಾಜ್ಯಸಭಾ ಸದಸ್ಯ ಎಚ್.ಸಿ. ಜವರೇಗೌಡ ಮತ್ತು ಪಟೇಲ್ ಶಿವರಾಂ ಎಂಬ[ುವ] ಹಕ್ಕ-ಬುಕ್ಕರು ರೇವಣ್ಣನ ಬುಡಕ್ಕೆ ಸೈಲೆಂಟಾಗಿ ಕೊ[ಳ್ಳಿ] ಇಡುತ್ತಿದ್ದಾರೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯ[ಲ್ಲಿ] ಜೆಡಿಎಸ್‌ನ ಟಿಕೆಟ್‌ನ್ನು ತಮ್ಮ ನೆಂಟರು ಮತ್ತು ಬಕೆಟ[್] ಭಟ್ಟಂಗಿಗಳಿಗೆ ನೀಡಿದ ಪರಿಣಾಮವಾಗಿ ಪ್ರತಿ ವಾರ್ಡಿನ[ಲ್ಲೂ] ಜೆಡಿಎಸ್ ಬಂಡಾಯ ಅಭ್ಯರ್ಥಿಗಳು ಸೃಷ್ಟಿಯಾಗಿದ್ದಾರೆ.

ಅದರಲ್ಲೂ ಸಕತ್ ಕುತೂಹಲ ಕೆರಳಿಸಿರುವುದು 32ನೇ ವಾರ್ಡಿನಲ್ಲಿ ಜೆಡಿಎಸ್‌ನಿಂದ ಟಿಕೆಟ್ ಆಕಾಂಕ್ಷಿ...

ಶಿಕಾರಿಪುರ

ಬೆಂಗಳೂರಲ್ಲಿ ಕೂತು ರಾಮಸೇತು, ರಾಮರಾಜ್ಯ ಇತ್ಯಾದಿ ಮಂತ್ರ ಪಠಿಸುತ್ತಿರುವ ಉಪಮುಖ್ಯಮಂತ್ರಿ ಯಡಿಯೂರಪ್ಪನವರ ಶಿಕಾರಿಪುರದಲ್ಲಿ ಸದ್ಯ ಪುರಸಭಾ ಚುನಾವಣೆಯ ಯುದ್ಧ ತಂತ್ರಕ್ಕೆ ಅವರ ಮಗ ರಾಘವೇಂದ್ರನೇ ಸೇನಾಧಿಪತಿ!


ರಾಘವೇಂದ್ರ

ಸಾಕ್ಷಾತ್ ರಾಮರಾಜ್ಯವೇ ಧರೆಗಿಳಿದಂತೆ ಸಿಂಗಾರಗೊಂಡ ಶಿಕಾರಿಪುರದಲ್ಲಿ ಎಲ್ಲೆಂದರಲ್ಲಿ ಕೇಸರಿ ಬಾವುಟಗಳೂ ಕಮಲ ಪತಾಕೆಗಳೂ ಕಣ್ಣು ಕುಕ್ಕುತ್ತಿವೆ. ಶಿಕಾರಿಪುರದ 23 ವಾರ್ಡುಗಳ ಪೈಕಿ ಕಳೆದ ಚುನಾವಣೆಯಲ್ಲಿ ಬಜೆಪಿ ಹದಿನಾಲ್ಕರಲ್ಲಿ ಗೆದ್ದಿತ್ತು, ಕಾಂಗ್ರೆಸ್ಸಿಗೆ ಕನಿಷ್ಠ ಒಂಭತ್ತು ಸ್ಥಾನವಾದರೂ ಲಭಿಸಿತ್ತು. ಈ ಬಾರಿ 23 ಕ್ಕೆ ಇಪ್ಪತ್ಮೂರನ್ನು ಗೆದ್ದರಷ್ಟೇ ತಾನು ಮುಖ್ಯಮಂತ್ರಿಗಿರಿಗೆ ಶ್ರೇಯಸ್ಸೆಂದು ಲೆಕ್ಕ ಹಾಕಿಯೇ ಯಡ್ಡಿ ಮಗ ರಾಘವೇಂದ್ರನನ್ನು ದೊಡ್ಡಪೇಟೆ ವಾರ್ಡಿನಿಂದ ಕಣಕ್ಕಿಳಿಸಿದ್ದಾರೆ.

ಗೂಂಡಾಗಿರಿ, ಬೋಗಸ್ ಬಿಲ್‌ದಂಧೆ, ಪುಂಡಾಟಿಕೆ ಬಿಟ್ಟರೆ ಯಡ್ಡಿ ಮಗ ರಾಘವೇಂದ್ರನಿಗೆ ಗೊತ್ತಿರುವುದು ಗುಂಡು, ತುಂಡು, ಚೆಂಡು ಮಾತ್ರ!

ಕಳಪೆ ಕಾಮಗಾರಿಯ ವಿರುದ್ಧ ಹೋರಾಟಕ್ಕಿಳಿದ ಕುರುಬರ ನಾಯಕಿ ವಿಜಯಲಕ್ಷ್ಮಿ ಕಂಚುಗಾರರನ್ನು ನಡುರಸ್ತೆಯಲ್ಲಿ ಹಿಡಿದು ಹೊಡೆದವನು ಇದೇ ಯಡ್ಡಿಯ ಮಗ ರಾಘವೇಂದ್ರ!

ಇಂಥ ಪರಮ ಲಂಪಟನನ್ನು ಬಜೆಪಿ ಅಭ್ಯರ್ಥಿಯನ್ನಾಗಿಸಿ ದೊಡ್ಡಪೇಟೆ ವಾರ್ಡಿನಿಂದ ಗೆಲ್ಲಿಸಿಬಿಟ್ಟರೆ ತಾನು ಮುಖ್ಯಮಂತ್ರಿಯಾಗುವುದಕ್ಕೂ ತನ್ನ ಮಗನೇ ಶಿಕಾರಿಪುರ ಪುರಸಭೆಗೆ ಅಧ್ಯಕ್ಷನಾಗುವುದಕ್ಕೂ ಸರಿಹೋಗುತ್ತದೆ.

ಇಂಥ ದುರಾಶೆಗೆ ಬಿದ್ದೇ ಶಿಕಾರಿಪುರದ ಜೆಡಿಎಸ್ ಅಧಿಪತಿ ಎಚ್.ಎಸ್. ಮಂಜುನಾಥನನ್ನು ಬುಟ್ಟಿ[ಗೆ] ಹಾಕಿಕೊಂಡ ಯಡ್ಡಿ ತನ್ನ ಮಗನ ವಿರುದ್ಧ ಜೆಡಿಎಸ್[‌ನಿಂದ] ಚಂದ್ರಶೇಖರನಂಥ ಡಮ್ಮಿ ಅಭ್ಯರ್ಥಿ ಯನ್ನ[ು] ಹಾಕುವಂತೆ ನೋಡಿಕೊಂಡರು. ಶೇ. 8[0] ರಷ್ಟು ಲಿಂಗಾಯತರೇ ಇರುವ ದೊಡ್ಡಪೇಟೆಯಂಥ ಸೇಫಾದ ವಾರ್ಡನ್ನ[ೇ] ಆಯ್ದುಕೊಂಡರು. ಮಗನ ವಿರುದ್ಧ ಲಿಂಗಾಯತರೇ ಆದ ಕಾಂಗ್ರೆಸ್ಸಿನ ಮಾಜಿ ಕೌನ್ಸಿಲರ್ ಸಿದ್ಧಲಿಂಗಪ್ಪ ನಿಂತರೂ ಬಜೆಪಿಯ ಅಟ್ಟಹಾಸದ ಮುಂದೆ ಯಾವ ಲೆಕ್ಕ?

ಜೊತೆಗೆ ಶಿಕಾರಿಪುರಸಭೆಯ ಇಬ್ಬರ[ು] ಮಾಜಿ ಅಧ್ಯಕ್ಷರಾದ ಟಿ.ಎಸ್. ಮೋಹನ್ ಮತ್ತು ಕೆ.ಜಿ. ವಸಂತಗೌಡರನ್ನು ಕ್ರಮವಾಗಿ ರಂಗನಾಥಪುರ ಮತ್ತು ತೇರುಬೀದಿಯಿಂದ ಕಣಕ್ಕಿಳಿಸಿದ್ದಾರೆ. ಆದರೆ ಇದೇ ಬಜೆಪಿಯಿಂದ ಹಿಂ[ದೆ] ಪುರಸಭೆಗೆ ಅಧ್ಯಕ್ಷರಾಗಿದ್ದ ಕುರುಬರ ನಾಯಕ ಎಸ್.ಬಿ. ಶಿವಕುಮಾರ್‌ಗೆ ಮಾತ್ರ ಟಿಕೆಟ್ ತಪ್ಪಿಸಿ ವಂಚಿಸಿದ್ದಾರೆ.


ಎಲ್ಲಿ ಶಿವಕುಮಾರ್ ಇವತ್ತಲ್ಲ ನಾ[ಳೆ] ತನಗೆ ಎದುರಾಳಿಯಾಗುತ್ತಾರೋ ಎಂ[ಬ] ಅಸೂಯೆ ಅಪ್ಪ-ಮಗ ಇಬ್ಬರಿಗೂ ಇದೆ[.] ಜಾತಿಯಲ್ಲಿ ಕುರುಬ, ಸ್ವಂತ ವ್ಯಕ್ತಿತ್ವ ಮತ್ತು ವರ್ಚಸ್ಸು ಎರಡೂ ಇದೆ. ಶಿಕಾರಿಪುರದ ಕನಿಷ್ಠ ... ವಾರ್ಡುಗಳಲ್ಲಿ ಶಿವಕುಮಾರ್‌ಗೆ ಅವರದೇ ಆ... ಬೆಂಬಲಿಗರ ಓಟ್‌ಬ್ಯಾಂಕಿದೆ. ಮುಂದೊಮ್ಮೆ ಮಗ[ನ] ಸುಪ್ಪತ್ತಿಗೆಗೆ ಎಲ್ಲಿ ಆತಂಕ ಒಡ್ಡುತ್ತಾರೋ ಎಂದು ಈಗಲೇ ಬಾಲ ಕಟ್ ಮಾಡಲು ನಿರ್ಧರಿಸಿದ ಯಡ್ಡಿ 'ನೀ[ವು] ಹಿರಿಯರು. ರಾಜ್ಯಮಟ್ಟದಲ್ಲಿ ಯಾವುದಾದರೂ ನಿಗಮ ಮಂಡಳಿಗೆ ಅಧ್ಯಕ್ಷರಾಗಬೇಕಾದವರು' ಎಂದು ತ... ತಿಕ್ಕಿಬಿಟ್ಟರು.

ಅಪ್ಪ ಮಗನ ಹುನ್ನಾರ ಗೊತ್ತಾಗಿಯೇ ರೊಚ್ಚಿಗೆ...

ಯಾಗಿದ್ದ ಮಾಜಿ ನಗರಸಭೆ ಅಧ್ಯಕ್ಷ ಮತ್ತು ಸ್ಥಳೀಯ ಜನಬೆಂಬಲವಿರುವ ದಾಸ ಒಕ್ಕಲಿಗ ಮುಖಂಡರಾದ ಕೆ.ಟಿ. ಪ್ರಕಾಶ್ ದಾಸಪ್ಪ ಅವರಿಗೆ ಜವರೇಗೌಡ ಮತ್ತು ಪಟೇಲ್ ಶಿವರಾಮ್ ಟಿಕೆಟ್ ತಪ್ಪಿಸಿ ಕೈ ಎತ್ತಿದ್ದಾರೆ. ಇದನ್ನು ಪ್ರತಿಭಟಿಸಿ ಮೂವರು ಅಭ್ಯರ್ಥಿಗಳು ನಾಮಪತ್ರ ಹಿಂತೆಗೆದುಕೊಂಡು ಪ್ರಕಾಶ್‌ಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಅವರಿಗಿರುವ ಸಮುದಾಯ ಮತ್ತು ಜನಬೆಂಬಲವನ್ನು ಗಮನಿಸಿ ಹೇಳುವುದಾದರೆ ಅವರ ಗೆಲುವು ಗ್ಯಾರಂಟಿ.



ಪಟೇಲ್ ಶಿವರಾಂ



ಚನ್ನವೀರಪ್ಪ



ನೇತ್ರಾವತಿ

ರೇವಣ್ಣನ ಸೇಡಿಗೆ ಜೆಡಿಎಸ್ ಮನ್ನಾ!

ಸಚಿವ ರೇವಣ್ಣ ಜವರೇಗೌಡ ಮತ್ತು ಪಟೇಲ್ ಶಿವರಾಂ ಅವರನ್ನು ಸಾರ್ವಜನಿಕವಾಗಿಯೇ ಹಿಗ್ಗಾಮುಗ್ಗಾ ಬೈದು ಅವಮಾನಿಸಿದ್ದಕ್ಕಾಗಿ ಈಗ ಅವರಿಬ್ಬರೂ ಕೇವಲ ರೇವಣ್ಣನ ತಳಕ್ಕೆ ಮಾತ್ರವಲ್ಲ, ಇಡೀ ಜೆಡಿಎಸ್ ತಳಕ್ಕೆ ಕೊಳ್ಳಿ ಇಟ್ಟಿದ್ದಾರೆ. ಕಾಂಗ್ರೆಸ್‌ನೊಂದಿಗೆ ಒಳ-ಒಪ್ಪಂದವನ್ನು ಮಾಡಿಕೊಂಡು ಜೆಡಿಎಸ್‌ನ ಸಮರ್ಥರಿಗೆ ಟಿಕೆಟ್ ನಿರಾಕರಿಸಿ, ದುರ್ಬಲರು ಮತ್ತು ಸೋಲುವ ಕ್ಯಾಂಡಿಡೇಟ್‌ಗಳಿಗೆ ಟಿಕೆಟ್ ಕೊಟ್ಟಿದ್ದಾರೆ. ಅಂದರೆ, ಜೆಡಿಎಸ್ ಒಳಗಿದ್ದುಕೊಂಡೇ ಅದನ್ನು ಸರ್ವನಾಶ ಮಾಡಿ ನಂತರ ಕಾಂಗ್ರೆಸ್ ಸೇರುವ ಪಕ್ಕಾ ಪ್ಲಾನ್‌ನ್ನು ಇಂಪ್ಲಿಮೆಂಟ್ ಮಾಡುತ್ತಿದ್ದಾರೆ.

ಒಂದೆಡೆ ಜನರ ವಿರೋಧ, ಇನ್ನೊಂದೆಡೆ ಒಳಗೊಳಗೇ ಕೊಳ್ಳಿ ಇಡುವ ನಿಷ್ಣಾತರ ದಂಡು. ಇಷ್ಟು ಸಾಕಲ್ಲವೇ ಈ ಬಾರಿ ಹಾಸನದಲ್ಲಿ ಜೆಡಿಎಸ್ ಮಣ್ಣು ತಿನ್ನಲು?

ಇನ್ನು 8ನೇ ವಾರ್ಡಿನಿಂದ ಸ್ಪರ್ಧಿಸಿರುವ ಕಾಂಗ್ರೆಸ್‌ನ ಮಾಜಿ ನಗರಸಭಾ ಅಧ್ಯಕ್ಷ ಚನ್ನವೀರಪ್ಪ ಅವರ ಸೊಸೆ ನೇತ್ರಾವತಿ ಗಿರೀಶ್ ಅವರ ಎದುರು ಜವರೇಗೌಡರ ಕುಲಬಾಂಧವ ಪುಟ್ಟಸ್ವಾಮಿಯವರ ಪತ್ನಿ ತಾರಾ ಸ್ಪರ್ಧಿಸಿದ್ದಾರೆ. ಆದರೆ, ಈ ಭಾಗದಲ್ಲಿ ರೇವಣ್ಣ ನಿರ್ನಾಮ ಮಾಡಿದ ಗಂಧದ ಕೋರಿ ಜಾಗ ಜೆಡಿಎಸ್ ಅಭ್ಯರ್ಥಿ ತಾರಾ ಪಾಲಿಗೆ ಮುಳುವಾಗಲಿದೆ. ಚನ್ನವೀರಪ್ಪ ಎಂಬ ಕೆಲಸಗಾರನ ಮುಂದೆ ಜೆಡಿಎಸ್‌ನ ಸರ್ವಾಧಿಕಾರಿ ಧೋರಣೆ ಡಲ್ಲು ಹೊಡೆಯುವುದಂತೂ ಸತ್ಯ.

ಬಿಜೆಪಿಗೂ ಮುಳುವು

ವಾರ್ಡ್ ನಂಬರ್ 3ರಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳಿಗಿಂತ ದಳವೇ ಮುಂದಿದೆ. ಇಲ್ಲಿ ಕಾಂಗ್ರೆಸ್‌ನ ಮಹೇಶ ಎಂಬ ಡಮ್ಮಿ ಕ್ಯಾಂಡಿಡೇಟ್ ಸ್ಪರ್ಧಿಸಿದ್ದು ಜೆಡಿಎಸ್‌ನ ಸುರೇಶ್ ಮತ್ತು ಬಿಜೆಪಿಯ ಕಮಲ್ ಕುಮಾರ್‌ಗೂ ನೇರ ಸ್ಪರ್ಧೆ ಏರ್ಪಡಲಿದೆ. ಬಿಜೆಪಿಯ ಕಮಲ್ ಕುಮಾರ್ ಪಕ್ಷವನ್ನು ಬೆನ್ನಿಗಿಟ್ಟುಕೊಂಡು ಬೆಂಗಳೂರಿನಲ್ಲಿ ಲ್ಯಾಂಡ್ ಡೀಲಿಂಗ್ ಕುದುರಿಸುತ್ತಾ ಇರುವುದರಿಂದ ಜನರ ದೃಷ್ಟಿಯಲ್ಲಿ ಅವನು ಸ್ಥಳೀಯನಲ್ಲ, ಜೆಡಿಎಸ್‌ನ ಸುರೇಶ್ ಸ್ಥಳೀಯನಾಗಿದ್ದು ಇಲ್ಲಿನ ಜನರಿಗೆ ಸ್ವಲ್ಪ ಹತ್ತಿರವಾಗಿರುವುದರಿಂದ ಜನ ಅವನ ಕಡೆ ವಾಲುವ ಸಂಭವವೇ ಜಾಸ್ತಿ ಇದೆ.

34ನೇ ವಾರ್ಡಿನಲ್ಲಿ ಜೆಡಿಎಸ್ ಅಭ್ಯರ್ಥಿ ಸಿ.ಆರ್.ಶಂಕರ್ ಜೆಡಿಎಸ್‌ನೊಳಗಿದ್ದುಕೊಂಡೇ ಅಲ್ಪಸಂಖ್ಯಾತರ ಬಾಂಧವ್ಯ ಬೆಳೆಸಲು ಯಶಸ್ವಿಯಾಗಿರುವುದರಿಂದ ಅಲ್ಪಸಂಖ್ಯಾತರ ನಡುವೆ ಜೆಡಿಎಸ್ ವಿರೋಧಿ ಅಲೆ ಇದ್ದಾಗ್ಯೂ ಅವನು ಗೆಲ್ಲುವ ಲಕ್ಷಣಗಳು ಕಾಣುತ್ತಿದೆ.

ಬೇಲೂರು ಪುರಸಭೆ

ಪ್ರತೀ ವಿಚಾರದಲ್ಲಿ ಲಿಂಗಾಯತರನ್ನು ಕಡೆಗಣಿಸುತ್ತಿರುವ ಜೆಡಿಎಸ್ ವಿರುದ್ಧವಾಗಿ ಲಿಂಗಾಯತರು ಈ ಬಾರಿಯ ಚುನಾವಣೆಯಲ್ಲಿ ಸೇಡು ತೀರಿಸಿಕೊಳ್ಳಲಿದ್ದಾರೆ. ಪಕ್ಷದೊಳಗಿದ್ದ ಅನೇಕ ಲಿಂಗಾಯತ ಲೀಡರುಗಳು ರಾಜಿನಾಮೆ ಕೊಟ್ಟು ಹೊರಗೆ ಬಂದಿದ್ದಾರೆ. ಹೀಗಾಗಿ 23 ವಾರ್ಡ್‌ಗಳನ್ನು ಹೊಂದಿರುವ ಬೇಲೂರು ಪುರಸಭೆ ಚುನಾವಣೆಯನ್ನು ಎದುರಿಸಲು ಜೆಡಿಎಸ್ ನಡುಗುತ್ತಿದೆ. ಈ ಮಧ್ಯೆ ಜೆಡಿಎಸ್ ಅಭ್ಯರ್ಥಿ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಸೇರಿ ಕಾಂಗ್ರೆಸ್ ಅಭ್ಯರ್ಥಿಗೆ ನಾಮಪತ್ರ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದ ಪ್ರಕರಣವನ್ನು ಕಾಂಗ್ರೆಸ್ ಪ್ರಬಲವಾಗಿ ಬಳಸಿಕೊಳ್ಳುತ್ತಿದೆ.

ರೇವಣ್ಣನ ದೌರ್ಜನ್ಯವನ್ನು ಮೌನವಾಗಿ ನುಂಗಿಕೊಂಡಿರುವ ದಲಿತ ಮಂತ್ರಿ ಎಚ್.ಕೆ. ಕುಮಾರಸ್ವಾಮಿಯ ಸನ್ನಡತೆ ದಳಕ್ಕೆ ಒಂದಿಷ್ಟು ಓಟು ತರಬಹುದಾದರೂ ರಾಜ್ಯಸಭಾ ಮಾಜಿ ಸದಸ್ಯ ಜವರೇಗೌಡನ ಕಿತಾಪತಿ ಲಿಂಗಾಯತರ ಓಟು ಕಿತ್ತು ರಂಪ ಮಾಡುವುದು ಗ್ಯಾರಂಟಿ.

ಅರಕಲಗೂಡು ಪಟ್ಟಣ ಪಂಚಾಯತಿ


ಇಲ್ಲಿನ 15 ವಾರ್ಡ್‌ಗಳಲ್ಲಿ ಜೆಡಿಎಸ್‌ಗೆ ಸರಿಯಾದ ಹೊಡೆತ ಬೀಳಲಿದೆ. ಇಲ್ಲಿನ ಸಜ್ಜನ ರಾಜಕಾರಣಿ ಎ.ಟಿ.ರಾಮಸ್ವಾಮಿ ಎಲ್ಲಾ ಕಾಂಟ್ರಾಕ್ಟ್‌ಗಳನ್ನು ತಮ್ಮ ಶಿಷ್ಯ ರಂಗಸ್ವಾಮಿಗೆ ನೀಡಿ ಕಾಸು ಮಾಡಿಕೊಂಡಿದ್ದು ಬಹಿರಂಗವಾಗಿದೆ. ಕೊಟ್ಟ ಕಂಟ್ರಾಕ್ಟ್‌ಗಳೆಲ್ಲಾ ಕಿತ್ತುಹೋಗಿದ್ದು, ಊರಿನ ದೊಡ್ಡ ಕೆರೆ ಉದ್ಧಾರಕ್ಕಾಗಿ ಒಂದು ಕೋಟಿ ಕಾಮಗಾರಿಗೆ ಕೈ ಎತ್ತಿ ಈಗ ಕೆರೆ ಹಾಳಾಗಿಹೋಗಿದ್ದು - ಹೀಗೆ ಜೆಡಿಎಸ್‌ಗೆ ಹೊಡೆಯಲು ಹಲವಾರು ಬಾಣಗಳು ಈಗ ಕಾಂಗ್ರೆಸ್ ಬತ್ತಳಿಕೆಯಲ್ಲಿವೆ. ರಸ್ತೆಗಳು ಕೆಸರು ಗದ್ದೆಗಳಂತಾಗಿದ್ದಾಗ ಕಾಂಗ್ರೆಸ್‌ನವರು ಅಲ್ಲಿ ನಾಟಿ ಮಾಡಿ ಪ್ರತಿಭಟಿಸಿದ್ದು ಇನ್ನೂ ಜನರಲ್ಲಿ ಅಚ್ಚಳಿಯದಂತೆ ಉಳಿದಿರುವುದು ಈ ಚುನಾವಣೆಯ ಮೇಲೂ ಪರಿಣಾಮ ಬೀರಲಿದೆ. ಒಟ್ಟಾರೆಯಾಗಿ ನೋಡುವುದಾದರೆ ಅರಕಲಗೂಡು ಪಟ್ಟಣ ಪಂಚಾಯತಿ ಕಾಂಗ್ರೆಸ್ ಪಾಲಾಗುವ ನಿರೀಕ್ಷೆಯೇ ಹೆಚ್ಚಿದೆ. ■

ಬಿಜೆಪಿಗೆ ಓಟು ಸಾವಿರ್ರೂಪಾಯ್ ನೋಟು!

ಶಿವಕುಮಾರ್ ಬಂಡಾಯ ಬಿಜೆಪಿ ಅಭ್ಯರ್ಥಿಯಾಗಿ ಸೊಸೈಟಿ ಕೇರಿಗೆ ನಾಮಪತ್ರ ಸಲ್ಲಿಸಿಬಿಟ್ಟರು. ಬಹುಶಃ ಹಿಂದೆ ತಾಲ್ಲೂಕ್ ಬಿಜೆಪಿ ಅಧ್ಯಕ್ಷರೂ ಆಗಿದ್ದ ಶಿವಕುಮಾರ್ ಕಣಕ್ಕಿಳಿದಿದ್ದೇ ಆಗಿದ್ದರೆ ಶಿಕಾರಿಪುರ ಪುರಸಭೆಯ ಮಟ್ಟಿಗೆ ಬಿಜೆಪಿ ನಾಮಾವಶೇಷವಾಗುತ್ತಿತ್ತು, ಅದು ಯಡ್ಡಿಗೂ ಚೆನ್ನಾಗಿ ಗೊತ್ತು, ನಾಮಪತ್ರ ಹಿಂಪಡೆಯುವ ಕೊನೇಗಳಿಗೆಯ ತನಕ ಯಡ್ಡಿ ವಿರುದ್ಧ ಬಂಡಾಯ ಬಿಜೆಪಿ ಅಭ್ಯರ್ಥಿಯಾಗಿಯೇ ತೊಡೆತಟ್ಟಿಕೊಂಡಿದ್ದ ಶಿವಕುಮಾರ್ ಕೊನೇ ಗಳಿಗೆಯಲ್ಲಿ ಶರಣಾಗಿಬಿಟ್ಟರು.

ಒಂದು ಮೂಲದ ಪ್ರಕಾರ ಅದು 25 ಲಕ್ಷ ಡೀಲಾಗಿತ್ತು!

ಸದ್ಯ ಬಂಗಾರಪ್ಪನವರ ಸಮಾಜವಾದಿ ಪಾರ್ಟಿ ಮತ್ತು ಕಾಂಗ್ರೆಸ್ ಒಟ್ಟಾಗಿಯೇ ಯಡ್ಡಿ ವಿರುದ್ಧ ಅಖಾಡಕ್ಕಿಳಿದಿವೆ ಯಾದರೂ ಅಂಥ ಹುಮ್ಮಸ್ಸಿಲ್ಲ, ಜೆಡಿಎಸ್ ಕಾಟಾಚಾರ ಕಷ್ಟೇ ಒಂದು ಡಜನ್ ಅಭ್ಯರ್ಥಿಗಳನ್ನು ಹಾಕಿದೆ. ಸಮಾಜವಾದಿ ಪಕ್ಷದಿಂದ ಹತ್ತು ಮಂದಿ, ಕಾಂಗ್ರೆಸ್ಸಿನಿಂದ 13 ಮಂದಿ ಅಭ್ಯರ್ಥಿಗಳನ್ನು ನಿಲ್ಲಿಸಿದ್ದು, ಯಡ್ಡಿ ಮಗನ ರೊಕ್ಕ ಮತ್ತು ಹೆಂಡದ ಪ್ರವಾಹದ ಮುಂದೆ ಯಾವುದೂ ಲೆಕ್ಕಕ್ಕೆ ಬರುತ್ತಿಲ್ಲ, ಕಾಂಗ್ರೆಸ್‌ಗೆ ಉಳಿದವನೇ ನಾಯಕನಂತಿದ್ದ ನಗರದ ಮಹದೇವಪ್ಪ ಆಕ್ಸಿಡೆಂಟಾಗೀದಾಗಿ ಆಸ್ಪತ್ರೆಯಲ್ಲಿ ಮಲಗಿದ್ದರೆ, ಶಿಕಾರಿಪುರದ ಕಾಂಗ್ರೆಸ್ ಅಧ್ಯಕ್ಷ ಮಹಾಲಿಂಗಪ್ಪನಿಗೆ ವಯಸ್ಸಾಗಿದೆ. ಇಂಥ ನಿಷ್ಪ್ರಯೋಜಕ



ಕಾಂಗ್ರೆಸ್ ನಾಯಕರಿಗೆ ಕನಿಷ್ಠ ವಿವೇಕವೇನಾದರೂ ಇದ್ದಿದ್ದರೆ ಹೋರಾಟಗಾರ್ತಿ ವಿಜಯಲಕ್ಷ್ಮಿ ಕಂಚುಗಾರರನ್ನು ಬೆಂಬಲಿಸಬೇಕಿತ್ತು. ವಿಜಯಲಕ್ಷ್ಮಿ ಎಲ್ಲಿ ತಮ್ಮನ್ನು ಮೀರಿಸಿ ಬೆಳೆದುಬಿಡುತ್ತಾರೋ ಎಂಬ ಹೊಟ್ಟೆಕಿಚ್ಚು, ಇನ್ನು ಕಾಂಗ್ರೆಸ್ ಉದ್ಧಾರವಾಗಬೇಕೆಂದರೆ ಹೇಗೆ? ಸದ್ಯ ಕಾಗೋಡು ತಿಮ್ಮಪ್ಪನನ್ನೇ ಶಿಕಾರಿಪುರದ ಉಸ್ತುವಾರಿಗೆ ಕೆಪಿಸಿಸಿ ಬಿಟ್ಟಿದೆ. ತನ್ನ ಸ್ವಂತ ಕ್ಷೇತ್ರ ಸಾಗರವನ್ನೇ ಸಂಭಾಳಿಸಲಾಗದ ಕಾಗೋಡು ಇನ್ನು ಶಿಕಾರಿಪುರಕ್ಕೆ ಬಂದು ಏನು ಮಾಡಬಲ್ಲ?

ಸದ್ಯದ ಪರಿಸ್ಥಿತಿಯೇ ಮುಂದುವರಿದರೆ ಶಿಕಾರಿಪುರದಲ್ಲಿ 18 ರಿಂದ 20 ವಾರ್ಡುಗಳು ಬಿಜೆಪಿ ಕೈವಶವಾಗಲಿದೆ. ಆದರೆ ಯಡ್ಡಿಗೆ 23 ಕ್ಕೆ ಇಪ್ಪತ್ಮೂರೂ ಸೀಟುಗಳನ್ನು ಗೆಲ್ಲುವ ದುರಾಸೆ. ಅದಕ್ಕೆ ಒಂದು ಓಟಿಗೆ ಸಾವಿರ ರೂಪಾಯಿ ನೋಟು ಎಂಬ ರಹಸ್ಯ ಕಾರಸ್ಥಾನಕ್ಕೆ ಮಗನನ್ನು ಛೂ ಬಿಟ್ಟಿದ್ದಾರೆ. ನೂರು ರೂಪಾಯಿ ನೋಟನ್ನೂ ನೋಡದ ಶಿಕಾರಿಪುರದ ಬಡಮತದಾರರ ಕೈಯಲ್ಲಿ ಸದ್ಯ ಸಾವಿರ್ರೂಪಾಯಿ ನೋಟು ಥಳಗುಟ್ಟುತ್ತಿದೆ. ಚುನಾವಣೆಗಿನ್ನೂ ಒಂದೆರಡು ದಿನ ಬಾಕಿ ಇರುವಂತೆ ಲೋಡುಗಟ್ಟಲೇ ಬ್ರಾಂದಿ-ರಮ್ಮು ವಿತರಿಸಲು ಯಡ್ಡಿ ಗ್ಯಾಂಗ್ ಸಜ್ಜಾಗಿದೆ. ಶಿಕಾರಿಪುರದ ಚೂರಿ ಮಂಜುನಾಥ ಮತ್ತು ಗಿರೀಶ ಎಂಬಿಬ್ಬರು ಥರ್ಡ್ ಖದೀಮರನ್ನು ಈಗಾಗಲೇ ಪೊಲೀಸರು ಬಂಧಿಸಿ ಲೋಡುಗಟ್ಟಲೇ ನಕಲಿ ಮದ್ಯವನ್ನು ಜಪ್ತಿ ಮಾಡುತ್ತಾರೆಂದರೆ, ಅದು ಯಡ್ಡಿ ಸೃಷ್ಟಿಸಿದ ರಾಮರಾಜ್ಯವೋ ಅಥವಾ ರಾವಣ ರಾಜ್ಯವೋ? ■

ನನ್ನನ್ನು ನಾಜೋಕಯ್ಯ ಎಂದವನ ತಲೆ ಸಮವುಂಟಾ

ಥೂತ್ತೇರಿ — ಯಾಹೂ

ಬಹಳ ದಿನಗಳ ನಂತರ ಬಾಯಿಬಿಟ್ಟಿರುವ ಜನಾರ್ದನ ಪೂಜಾರಿಯವರನ್ನು ಮಾತನಾಡಿಸಬೇಕೆನ್ನಿಸಿತಲ್ಲ, ಕೂಡಲೇ ಫೋನ್ ಮಾಡಲಾಗಿ ಸಿಕ್ಕೇಬಿಟ್ಟರು.

"ಹಲೋ ಸಾರ್, ಜನಾರ್ದನ ಪೂಜಾರ್ರ?"

"ಹೌದು, ನೀವು ಯಾರು?"

"ನಾನು ಯಾಹೂ ಸಾರ್, ಪತ್ರಕರ್ತ."

"ಬಹಳ ಸಮಯ ಆಯ್ತಲ್ಲ?"

"ಹೌದು ಸಾರ್, ಸಿಕ್ಕಲೇಯಿಲ್ಲ ನೀವು."

"ಸಿಕ್ಕಲೇಯಿಲ್ಲ ಅಂತ ನೀವು ಹೇಳುವುದಾದರೆ ನೀವು ಕಂಡಬಟ್ಟೆ ಹುಡುಕಿದ್ದು ನಾನು ತಪ್ಪಿಸಿಕೊಂಡು ತಿರುಗಿದ್ದು ಅಂತ ಆಗ್ತದೆ ಅಲ್ಲವ?"

"ಸಾರಿ ಸಾರ್. ಈಚೆಗೆ ನಮ್ಮ ಭೇಟಿ ಆಗಲಿಲ್ಲ, ಚೆನ್ನಾಗಿದ್ದಿರಾ ಸಾರ್?"

"ನನಗೆಂತ ಆಗಿದ್ದು ನಾನು ಯಾವಾಗಲೂ ಚಂದ ಇದ್ದೇನೆ."

"ರೇವಣ್ಣ ನಿಮ್ಮನ್ನ ಟೀಕೆ ಮಾಡಿದಾನಲ್ಲ ಸಾರ್?"

"ಯಾವ ರೇವಣ್ಣ?"

"ದೇವೇಗೌಡರ ಮಗ."

"ಹಾಗೆ ಹೇಳಿ ಮತ್ತೆ ದೇವೇಗೌಡರ ಮಗ ಅಂತ ಹೇಳಿದರೆ ಮಾತ್ರ ಗೊತ್ತಾಗುವಂತಹ ಜನ ಅದು."

"ಹಾಗಂತಿರ?"

"ಹೌದು ಮತ್ತೆ. ಆತನ ಬುದ್ಧಿಮಟ್ಟವನ್ನು ನಾನು ಪರೀಕ್ಷೆ ಮಾಡಿದ್ದೇನೆ. ಅಂತಹ ವ್ಯಕ್ತಿ ಈ ರಾಜ್ಯದಲ್ಲಿ ದೊಡ್ಡ ದೊಡ್ಡ ಖಾತೆ ಹೊಂದಿರುವ ಮಂತ್ರಿ ಅಂತ ಹೇಳುವುದಾದರೆ ಅದು ದೇವೇಗೌಡರಿಂದ ಪ್ರಾಪ್ತಿಯಾದ ಸವಲತ್ತೇ ಹೊರತು ಅವರಿಗೆ ಆ ಯೋಗ್ಯತೆ ಇದೆಯಾ?"

"ಅವುರು ನಿಮ್ಮನ್ನ ನಾಜೋಕಯ್ಯ ಅಂತ ಕರದವ್ರುರೆ?"

"ನನ್ನನ್ನು ನಾಜೋಕಯ್ಯ ಅಂತ ಹೇಳಿದವನ ತಲೆ ಸಮ ಉಂಟಾ? ಉಂಟು ಎಂದಾದರೆ ಅವನನ್ನು ಮೆಚ್ಚಲೇಬೇಕು."



"ನಿಜ ಸಾರ್. ನಾಜೋಕಯ್ಯ ಮಣಿಮಂಜರಿ ಗುಡಿ ಪೂಜಾರಿ. ತಾವೂ ಕೂಡ ಕಾಂಗ್ರೆ ಗುಡಿ ಪೂಜಾರಿ. ಈ ಅರ್ಥದಲ್ಲಿ ಆತ ಮಾತನಾಡಿರಬಹುದು."

"ಯಂತ ಹೇಳುವುದು ನೀವು? ಆತನ ತಲೆಗೆ ಇವೆಲ್ಲಾ ಹೊಳೆಯುವುದಾದರೆ ಹರದನಹಳ್ಳಿ ತೋಟದೊಳಗೆ ನಿರ್ಜನ ಜಾಗದಲ್ಲಿ ಕಾಲೇಜು ಪ್ರಾರಂಭಿಸುತ್ತಿದ್ದನಾ?"

"ಅವೆಲ್ಲಾ ಅಭಿವೃದ್ಧಿ ಕೆಲಸ ಅಲ್ಲವ?"

"ಎಂಥ ಅಭಿವೃದ್ಧಿ? ಆತನ ಬಗ್ಗೆ ಒಂದು ಕತೆಯುಂಟು ಗೊತ್ತಾ?"

"ಇಲ್ಲ, ಹೇಳಿ."

"ಹೊಳೆನರಸೀಪುರದ ಹೊಳೆ ದಂಡೆಯಲ್ಲಿ ಮೀನು ಬಿದ್ದಿತ್ತು, ಅದನ್ನು ತೆಗೆದು ನೀರಿಗೆ ಹಾಕುವುದು ಬಿಟ್ಟು ಮನೆಗೆ ತಂದು ಫ್ಯಾನ್ ಕೆಳಗೆ ಇಟ್ಟು, ಗಾಳಿ ಹಾಕಿ, ಕಾಫಿ ಮಾಡಿ ಕುಡಿಸಿತ್ತಂತೆ ಈ ಜನ."

"ನಿಜನಾ ಸಾರ್?"

"ಅವರ ಬುದ್ಧಿಮಟ್ಟಕ್ಕೆ ಅನ್ವಯಿಸುವ ಕತೆ ಇದು."

"ಹಾಗಿದ್ದರೆ ರೇವಣ್ಣನ ತಲೆಲಿ ಏನೂ ಇಲ್ಲವ?"

"ತಲೆ ತುಂಬ ಕೂದಲುಂಟು ಅಷ್ಟೆ. ನಾನು ಮಾಸ್ಟರ್ ಹಿರಣ್ಣಯ್ಯನವರ ನಾಟಕದ ಕಂಪನಿಗೆ ಈ ಅಪ್ಪ ಮಕ್ಕಳ ನಾಟಕ ಹೋಲಿಸಿ ಮಾತನಾಡಿದರೆ, ಈತ ಗುಬ್ಬಿ ಕಂಪನಿ ಅಂತ ತಿಳಿದುಕೊಂಡಿದ್ದಾನೆ. ಈ ಎರಡೂ ಕಂಪನಿಗೆ ವ್ಯತ್ಯಾಸವೇ ಗೊತ್ತಿಲ್ಲದ ಜನ ಅದು."

"ಹಾಗಾದರೆ ಮಾಸ್ಟರ್ ಹಿರಣ್ಣಯ್ಯನ ಕಂಪನಿಗೆ ಗೌಡರ ಕಂಪನಿ ಹೋಲಿಸಿದ್ರಾ?"

"ಗೌಡರ ಕಂಪನಿಯನ್ನು ಯಾರಿಗಾದರೂ ಹೋಲಿಸುವುದು ಸಾಧ್ಯವಾ? ನಾನು ಹೇಳಿದ್ದು ಹಿರಣ್ಣಯ್ಯ ಮಾಡುವ ನಾಟಕವನ್ನು ಮೀರಿ ಗೌಡರು ನಾಟಕ ಮಾಡುವುದುಂಟು. ಆದರೆ ಒಂದು ವ್ಯತ್ಯಾಸವುಂಟು. ನಾವು ಹಿರಣ್ಣಯ್ಯನ ನಾಟಕವನ್ನು ದುಡ್ಡು ಕೊಟ್ಟು ನೋಡಿದ್ದು ಆದರೆ ಗೌಡರ ನಾಟಕವನ್ನು ಪುಕ್ಕಟೆ ನೋಡ್ತವುಂಟು. ಇನ್ನೂ ಒಂದು ಮಜ ಗೊತ್ತುಂಟ?"

"ಇಲ್ಲ, ಹೇಳಿ."

"ಹಿರಣ್ಣಯ್ಯನೂ ತನ್ನ ಮಕ್ಕಳಿಂದ ನಾಟಕ ಮಾಡಿಸುವುದುಂಟು. ಹಾಗೇ ನಮ್ಮ ಗೌಡರು ತಮ್ಮ ಮಕ್ಕಳಿಗೆ ತಾಲೀಮು ಕೊಡ್ತವುಂಟು. ಹಿರಣ್ಣಯ್ಯ ನಾಟಕ ಆಡಿ ಆಸ್ತಿ ಮಾಡಿದ್ದುಂಟು. ಹಾಗೇ ಗೌಡರು ರಾಜಕಾರಣದ ನಾಟಕ ಮಾಡಿ ಕಂಡಬಟ್ಟೆ ಹಣ ಆಸ್ತಿ ಮಾಡಿದ್ದುಂಟು. ಇನ್ನೊಮ್ಮೆ ಫೋನ್ ಮಾಡಿ ಮಾತಾಡುವ."

"ಥೂತ್ತೇರಿ!!" ■



ಹಿಂದೂ ಪೊಲೀಸರ ತನಿಖಾ ವೈಖರಿ ಹಾಗೂ ನಾಪತ್ತೆಯಾದ ಬಸ್

ಬಿಜೆಪಿ ಮುಖ್ಯಮಂತ್ರಿ ಬರುವ ಮೊದಲೇ ರಾಜ್ಯ ಪೊಲೀಸರು 'ಹಿಂದೂ ಪೊಲೀಸ್' ಆಗಿ ರೂಪಾಂತರಗೊಳ್ಳಲು ತಯಾರಾದಂತೆ ಕಾಣುತ್ತಿದೆ.

ಬೊಮ್ಮನಹಳ್ಳಿ ಬಸ್ ಬೆಂಕಿ ಪ್ರಕರಣವನ್ನು ಪೊಲೀಸರು ನಿರ್ವಹಿಸುತ್ತಿರುವ ವಿಧಾನವೇ ಇದಕ್ಕೆ ಸಾಕ್ಷಿಯಾಗಿದೆ.

ಈಗ ಅರೆಸ್ಟ್ ಆಗಿರುವ ಬಿಜೆಪಿ ಕಾರ್ಯಕರ್ತರ ವಿರುದ್ಧ ಮಡಿವಾಳ ಪೊಲೀಸರು ಹಾಕಿರುವ ಕೇಸುಗಳು ಹಾಗೂ IPC ಸೆಕ್ಷನ್‌ಗಳು ಏನೇನಿವೆ ಗೊತ್ತೆ?

463- ಇದು ಫೋರ್ಜರಿಗೆ ಸಂಬಂಧಿಸಿದ್ದು.

427- ಕಿಡಿಗೇಡಿ ಕೃತ್ಯ ಹಾಗೂ 50 ರೂಪಾಯಿವರೆಗಿನ ಮತ್ತು ಹೆಚ್ಚಿನ ನಷ್ಟ ಉಂಟು ಮಾಡುವ ಕೃತ್ಯ.

437- ಕಿಡಿಗೇಡಿ ಕೃತ್ಯ ಹಾಗೂ 20 ಟನ್‌ಗೂ ಹೆಚ್ಚಿನ ವಾಹನ ನಾಶ

304- Culpable Homicide-ಅಂದರೆ ಸಾವು ಸಂಭವಿಸಿದ್ದರೂ ಸಹ ಹತ್ಯೆ ಮಾಡುವ ಉದ್ದೇಶದಿಂದ ನಡೆದ ಕೃತ್ಯವಲ್ಲ ಎಂದು.



ಇನ್ಸ್‌ಪೆಕ್ಟರ್ ಕಾಂತರಾಜು

RSS ಒಂದು ಮಹಾನ್ ದೇಶಭಕ್ತರ ಸಂಘಟನೆ ಎಂದು ದೇವೇಗೌಡನೇ ತಾರೀಫು ಮಾಡುತ್ತಿರುವಾಗ ಪೊಲೀಸರು ಅವರ ಮೇಲೆ ಗಟ್ಟಿ ಕೇಸುಗಳನ್ನು ಹಾಕಲು ಧೈರ್ಯ ಮಾಡುತ್ತಾರೆಯೇ ಹೇಳಿ?

ನಮ್ಮ 'ಹಿಂದೂ ಪೊಲೀಸರು' ಎಂಥ ನ್ಯಾಯಪಕ್ಷಪಾತಿಗಳೆನ್ನಲು ಇಂಥದ್ದೇ ಇನ್ನೊಂದು ಬಸ್ ಬೆಂಕಿ ಪ್ರಕರಣವನ್ನು ನಿಮಗೆ ನೆನಪಿಸಬಹುದು.

1998ರಲ್ಲಿ ಬಿಪಿಎಲ್ ಕಾರ್ಮಿಕರು ಮುಷ್ಕರ ನಡೆಸುತ್ತಿದ್ದಾಗ ಕಾರ್ಖಾನೆ ಬಸ್‌ಗೆ ಬೆಂಕಿ ಬಿದ್ದು ಓರ್ವ ಮಹಿಳೆ ಮೃತಪಟ್ಟಿದ್ದರು. ಆಗ ಕಾರ್ಮಿಕ ನಾಯಕರನ್ನು ಬಂಧಿಸಿದ ಪೊಲೀಸರು ಅವರ ಮೇಲೆ ಕೊಲೆ ಕೇಸ್ ಹಾಕಿದ್ದರು. ಈ ದುರ್ಘಟನೆ ನಡೆದು 10 ವರ್ಷಗಳಾಗಿವೆ. ಇವತ್ತಿಗೂ ಆರೋಪಿಗಳೊಬ್ಬರಿಗೂ ಜಾಮೀನು ಸಹ ಸಿಗದಂತೆ ಮಾಡಲಾಗಿದೆ. ಆದರೆ ಬೊಮ್ಮನಹಳ್ಳಿ ಬಸ್ ಬೆಂಕಿ ದುರಂತದಲ್ಲಿ ಇಬ್ಬರು ಸತ್ತಿದ್ದರೂ, ಪೊಲೀಸರಿಗೆ ಇದು ಕೇವಲ ಕಿಡಿಗೇಡಿ ಕೃತ್ಯ ಅಷ್ಟೇ ಅನ್ನಿಸುತ್ತದೆ.

ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಹೇಗಿರಬಹುದೆಂಬುದಕ್ಕೆ ಇದೇ ಸಾಕ್ಷಿ.

ಸುಟ್ಟ ಬಸ್ ನಾಪತ್ತೆ

TN 01 4846 ಸಂಖ್ಯೆಯ ಸುಟ್ಟ ಬಸ್ ಈಗ ಬೆಂಗಳೂರಿನಲ್ಲೆಲ್ಲೂ ಇಲ್ಲ ಅಂದರೆ ನೀವು ನಂಬುತ್ತೀರಾ?

ಹೌದು ಇದು ನಿಜ.

ಮಡಿವಾಳ ಪೊಲೀಸರು ಅರ್ಜೆಂಟಾಗಿ ಕೇವಲ ಎರಡೇ ದಿನದಲ್ಲಿ ಈ ಬಸ್ ಅನ್ನು ತಮಿಳುನಾಡಿನ ಹೊಸೂರು ಡಿಪೋಗೆ ಸಾಗಿಸಿ ಕೈತೊಳೆದುಕೊಂಡು ಬಿಟ್ಟಿದ್ದಾರೆ. ಹತ್ಯೆ, ಬೆಂಕಿಯಂಥ ವಿಧ್ವಂಸಕ ಕೃತ್ಯಗಳು ನಡೆದಾಗ ಬಳಸಿದ ವಸ್ತುಗಳು, ಬಲಿಯಾದ ವಾಹನಗಳ ವಿವರವಾದ ತನಿಖೆಯಾಗಬೇಕು. ಫೊರೆನ್ಸಿಕ್ ತಜ್ಞರಿಂದ ಪರಿಶೀಲನೆಯಾಗಬೇಕು ಎಂಬುದು ನಿಯಮ.

ಗೋಧ್ರಾ ರೈಲು ಬೆಂಕಿ ಪ್ರಕರಣದಲ್ಲಂತೂ ಆ ರೈಲು ಬೋಗಿಯೇ ಹಲವೆಂಟು ಸಾಕ್ಷಿಗಳನ್ನು ಉಳಿಸಿತ್ತು, ಹಾಗಿರುವಾಗ ಘಟನೆ ನಡೆದ ಕೇವಲ 48 ಗಂಟೆಗಳಲ್ಲೇ ಬಸ್ ಅನ್ನು ನಾಪತ್ತೆ ಮಾಡುವ ಅಗತ್ಯವೇನಿತ್ತು?


ನೀವೊಮ್ಮೆ ಮಡಿವಾಳ ಪೊಲೀಸ್ ಠಾಣೆಗೆ ಹೋಗಿ ನೋಡಿ, ಎಷ್ಟೋ ವರ್ಷಗಳ ಹಿಂದೆ ವಶಪಡಿಸಿಕೊಂಡಿರುವ ಬೈಕು, ಕಾರುಗಳು ಅಲ್ಲೇ ಬಿದ್ದಿವೆ. ಆದರೆ ಈ ಹತ್ಯಾಕಾಂಡದ ಬಸ್ ಹೆಚ್ಚು ದಿನ ಇರಕೂಡದೆಂದು ನಿರ್ಧರಿಸಿದ್ದು ಯಾರು ಮತ್ತು ಯಾಕೆ?

ಹಿಂಸಾವಾದಿ ಯಡಿಯೂರಪ್ಪನ ಪಟ್ಟಾಭಿಷೇಕಕ್ಕೆ ಪೂರ್ವಭಾವಿ ತಯಾರಿ ಎಂಬಂತೆ ಚೆಡ್ಡಿ ಟೆರರಿಸ್ಟ್‌ಗಳು ಬೆಂಗಳೂರಿನಲ್ಲಿ ಇಬ್ಬರು ಅಮಾಯಕರನ್ನು ಸುಟ್ಟು ಕೊಂದು ಹಾಕಿದ್ದಾರೆ.

ಸೆಪ್ಟೆಂಬರ್ 18ರ ರಾತ್ರಿ ಹೊಸೂರು ರಸ್ತೆಯ ಬೊಮ್ಮನಹಳ್ಳಿಯಲ್ಲಿ ತಮಿಳುನಾಡಿನ ಬಸ್‌ಗೆ ಬೆಂಕಿ ಬಿತ್ತು. ಈ ನೀಚ ಕೆಲಸ ಮಾಡಿದವರ್‍ಯಾರೆಂಬ ತನಿಖೆಯೂ ಶುರುವಾಗಿರಲಿಲ್ಲ, ಆಗಲೇ ಸೆಪ್ಟೆಂಬರ್ 19 ರ ಬೆಳಿಗ್ಗೆ ತನ್ನ ಮನೆಯಲ್ಲೇ ಅರ್ಜೆಂಟಾಗಿ ಪತ್ರಿಕಾಗೋಷ್ಠಿ ನಡೆಸಿದ ಬಿಜೆಪಿ ಉಪಮುಖ್ಯಮಂತ್ರಿ ಯಡ್ಡಿ ಈ ಘಟನೆಯಲ್ಲಿ ಹಿಂದೂ ಸಂಘಟನೆಗಳ ಕೈವಾಡ ಇಲ್ಲ ಎಂದು ಕ್ಯಾರೆಕ್ಟರ್ ಸರ್ಟಿಫಿಕೇಟ್ ನೀಡಿದ್ದರು.



ಒರಿಸ್ಸಾದಲ್ಲಿ ಕ್ರೈಸ್ತ ಪಾದ್ರಿ ಗ್ರಹಾಂ ಸ್ಟೈನ್ಸ್‌ರನ್ನು ಬೆಂಕಿ ಹಚ್ಚಿ ಕೊಂದ ಕೃತ್ಯಕ್ಕೆ ಸಮನಾಗಿರುವ ಈ ಘಟನೆಯ ಅಸಲಿ ಸೂತ್ರದಾರರು ಯಾರು ಹಾಗೂ ನಿಜಸಂಗತಿ ಏನೆಂಬುದನ್ನು 'ಲಂಕೇಶ್' ಪತ್ತೆ ಹಚ್ಚಿದೆ. ಪೊಲೀಸರು ಮುಚ್ಚಿಟ್ಟಿರುವ ಹಾಗೂ ದೇವೇಗೌಡ-ಕುಮಾರಸ್ವಾಮಿಗಾಗಲಿ ಬೇಕಿರದ ಭಯಾನಕ ವಾಸ್ತವ ಸಂಗತಿಗಳನ್ನು ಇಲ್ಲಿ ವಿವರಿಸಿದೆ.



ಬೊಮ್ಮನಹಳ್ಳಿಯ RSS-ಬಿಜೆಪಿ ಲೀಡರ್‌ಗಳು ಸೇರಿಕೊಂಡು ನಡೆಸಿರುವ ಈ ಟೆರರಿಸ್ಟ್ ಕೃತ್ಯದ ಅಸಲಿ ಪ್ಲಾನ್ ನಡೆದಿದ್ದು ಚಾಮರಾಜಪೇಟೆಯ ಆರ್‌ಎಸ್‌ಎಸ್ ರಹಸ್ಯತಾಣದಲ್ಲಿ. ಅದರ ರೂವಾರಿ ಕರಾವಳಿಯ ಗಣೇಶ್ ಉಡುಪನನ್ನು ಹಿಡಿಯುವ ಇರಾದೆ ಸಿಟಿ ಪೊಲೀಸರಲ್ಲಿ ಕಂಡುಬರುತ್ತಿಲ್ಲ. ಅಷ್ಟೇ ಅಲ್ಲ, ಮಡಿವಾಳದ RSS ಮುಖಂಡ ಜನಾರ್ದನ ಎಂಬುವನನ್ನು ಬಂಧಿಸಿದ್ದ ಪೊಲೀಸರು ನಂತರ ಬಿಜೆಪಿಗಳ ಒತ್ತಡಕ್ಕೆ ಮಣಿದು ಈಗ ಬಿಟ್ಟು ಕಳಿಸಿದ್ದಾರೆ. ಇಷ್ಟಾಗಿಯೂ ಬಸ್‌ಗೆ ಬೆಂಕಿ ಹಚ್ಚಿದ ಘಟನೆಯಲ್ಲಿ ಅರೆಸ್ಟ್ ಆಗಿರುವ 11 ಮಂದಿ ಹಾಗೂ ಸೆಲ್ವಿ ಮನೆ ಮೇಲೆ ಪೆಟ್ರೋಲ್ ಬಾಂಬ್ ಹಾಕಿ ಅರೆಸ್ಟ್ ಆಗಿರುವ ಮೂವರು ಸೇರಿದಂತೆ ಒಟ್ಟು 14 ಮಂದಿ ಬಂಧಿತರಲ್ಲಿ 6 ಮಂದಿ ಸಂಘ ಪರಿವಾರದ ಭಯೋತ್ಪಾದಕರೆಂಬುದಕ್ಕೆ ಸಾಕ್ಷ್ಯಗಳು ದೊರೆತಿವೆ.

ಆರೋಪಿ ನಂಬರ್ ಒನ್ ಹರೀಶ್ ಬೊಮ್ಮನಹಳ್ಳಿಯ RSS ಸಂಘಟಕ. ಇನ್ನೊಬ್ಬ ಆರೋಪಿ ಅನಿಲ್ ಕುಮಾರ್ S/o ಜಯಪ್ಪ ರೆಡ್ಡಿ ಬಿಜೆಪಿ ಕಾರ್ಯಕರ್ತ. ಇವನ ಅಣ್ಣ ಚಂದ್ರಶೇಖರ ರೆಡ್ಡಿ ಸ್ಥಳೀಯ ಬಿಜೆಪಿ ಲೀಡರ್ ಆಗಿದ್ದು ಈ ಹಿಂದೆ ಬೊಮ್ಮನಹಳ್ಳಿ ನಗರ ಸಭೆಯ ಸದಸ್ಯನೂ ಆಗಿದ್ದ. ಅಷ್ಟೇ ಅಲ್ಲ ಅನಿಲನ ಅತ್ತಿಗೆ ಅಂದರೆ ಚಂದ್ರಶೇಖರನ ಹೆಂಡತಿ ಕವಿತಾ ಸಹ ಬಿಜೆಪಿಯವಳೆ. ಇನ್ನಿಬ್ಬರು ಆರೋಪಿಗಳಾದ ವಿಜಯಕುಮಾರ್ S/o ದಾಮೋದರ ಹಾಗೂ ಬಸವರಾಜ ಎಂಬುವರೂ ಬೊಮ್ಮನಹಳ್ಳಿಯ RSS ಕಾರ್ಯಕರ್ತರಾಗಿದ್ದು ಮೊನ್ನಿನ ಬಸ್ ಬೆಂಕಿ ಪ್ರಕರಣದಲ್ಲಿ ಭಾಗಿಯಾದವರೇ ಆಗಿದ್ದಾರೆ. ಇವರಲ್ಲದೆ ಜೆಪಿನಗರದ ರಾಜೇಶ, ಮಾಗಡಿ ರಸ್ತೆಯ ವಕೀಲ ರಂಗಸ್ವಾಮಿ ಕೂಡ RSSನ ಟೆರರಿಸ್ಟ್ ಲಿಂಕುಗಳನ್ನು ಹೊಂದಿದ್ದವರೇ ಆಗಿದ್ದಾರೆ.

ಯಡಿಯೂರಪ್ಪ ಹೊಟ್ಟೆಗೆ ಅನ್ನ ತಿನ್ನುವವನೇ ಆಗಿದ್ದಲ್ಲಿ ನಿಜಸಂಗತಿ ಏನೆಂದು ಈಗ ಮಾತನಾಡಬೇಕಲ್ಲವೆ?


ಮೊಬೈಲ್ 9916449032 ನಲ್ಲಿದೆ ಸ್ಕೆಚ್

ಸೆಪ್ಟೆಂಬರ್ 18ರ ರಾತ್ರಿ ನಡೆದ ನಲವತ್ತರ ಹರೆಯದ ಕುಪ್ಪುಸ್ವಾಮಿ ಹಾಗೂ ಇನ್ನೊಬ್ಬ ಗುರುತು ಸಿಗದ ವ್ಯಕ್ತಿಯ ಹತ್ಯೆಯ ಘಟನೆಯನ್ನು ಒಂದು ಮಾಮೂಲಿ ಬಸ್ ಆಕ್ಸಿಡೆಂಟ್ ಪ್ರಕರಣ ಎಂಬಂತೆ ಸರ್ಕಾರ ಹಾಗೂ ಪೊಲೀಸರು ಬಿಂಬಿಸಲು ಯತ್ನಿಸುತ್ತಿದ್ದಾರೆ. ಮಡಿವಾಳ ಪೊಲೀಸರ ತನಿಖಾ ವಿಧಾನವೇ ಇದಕ್ಕೆ ಸಾಕ್ಷಿಯಾಗಿದೆ. ಬಂಧಿತ ಚೆಡ್ಡಿ ಭಯೋತ್ಪಾದಕರಾದ ಹರೀಶ, ವಿಜಯಕುಮಾರ, ಅನಿಲ್‌ಕುಮಾರ್ ಹಾಗೂ ಬಸವರಾಜ ಸ್ಥಳೀಯ ಬಿಜೆಪಿ-ಆರ್‌ಎಸ್‌ಎಸ್ ಲೀಡರ್‌ಗಳೆಂಬ ವಿಷಯವನ್ನು ಪೊಲೀಸರು ಈಗಲೂ ಮುಚ್ಚಿಟ್ಟಿದ್ದಾರೆ. ಅಷ್ಟೇ ಅಲ್ಲ, ಸಂಘ ಪರಿವಾರದವರನ್ನು ರಕ್ಷಿಸುವ ದುರುದ್ದೇಶದಿಂದ ಅದೇ ಬೊಮ್ಮನಹಳ್ಳಿಯ ಬಹುಜನ ಸಮಾಜ ಪಕ್ಷದ ಐವರು ಕಾರ್ಯಕರ್ತರನ್ನೂ ಈ ಪ್ರಕರಣದಲ್ಲಿ ಸಿಲುಕಿಸಿ ಜೈಲಿಗೆ ಕಳುಹಿಸಿದ್ದಾರೆ. ಬಿ.ಎಂ. ಮಂಜುನಾಥ್, ಪಾಪಣ್ಣ, ಶ್ರೀನಿವಾಸ, ಮಂಜು, ಸಗಾಯ್‌ರಾಜ್ ಎಂಬುವರನ್ನು ಪೊಲೀಸರು ಈ ಕೇಸಿನಲ್ಲಿ ಯಾಕೆ ಸಿಕ್ಕಿಸಿದ್ದಾರೆ ಎಂಬುದು ತನಿಖಾಯೋಗ್ಯ ಸಂಗತಿ.

ಈ ಇಡೀ ಪ್ರಕರಣದಲ್ಲಿ ಪ್ರಮುಖ ಸಾಕ್ಷಿಯಾಗಿ ದಾಖಲೆಯಾಗಬಹುದಾದದ್ದು ಮೊಬೈಲ್ ನಂಬರ್ 9916449032.

ಸ್ಥಳೀಯ ಆರ್‌ಎಸ್‌ಎಸ್ ಲೀಡರ್ ಹರೀಶನ ಮೊಬೈಲ್ ನಂಬರ್ ಇದು!

ರಾಮಸೇತು ಹಾಗೂ ರಾಮನ ಬಗ್ಗೆ ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿ ಗೇಲಿ ಮಾಡುವ ಹೇಳಿಕೆ ನೀಡುತ್ತಿದ್ದಂತೆ ಇತ್ತ ಬೆಂಗಳೂರಿನಲ್ಲಿ ಹಿಂದೂ ಫ್ಯಾಸಿಸ್ಟರು ರಹಸ್ಯ ಸಭೆ ನಡೆಸಿ ಸೆಲ್ವಿ ಮನೆಗೆ ಪೆಟ್ರೋಲ್ ಬಾಂಬ್ ಹಾಕಿ, ಹೊಸೂರು ರಸ್ತೆಯಲ್ಲಿ ಬಸ್‌ಗೆ ಬೆಂಕಿ ಹಾಕಲು ನಿರ್ಧರಿಸಿಕೊಂಡಿದ್ದರು. ಅದರಂತೆ ಗಣೇಶ್ ಉಡುಪ, ವಕೀಲ ರಂಗಸ್ವಾಮಿ ಹಾಗೂ ಜೆಪಿನಗರದ ರಾಜೇಶ ►



ಹಿಂಸಾವಾದಿ ಯಡಿಯೂರಪ್ಪನ ಪಟ್ಟಾಭಿಷೇಕಕ್ಕೆ ಪೂರ್ವಭಾವಿ ತಯಾರಿ ಎಂಬಂತೆ ಚೆಡ್ಡಿ ಟೆರರಿಸ್ಟ್‌ಗಳು ಬೆಂಗಳೂರಿನಲ್ಲಿ ಇಬ್ಬರು ಅಮಾಯಕರನ್ನು ಸುಟ್ಟು ಕೊಂದು ಹಾಕಿದ್ದಾರೆ. ಒರಿಸ್ಸಾದಲ್ಲಿ ಕ್ರೈಸ್ತ ಪಾದ್ರಿ ಗ್ರಹಾಂ ಸ್ಟೈನ್ಸ್‌ರನ್ನು ಬೆಂಕಿ ಹಚ್ಚಿ ಕೊಂದ ಕೃತ್ಯಕ್ಕೆ ಸಮನಾಗಿರುವ ಈ ಘಟನೆಯ ಅಸಲಿ ಸೂತ್ರಧಾರರು ಯಾರು ಹಾಗೂ ನಿಜಸಂಗತಿ ಏನೆಂಬುದನ್ನು 'ಲಂಕೇಶ್' ಪತ್ತೆ ಹಚ್ಚಿದೆ. ಪೊಲೀಸರು ಮುಚ್ಚಿಟ್ಟಿರುವ ಹಾಗೂ ದೇವೇಗೌಡ-ಕುಮಾರಸ್ವಾಮಿಗಾಗ ಬೇಕಿರದ ಭಯಾನಕ ವಾಸ್ತವ ಸಂಗತಿಗಳನ್ನು ಇಲ್ಲಿ ವಿವರಿಸಿದೆ.



ಆರೆಸ್ಸೆಸ್ ಭಯೋತ್ಪಾದಕ ಹರೀಶ



ಕರುಣಾನಿಧಿ ತಲೆಗೆ 1 ಕೋಟಿ ಸುಪಾರಿ!

ಬೆಂಗಳೂರು ವಿಶ್ವಹಿಂದೂ ಪರಿಷತ್ತಿನ ನಾಯಕ ವಿಜಯಕುಮಾರ ರೆಡ್ಡಿ ಮೊನ್ನೆ TV 9 ಚಾನೆಲ್‌ನಲ್ಲಿ ಬಹಿರಂಗವಾಗೇ "ಕರುಣಾನಿಧಿ ತಲೆ ಕತ್ತರಿಸಿ ತಂದು ಕೊಟ್ಟವರಿಗೆ 1 ಕೋಟಿ ರೂಪಾಯಿ ಕೊಡುತ್ತೇನೆ" ಎಂದಿದ್ದಾನೆ.

ಪ್ರಮೋದ್ ಮುತಾಲಿಕ್ ಎಂಬ ಬ್ರಾಹ್ಮಣ ಹಿಂದೂ ಸೇನೆಯ ನಾಯಕ "ಬಸ್‌ಗೆ ಬೆಂಕಿ ಇಟ್ಟವರನ್ನು ಅಭಿನಂದಿಸುತ್ತೇನೆ" ಎಂದು ಘಂಟಾಘೋಷವಾಗೇ ಸಾರಿದ್ದಾನೆ.

ಕರ್ನಾಟಕದಲ್ಲಿ ಕಾನೂನೆಂಬುದೇನಾದರೂ ಇದೆಯಾ? ಇಲ್ಲಿನ ಪೊಲೀಸರು ಏನು ಕತ್ತೆ ಕಾಯುತ್ತಿದ್ದಾರಾ?

ರಾಜ್ಯವೊಂದರ ಮುಖ್ಯಮಂತ್ರಿಯ ತಲೆ ಕತ್ತರಿಸಿ ತಂದರೆ ಬಹುಮಾನ ಕೊಡುತ್ತೇನೆನ್ನುವುದು ಕೊಲೆಗೆ ಸುಪಾರಿ ಕೊಟ್ಟಂತೆ, ಬಸ್ ಸುಟ್ಟು ಇಬ್ಬರನ್ನು ಕೊಂದವರಿಗೆ ಮೆಚ್ಚುಗೆ ವ್ಯಕ್ತಪಡಿಸುವುದೂ ಕೊಲೆ ಸಮರ್ಥಿಸಿದಂತೆ ತಾನೆ?

ಇದು ಗೊತ್ತಿದ್ದೂ ಪೊಲೀಸರೇಕೆ ಸುಮ್ಮನಿದ್ದಾರೆ? ಇದು ಹೀಗೇ ಮುಂದುವರೆದರೆ ಜನ ಪೊಲೀಸರನ್ನು ನಂಬುತ್ತಾರಾ?

ಚೆಡ್ಡಿ ಟೆರರಿಸಂಗೆ ಗೌಡಾ ರಕ್ಷಣೆ

■ ಬಿಳಿದಾಳೆ ಈಶ

ಗೌಡಾಗೂ ಹಿಂದೂ ವೈರಸ್

ದೇವೇಗೌಡ ಹಾಗೂ ಕುಮಾರಸ್ವಾಮಿಗೂ ಹಿಂದೂ ಕೋಮುವಾದದ ವೈರಸ್ ಸೋಂಕು ತಗುಲಿರುವುದು ಈಗ ಖಚಿತಪಟ್ಟಿದೆ.

ಡೋಂಗಿ ಸೆಕ್ಯುಲರ್ ದೇವೇಗೌಡ ಹಣೆಯಲ್ಲಿ ಇತ್ತೀಚೆಗೆ ರೂಪಾಯಗಲದ ಕುಂಕುಮ ಎದ್ದು ಕಾಣುತ್ತಿದೆ. ಬಹುಶಃ ಬೊಮ್ಮನಹಳ್ಳಿ ಬಸ್ ಬೆಂಕಿಯಲ್ಲಿ ಸತ್ತ ಅಮಾಯಕರ ನೆತ್ತರೇ ಈಗ ಗೌಡರ ಹಣೆಯಲ್ಲಿನ ಕೆಂಪು ಕುಂಕುಮವಾಗಿ ಬದಲಾಗಿರಬಹುದು.

ಹಿಂದೂ ಕೋಮುವಾದಿಗಳಿಂದ ಯಾರಿಗೆ ಆಗಲಿ ಕಿಂಚಿತ್ ತೊಂದರೆಯಾದರೂ ಜೆಡಿಎಸ್ ಸುಮ್ಮನಿರುವುದಿಲ್ಲ ಎಂದು ಧಮಕಿ ಹಾಕುವ ದೇವೇಗೌಡ ಹಾಗೂ ಮೀರಾಜುದ್ದೀನ್ ಪಟೇಲ್ ಈ ಹತ್ಯೆಗಳ ಬಗ್ಗೆ ಮಾತೇ ಆಡುತ್ತಿಲ್ಲ. ಅಷ್ಟೇ ಅಲ್ಲ, ಬಂಧಿತ ಹರೀಶ್ ಮತ್ತಿತರರು RSS-BJP ಕಾರ್ಯಕರ್ತರೆಂಬುದು ಈಗ ದೃಢಪಟ್ಟ ಮೇಲೂ ಆ ಮಾಹಿತಿ ಬಹಿರಂಗಪಡಿಸದಂತೆ ಪೊಲೀಸರಿಗೇ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ.

ಈಗ ಗೃಹಖಾತೆ ಇರುವುದು ಜಾತ್ಯತೀತ ದಳದವರ ಕೈಲಿ. ಆದರೆ ಗೃಹ ಸಚಿವ ಎಂ.ಪಿ. ಪ್ರಕಾಶ್ ಮಾತನ್ನು ಯಾರೂ ಕೇಳುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತು. ಆದರೆ ಪೊಲೀಸರು ಏನು ಹೇಳಬೇಕು, ಎಷ್ಟು ಹೇಳಬೇಕೆಂಬ ಆದೇಶ ನೀಡಿದವರ್ಯಾರು?

ಬಿಜೆಪಿಗಳೇ ಈ ಹತ್ಯೆ ನಡೆಸಿದ್ದಾರೆಂದು ಪ್ರಚಾರವಾಗಿಬಿಟ್ಟರೆ ಅಕ್ಟೋಬರ್ ಮೊದಲ ವಾರದಲ್ಲಿ ಅಧಿಕಾರ ಹಸ್ತಾಂತರಕ್ಕೆ ಅಡ್ಡಿಯಾಗಬಹುದೆಂದು ಯೋಚಿಸಿಯೇ ದೇವೇಗೌಡ ಪೊಲೀಸರಿಗೆ ಇಂಥ ಸೂಚನೆ ಕೊಡಿಸಿದರೆಂಬುದು ಈಗೇನೂ ಗುಟ್ಟಾಗಿ ಉಳಿದಿಲ್ಲ.

ಅಷ್ಟೆಲ್ಲಾ ಏಕೆ ಗೌಡರ ಕೋಮುವಾದ ಹೇಗೆ ಕೆಲಸ ಮಾಡುತ್ತಿದೆಯೆಂದರೆ ಕರ್ನಾಟಕದ ಕ್ರೈಸ್ತ ಜನಾಂಗದವರು ಭಜರಂಗದಳದವರ ಹಲ್ಲೆ ದೌರ್ಜನ್ಯ ಖಂಡಿಸಿ ಸೆಪ್ಟೆಂಬರ್ 22 ರಂದು ಪ್ರತಿಭಟನಾ ರ್‍ಯಾಲಿ ಮಾಡಿದಾಗ ಅದೇ ದಿನ ಪಕ್ಕದಲ್ಲೇ ಚೆಡ್ಡಿಗಳಿಗೂ ಪ್ರತಿಭಟಿಸಲು ಅವಕಾಶ ಕೊಡಿಸಿದ್ದಾರೆ.

ಈ ದೇವೇಗೌಡ-ಕುಮಾರಸ್ವಾಮಿಗೆ ಕರ್ನಾಟಕದಲ್ಲಿ ನೆಮ್ಮದಿ-ಶಾಂತಿ ಉಳಿಯಬೇಕೆಂಬ ಕಾಳಜಿ ನಿಜವಾಗಲೂ ಇದಿದ್ದರೆ ಈ ಹತ್ಯಾ ಪ್ರಕರಣವನ್ನೇ ಮುಂದಿಟ್ಟುಕೊಂಡು ಬಿಜೆಪಿಯ ಅಸಲಿ ಕರಾಳ ಮುಖವನ್ನು ಬಹಿರಂಗಪಡಿಸಬಹುದಾಗಿತ್ತಲ್ಲವೆ?

► ಕೆಲಸ ಶುರು ಮಾಡಿದರು. ಅಂದು ಸಂಜೆ ನಾಲ್ಕು ಗಂಟೆ ಸುಮಾರಿಗೆ ಹರೀಶನ ಮೊಬೈಲ್‌ಗೆ ಫೋನ್ ಮಾಡಿದ ಗಣೇಶ್ ಉಡುಪ ಪ್ರತಿಭಟನೆಗೆ ಒಂದಿಷ್ಟು ಹುಡುಗರನ್ನು ಸೇರಿಸುವಂತೆಯೂ, ತಮಿಳುನಾಡಿನ ಸರ್ಕಾರಿ ಬಸ್ ತಡೆ ಮಾಡಬೇಕೆಂದೂ ಸೂಚಿಸಿದ್ದಾನೆ.

ಈ ಹರೀಶ ಪಕ್ಕಾ RSS ವಿಧ್ವಂಸಕನಾಗಿದ್ದು ಈ ಹಿಂದೆ 2005 ರ ಜನವರಿಯಲ್ಲಿ ಕ್ರೈಸ್ತ ಮತ ಪ್ರಚಾರಕ ಬೆನ್ನಿಹಿನ್ ಬೆಂಗಳೂರಿಗೆ ಬಂದಿದ್ದಾಗ ಬೊಮ್ಮನಹಳ್ಳಿಯಲ್ಲಿ ಚೆಡ್ಡಿ ಪಡೆ ಕಟ್ಟಿಕೊಂಡು ದೊಂಬಿ ಎಬ್ಬಿಸಿದ್ದ. 2007 ರ ಜನವರಿಯಲ್ಲಿ ವಿಲ್ಸನ್ ಗಾರ್ಡನ್ ಹಾಗೂ ಹುಸ್ಕೂರ್ ಗೇಟ್‌ನಲ್ಲಿ ನಡೆದಿದ್ದ ವಿರಾಟ್ ಹಿಂದೂ ಸಮಾಜೋತ್ಸವಕ್ಕೂ ಪುಂಡು ಹುಡುಗರನ್ನು ಕರೆದುಕೊಂಡು ಹೋಗಿದ್ದ. RSS ಸಿದ್ಧಾಂತವಾದ ದಲಿತ, ಮುಸ್ಲಿಂ-ಕ್ರಿಶ್ಚಿಯನ್ ದ್ವೇಷ ಹರೀಶನಿಗೆ ರಕ್ತಗತವಾಗಿದ್ದ ಗುಣ. ಅಂಥವನು ಇನ್ನೊಬ್ಬ RSS ಲೀಡರ್ ಗಣೇಶ್ ಉಡುಪ ಫೋನ್ ಮಾಡಿ ರಸ್ತೆತಡೆ ಎಂದಾಗ ತಕ್ಷಣ ತಯಾರಾಗಿದ್ದಾನೆ. ಈ ಮಧ್ಯೆ ಚಾಮರಾಜಪೇಟೆಯಿಂದ ಒಟ್ಟು 8 ಮೋಟಾರು ಬೈಕುಗಳಲ್ಲಿ ಹೊರಟ ಚೆಡ್ಡಿಗಳ ಗುಂಪು ಮೊದಲು ಜೆಪಿನಗರದ ಕರುಣಾನಿಧಿ ಮಗಳು ಸೆಲ್ವಿ ಮನೆಗೆ ರಾತ್ರಿ 7.30 ರ ಸುಮಾರಿಗೆ ಹೋಗಿದೆ. ಅವರಿಗೆ ಅಲ್ಲಿ ಸ್ಥಳೀಯರಾದ ಮುರುಗೇಶ್, ರಾಜೇಶ್, ಸಂತೋಷ್ ಜೊತೆಯಾಗಿದ್ದಾರೆ. ಪಾದಚಾರಿಗಳು ವಿರಳವಾಗಿರುವ ಹೊತ್ತಿನಲ್ಲಿ ಮನೆ ಬಾಗಿಲಿಗೆ ಪೆಟ್ರೋಲ್ ಬಾಂಬ್ ಎಸೆದು, ಕಲ್ಲು ಹೊಡೆದು, ಕರಪತ್ರ ತೂರಿ ಎರಡೇ ನಿಮಿಷದಲ್ಲಿ ಗುಂಪು ಪರಾರಿಯಾಗಿದೆ. ಅಲ್ಲಿಂದ ರಿಂಗ್‌ರೋಡಿನ ಮೂಲಕ ನೇರ ಹೊಸೂರು ರಸ್ತೆಯ ಬೊಮ್ಮನಹಳ್ಳಿಗೆ ಈ ಚೆಡ್ಡಿಗಳು ಬಂದಿದ್ದಾರೆ. ಅಷ್ಟರಲ್ಲಿ ಹರೀಶ ತಾನೊಂದು ಹತ್ತು ಜನರ ಗುಂಪು ರೆಡಿ ಮಾಡಿಟ್ಟುಕೊಂಡಿದ್ದ. ಅವರಲ್ಲಿ ಬಿಜೆಪಿಗಳಾದ ಬಸವರಾಜ, ಅನಿಲ್‌ಕುಮಾರ್ ಕೂಡ ಇದ್ದರು. ಜೊತೆಗೆ ಮಂಗಮ್ಮನ ಪಾಳ್ಯದ ಗಣೇಶೋತ್ಸವದಲ್ಲಿದ್ದ ಬಿ.ಎಂ. ಮಂಜುನಾಥ, ಪಾಪಣ್ಣ, ಸೀನಾ, ಮಂಜಾ, ಸಗಾಯ್‌ರಿಗೂ ತನ್ನ ಮೊಬೈಲಿನಿಂದಲೇ ಫೋನ್ ಮಾಡಿದ ಹರೀಶ್ 'ರಸ್ತೆ ತಡೆ ಇದೆ ಬನ್ರೋ' ಎಂದು ಕರೆದಿದ್ದಾನೆ.

ಇವರು ಐದೂ ಜನ ದಲಿತ ಯುವಕರು. ನಾಲ್ಕಾರು ವರ್ಷ ಆರ್‌ಎಸ್‌ಎಸ್‌ನಲ್ಲಿ ಓಡಾಡಿಕೊಂಡಿದ್ದ ಈ ಹುಡುಗರಿಗೆ ಹಿಂದೂವಾದದ ಅಸಲಿ ಬಣ್ಣ ಗೊತ್ತಾಗಿ ಕೆಲದಿನಗಳಿಂದ RSS ಬಿಟ್ಟು ದೂರವಾಗಿದ್ದರು. ಬಿಎಸ್‌ಪಿ ಜೊತೆ ಗುರುತಿಸಿಕೊಂಡಿದ್ದರು. ಗಣೇಶ-ಹರೀಶನ ಗುಂಪು ಬಸ್‌ಗೆ ಬೆಂಕಿ ಹಾಕುತ್ತಾರೆಂಬುದನ್ನು ಊಹಿಸಿರದಿದ್ದ ಕೆಲ ದಲಿತ ಯುವಕರೂ ಅವರೊಂದಿಗೆ ಹೋಗಿ ರಸ್ತೆ ನಡುವೆ ನಿಂತಿದ್ದಾರೆ. ಆಗಲೇ ಅಲ್ಲಿಗೆ ಬಂದ ತಮಿಳುನಾಡಿನ ಸಾರಿಗೆ ಇಲಾಖೆ ಬಸ್ (TN O1 4846) ತಡೆದ ಗಣೇಶ-ಹರೀಶ್ ಬಸ್ ಒಳಕ್ಕೆ ನುಗ್ಗಿ ಪ್ರಯಾಣಿಕರನ್ನು ಬೆದರಿಸಿ ಕೆಳಗಿಳಿಸಿದ್ದಾರೆ. ಅಷ್ಟರಲ್ಲಿ ರಂಗಸ್ವಾಮಿ-ರಾಜೇಶನ ಗುಂಪು ಬಸ್‌ಗೆ ಕಲ್ಲು ಹೊಡೆದು ಗಾಜು ಪುಡಿಗಟ್ಟಲು ಶುರು ಮಾಡಿದ್ದರು. [illegible] ಬಸ್‌ನಿಂದ ಇಳಿದರೂ ಕುಪ್ಪುಸ್ವಾಮಿ ಹಾಗೂ ಇನ್ನೊಬ್ಬ ಪ್ರಯಾಣಿಕ [illegible] ಹೊರಡಲೇ ಹರೀಶನ RSS ಗುಂಪು ಇಡೀ ಬಸ್‌ಗೆ ಪೆಟ್ರೋಲ್

ಇವರೂ ಶಂಕಿತರೇ!









ಸುರಿದು ಬೆಂಕಿ ಹಚ್ಚಿತ್ತು. ಹೊರಬರಲು ಸ್ವಲ್ಪವೂ ಅವಕಾಶ ಸಿಗದ ಇಬ್ಬರು ತಮ್ಮನ್ನು ಕಾಪಾಡುವಂತೆ ಬೇಡಿಕೊಳ್ಳುತ್ತಿದ್ದದು ಹೊರಗೆ ನಿಂತು ನೋಡುತ್ತಿದ್ದ ಅನೇಕರಿಗೆ ಕಾಣಿಸಿದೆ. ಆದರೆ ಅಷ್ಟರಲ್ಲಿ ಬೆಂಕಿ ಇಡೀ ಬಸ್ ಅನ್ನು ಆವರಿಸಿಕೊಂಡು ಒಳಗೆ ಸಿಕ್ಕಿಬಿದ್ದಿದ್ದ ಇಬ್ಬರ ಆರ್ತನಾದ ಚೆಡ್ಡಿಗಳ 'ಜೈ ಶ್ರೀರಾಂ' ಘೋಷಣೆ, ಟ್ರಾಫಿಕ್ ಜಾಮ್ ಗದ್ದಲದಲ್ಲಿ ಕರಗೇಹೋಗಿತ್ತು.

ಎರಡೇ ನಿಮಿಷದಲ್ಲಿ ದಿಢೀರೆಂದು ಈ ನರಹತ್ಯೆ ನಡೆಸಿದ ಚೆಡ್ಡಿ ಭಯೋತ್ಪಾದಕರು ತಕ್ಷಣ ಕತ್ತಲಲ್ಲಿ ಚದರಿಹೋಗಿದ್ದಾರೆ. ಆಮೇಲೆ ಸ್ಥಳಕ್ಕೆ ಹೋದ ಮಡಿವಾಳ ಪೊಲೀಸರಿಗೆ ಇದು ರಾಮಭಕ್ತರ ದುಷ್ಕೃತ್ಯ ಎಂದು ಮೊದಲು ಗೊತ್ತಾಗಲಿಲ್ಲ. ಆದರೆ ಸೆಲ್ವಿ ಮನೆ ಮೇಲಿನ ದಾಳಿ ಬಗ್ಗೆ ಮಾಹಿತಿ ಬಂದನಂತರ ಎರಡು ಘಟನೆಗಳಿಗೂ, ರಾಮಸೇತು ವಿವಾದಕ್ಕೂ ಇರುವ ಲಿಂಕ್ ಬೆಳಕಿಗೆ ಬಂತು.

ಠಾಣೆಯಲ್ಲಿ ಬಿಜೆಪಿ ನಾಯಕರು

ಕಳೆದ ನಾಲ್ಕೈದು ವರ್ಷಗಳಿಂದ ಬೆಂಗಳೂರು-ಹೊಸೂರು ನಡುವಿನ ಏರಿಯಾದಲ್ಲಿ ಬಿಜೆಪಿ ಪ್ರಭಾವ ಹೆಚ್ಚಾಗಿದೆ. ಮುಖ್ಯವಾಗಿ ರೆಡ್ಡಿ ಜನಾಂಗದ ಭೂಗಳ್ಳರಾದ ಸತೀಶ್ ರೆಡ್ಡಿ, ಮಂಜುನಾಥ ರೆಡ್ಡಿ, ಗುರುಮೂರ್ತಿ ರೆಡ್ಡಿ, ರಾಮಚಂದ್ರ ರೆಡ್ಡಿ ತಮ್ಮ ರಾಜಕೀಯ ಏಳಿಗೆಗೆ ಲ್ಯಾಂಡ್ ಡೀಲುಗಳಿಗಾಗಿ ಬಿಜೆಪಿಯನ್ನು ಬೆಳೆಸುತ್ತಿದ್ದಾರೆ. ಮಡಿವಾಳ, ಬೊಮ್ಮನಹಳ್ಳಿ, ಬೇಗೂರು, ಸಿಂಗಸಂದ್ರ, ಆಡುಗೋಡಿ, ಹುಸ್ಕೂರುಗಳಲ್ಲಿ ಈ ಬಿಜೆಪಿ ರೆಡ್ಡಿ ಲೀಡರ್‌ಗಳದ್ದೇ ಕಾರುಬಾರು. ಸ್ವತಃ ಆನೇಕಲ್ ಮೀಸಲು ಕ್ಷೇತ್ರದಲ್ಲೂ ಶಾಸಕನಾಗಿ ಗೆದ್ದಿರುವುದು ಬಿಜೆಪಿಯ ನಾರಾಯಣಸ್ವಾಮಿ ಎಂಬ ವಿಚಾರವೇ ಈ ಪ್ರದೇಶದಲ್ಲಿ ಸಂಘ ಪರಿವಾರ ಎಷ್ಟು ಬೆಳೆದಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಬಸ್ ಬೆಂಕಿ ದುರಂತ ಘಟನೆ ತರುವಾಯ ಆದಷ್ಟೂ ನಿಧಾನವಾಗಿ ಪೊಲೀಸರ ತನಿಖೆ ಶುರುವಾಯಿತು. ಯಡಿಯೂರಪ್ಪ 'ಇದರಲ್ಲಿ ಹಿಂದೂ ಸಂಘಟನೆಗಳು ಭಾಗಿಯಾಗಿಲ್ಲ' ಎಂದಿದ್ದೂ ಕೂಡ ಪೊಲೀಸರು ತನಿಖೆಗೆ ಪರೋಕ್ಷ ನಿರ್ಬಂಧ ಹೇರಿದಂತೆ ಇತ್ತು, ಆದರೆ ಪೊಲೀಸರು ಪೂರ್ತಿ ಕೈಚೆಲ್ಲಿ ಕೂರುವಂತೆಯೂ ಇರಲಿಲ್ಲ. ಹಾಗಾಗಿ ಮಡಿವಾಳ ಇನ್ಸ್‌ಪೆಕ್ಟರ್ ಕಾಂತರಾಜ್ ಮೊದಲು ಜನಾರ್ದನ್ ಎಂಬ RSS ವೀರನನ್ನು ಹಿಡಿದು ತರಿಸಿದರು. ನಂತರ ಪ್ರವೀಣ್‌ಕುಮಾರ್ ಶೆಟ್ಟಿಯೆಂಬ ಇನ್ನೊಬ್ಬ ದಢೂತಿ ಚೆಡ್ಡಿಯನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡಿದರು. ಈ ಸುದ್ದಿ ಕೇಳುತ್ತಿದ್ದಂತೆ ನಗರ ಜಿಲ್ಲಾ ಪಂಚಾಯಿತಿಯ ಬಿಜೆಪಿ ಮೆಂಬರ್ ಸತೀಶ್ ರೆಡ್ಡಿ, ಬೊಮ್ಮನಹಳ್ಳಿಯ ಬಿಜೆಪಿ ಲೀಡರ್‌ಗಳಾದ ಮಂಜುನಾಥ ರೆಡ್ಡಿ ರಮೇಶ್ ರೆಡ್ಡಿ ಠಾಣೆಗೆ ಹೋಗಿ ಗಲಾಟೆ ಮಾಡಿದ್ದಾರೆ. ಇದಕ್ಕೆ ಮಣಿದ ಪೊಲೀಸರು ಜನಾರ್ದನ ಹಾಗೂ ಪ್ರವೀಣ್ ಕುಮಾರ್ ಶೆಟ್ಟಿಯನ್ನು ಬಿಟ್ಟು ಕಳಿಸಿದ್ದಾರೆ. ಆದರೆ ಅಷ್ಟರಲ್ಲಿ ಇನ್ನೊಬ್ಬ RSS ಹರೀಶನ ಸಂಶಯಾಸ್ಪದ ನಡವಳಿಕೆ ಬಗ್ಗೆ ಪೊಲೀಸರಿಗೆ ಮಾಹಿತಿ ಸಿಕ್ಕಿತು. ಈ ದುರ್ಘಟನೆ ನೋಡಿ ಮನನೊಂದಿದ್ದ ಕೆಲ ಪ್ರಜ್ಞಾವಂತ ದಲಿತ ಯುವಕರೇ ಪೊಲೀಸರ ತನಿಖೆಗೆ ನೆರವಾದರು. ಆಮೇಲೆ RSS ನ ಹರೀಶ್ ಮೊಬೈಲ್‌ಗೆ ಬಂದ-ಹೋದ ಕಾಲ್‌ಗಳನ್ನು ಚೆಕ್ ಮಾಡಿದಾಗ ಇಡೀ ಗ್ಯಾಂಗಿನ ಬಗ್ಗೆ ಪೂರ್ಣ ಮಾಹಿತಿ ಸಿಕ್ಕಿದೆ. ಈ ಆಧಾರದಲ್ಲೇ ಪೊಲೀಸರು ಹರೀಶನನ್ನು ಅರೆಸ್ಟ್ ಮಾಡಿದ್ದಾರೆ. 'ಬಿಜೆಪಿಗೂ ಇದಕ್ಕೂ ಸಂಬಂಧವಿಲ್ಲ, ಸಂಘ ಪರಿವಾರ ಇದರಲ್ಲಿ ಭಾಗಿಯಾಗಿಲ್ಲ' ಎಂದು ಚೆಡ್ಡಿ ನಾಯಕರೆಲ್ಲಾ ಹೇಳಿಕೊಂಡೇ ಬರುತ್ತಿದ್ದಾರೆ. ಹಾಗಿದ್ದ ಮೇಲೆ ಪೊಲೀಸರು ಯಾರನ್ನೇ ಬಂಧಿಸಲಿ, ಅವರನ್ನು ಬಿಡಿಸಲು ಬಿಜೆಪಿ ಲೀಡರ್‌ಗಳೆಲ್ಲಾ ಪೊಲೀಸ್ ಸ್ಟೇಷನ್‌ಗೆ ಏಕೆ ಹೋಗಬೇಕಿತ್ತು? ಹರೀಶ್, ಅನಿಲ್ ಕುಮಾರ್, ಬಸವರಾಜು, ರಾಜೇಶ್ ಇವರೆಲ್ಲಾ ಬೊಮ್ಮನಹಳ್ಳಿಯ RSS-BJP ಕಾರ್ಯಕರ್ತರೆಂಬುದು ಎಲ್ಲರಿಗೂ ಗೊತ್ತಿದೆ.

ಆದರೂ ಏಕೆ ಪೊಲೀಸರಿಗೆ ಹಾಗೆಂದು ಬಹಿರಂಗವಾಗಿ ಹೇಳುವಷ್ಟು ಧೈರ್ಯವಿಲ್ಲ ಯಾಕೆ?

ಪೊಲೀಸರೇನಾದರೂ ತಮ್ಮ ಕರ್ತವ್ಯಕ್ಕೆ ಎಳ್ಳುನೀರು ಬಿಟ್ಟು ಭಜರಂಗ ದಳಕ್ಕೆ ಸೇರಿಕೊಂಡಿದ್ದಾರಾ? ■



ಬಿ.ಎಂ. ಮಂಜುನಾಥ



[illegible]

ಬಲಿಪಶುಗಳಾದ ದಲಿತ ಯುವಕರು

ಬೊಮ್ಮನಹಳ್ಳಿ ಬಸ್ ಬೆಂಕಿ ಘಟನೆಯಲ್ಲಿ ಬಂಧಿತರಾಗಿರುವ ಒಟ್ಟು 20 ಜನರಲ್ಲಿ ಬಹುತೇಕರು ದಲಿತ ಯುವಕರಾಗಿದ್ದಾರೆ. ಬಿ.ಎಂ. ಮಂಜುನಾಥ್, ಪಾಪಣ್ಣ, ಸೀನಾ, ಮಂಜು, ಸಗಾಯ್‌ರಾಜ್, ನರಸಿಂಹ, ಪೇಂಟರ್ ಸಂತೋಷ್... ಹೀಗೆ 12 ಮಂದಿ ದಲಿತ ಸಮುದಾಯದವರು. ಇನ್ನೊಂದು ವಾಸ್ತವ ಏನೆಂದರೆ ಇವರೆಲ್ಲಾ ಕಳೆದ ನಾಲ್ಕೈದು ವರ್ಷಗಳಿಂದ RSS ಕಾರ್ಯಕರ್ತರಾಗಿದ್ದವರು. ಬೆನ್ನಿಹಿನ್ ಗಲಾಟೆ, ಹಿಂದೂ ಸಮಾಜೋತ್ಸವಗಳಲ್ಲಿ, ಚೆಡ್ಡಿಗಳ ಗಲಾಟೆ-ದೊಂಬಿಗಳಲ್ಲೆಲ್ಲಾ ಈ ಹಿಂದೆ ಭಾಗವಹಿಸಿದ್ದವರು. ಆದರೆ ಕಳೆದ ನಾಲ್ಕೈದು ತಿಂಗಳಿನಿಂದ ಇವರು RSS ನಿಂದ ದೂರಾಗತೊಡಗಿದ್ದರು. ಬಹುಜನ ಸಮಾಜ ಪಕ್ಷದ ಸಂಪರ್ಕ ಸಿಕ್ಕು, ರಾಜಕೀಯ ಚರ್ಚೆ, ತರಬೇತಿ ಪಡೆಯುತ್ತಾ ಪ್ರಗತಿಪರ ಆಶಯಗಳ ವಲಯಕ್ಕೆ ಬಂದಿದ್ದರು. ಅಷ್ಟೇ ಅಲ್ಲ, ಬೊಮ್ಮನಹಳ್ಳಿ, ಮಂಗಮ್ಮನಪಾಳ್ಯ ಏರಿಯಾಗಳಲ್ಲಿ ದಲಿತ ರಾಜಕೀಯದಡಿ ಸಂಘಟಿತರಾಗಲು ಶುರು ಮಾಡಿದ್ದರು.

ಸೆಪ್ಟೆಂಬರ್ 18 ರ ಸಂಜೆ RSS ನ ಹರೀಶ್ ಬಹುತೇಕ ಇವರೆಲ್ಲರಿಗೂ ತನ್ನ ಮೊಬೈಲಿನಿಂದ ಫೋನ್ ಮಾಡಿ 'ರಸ್ತೆ ತಡೆಗೆ ಬನ್ನಿ' ಎಂದು ಕರೆದಿದ್ದಾನೆ. ಆದರೆ ಇವರ್ಯಾರೂ ಹೋಗಿಲ್ಲ. ಅಂದೇ ರಾತ್ರಿ ಒಂಭತ್ತು ಗಂಟೆ ಹೊತ್ತಿಗೆ ಹರೀಶ-ಗಣೇಶ ಗ್ಯಾಂಗ್ ಬಸ್‌ಗೆ ಬೆಂಕಿ ಹಚ್ಚಿ ಇಬ್ಬರನ್ನು ಕೊಂದ ಸುದ್ದಿ ಕಾಡ್ಗಿಚ್ಚಿನಂತೆ



ಬಿ. ಮಂಜುನಾಥ



ಸೀನಾ



ಪಾಪಣ್ಣ

ಹಬ್ಬಿದೆ. ಆಗಷ್ಟೇ ಈ ಹುಡುಗರು ಸ್ಥಳಕ್ಕೆ ಹೋಗಿದ್ದಾರೆ.

ಆ ನಂತರ ಸೆಪ್ಟೆಂಬರ್ 21 ರಂದು ಹರೀಶನ ಬಂಧನವಾದಾಗ ಅವನು ಪೊಲೀಸರಿಗೆ ಬೇಕಂತಲೇ ಈ BSP ಕಾರ್ಯಕರ್ತರ ಹೆಸರನ್ನು ಸೇರಿಸಿ ಹೇಳಿದ್ದಾನೆ. ತನ್ನ ಚೆಡ್ಡಿ ಹಿಂಬಾಲಕರನ್ನು ರಕ್ಷಿಸಿ ಈ ದಲಿತ ಯುವಕರನ್ನು ಬಲಿ ಕೊಡುವುದಷ್ಟೇ ಹರೀಶನ ಹುನ್ನಾರವಾಗಿತ್ತು. ಇದಕ್ಕೆ ಸ್ಥಳೀಯ ಬಿಜೆಪಿ ಲೀಡರ್‌ಗಳೂ ಕುಮ್ಮಕ್ಕು ನೀಡಿದ್ದಾರೆ.

ಎಂದೋ ಏನೋ ಅರಿವಿಲ್ಲದೆ RSS ಸಹವಾಸ ಮಾಡಿದ ತಪ್ಪಿಗೆ ಈ ಅಮಾಯಕ ದಲಿತ ಯುವಕರು ಈಗ ಜೈಲು ಪಾಲಾಗಿದ್ದಾರೆ. ಇದು ಕೇವಲ ಒಂದು ಬೊಮ್ಮನಹಳ್ಳಿ ಕತೆ ಮಾತ್ರವಲ್ಲ. ಇಡೀ ಕರ್ನಾಟಕದಲ್ಲಿ ಎಲ್ಲೇ ಕೋಮುಗಲಭೆ ನಡೆಯಲಿ ಸಂಘ ಪರಿವಾರದ ಮೇಲ್ಜಾತಿ ನಾಯಕರು ದಲಿತ, ಹಿಂದುಳಿದ ಜಾತಿಗಳ ಯುವಕರನ್ನು ಗಲಾಟೆಗೆ ಕಳಿಸಿ ತಾವು ಸೇಫ್ ಆಗಿರುತ್ತಾರೆ. ಮುಂದೆ ಕೇಸು, ಅರೆಸ್ಟುಗಳು ಬಂದರೆ ಅನುಭವಿಸುವುದು ಈ ಅಮಾಯಕರೇನೆ!

ಗುಜರಾತ್ ಕೋಮುಗಲಭೆಗಳಾದಾಗಲೂ ಆದಿವಾಸಿಗಳು, ದಲಿತ ಬಡಜನರೇ ಹೆಚ್ಚು ಬಲಿಯಾಗಿದ್ದರೆಂಬ ಸತ್ಯ ಎಲ್ಲರಿಗೂ ಗೊತ್ತಿದೆ. ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ನಿಷ್ಕ್ರಿಯತೆ, ರಾಜಕೀಯ ಶಿಕ್ಷಣದ ಕೊರತೆಯೇ ಇದಕ್ಕೆ ಕಾರಣವಾಗಿದೆ.

[illegible] ಈ ದಲಿತ ಯುವಕರು RSS ಜಾಲದಲ್ಲಿ ಸಿಕ್ಕು ಈಗ ಜೈಲು ಸೇರಿರುವ ಘಟನೆ ಬರಲಿರುವ ಭಯಾನಕ ದಿನಗಳಿಗೆ ಒಂದು ಮುನ್ಸೂಚನೆ ಅಷ್ಟೇ. ■



ಕಾಂಗ್ರೆಸ್‌ಗೆ ಬಂಡಾಯದ ಭೀತಿ

ಜೆಡಿಎಸ್‌ಗೆ ಕುಮಾರಸ್ವಾಮಿಯೇ ಬಂಡವಾಳ


ಜಿಲ್ಲೆಯಲ್ಲಿ ಸ್ಥಳೀಯ ಚುನಾವಣೆ ಜ್ವರ ಭರ್ಜರಿ ಏರಿದೆ. ಈ ವರ್ಷ ಇಲ್ಲಿ ಚಿಕನ್‌ಗುನ್ಯಾ ಬಿಟ್ಟರೆ ಅತಿಹೆಚ್ಚು ಚರ್ಚೆಯಾಗುತ್ತಿರುವುದು ಈ ಚುನಾವಣೆ ಬಗ್ಗೆನೇ. ಜಿಲ್ಲೆಯ ಶಾಸಕರುಗಳಿಗೆ ಮುಂದೆ ತಮ್ಮ ಕುರ್ಚಿ ಭದ್ರಗೊಳಿಸುವ ಮೆಟ್ಟಿಲಾಗಿವೆ ಈ ಚುನಾವಣೆ. ಕೊಪ್ಪಳದಲ್ಲಂತೂ ಕಾಂಗ್ರೆಸ್ 31 ಸ್ಥಾನದಲ್ಲಿ 11 ಟಿಕೆಟ್‌ಗಳನ್ನು ಮುಸ್ಲಿಂರಿಗೆ ಕೊಟ್ಟು ಓಟ್‌ಬ್ಯಾಂಕ್ ರಾಜಕಾರಣಕ್ಕೆ ಇಳಿದಿದ್ದರೆ, ಪಕ್ಷದ ನಿಷ್ಠಾವಂತರಿಗೆ 'ಕೈ' ಕೊಟ್ಟು, ಬರೀ 5 ಸಾವಿರ ಮತದಾರರಿರುವ ಜಂಗಮ ಸಮುದಾಯಕ್ಕೆ 4 ಟಿಕೆಟ್ ಕೊಟ್ಟು, 30 ಸಾವಿರಕ್ಕೂ ಹೆಚ್ಚಿರುವ ಲಿಂಗಾಯತ ಪಂಚಮಸಾಲಿ ಜನಾಂಗಕ್ಕೆ ಟಿಕೆಟ್‌ನ್ನು ಸಾರಾಸಗಟಾಗಿ ತಿರಸ್ಕರಿಸಲಾಗಿದೆ. ಈ ನಡುವೆ ಕೊಪ್ಪಳದ ಮುಸ್ಲಿಂರ ಪಾಲಿಗೆ ರದ್ದಿ ಲೀಡರ್‌ನಾಗಿರುವವ 4 ಟಿಕೆಟ್‌ಗಳನ್ನು ಮಾರಿಕೊಂಡು ಬಿಟ್ಟಿದ್ದಾನೆ. ಶಾಸಕನ ವಿರುದ್ಧವಿದ್ದ ಭಿನ್ನಮತೀಯರು ತಮ್ಮ ಪಾಲಿನ ಟಿಕೆಟ್ ತಗೊಂಡು ಹಾಯಾಗಿದ್ದುಬಿಟ್ಟಿದ್ದಾರೆ. ಜೆಡಿಎಸ್ ತಂತ್ರಗಾರಿಕೆ ಬಳಸಿ ಟಿಕೆಟ್ ನೀಡಿದ್ದರೆ ಬಜೆಪಿಗೂ ಈಗ ಹೊಸ ಹುರುಪು. ಕಾಂಗ್ರೆಸ್‌ಗೆ ಬಂಡಾಯದವರ ಭೀತಿಯಾದರೆ, ಜೆಡಿಎಸ್‌ಗೆ ಕುಮಾರಸ್ವಾಮಿಯೇ ಬಂಡವಾಳ. ಬಹುತೇಕ ಹೊಸಬರೇ ಸ್ಪರ್ಧಿಸಿರುವ ಇಲ್ಲಿ 30 ನೇ ವಾರ್ಡಿನಲ್ಲಿ ಜೆಡಿಎಸ್‌ನ ಸಾಜೇದಾ ಬೇಗಂ, ಪಕ್ಷೇತರ ಅಭ್ಯರ್ಥಿ ಸಾವಿತ್ರಿ ಮುಜುಮದಾರ ನಡುವೆ ನೇರ ಸ್ಪರ್ಧೆಯಿದೆ. ಸದ್ಯಕ್ಕೆ ಇಲ್ಲಿ ಕಾಂಗ್ರೆಸ್ ಕಾಣುತ್ತಿಲ್ಲ.





25 ನೇ ವಾರ್ಡಿನ ಕಾಂಗ್ರೆಸ್ ಅಭ್ಯರ್ಥಿ ಶಕುಂತಲಾ ಹುಡೇಜಾಲಿ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆಯಾಗಿ ಉಳಿದ ಮಹಿಳೆಯರಿಗೆ ಟಿಕೆಟ್ ಕೊಡಿಸುವುದು ಬಿಟ್ಟು ತನ್ನ ಟಿಕೆಟ್‌ಗೆ ಹರಸಾಹಸ ಮಾಡಿದ್ದಾಳೆ. ಈಕೆಯನ್ನು ಸೋಲಿಸಲು ಕಾಂಗ್ರೆಸ್‌ನ ಒಂದು ದಂಡು ರೆಡಿಯಾಗಿ ಬಿಟ್ಟಿದೆ. ಅದರ ಲಾಭವನ್ನು ಬಜೆಪಿಯ ಶೋಭಾನಗರಿ ಪಡೆದುಕೊಂಡರೆ ಗೆಲ್ಲುವುದು ನಿಶ್ಚಿತ. ಕಳೆದ 2 ಬಾರಿ ಕಾಂಗ್ರೆಸ್, ದಳ ಗೆಲ್ಲಿಸಿದ್ದ ಹಿಂದುಳಿದ ಮತದಾರರು ಅಭಿವೃದ್ಧಿ ದೃಷ್ಟಿಯಿಂದ ಬಜೆಪಿಗೆ ಬೆಂಬಲಿಸುತ್ತಿದ್ದಾರೆ.

4ನೇ ವಾರ್ಡಿನ ಮೀಸಲು ಕ್ಷೇತ್ರದಲ್ಲಿ ಬಜೆಪಿಯಿಂದ ಕಟ್ಟಿಮನಿ, ಜೆಡಿಎಸ್‌ನ ಪೂಜಾರಿ ಇದ್ದು ಇಲ್ಲಿ ಕಾಂಗ್ರೆಸ್‌ನ ಸತೀಶ್ ಗೆಲುವು ಸುಲಭವಾಗಲಿದೆ. ಪದವೀಧರನಾಗಿರುವ ಸತೀಶ್ ಸಾಮಾಜಿಕ ಕಾಳಜಿಯ ಯುವಕ, ಅದರಲ್ಲೂ ಮುಕ್ಕಾಲು ಪರ್ಸೆಂಟ್ ಇರುವ ಮುಸ್ಲಿಂರ ಏರಿಯಾದಲ್ಲಿ ಸತೀಶ್ ಗೆಲ್ಲುವ ಅಭ್ಯರ್ಥಿ. 22 ನೇ ವಾರ್ಡಿನಲ್ಲಿ ಕಾಂಗ್ರೆಸ್, ಜೆಡಿಎಸ್, ಬಜೆಪಿ ನೇರ ಹಣಾಹಣಿ. ಕೊನೆಕೊನೆಗೆ ಜೆಡಿಎಸ್-ಕಾಂಗ್ರೆಸ್ ಜಿದ್ದಾಜಿದ್ದಿಗೆ ಬಿದ್ದು ಜೆಡಿಎಸ್‌ನ ಉಪೇಂದ್ರ ಡಾಕ್ಟರ್ ಗೆದ್ದರೆ ಆಶ್ಚರ್ಯವಿಲ್ಲ, ಹಾಗಂತ ಕಾಂಗ್ರೆಸ್‌ನ್ನು ಹಗುರವಾಗಿ ಕಾಣುವಂತಿಲ್ಲ, 2 ನೇ ವಾರ್ಡಿನಲ್ಲಿ ಬಜೆಪಿಯ ಸುಮಾ ಮಟ್ಟಿ ಕಾಂಗ್ರೆಸ್-ಜೆಡಿಎಸ್‌ಗಳ ನಿರ್ಲಕ್ಷ್ಯವನ್ನು ಬಂಡವಾಳ ಮಾಡಿಕೊಂಡು ಗೆಲ್ಲುವ ಹಾದಿಯಲ್ಲಿದ್ದಾರೆ. ಶಾಸಕನ ಫೇವರಿಟ್ ಕ್ಯಾಂಡಿಡೇಟ್ 6ನೇ ವಾರ್ಡಿನ ಕಾಟನ್ ಪಾಷಾಗೆ ಬಜೆಪಿಯ ಫಕೀರಪ್ಪನೇ ಅಡ್ಡಗಾಲು. ಬಜೆಪಿಗೆ ಪಕ್ಷೇತರ ಶಿವಪ್ಪ ಕೊಡಲಿ. ಶಿವಪ್ಪ ಹೆಚ್ಚು ಮತ ಪಡೆದಷ್ಟು ಕಾಟನ್ ಪಾಷಾ ದಾರಿ ಸುಗಮವಾದರೂ ಜೆಡಿಎಸ್‌ನ ಫಿರೋಜಾ ತೊಡಕಾಗುವುದು ಗ್ಯಾರಂಟಿ. 15 ನೇ ವಾರ್ಡಿನ ಕಾಂಗ್ರೆಸ್ ಅಭ್ಯರ್ಥಿ ಪಾಷಾ ಮಾನವಿಗೆ ಸ್ಪರ್ಧೆ ನೀಡುವಷ್ಟು ಪ್ರಬಲ ಅಭ್ಯರ್ಥಿಗಳಿಲ್ಲದ ಕಾರಣ ಇಲ್ಲಿ ಪಾಷಾ ಮಾನವಿ ಗೆಲ್ಲುವುದು ಬಹುತೇಕ ಖಚಿತವಾದಂತಾಗಿದೆ. 26 ನೇ ವಾರ್ಡಿನಲ್ಲಿ ಕಾಂಗ್ರೆಸ್‌ನ ಜಾಕೀರ್ ಹುಸೇನ್ ಮತ್ತು ಜೆಡಿಎಸ್‌ನ ಸುರೇಶ್ ಮುಂಡರಗಿ ನಡುವೆ ನೇರ ಸ್ಪರ್ಧೆ ಇದ್ದು ಇಲ್ಲಿ ಬಜೆಪಿಯಿಂದ ಡಮ್ಮಿ ಅಭ್ಯರ್ಥಿ ಇದ್ದು, ಬಜೆಪಿ-ಜೆಡಿಎಸ್ ನಾಯಕರ ಮಧ್ಯೆ ಒಳ ಒಪ್ಪಂದ ನಡೆದಿರುವಂತಿದೆ. ಇಲ್ಲಿ ಯಾರು ಗೆದ್ದರೂ ಕೂದಲೆಳೆಯಲ್ಲಿ ಮಾತ್ರ. ಇನ್ನುಳಿದಂತೆ ಕೆಲವು ವಾರ್ಡುಗಳು ಕಾಂಗ್ರೆಸ್-ಜೆಡಿಎಸ್ ನಡುವಿನ ಜಿದ್ದಾಜಿದ್ದಿಗೆ ಒಳಪಟ್ಟಿವೆ.


ಸತೀಶ್

ಜೆಡಿಎಸ್-ಕಾಂಗ್ರೆಸ್ ಎರಡೂ ಪಕ್ಷಗಳು ಭಿನ್ನಮತ ಶಮನಗೊಳಿಸಿಕೊಂಡಿದ್ದರೆ, ಬಂಡಾಯದವರ ಭಯ ಕಾಡುತ್ತಲೇ ಇವತ್ತು ಈ ನಾಯಕರೇನು ಓಟು ಕೇಳಲು ಬರುತ್ತಿದ್ದಾರೋ ಅವರೆಲ್ಲ ಕೊಪ್ಪಳ ಅಭಿವೃದ್ಧಿಯಾಗದೇ ಇರಲು ಪರೋಕ್ಷವಾಗಿ ಕಾರಣವಾಗಿದ್ದಾರೆ. ಸದ್ಯದ ಸ್ಥಿತಿಯಲ್ಲಿ 31 ಸ್ಥಾನಗಳಲ್ಲಿ ಕಾಂಗ್ರೆಸ್ 12-15 ಸ್ಥಾನ, ಜೆಡಿಎಸ್ 6-8 ಸ್ಥಾನ, ಬಜೆಪಿ 5-7 ಸ್ಥಾನ ಹಾಗೂ ಇತರರು 3 ಸ್ಥಾನಗಳಿಸುವ ಸಂಭವವಿದೆ. "ನೋಡ್ತಾ ಇರಿ ಗಂಗಾವತಿ ಮುನ್ಸಿಪಾಲ್ ಈ ಬಾರಿ ನಮ್ಮದೇ" ಎಂದು ಗುಟುರು ಹಾಕಿ ಹೋಗಿದ್ದ ಜನಾರ್ದನ್ ರೆಡ್ಡಿ ಅಣ್ಣ ಯಾಕೋ ಅಷ್ಟಾಗಿ ಗಂಗಾವತಿಯತ್ತ ಉತ್ಸಾಹ ತೋರುತ್ತಿಲ್ಲ. ಮೀಸಲಾತಿಗೆ ಸಿಕ್ಕು ತತ್ತರಿಸಿರುವ ರೆಡ್ಡಿ ಸಹೋದರರು ಕೊಪ್ಪಳ ಜಿಲ್ಲೆಯಲ್ಲಿ ರಾಜಕೀಯ ಆಶ್ರಯ ಪಡೆಯಲು ಹವಣಿಸುತ್ತಿದ್ದಾರೆ. ಇದೇ ಸಂದರ್ಭ ಎಂದು ಬಳ್ಳಾರಿಯಿಂದ ಬಜೆಪಿಯನ್ನು ಕಿತ್ತೆಸೆಯಬೇಕೆಂದು ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಾರಾ ಸೂರ್ಯನಾರಾಯಣ ರೆಡ್ಡಿಯ ಯತ್ನಕ್ಕೆ ಬೆನ್ನೆಲುಬಾಗಿ ಕುಮಾರಸ್ವಾಮಿ ನಿಂತಿರುವುದು ಸುಳ್ಳಲ್ಲ.

ಈ ಬಾರಿ ನಗರಸಭೆಯನ್ನು ವಶಕ್ಕೆ ತೆಗೆದುಕೊಳ್ಳುವ ನಿಟ್ಟನಲ್ಲಿ ಸಚಿವ ಇಕ್ಬಾಲ್ ತಾವು ನಗರದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳೇ ಶ್ರೀರಕ್ಷೆ ಎಂದು 15 ಕ್ಕೂ ಹೆಚ್ಚು ಸ್ಥಾನಗಳನ್ನು ದಲಿತರು, ಅಲ್ಪಸಂಖ್ಯಾತರಿಗೆ ನೀಡಿ ಕಾಂಗ್ರೆಸ್ ಓಟಗೆ ಕನ್ನ ಕೊರೆಯುತ್ತಿದ್ದರೆ, ಕಾಂಗ್ರೆಸ್ ತನ್ನ ಭಿನ್ನಮತದಿಂದ ಚೇತರಿಸಿಕೊಳ್ಳುತ್ತಿಲ್ಲ, ಆದರೆ ಜೆಡಿಎಸ್‌ಗೆ ನೇರ ಸ್ಪರ್ಧೆ ನೀಡುವ ಮಟ್ಟಕ್ಕೆ ಬಜೆಪಿ ಬೆಳೆದು ನಿಂತಿರುವುದು ಕಂಡು ಸ್ವತಃ ಕಾಂಗ್ರೆಸ್ಸೇ ಕಂಗಾಲು. ಬಹಳ ನೆಚ್ಚಿಕೊಂಡಿದ್ದ ಸಚಿವ ಶ್ರೀರಾಮುಲು ಇತ್ತ ಹಾಯದೇ ಇರುವುದು ಬಜೆಪಿಗಳಿಗೆ ಚಿಂತೆ ಮೂಡಿಸಿಬಿಟ್ಟಿದೆ. ಸದ್ಯದ ಸ್ಥಿತಿಯಲ್ಲಿ 31 ಸ್ಥಾನಗಳಲ್ಲಿ ಜೆಡಿಎಸ್ 12-14 ಸ್ಥಾನ, ಬಜೆಪಿ 9-11 ಸ್ಥಾನ, ಕಾಂಗ್ರೆಸ್ 5-7 ಸ್ಥಾನ ಇತರೆ 3 ಸ್ಥಾನ ಗಳಿಸುವ ನಿರೀಕ್ಷೆ ಇದೆ.

ಕೊಪ್ಪಳ


ಪೂರ್ತಿ 5 ವರ್ಷ ನೀರಿಲ್ಲದೆ ನರಳಿದ, ಕುಡಿಯುವ ನೀರಿನ ಪೈಪುಗಳನ್ನೇ ಮಾರಿ ಜಿಲ್ಲೆಯಲ್ಲಿ ಅಸಹ್ಯ ಹುಟ್ಟಿಸಿದ್ದ ಕುಷ್ಟಗಿಯಲ್ಲಿ ಈ ಬಾರಿ ಹೊಸಬರನ್ನು ಗೆಲ್ಲಿಸುವ ಇರಾದೆ ಕಂಡುಬರುತ್ತಿದೆ. ಅದರಲ್ಲೂ ಇಡೀ ಕುಷ್ಟಗಿಯಲ್ಲಿ ಗಮನ ಸೆಳೆದು, ಪ್ರತಿಷ್ಠಿತವೆನಿಸುವುದು 19 ನೇ ವಾರ್ಡ್. ಇಲ್ಲಿ ಜೆಡಿಎಸ್‌ನ ಜಿ.ಕೆ. ಹಿರೇಮಠ ಮತ್ತು ಬಜೆಪಿಯ ಬಸವನಗೌಡ ಪಾಟೀಲ್ ಮಧ್ಯೆ ಸ್ಪರ್ಧೆ. ಹಿಂದೆ ಪಟ್ಟಣ ಪಂಚಾಯತಿಗೆ ಅಧ್ಯಕ್ಷನಾಗಿ ಕಳಂಕ ತಂದುಕೊಂಡು ಕೇಸು ಹೆಟ್ಟಿಸಿಕೊಂಡಿರುವ ಜಿ.ಕೆ. ಹಿರೇಮಠ ಅಪರಾಧಿತ ಒಳಸಂಚು, ಸುಳ್ಳು ದಸ್ತಾವೇಜು ಸೃಷ್ಟಿ, ಆ ದಾಖಲೆಗಳನ್ನು ವಂಚನೆಗಾಗಿ ಸೃಷ್ಟಿಸಿದ, ಆ ದಾಖಲೆಗಳನ್ನು ವಂಚನೆಗಾಗಿ ಬಳಸಿದ, ಅಪರಾಧಿತ ಭಯೋತ್ಪಾದನೆ, ವಂಚನೆ ಸೇರಿದಂತೆ 120/B, 464, 468, 471, 420, 506 ಕಲಂನ ಕೇಸು ಮೈಮೇಲೆ ಎಳೆದುಕೊಂಡು ಮತ್ತೆ ಚುನಾವಣೆಗೆ ನಿಂತಿದ್ದಾನೆ. ಯಾವ ಮುಖವಿಟ್ಟುಕೊಂಡು ಓಟು ಕೇಳುತ್ತಾನೋ? ಈತನ ವಿರುದ್ಧ ಸ್ಪರ್ಧಿಸಿರುವುದು ಇತ್ತೀಚೆಗೆ ಕುಷ್ಟಗಿಯಿಂದ 60 ಸಿಲೆಂಡರ್‌ಗಳನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ ಮಧ್ಯರಾತ್ರಿ ಪತ್ತೆಹಚ್ಚಿ ಕುಷ್ಟಗಿ ಜನರ ಪ್ರಶಂಸೆಗೆ ಒಳಗಾಗಿರುವ ಬಸವನಗೌಡ ಪಾಟೀಲ್.




ಕಾಂಗ್ರೆಸ್ ಬಜೆಪಿ ನಡುವೆ ಹಣಾಹಣಿ ಇರುವ ಕುಷ್ಟಗಿಯಲ್ಲಿ ಕಾಂಗ್ರೆಸ್ 4-6 ಸ್ಥಾನ, ಜೆಡಿಎಸ್ 3-5 ಸ್ಥಾನ, ಬಜೆಪಿ 8-10 ಸ್ಥಾನ, ಇತರೆ 3 ಸ್ಥಾನ ಬರುವ ಸಂಭವವಿದೆ. ಜಿಲ್ಲೆಯಾದ್ಯಂತ ಬಹುತೇಕ ಹೊಸಬರಿಗೆ ಪಕ್ಷಗಳು ಮಣೆ ಹಾಕಿದ್ದು, ಮತ್ತದೇ ಅಭಿವೃದ್ಧಿಯ ಮಂತ್ರ ಪಠಿಸುತ್ತ ಬಂದಿದ್ದಾರೆ. ಸದ್ಯಕ್ಕಂತೂ ಪ್ರಜ್ಞಾವಂತಿಕೆಯನ್ನು ಮೆರೆಯುತ್ತಿರುವ ಮತದಾರರು 28 ರ ಹೊತ್ತಿಗೆ ಅದ್ಯಾವ ನಿರ್ಧಾರಕ್ಕೆ ಬರುತ್ತಾರೋ, ಅದು ಸೆ. 30 ರಂದು ಬಯಲಾಗಲಿದೆ.

■ ವರದಿಗಾರ

ಕಾಮ್ರೇಡ್ ಪಂಪಾಪತಿಯವರು ದಾವಣಗೆರೆ ನಗರಸಭೆಗೆ ಮೂರು ಬಾರಿ ಅಧ್ಯಕ್ಷರಾಗಿ ನಗರದ ನಾಗರಿಕರ ಒಳಿತಿಗಾಗಿ ಹಲವಾರು ಸುಧಾರಣಾ ಕೆಲಸಗಳನ್ನು ಮಾಡಿದ್ದಲ್ಲದೆ ದಾವಣಗೆರೆ ನಗರದ ತುಂಬಾ ಮರಗಳನ್ನು ಬೆಳೆಸಿ, ಜನತೆಗೆ ನೆರಳಾಗಿದ್ದದ್ದು ಈಗ ಇತಿಹಾಸ. ಆದರೆ ತಾವೇ ತೋಡಿಕೊಂಡ ಗುಂಡಿಗಳಿಗೆ ಕಮ್ಯೂನಿಸ್ಟ್ ಪಕ್ಷದ ನಾಯಕರು ಒಬ್ಬರ ನಂತರ ಮತ್ತೊಬ್ಬರು ಬಿದ್ದು ಹೋದಂತೆಲ್ಲಾ ಕೊಡುಗೈ ದಾನಿ, ವಿದ್ಯಾದಾನಿ ಇತ್ಯಾದಿ ಇತ್ಯಾದಿ ಕುಖ್ಯಾತಿಗಳನ್ನು ಗಳಿಸಿಕೊಳ್ಳುತ್ತಲೇ ಶಾಮನೂರು ಧಣಿ ಅರ್ಥಾತ್ ಶ್ಯಾಮನೂರು ಶಿವಶಂಕರಪ್ಪ ದಾವಣಗೆರೆ ನಗರಸಭೆಯನ್ನು ತನ್ನ 'ಹಸ್ತ'ದೊಳಗಿಟ್ಟುಕೊಂಡು ತನಗೆ ಬೇಕಾದ ಹಾಗೆ ನಿಯಂತ್ರಿಸುತ್ತಿರುವುದು ಈಗಿನ ವಿಪರ್ಯಾಸ. ಇಂತಹ ಸಂದರ್ಭದಲ್ಲೇ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಘೋಷಣೆಯಾಗಿವೆ.


ರವೀಂದ್ರನಾಥ


ಸಿದ್ದೇಶ್


ಎಚ್.ಎಸ್.ಶಿವಶಂಕರ್

ದಾವಣಗೆರೆ ನಗರಸಭೆಯನ್ನು ಮಹಾನಗರ ಪಾಲಿಕೆಯಾಗಿ ಘೋಷಿಸಿದ ನಂತರ ನಡೆಯುತ್ತಿರುವ ಪ್ರಥಮ ಚುನಾವಣೆ ಇದಾಗಿದೆ. ಈ ಹಿಂದೆ 35 ವಾರ್ಡುಗಳನ್ನು ಹೊಂದಿದ್ದ ನಗರಸಭೆ ಈಗ ಮಹಾನಗರ ಪಾಲಿಕೆಯಾಗಿ 41 ವಾರ್ಡುಗಳ ವಿಸ್ತರಣೆಯನ್ನು ಪಡೆದುಕೊಂಡಿದೆ. ಈ ವಾರ್ಡ್‌ಗಳ 41 ಮಂದಿ ಆಯ್ಕೆಗಾಗಿ ಒಟ್ಟು 262 ಜನ ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ದಾವಣಗೆರೆ ಮಹಾನಗರಪಾಲಿಕೆ, ಹರಿಹರ ನಗರಸಭೆಯನ್ನೊಳಗೊಂಡು ಜಿಲ್ಲೆಯ ಇತರೆ ತಾಲ್ಲೂಕುಗಳಾದ ಚನ್ನಗಿರಿ, ಹೊನ್ನಾಳಿ, ಹರಿಹರ, ಹರಪನಹಳ್ಳಿ ಮತ್ತು ಜಗಳೂರು ಪುರಸಭೆಗಳ ಒಟ್ಟು 149 ಅಭ್ಯರ್ಥಿಗಳ ಸ್ಥಾನಗಳಿಗಾಗಿ ಒಟ್ಟು 928 ನಾಮಪತ್ರಗಳು ಸಲ್ಲಿಕೆಯಾಗಿವೆ. ಹರಿಹರ ನಗರಸಭೆ ಮತ್ತು ಚನ್ನಗಿರಿ ಪುರಸಭಾ ಚುನಾವಣೆಗಳಲ್ಲಿ ಮಾತ್ರ ಜೆ.ಡಿ.ಎಸ್, ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಪಕ್ಷಗಳ ನಡುವೆ ತ್ರಿಕೋನ ಸ್ಪರ್ಧೆ ನಡೆದರೆ ಜಿಲ್ಲೆಯ ಉಳಿದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಯ ಮಧ್ಯೆ ನೇರ ಸ್ಪರ್ಧೆ ನಡೆಯಲಿದೆ. ಆದರೆ ರಾಜ್ಯ ರಾಜಕಾರಣದ ಮೇಲೂ ಪ್ರಭಾವ ಬೀರಬಹುದಾದ ದಾವಣಗೆರೆ ಮಹಾನಗರ ಪಾಲಿಕೆಯ ಚುನಾವಣೆಯು ಹಿಂದೆಂದೂ ಇಲ್ಲದಂತಹ ಪ್ರಾಧಾನ್ಯತೆ ಮತ್ತು ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದೆ. ಚುನಾವಣಾ ವಿಶ್ಲೇಷಣೆಗೆ ಮುನ್ನ ಇಲ್ಲಿನ ರಾಜಕೀಯ ಪಕ್ಷಗಳ ಪರಿಸ್ಥಿತಿಯನ್ನು ಅವಲೋಕಿಸುವುದು ಸೂಕ್ತವೆನಿಸುತ್ತದೆ.

ಅಧೋಗತಿಯತ್ತ ಕಾಂಗ್ರೆಸ್ ಪಕ್ಷ

ಮುಂಬರುವ ಈ ಅಧೋಗತಿಗೆ ಕಾಂಗ್ರೆಸ್ ಪಕ್ಷದ ಸ್ಥಳೀಯ ನಾಯಕತ್ವ ಮತ್ತು ಇದರ ಬೆಂಬಲಿಗರು ಪ್ರತ್ಯಕ್ಷ ಹಾಗೂ ಪರೋಕ್ಷ ಕಾರಣಕರ್ತರಾಗಿದ್ದಾರೆ. ಈ ಹಿಂದೆ ನಗರಸಭೆಯಲ್ಲಿ 35 ಸದಸ್ಯರನ್ನು ಕಾಂಗ್ರೆಸ್ ಪಕ್ಷವು ಹೊಂದಿದ್ದು ಅಧಿಕಾರದಲ್ಲಿದ್ದಷ್ಟು ಅವಧಿಯಲ್ಲಿ ಕಾಂಗ್ರೆಸ್ ಪುಢಾರಿಗಳು ಅಧ್ಯಕ್ಷಗಿರಿಗಾಗಿ ನಡೆಸಿದ ಪೈಪೋಟಿಯಲ್ಲಿ ಕಾಲ ತಳ್ಳುತ್ತ ಸಿಕ್ಕಿದ ಅಧಿಕಾರದ ಅವಕಾಶವನ್ನು ದುರ್ಬಳಕೆ ಮಾಡಿಕೊಂಡು ಕೋಟಿಗಟ್ಟಲೆ ಹಣ ದೋಚುವುದಕ್ಕೇ ಇವರಿಗೆ ಸಮಯ ಸಾಕಾಗಲಿಲ್ಲ! ಆಶ್ರಯ ಮನೆ, ರಸ್ತೆ, ಚರಂಡಿಗಳ ಕಾಮಗಾರಿಗಳನ್ನು ಲ್ಯಾಂಡ್‌ಆರ್ಮಿ ಮತ್ತು ನಿರ್ಮಿತಿ ಕೇಂದ್ರಗಳು ಎಂಬ ದಗಾಕೋರ ಸಂಸ್ಥೆಗಳಿಗೆ ಕಮಿಷನ್ ಆಧಾರದ ಮೇಲೆ ಗುತ್ತಿಗೆ ನೀಡಿ ಕಳಪೆ ಕಾಮಗಾರಿಗಳ ನರಕವನ್ನೇ ಕಾಂಗ್ರೆಸ್ ಪಕ್ಷ ಸೃಷ್ಟಿಸಿತು. ಅರೆಬರೆ ನಿರ್ಮಾಣಗೊಂಡು ದೊರೆತ ಆಶ್ರಯ ಮನೆಗಳನ್ನೇ ಮಹಾಭಾಗ್ಯವೆಂಬಂತೆ ಪಡೆದುಕೊಂಡವರೇ ಸಾಲ ಮಾಡಿ ಪೂರ್ಣಗೊಳಿಸಿಕೊಂಡಿದ್ದಾರೆ. ಇಂದಿಗೂ ಮಳೆ ಬಂದರೆ ಆಶ್ರಯ ಯೋಜನೆ ಮನೆಗಳ ರಸ್ತೆಗಳಲ್ಲಿ ಓಡಾಡಲು ಸಾಧ್ಯವಾಗದಂತಹ ಪರಿಸ್ಥಿತಿ ಇದೆ. ಕಟ್ಟಿದ 6,000 ಮನೆಗಳಲ್ಲಿ ಬಹಳಷ್ಟು ಮನೆಗಳನ್ನು ಕಾಂಗ್ರೆಸ್ ಪುಢಾರಿಗಳೇ ಬೇನಾಮಿ ಹೆಸರುಗಳಲ್ಲಿ ಕಬಳಿಸಿದ್ದಾರೆ. ಕೇವಲ ಐದಾರು ವರ್ಷಗಳ ಹಿಂದೆ ಏನೂ ಇಲ್ಲದಿದ್ದ ಹಲವು ಕಾಂಗ್ರೆಸ್ ಮಾಜಿ ನಗರಸಭಾಧ್ಯಕ್ಷರುಗಳು ಈಗ ಕೋಟ್ಯಾಧೀಶರಾಗಿ ಮೆರೆಯುತ್ತಿದ್ದಾರೆ. ನಗರದಲ್ಲಿರುವ 30-35 ಕೊಳಚೆ ಪ್ರದೇಶಗಳಲ್ಲಿ ಸ್ವರ್ಗವನ್ನು ಇಳಿಸುತ್ತೇವೆಂಬಂತಹ ಆಶ್ವಾಸನೆಗಳನ್ನು ನೀಡಿ ಓಟು ಪಡೆದು ಗೆದ್ದ ನಂತರ ಕಾಂಗ್ರೆಸ್‌ನವರು ಮತ್ತೆ ಅತ್ತ ಕಡೆ ತಿರುಗಿ ಕೂಡ ನೋಡಲಿಲ್ಲ. ಕಷ್ಟಕ್ಕೊಳಗಾದ ಜನರು ನೀರಿಲ್ಲದಿದ್ದಾಗ ಮತ್ತು ಇತರೆ ಸಮಸ್ಯೆಗಳು ತಲೆದೋರಿದಾಗ ಶಾಸಕ ಶಿವಶಂಕರಪ್ಪನ ಮನೆಗೆ ಅಹವಾಲು ಹೇಳಲು ಹೋಗಿ ಅವರಿಂದ ಕೇಂಕಾರ ಮತ್ತು ತಿರಸ್ಕಾರದ ಉತ್ತರಗಳನ್ನು ಪಡೆದು ಹಿಂತಿರುಗಿದ್ದಾರೆ. ಹೀಗಾಗಿ ಒಂದು ಕಡೆ ತಾತ್ಕಾಲಿಕ ಹಿನ್ನಡೆಯನ್ನು ಸಾಧಿಸುವ ಕಾಂಗ್ರೆಸ್ ಪಕ್ಷವು ಇನ್ನೊಂದು ಕಡೆ ಇದರ ಅಧೋಗತಿಯ ಮೆಟ್ಟಿಲನ್ನೇ ಉಪಯೋಗಿಸಿಕೊಂಡು ಕೋಮುವಾದಿಗಳು ಬಾಲ ಬಿಚ್ಚಲು ಸಹಕಾರ ನೀಡಿದಂತಾಗಿದೆ.

ಜೆ. ಡಿ. ಎಸ್. ಅವಕಾಶವಾದಿ ನೀತಿ, ಬಿ.ಜೆ.ಪಿ.ಗೆ ಇದು ಪುರೋಗತಿ

ಬಾಯಿ ಬಿಟ್ಟರೆ ಜಾತ್ಯತೀತತೆ, ಸಹಬಾಳ್ವೆಯ ಬಗ್ಗೆ ಬೊಬ್ಬೆ ಹೊಡೆಯುವ ಜೆ.ಡಿ.ಎಸ್. ಪಕ್ಷವು ಕೋಮುವಾದಿ ಪಕ್ಷವಾದ ಬಿ.ಜೆ.ಪಿ.ಯವರಿಗೆ ಕನಸಿನಲ್ಲಿ ಕಂಡರಿಯದ ಅಧಿಕಾರವನ್ನು ಕೊಡುವುದರ ಜೊತೆಗೆ ಜೆ.ಡಿ.ಎಸ್. ಪಕ್ಷವು ತಾನೂ ಅಧಿಕಾರದಲ್ಲಿರುವ ಅವಕಾಶವಾದಿತನದಿಂದಾಗಿ ರಾಜ್ಯಮಟ್ಟದಲ್ಲಿ ಪ್ರಭಾವ ಬೀರಲು ಕೋಮುವಾದಿಗಳಿಗೆ ಅವಕಾಶವನ್ನು ಒದಗಿಸಿದೆ. ದಾವಣಗೆರೆ ಜಿಲ್ಲೆಗೆ ಕೋ-ಜಾ ಸರ್ಕಾರದಿಂದ ಬಂದ ಅನುದಾನದಲ್ಲಿ ತಾವು ಸರಿಯಾಗಿ ತಿಂದು ಉಳಿದ ಎಂಜಲನ್ನು ಬಳಸಿಕೊಂಡು ಕೆಲಸಗಳನ್ನು ಮಾಡಿದ್ದರಿಂದಾಗಿ ಮತ್ತು ಸಕ್ಕರೆ ಸಚಿವ ರವೀಂದ್ರನಾಥ್

ಮಂತ್ರಿ ಆಲ್ಕೋಡ ತನ್ನ ಹಿಂಬಾಲಕರಿಂದ ಚರಿಸ್ಮಾ ಕಳೆದುಕೊಳ್ಳುತ್ತಾರೆಯೇ?



ರಾಯಚೂರು ಜಿಲ್ಲೆಯ ಬೇರೆಲ್ಲ ತಾಲೂಕುಗಳಿಗಿಂತ ದೇವದುರ್ಗ ಎಲ್ಲದರಲ್ಲೂ ಹಿಂದುಳಿದ ತಾಲ್ಲೂಕು. ಇದನ್ನು ಸರಿಯಾಗಿ ಗ್ರಹಿಸಿಯೇ ಏನೋ ರಾಜಕಾರಣಿಗಳು ತಮಗೆ ಎಷ್ಟು ದಕ್ಕುತ್ತದೋ ಅಷ್ಟನ್ನು ಹೊಡಕೊಂಡು ಇಲ್ಲಿಂದ ಎದ್ದು ಹೋದ ಮತಕ್ಷೇತ್ರ. ಆರಂಭದಿಂದಲೂ ಮೀಸಲು ಕ್ಷೇತ್ರವಾದ ದೇವದುರ್ಗವನ್ನು ಬಿ.ಶಿವಣ್ಣ, ಪುಷ್ಪಾವತಿ, ಬಿ.ಟಿ. ಲಲಿತಾನಾಯಕ, ಯಲ್ಲಪ್ಪ ಅಕ್ಕರಕಿ ಒಂದೇ ಸಮ ಹರಿದು ತಿಂದಿದ್ದಾರೆ. ದೇವದುರ್ಗವನ್ನು ತಮ್ಮ ಹುಲ್ಲುಗಾವಲನ್ನಾಗಿ ಮಾಡಿಕೊಂಡಿದ್ದಾರೆ. ಇಂಥ ಮತಕ್ಷೇತ್ರಕ್ಕೆ ಸದ್ಯ ಹನುಮಂತಪ್ಪ ಆಲ್ಕೋಡ ಎಂಬ ಕರ್ನಾಟಕದ ಯುವಜನ ಮತ್ತು ಕ್ರೀಡಾಮಂತ್ರಿ ಜನನಾಯಕರಾಗಿ ಆಯ್ಕೆಯಾಗಿದ್ದಾರೆ.

ಇಡೀ ತಾಲೂಕಿನ ಹಣೆಬರಹವೇ ಹೀಗಿರುವಾಗ ಇನ್ನೂ ಸ್ಥಳೀಯ ಪುರಸಭೆಯ ಕರ್ಮ ಇದಕ್ಕಿಂತ ಭಿನ್ನವೆಂದು ಭಾವಿಸಬೇಕಾಗಿಯೇ ಇಲ್ಲ, ಕಳೆದ ಸಲ ಯಲ್ಲಪ್ಪ ಅಕ್ಕರಕಿಯಂತಹ ಹೆಬ್ಬೆಟ್ಟಿನ ಗೆಣೆಯನನ್ನು ಎದುರಿಗೆ ಇಟ್ಟುಕೊಂಡು (ಯಲ್ಲಪ್ಪ ಅಕ್ಕರಕಿಯ ಅಣ್ಣನ ಮಗ) ಚಂದಪ್ಪ

ಚುನಾವಣೆಗಳ ಕೆಲವು ತಿಂಗಳ ಮುಂಚೆ ನಗರದಲ್ಲಿ ಮನೆ ಇಲ್ಲದವರಿಗೆ ಮನೆ ಕಟ್ಟಿಕೊಡುತ್ತೇವೆಂದು, ಈ ಬಗ್ಗೆ ಅರ್ಜಿಗಳನ್ನು ನೀಡಲು ಆಹ್ವಾನಿಸಿದಾಗ ಮನೆ ಸಿಗುತ್ತದೆಂದು ಮುಗಿ ಬಿದ್ದ ಸಹಸ್ರಾರು ನಗರದ ನಾಗರಿಕರ ನಡುವೆ ಪ್ರಭಾವ ಗಿಟ್ಟಿಸಿಕೊಂಡಿದ್ದರಿಂದಾಗಿ, ಇದೇ ಸಂದರ್ಭದಲ್ಲಿ ಕಾಲುವೆಗಳ ಕಾಮಗಾರಿ ಪರಿಶೀಲನೆ - ವಿರೋಧಿಗಳ ನೆಪಗಳ ಮೂಲಕ ಮಾಧ್ಯಮಗಳಲ್ಲಿ ಯಥೇಚ್ಛವಾಗಿ ಪ್ರಚಾರವನ್ನು ಪಡೆದುಕೊಂಡಿದ್ದು ಮುಂತಾದವು ಬಿಜೆಪಿಗೆ ಮಹಾನಗರಪಾಲಿಕೆಯ ಚುನಾವಣೆಯ ಅನುಕೂಲಕರ ಅಂಶಗಳಾಗಿ ಪರಿವರ್ತನೆಗೊಂಡಿದೆ.


ಆರು ತಿಂಗಳಿಗೊಮ್ಮೆ ಅಧ್ಯಕ್ಷರನ್ನು ಬದಲಾಯಿಸಿ ತಮ್ಮ ದೊರೆತನವನ್ನು ಮೆರೆದಿದ್ದರು. ಮುಂದಿನ ದಿನಗಳಲ್ಲೂ ಇದನ್ನೇ ಮುಂದುವರೆಸಬೇಕೆಂಬ ತರಾತುರಿಯಿಂದ ತನಗೆ ಸಲಾಮು ಹಾಕುವವರಿಗೆ ಮತ್ತು ಸವಾಲಾಗದಿರುವವರಿಗೆ ಮಾತ್ರ ಟಿಕೆಟ್‌ಗಳನ್ನು ನೀಡಿ, ಗೆಲ್ಲಬಹುದಾದಂತಹವರಿಗೆ ಟಿಕೆಟ್ ನೀಡದೆ ಪಕ್ಷೇತರರಾಗಿ ಚುನಾವಣೆಗೆ ನಿಲ್ಲಬೇಕಾದ ಸ್ಥಿತಿಗೆ ಶಿವಶಂಕರಪ್ಪ ತಳ್ಳಿದ್ದಾರೆ. ಇದಕ್ಕೆ ತಾಜಾ ಉದಾಹರಣೆಯೆಂದರೆ, ಬಿ. ಲೋಕೇಶ್‌ರವರಿಗೆ ಟಿಕೆಟ್ ನೀಡದೆ ಇರುವುದು. ಕಾಂಗ್ರೆಸ್‌ನ ಮುಂಚೂಣಿಯಲ್ಲಿದ್ದವರೆಲ್ಲ ಈಗಾಗಲೇ ನಗರಸಭೆಯ ಅಧ್ಯಕ್ಷ ಸ್ಥಾನ

ದಾವಣಗೆರೆ ಮಹಾನಗರ ಪಾಲಿಕೆ ಚುನಾವಣೆ:

ರಾಮರಾಜ್ಯ ಬಂದ್ರೂ ರಾಗಿ ಬೀಸೋದು ತಪ್ಪಲ್ಲ

ಟಿಕೆಟ್ ಹಂಚಿಕೆಯಲ್ಲಿ ತಾರತಮ್ಯ


ಪಕ್ಷಕ್ಕಿಂತ ಚುನಾವಣೆಯಲ್ಲಿ ಸ್ಪರ್ಧಿಸಿದ ವ್ಯಕ್ತಿಗಳನ್ನು ನೋಡಿ ಮತದಾರರು ಮತ ನೀಡುತ್ತಾರೆಂಬ ಅಭಿಪ್ರಾಯಗಳು ಇಲ್ಲಿವೆ. ಆದರೆ ಚುನಾವಣೆಗಳು ಬಂದ ತಕ್ಷಣ ಜಾತಿ, ರಕ್ತ ಸಂಬಂಧ, ಹಣದ ಪ್ರಭಾವಗಳಿಂದಾಗಿ ನೀಡಬೇಕಾದ ವ್ಯಕ್ತಿಗಳಿಗೆ ಟಿಕೆಟ್ ನೀಡದೇ ತಮ್ಮ ಪಕ್ಷದ ಕಾಲನ್ನೇ ಕಡಿದುಕೊಳ್ಳುವ ಪ್ರಕ್ರಿಯೆಗಳು ಎಲ್ಲಾ ಕಡೆ ನಡೆಯುವಂತೆ ಇಲ್ಲಿಯೂ ನಡೆಯುತ್ತಿದೆ. ಕೋಮುವಾದಿ ಪಕ್ಷವಾದ ಬಿ.ಜೆ.ಪಿ ಈ ವಿಷಯದಲ್ಲಿ ಸ್ವಲ್ಪ ಎಚ್ಚರ ವಹಿಸಿದ್ದರೆ ಕಾಂಗ್ರೆಸ್ ಪಕ್ಷವು ಮಾತ್ರ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತವರ ಮಗ ಮಲ್ಲಿಕಾರ್ಜುನನ ಅಣತಿಗೆ ಮಣೆ ಹಾಕಿದೆ.



ಕೆ.ಜಿ. ಶಿವಕುಮಾರ್

ಸಲಾಮು ಹೊಡೆಯುವವರಿಗೆ ಮಾತ್ರ ಟಿಕೆಟ್

ಈ ಹಿಂದೆ ದಾವಣಗೆರೆ ನಗರಸಭೆಯಲ್ಲಿ ಜೆ. ಡಿ. ಎಸ್., ಭಾರತೀಯ ಕಮ್ಯೂನಿಸ್ಟ್ ಪಕ್ಷ ಹಾಗೂ ಬಿ.ಜೆ.ಪಿ.ಗಳಿಗೆ ತಲಾ ಒಂದೊಂದು ಸ್ಥಾನ ಮಾತ್ರವೇ ದೊರೆತು ಕಾಂಗ್ರೆಸ್ ಪಕ್ಷವು ಮಾತ್ರ ಸಂಪೂರ್ಣ ಅಧಿಪತ್ಯವನ್ನು ಹೊಂದಿತ್ತು. ನಗರಸಭೆಯ ಮುಖ್ಯ ಫೈಲುಗಳಿಗೆ ಸಹಿ ಹಾಕುವ ಮುನ್ನ ಶಾಮನೂರು ಧಣಿಯ ಅನುಮತಿ ಪಡೆಯುವುದು ಕಡ್ಡಾಯವಾಗಿದ್ದರಿಂದ ತನಗೆ ಸಲಾಮು ಹೊಡೆಯುತ್ತಾ ಕೆಲಸ ಮಾಡುವವರನ್ನು ಮಾತ್ರ ನಗರಸಭಾ ಅಧ್ಯಕ್ಷರನ್ನಾಗಿಸುತ್ತಿದ್ದ ಶಾಮನೂರು ಶಿವಶಂಕರಪ್ಪ ಮೂರು ತಿಂಗಳು,




ಬಸವರಾಜ

ಮುಂತಾದವನ್ನು ಅನುಭವಿಸಿದ್ದಾರೆ. ಈಗ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ತಕ್ಷಣದ ಸೀನಿಯಾರಿಟಿ ಇದ್ದುದು ಲೋಕೇಶ್‌ರವರಿಗೆ ಮಾತ್ರ. ಸಭ್ಯ ರಾಜಕಾರಣಿ ಮತ್ತು ಗೆಲ್ಲುವ ಸ್ಪರ್ಧಿಯಾದ ಈತನನ್ನು ಕಡೆಗಣಿಸಿರುವುದು ಬಿ- ಬ್ಯಾಂಡ್ ಮತ್ತು ಎಸ್- ಬ್ಯಾಂಡ್‌ಗಳ (ಬಣಜಿಗ ಲಿಂಗಾಯತ ಮತ್ತು ಸಾದ ಲಿಂಗಾಯತ) ಶೀತಲ ಸಮರದಿಂದಾಗಿ ಮತ್ತು ಬಿ. ಲೋಕೇಶ್‌ರವರು ಶಿವಶಂಕರಪ್ಪನಿಗೆ ಮಣೆ ಹಾಕುವುದಿಲ್ಲವೆಂಬ ಕಾರಣಕ್ಕಾಗಿ ಈ ತಂತ್ರವನ್ನು ಹೆಣೆಯಲಾಗಿದೆ ಎನ್ನುವುದು ಶಿವಶಂಕ್ರಪ್ಪನ ರಾಜಕೀಯ ಗೊತ್ತಿರುವವರೆಲ್ಲರಿಗೂ ಅರ್ಥವಾಗುವಂತಹದೇ ಆಗಿದೆ.

ಕೋಮುವಾದಿ ಬಿ.ಜೆ.ಪಿ. ಪಕ್ಷವೂ ಕೂಡ ಜಿಲ್ಲಾ ಮಂತ್ರಿ ರವೀಂದ್ರನಾಥ ಹಾಗೂ ಸಂಸದ ಸಿದ್ದೇಶ್‌ರವರ ಮರ್ಜಿಗೆ ಒಳಗಾಗಿ ಹಿಂದಿನಿಂದ ಕೆಲಸ ಮಾಡಿದವರಿಗೆ ಟಿಕೆಟ್ ನೀಡದೇ ವಂಚಿಸಿದೆ. ಹೀಗಾಗಿ ಹೆಚ್ಚು ಸ್ಥಾನಗಳನ್ನು ಪಡೆಯಬೇಕೆನ್ನುವ ಬಿ.ಜೆ.ಪಿಯ ಕನಸು ಕೂಡಾ ಭಗ್ನವಾಗಲಿದೆ.

ಚುನಾವಣಾ ಕಣದಲ್ಲಿ...

ಕಾಂಗ್ರೆಸ್ ಪಕ್ಷವು ಈ ಬಾರಿ ಬಹುತೇಕ ಹಳಬರಿಗೆ ನಾಮ ಪತ್ರಗಳನ್ನು ನೀಡಿಲ್ಲ, ಹಳಬರಲ್ಲಿ 33 ನೇ ವಾರ್ಡಿನಿಂದ ಕೆ. ಜಿ. ಶಿವಕುಮಾರ್, ವಾರ್ಡ್ ಸಂಖ್ಯೆ 1 ರಿಂದ ಬಿ. ವೀರಣ್ಣ, ವಾರ್ಡ್ ಸಂಖ್ಯೆ 21 ರಿಂದ ದಿನೇಶ್‌ಶೆಟ್ಟಿಗೆ ಮಾತ್ರ ಪಕ್ಷದ ನಾಮಪತ್ರಗಳು ದಕ್ಕಿವೆ. ಬಿ. ಲೋಕೇಶ್ ಮತ್ತು ಸೀಮೆಎಣ್ಣೆ ಮಲ್ಲೇಶಿಗೆ ಪಕ್ಷದ ನಾಮಪತ್ರಗಳು ದೊರೆಯದೇ ಇವರು ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದಾರೆ. ಟಿಕೆಟ್ ವಂಚಿತನಾದ ಮಾಜಿ ನಗರಸಭಾಧ್ಯಕ್ಷ ಬಿ. ಬಸವರಾಜ ಸ್ಪರ್ಧೆಗೆ ಇಳಿದಿಲ್ಲ, ಕಾಂಗ್ರೆಸ್ ಪಕ್ಷ ಹಳಬರಿಗೆ ನಾಮಪತ್ರ ನೀಡಿರುವವರಲ್ಲಿ ಕೆ. ಜಿ. ಶಿವಕುಮಾರ್ ಮತ್ತು ದಿನೇಶ್‌ಶೆಟ್ಟಿ ಸೋಲುವುದು ಗ್ಯಾರಂಟಿಯೆಂದು, ಬಿ. ವೀರಣ್ಣ ಗೆಲ್ಲಬಹುದೆಂದು



ಹೇಳಾಗುತ್ತಿದೆ. ಎಲ್ಲಾ 41 ವಾರ್ಡ್‌ಗಳಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್‌ಗೆ 10 ರಿಂದ 15 ಸ್ಥಾನಗಳು ಸಿಗಬಹುದೆಂದು ಹೇಳಲಾಗುತ್ತಿದೆ. ಬಿ.ಜೆ.ಪಿ. ಕೂಡ ಹಳಬರನ್ನು ಕಡೆಗಣಿಸಿ, ಹೊಸಬರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ನಾಮಪತ್ರಗಳನ್ನು ನೀಡಿದೆ. ಈ ಪಕ್ಷ 41 ವಾರ್ಡ್‌ಗಳಿಗೂ ಅಭ್ಯರ್ಥಿಗಳನ್ನು ನಿಲ್ಲಿಸಿದೆ. ಬಿ.ಜೆ.ಪಿ.ಯ ವತಿಯಿಂದ ಈ ಹಿಂದೆ ಒಂದೇ ಒಂದು ನಗರಸಭಾ ಸದಸ್ಯನ ಸ್ಥಾನವನ್ನು ಹೊಂದಿದ್ದ ಎಂ. ಜೆ. ಬಕ್ಕೇಶ್ 13 ನೇ ವಾರ್ಡಿನಿಂದ ಸ್ಪರ್ಧಿಸಿದ್ದಾರೆ. ಈತನ ಜೊತೆಗೆ ಪಕ್ಷದ ನಾಮಪತ್ರಗಳನ್ನು ಹೊಂದಿರುವ ಜಿ. ಶಿವಯೋಗಪ್ಪ 20 ನೇ ವಾರ್ಡಿನಿಂದ, ಪಿ. ಆರ್. ನಾಗರಾಜ್ ಪಿಸಾಳೆ ಮುಂತಾದವರು ಸ್ಪರ್ಧೆಗೆ ಇಳಿದ್ದಿದ್ದಾರೆ. ಇವರಲ್ಲಿ ಎಂ. ಜೆ. ಬಕ್ಕೇಶ್ ಖಚಿತವಾಗಿ ಗೆಲ್ಲುವುದರೊಂದಿಗೆ ಈ ಬಾರಿಯ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ 8 ರಿಂದ 10 ಸ್ಥಾನಗಳನ್ನು ಬಿ.ಜೆ.ಪಿ. ಗೆದ್ದುಕೊಳ್ಳಬಹುದೆಂದು ಹೇಳಲಾಗುತ್ತಿದೆ. ಕೋಮುವಾದಿ ಪಕ್ಷವಾದ ಬಿ.ಜೆ.ಪಿ.ಯು ಕಾಂಗ್ರೆಸ್ ಹಾಗೂ ಜೆ.ಡಿ.ಎಸ್. ಗಳ ಬಲಹೀನತೆಗಳ ಕಾರಣದಿಂದಾಗಿ ಮಹಾನಗರ ಪಾಲಿಕೆಯಲ್ಲಿ ತನ್ನ ಸದಸ್ಯರ ಸಂಖ್ಯೆಯನ್ನು ಹಿಗ್ಗಿಸಿಕೊಳ್ಳುವ ಅವಕಾಶವನ್ನು ಪಡೆದುಕೊಂಡಿದೆ.

ಜೆ.ಡಿ.ಎಸ್.ನ ಅಧ್ಯಕ್ಷಗಿರಿ ಬದಲಾವಣೆ ಎಂಬ ದೇವೇಗೌಡರ ಆಧುನಿಕ ಕುತಂತ್ರದಿಂದಾಗಿ ಮತ್ತು ಜೆ.ಡಿ.ಎಸ್. ಪಕ್ಷದ ನಾಯಕರಾದ ಹೆಚ್. ಎಸ್. ಶಿವಶಂಕರ್ ಮತ್ತು ಇವರ ತಮ್ಮ ಹೆಚ್. ಎಸ್. ನಾಗರಾಜ್ ಕೆಲವು ತಿಂಗಳುಗಳ ಹಿಂದೆ ಅಲ್ಪಸಂಖ್ಯಾತರಿಗೆ ಮಸೀದಿಗಾಗಿ ಬಹಳ ಕಡಿಮೆ ದರದಲ್ಲಿ ಭೂಮಿ ಕೊಡಿಸಿರುವುದು ಮತ್ತು ಅಲ್ಪಸಂಖ್ಯಾತರ ಏರಿಯಾಗಳಲ್ಲಿ ಅಲ್ಪಸ್ವಲ್ಪ ಕೆಲಸ ಮಾಡಿರುವುದರಿಂದ ಹಾಗೂ ಆಜಾದ್‌ನಗರ, ಗಾಂಧಿನಗರ, ಬಸವರಾಜಪೇಟೆ ಮುಂತಾದ ಕಡೆ ಜೆ.ಡಿ.ಎಸ್. ಪ್ರಭಾವವನ್ನು ಉಳಿಸಿಕೊಂಡಿರುವುದರಿಂದಾಗಿ 6 ನೇ ವಾರ್ಡಿನ ಸ್ಪರ್ಧಿ ಮುನ್ನಾ ಪೈಲ್ವಾನ್, 2 ನೇ ವಾರ್ಡಿನ ಸ್ಪರ್ಧಿ ಎಸ್. ಲಿಂಗಪ್ಪ ಮುಂತಾದವರೊಂದಿಗೆ 5ರಿಂದ 6 ಸ್ಥಾನಗಳನ್ನು ಜೆ.ಡಿ.ಎಸ್. ಪಡೆಯುವ ಸಾಧ್ಯತೆ ಇದೆ. ಭಾರತೀಯ ಕಮ್ಯೂನಿಸ್ಟ್ ಪಕ್ಷವು ಒಂದೆರಡು ಸ್ಥಾನಗಳನ್ನು ಪಡೆದುಕೊಳ್ಳಬಹುದೆಂಬ ಅಭಿಪ್ರಾಯ ಇಲ್ಲಿ ವ್ಯಕ್ತವಾಗುತ್ತಿದೆ.

ರಾಮ ಬಂದ್ರೂ ರಾಗಿ ಬೀಸೋದು ತಪ್ಪಲ್ಲ

ನಮ್ಮ ಪಕ್ಷವೇ ಮಹಾನಗರ ಪಾಲಿಕೆಯ ಅಧಿಕಾರ ಹಿಡಿಯುತ್ತದೆಂದು ಕಾಂಗ್ರೆಸ್, ಬಿ.ಜೆ.ಪಿ. ಹಾಗೂ ಜೆ.ಡಿ.ಎಸ್. ಪಕ್ಷಗಳವರು ಹೇಳುತ್ತಿದ್ದಾರಾದರೂ ಇಲ್ಲಿ ಪರಿಸ್ಥಿತಿ ಬೇರೆಯೇ ಆಗಿದೆ. ಇಷ್ಟು ದಿನ ಅಧಿಕಾರ ನಡೆಸಿ ನಗರಸಭೆಯನ್ನು ನುಣ್ಣಗೆ ಬೋಳಿಸಿರುವುದಲ್ಲದೆ ಈಗ ರಾಜ್ಯ ಮಟ್ಟದಲ್ಲಿ ಅಧಿಕಾರ ವಂಚಿತಗೊಂಡಿರುವ ಕಾಂಗ್ರೆಸ್ ಪಕ್ಷಕ್ಕೆ ಮತದಾರ ಈ ಹಿಂದಿನಷ್ಟು ಸುಲಭವಾಗಿ ಕೈಗೆಟುಕದ ಪರಿಸ್ಥಿತಿ ಇದೆ. ಮೂರು ಮಂದಿ ಶಾಸಕರು ಹಾಗೂ ಒಬ್ಬ ಸಂಸದ ಜೊತೆಗೆ ಜಿಲ್ಲಾ ಉಸ್ತುವಾರಿ ಮಂತ್ರಿ ಪದವಿಯನ್ನು ಹೊಂದಿರುವ ಬಿ.ಜೆ.ಪಿ. ಪಕ್ಷವು ಮೊದಲಿಗಿಂತ ಈಗ ಸ್ವಲ್ಪ ಬಲಗೊಂಡಿದ್ದರೂ ತನ್ನ ಕೋಮುವಾದಿ ಹಿಂಸಾಕಾಂಡಗಳಿಂದಾಗಿ ಸೃಷ್ಟಿಸಿದ ಅರಾಜಕತೆ ಹಾಗೂ ಅಸ್ಥಿರತೆಯ ಕಹಿಯನ್ನು ಮತದಾರರ ಮನಸ್ಸುಗಳಿಂದ ಅಷ್ಟು ಸುಲಭವಾಗಿ ತೊಡೆದು ಹಾಕಲು ಸಾಧ್ಯವೇ ಇಲ್ಲ. ಇನ್ನು ಜೆ. ಡಿ. ಎಸ್. ಪಕ್ಷ ಈ ಜಿಲ್ಲೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯವರಿಗೆ ಸದ್ಯದಲ್ಲಿ ಸವಾಲಾಗುವ ಶಕ್ತಿಯೇ ಅಲ್ಲ - ಹಾಗಾಗಿ ಯಾವುದೇ ಒಂದು ಪಕ್ಷವು ಸಂಪೂರ್ಣ ಬಹುಮತವನ್ನು ಪಡೆದುಕೊಳ್ಳುವ ಸಾಧ್ಯತೆ ಇಲ್ಲಿ ಬಹಳ ಕಡಿಮೆ ಇದೆ. ಚುನಾವಣೆಯ ನಂತರ ಮಹಾನಗರ ಪಾಲಿಕೆಯ ಸದಸ್ಯರನ್ನು ಕೊಂಡುಕೊಳ್ಳುವ ಸರ್ಕಸ್ಸಿನ ಮೂಲಕ ಕಾಂಗ್ರೆಸ್ ಅಥವ ಬಿ.ಜೆ.ಪಿ. ಅಧಿಕಾರ ಹಿಡಿಯುವ ಸಾಧ್ಯತೆಯೇ ಹೆಚ್ಚಾಗಿದೆ. ಇಂದು (21-09-2007) ನಡೆದಿರುವ ಮುಖ್ಯ ಮಂತ್ರಿ ಕುಮಾರಸ್ವಾಮಿಯ ಪಾದಯಾತ್ರೆ, ನಂತರದ ರಾಜಕೀಯ ಪವಾಡಗಳಿಂದ ಜೆ.ಡಿ.ಎಸ್. ಸ್ವಲ್ಪ ಹೆಚ್ಚಿನ ಸ್ಥಾನಗಳನ್ನು ಪಡೆದುಕೊಂಡು ಬಿಜೆಪಿ ಜೊತೆ ಶಾಮೀಲಾಗಿ ಮಹಾನಗರ ಪಾಲಿಕೆಯನ್ನು ಆಳಲು ಮುಂದಾಗುವ ಸಾಧ್ಯತೆಯನ್ನೂ ತಳ್ಳಿ ಹಾಕುವಂತಿಲ್ಲ. ಆದರೆ ಎಲ್ಲ ಪಕ್ಷಗಳವರ ಮೋಸಗಳನ್ನು ಕಂಡಿರುವ ಜನರು ಮಾತ್ರ 'ಯಾರು ಬಂದ್ರೆ ಏನು ಮಾಡ್ತಾರೆ? ಎಲ್ಲೂ ಮೋಸಗಾರರೇ! ರಾಮ ರಾಜ್ಯ ಬಂದ್ರೂ ರಾಗಿ ಬೀಸೋದು ತಪ್ಪಲ್ಲ' ಎನ್ನುತ್ತಿದ್ದಾರೆ.

■ ಚಂದ್ರಶೇಖರ ತೋರಣಘಟ್ಟ


ರಾಯಚೂರು

ಅಕ್ಕರಕಿ ಆಡಿದ ನಾಟಕಗಳನ್ನಿನ್ನೂ ಜನ ಮರೆತಿಲ್ಲ. ಸುಮಾರು ಹದಿನೈದು ವರ್ಷಗಳ ಕಾಲ ಅಕ್ರಮ ಆಸ್ತಿ ಮಾರಾಟ, ಹೊಸ ಲೇಔಟ್‌ಗಳಲ್ಲಿಯ ಗಾರ್ಡನ್ ಜಾಗಗಳನ್ನು ನುಂಗಿರುವುದೂ ಅಲ್ಲದೆ ಪಟ್ಟಣ ಪಂಚಾಯತಿಯ ನೌಕರರ ನೇಮಕಾತಿಯಲ್ಲೂ ಭ್ರಷ್ಟಾಚಾರವನ್ನು ಪೋಷಿಸಿಕೊಂಡೆ ಬರಲಾಗಿದೆ. ಸಂತೆ ಮೈದಾನ, ಪುರಸಭೆಯ ಮಳಿಗೆಗಳನ್ನು ಇದುವರೆಗೆ ಯಾವ ಮಾಪದಂಡದ ಮೇಲೆ ಈಗಿರುವವರಿಗೆ ಉಂಬಳಿಯಾಗಿ ಬಿಡಲಾಗಿದೆಯೋ ತಿಳಿಯುತ್ತಿಲ್ಲ. ಇದನ್ನು ಕೇಳಿದವರಿಗೆ ಹೆದರಿಸಿ-ಬೆದರಿಸಿ ಗೂಂಡಾಗಿರಿಗೆ ಇಳಿಯುವುದು ಇಲ್ಲಿ ಸಾಮಾನ್ಯ ಎನ್ನುವಂತಾಗಿ ಬಿಟ್ಟಿದೆ. ಈ ಎಲ್ಲಾ ಕೆಲಸಗಳಿಗೂ ನಾಸೀರ ಅಲಿ ಎಂಬ ನಾಲಾಯಕ್ ಚೀಫ್ ಆಫೀಸರ್ ಅಸ್ತು ಅನ್ನುತ್ತಲೇ ಬಂದಿದ್ದ. ಈ ನಾಸೀರ ಅಲಿ ಎಂಥ ಪಾಯಖಾನೆ ತಿನ್ನುವ ಪುಢಾರಿ ಎಂಬುದು ಇಡೀ ದೇವದುರ್ಗವೇ ಬಲ್ಲುದು. ಲಿಂಗಸೂಗೂರು, ಹಟ್ಟಿ ಮುಂತಾದ ಕಡೆ ನುಂಗಿದ್ದು ಸಾಕಾಗಲಿಲ್ಲವೆಂಬಂತೆ ಈಗ ಮುದಗಲ್ಲಿಗೆ ವರ್ಗ ಮಾಡಿಸಿಕೊಂಡಿದ್ದಾನೆ. ಇಂತಹ ಚೇಳೂಫಸನ್ನು ಸಾಕಿ ಸಲಹಿದ ಚಂದಪ್ಪ ಅಕ್ಕರಕಿ ಎಂಬ ಕಾಂಗ್ರೆ

ಅಧ್ಯಕ್ಷಗಿರಿಯಲ್ಲಿ ದೇವದುರ್ಗ ಪಟ್ಟಣ ಎಷ್ಟೊಂದು ಅಭಿವೃದ್ಧಿ ಹೊಂದಿದೆ ಎಂಬುದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.




ಇದೇ ಮತಕ್ಷೇತ್ರದಿಂದ ಗೆದ್ದು ಬಂದಿರುವ ಆಲ್ಕೋಡ ಹನುಮಂತಪ್ಪ ಮಂತ್ರಿಯಾಗುತ್ತಲೇ ಕೆಲವು ಬದಲಾವಣೆಯನ್ನು ಕಾಣುತ್ತಿದೆ. ಪುರಸಭೆಗೆ 2 ಕೋಟಿ ರೂ.ಗಳ ಬಜೆಟ್, ಮತ್ತೊಂದು ಸಲ 3 ಕೋಟಿ ಬಜೆಟ್ ತಂದು ಹಾಕಿದ್ದಾನಾದರೂ ಅದೆಲ್ಲ ಕಾದ ಹೆಂಚಿನ ಮೇಲೆ ಸಿಂಪಡಿಸಿದ ಹನಿಗಳಂತಾಗಿದೆ. ಸ್ಟಮ್‌ಬೋರ್ಡ್‌ನಿಂದ 7 ಕೋಟಿ ರೂಪಾಯಿಗಳ ಎಸ್ಟಿಮೇಟ್ ತಯಾರಿಸಿ ಇಲಾಖೆಯ ಮಂಜೂರಾತಿಗೆ ಕಾದು ಕುಳಿತಿದೆ. ಬಸ್‌ಡಿಪೋ, ಅಗ್ನಿಶಾಮಕ ದಳದ ಕಚೇರಿಗಳು ಈಗಾಗಲೇ ಉದ್ಘಾಟನೆಗೆ ಕಾದಿವೆ. ಮಿನಿ ವಿಧಾನಸೌಧಕ್ಕೂ



ನಿವೇಶನ ಗೊತ್ತುಪಡಿಸಲಾಗಿದೆ. ಈ ಸಂದರ್ಭದಲ್ಲಿ ಕೆಲವು ಅಂಗಡಿಗಳ ಸ್ಥಳಾಂತರ ಮಾಡಿಸಬೇಕಾದ ಅನಿವಾರ್ಯ ಕ್ರಮವನ್ನು ಆಲ್ಕೋಡ ತೆಗೆದುಕೊಂಡಿದ್ದಾರೆ. ಜನಸಾಮಾನ್ಯರ ಈ ಅಸಮಾಧಾನವನ್ನು ಎನ್‌ಕ್ಯಾಷ್ ಮಾಡಿಕೊಳ್ಳಲು ಅವರದೇ ಪಕ್ಷದ ಮಾಜಿ ವಿಧಾನ ಪರಿಷತ್ ಸದಸ್ಯನಾದ ಬಸವರಾಜ ಪಾಟೀಲ ಇಟಗಿ ಸ್ಕೆಚ್ ಹಾಕಿಕೊಂಡು ಕುಳಿತಿದ್ದಾರೆ. ಮುನೀರ ಪಟೇಲ್, ಜಾಕೀರಹುಸೇನ್, ಅಯ್ಯಾಳಪ್ಪ ಎಂಬ ತಮ್ಮ ಹಿಂಬಾಲಕರಿಗೆ ಛೂಬಿಟ್ಟು ಪುರಸಭೆಯ ವಾರ್ಡ್‌ಗಳಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ಉತ್ತೇಜನ ನೀಡಿದ್ದಾರೆ. ಹೇಗಾದರೂ ಸೈ ಹನುಮಂತಪ್ಪ ಆಲ್ಕೋಡನ ಹುಟ್ಟು ಅಡಗಿಸಬೇಕು ಎಂದು ಪಣತೊಟ್ಟಿರುವ ಇಟಗಿ ಗೆಲ್ಲುತ್ತಾರೋ? ಸೋಲುತ್ತಾರೋ ಎಂಬುದು ಜನರೇ ನಿರ್ಧರಿಸಬೇಕಾಗಿದೆ.

ರಾಯಚೂರು ಮತಕ್ಷೇತ್ರದ ಎಂ.ಪಿ. ವೆಂಕಟೇಶ್ ನಾಯಕ ಇತ್ತ ಸುಳಿಯೂ ನೋಡಿಲ್ಲ. ಸಿದ್ರಾಮೇಶ್ವರ ವಾರ್ಡದಿಂದ ಶರಣಪ್ಪ ಬಳಿ ಎಂಬ ಅರ್ಹ ವ್ಯಕ್ತಿ ಚುನಾವಣೆಯ ಕಣಕ್ಕೆ ಇಳಿದಿದ್ದಾರೆ. ಇವರನ್ನು ಗೆಲ್ಲಿಸಿ ತರಬೇಕಾದುದು ಆ ವಾರ್ಡಿನ ಜನರ ಕರ್ತವ್ಯವಾಗಿದೆ. ಇಲ್ಲದೆ ಹೋದರೆ ಬರೀ ಕೊಳಕರನ್ನೇ ಮುಂದೆ ಮಾಡಿ ನಡೆದರೆ ಪುರಸಭೆಯ ಹಣೆಬರಹ ಏನಾಗುತ್ತದೋ? ಎಂದು ಈಗಲೇ ಹೇಳಬಹುದಾಗಿದೆ. ಹನುಮಂತಪ್ಪ ಆಲ್ಕೋಡನ ಹಿಂಬಾಲಕರಾಗಿ ಓಡಾಡುತ್ತಿರುವ ಲಕ್ಷ್ಮಣ ಅಕ್ಕರಕಿ, ರಾಠೋಡ ಮುಂತಾದವರು ಇದೇ ಗುಂಪಿಗೆ ಸೇರಿದವರಾಗಿದ್ದಾರೆ.



ಆಲ್ಕೋಡ ಗೊತ್ತಿದ್ದೂ ಇದಕ್ಕೆ ಮತ್ತಷ್ಟು ಇಂಬು ನೀಡಿದರೆ ಸ್ವತಃ ಅವರೇ ತಮ್ಮ ಚಾರಿತ್ರ್ಯವನ್ನು ಕಳೆದುಕೊಳ್ಳುವುದರಲ್ಲಿ ಯಾವ ಅನುಮಾನವೂ ಬೇಡ.

■ ವಿಶ್ವಾರಾಧ್ಯ ಸತ್ಯಂಪೇಟೆ

ಚಿತ್ರದುರ್ಗ

ಈ ಬಾರಿ ಚಿತ್ರದುರ್ಗ ನಗರಸಭಾ ಚುನಾವಣೆಯಲ್ಲಿ ಸ್ಪರ್ಧೆಗಿಳಿದಿರುವ ಅಭ್ಯರ್ಥಿಗಳ ಪೂರ್ವಾಪರಗಳನ್ನು ನೋಡಿದರೆ ನಗರದ ನಾಗರಿಕರ ಗ್ರಹಚಾರ ನೆಟ್ಟಗಿದ್ದಂತೆ ಕಾಣುವುದಿಲ್ಲ. ಅದೇನು ಚುನಾವಣಾ ಸ್ಪರ್ಧಿಗಳೋ ಏನೋ ಬಹುತೇಕ ದೋ ನಂಬರ್ ದಂಧೆಕೋರರೇ ಅಖಾಡಕ್ಕಿಳಿದು ಬಿಟ್ಟಿದ್ದಾರೆ. ಚುನಾವಣೆಯಲ್ಲಿ ಹಣಬಲ -ತೋಳ್ಬಲಗಳದ್ದೇ ನಿರ್ಣಾಯಕ ಎಂಬಂತಹ ವಾತಾವರಣ ನಿರ್ಮಿಸಲಾಗಿದೆ. ನಗರದಲ್ಲೆಲ್ಲಾ ಇಂತಹ ಹರಾಮ್ ಚೋರ್‌ಗಳ ಸ್ಪರ್ಧೆಯದ್ದೇ ಬಿಸಿಬಿಸಿ ಚರ್ಚೆ. ಇವರ ಅಬ್ಬರದ ನಡುವೆ ನಿಜವಾದ ಕಾಳಜಿಯಿಂದ ಸ್ಪರ್ಧೆಗಿಳಿದವರು ಲೆಕ್ಕಕ್ಕೇ ಇಲ್ಲ ಎಂಬಂತಹ ಪರಿಸ್ಥಿತಿ.

ಅಖಾಡದಲ್ಲಿ ದೋ ನಂಬರ್ ದಂಧೆಕೋರರು!


ತಿಪ್ಪೇರೆಡ್ಡಿ

ಪ್ರಸ್ತುತ ಚುನಾವಣೆ ಕೌನ್ಸಿಲರ್‌ಗಳಿಗಿಂತ ಹಾಲಿ ಶಾಸಕ ಜಿ.ಎ. ತಿಪ್ಪಾರೆಡ್ಡಿ ಜೆಡಿಎಸ್‌ನ ಎಸ್.ಕೆ. ಬಸವರಾಜನ್‌ರವರುಗಳಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿಬಿಟ್ಟಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಗೆಲುವಿನ ಸನಿಹಕ್ಕೆ ಬಂದು ತಿಪ್ಪಾರೆಡ್ಡಿಗೆ ಸವಾಲಾಗಿದ್ದ ಎಸ್.ಕೆ. ಬಸವರಾಜನ್ ನಗರದಲ್ಲಿ ನಿರೀಕ್ಷೆಗೂ ಮೀರಿ ಓಟುಗಳನ್ನು ಪಡೆದಿದ್ದರು. ತಿಪ್ಪಾರೆಡ್ಡಿಯನ್ನು ಆರಂಭದಿಂದಲೂ ಬೆಂಬಲಿಸುತ್ತಿದ್ದ ಮುಸ್ಲಿಮರು ಎಸ್.ಕೆ.ಬಿ.ಯನ್ನು ಅಪ್ಪಿಕೊಂಡಿದ್ದರು.


ಬಸವರಾಜನ್

ಇದೇ ಕಾರಣಕ್ಕಾಗಿಯೇ ಶಾಸಕ ತಿಪ್ಪಾರೆಡ್ಡಿ ಮುಂದಿನ ಚುನಾವಣೆಗೆ ಬೇಕಾಗುವ ಹಣಬಲ -ತೋಳ್ಬಲಗಳನ್ನು ನೆಚ್ಚಿಕೊಂಡೇ ಅವಾಂತರಕಾರಿಗಳಿಗೆ, ದೋ ನಂಬರ್ ದಂಧೆಕೋರರಿಗೆ ಟಿಕೆಟ್‌ಗಳನ್ನು ಹಂಚಿ, ನಿಷ್ಠಾವಂತ ಕಾರ್ಯಕರ್ತರ ವಿರೋಧ ಕಟ್ಟಿಕೊಂಡಿದ್ದಾರೆ.


ನಗರಸಭೆಯ ಮಾಜಿ ಅಧ್ಯಕ್ಷ ಎಚ್.ಸಿ. ನಿರಂಜನಮೂರ್ತಿ, ಎಂ. ಚಂದ್ರಶೇಖರ್, ಡಿ.ಟಿ. ವೆಂಕಟೇಶ್ ಪತ್ರಿಕಾಗೋಷ್ಠಿಯೊಂದನ್ನು ಕರೆದು ಪಕ್ಷದ ನಿಷ್ಠಾವಂತರನ್ನು ಕೈಬಿಟ್ಟು ಕ್ರಿಮಿನಲ್‌ಗಳಿಗೆ ಮಣೆ ಹಾಕಿರುವ ತಿಪ್ಪಾರೆಡ್ಡಿಯವರ ಧೋರಣೆಯನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದಾರೆ.

ಸಾರ್ವಜನಿಕ ಬದುಕನ್ನು ಪ್ರತಿನಿಧಿಸುವ ಯಾವ ಅರ್ಹತೆಗಳೂ ಇಲ್ಲದ ಗ್ಯಾಂಬ್ಲರ್ ಅನ್ವರ್ ಶಿವು ಶಾಸಕ ತಿಪ್ಪಾರೆಡ್ಡಿಯವರಿಂದ ಆರು ಬಿ. ಫಾರಂಗಳನ್ನು ತೆಗೆದುಕೊಂಡಿದ್ದಾನೆ. ಈತ ಚುನಾವಣೆಯಲ್ಲಿ ಸ್ಪರ್ಧಿಸುತ್ತಿಲ್ಲವಾದರೂ ತನ್ನ ದೋ ನಂಬರ್ ದಂಧೆಗಳನ್ನು ಬೆಂಬಲಿಸುವವರಿಗೆ ಟಿಕೆಟ್ ನೀಡಿ ತನ್ನ ಕೃಪಾಕಟಾಕ್ಷದಿಂದ ಗೆಲ್ಲಿಸಿ ತಾನೊಬ್ಬ ಕಿಂಗ್‌ಮೇಕರ್ ಆಗಲು ಹೊರಟಿದ್ದಾನೆ.

ಅನ್ವರ್ ಜೊತೆ ಇಸ್ಪೀಟ್ ದಂಧೆಯಲ್ಲಿ ಸಾಥ್ ನೀಡುವ ಪರಮೇಶ್ ತಾಯಿ ಲಕ್ಷ್ಮಮ್ಮ (ಬಡ್ಡಿ ಬಾಲಮ್ಮ)ನನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಹತ್ತನೇ ವಾರ್ಡಿನಿಂದ ಕಣಕ್ಕಿಳಿಸಲಾಗಿದೆ. ಮೀಟರ್ ಬಡ್ಡಿ ಹಣದ ವಸೂಲಿಗಾಗಿ ಬೆನ್ನು ಹತ್ತುವುದು, ನಗರಸಭೆಯ ನಿವೇಶನಗಳಲ್ಲಿ ಒಂದಷ್ಟು ಮನೆಗಳನ್ನು ಅಕ್ರಮವಾಗಿ ಕಟ್ಟಿಕೊಂಡ ಸಾಧನೆ ಇವರ ಬೆನ್ನಿಗಿದೆ. ಈಯಮ್ಮ ಓಟು ಕೇಳಲು ದಂಡಿನ ಜೊತೆ ಹೊರಟರೆ ಜನ ಬಡ್ಡಿ ಹಣ ವಸೂಲಿಗಾಗಿ ಫೀಲ್ಡಿಗಿಳಿದಿದ್ದಾರೆಂದು ಅಪಾರ್ಥ ಮಾಡಿಕೊಳ್ಳುವ ಸಂಭವಗಳೇ ಹೆಚ್ಚಾಗಿವೆ.

ಇನ್ನು ನಗರಸಭೆಯ ಮಾಜಿ ಉಪಾಧ್ಯಕ್ಷ ಹನೀಫನದು ಕಳ್ಳಗಂಧ ಸಾಗಣೆಯೇ ವೃತ್ತಿ. ಈತ 11 ನೇ ವಾರ್ಡಿನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾನೆ. ದಂಧೆಯಲ್ಲಿ ಮಾಡಿದ ಹಡಬೆ ಹಣದಿಂದಲೇ ಟಿಕೆಟ್ ಗಿಟ್ಟಿಸಿದ್ದಾನೆ. ಈತ ಕೌನ್ಸಿಲರ್ ಆಗಿದ್ದಾಗಲೇ ಕಳ್ಳ ಗಂಧ ಸಾಗಣೆ ಪ್ರಕರಣದಲ್ಲಿ ಪೊಲೀಸರ ಅತಿಥಿಯಾಗಿದ್ದ.


ಹದಿನೈದನೇ ವಾರ್ಡಿನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಎಚ್. ರುದ್ರಯ್ಯ ಅಲಿಯಾಸ್ ಸಾಯಿರುದ್ರಪ್ಪ ಒಮ್ಮೆ ಕೌನ್ಸಿಲರನಾಗಿ ಉಪಾಧ್ಯಕ್ಷನಾಗಿದ್ದಾತ. ಈತ ಎಂದೆಂದೂ ತಿಪ್ಪಾರೆಡ್ಡಿಯ ಎಡ-ಬಲ ಸುಳಿದಾಡಿದವನಲ್ಲ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಿಪ್ಪಾರೆಡ್ಡಿ ವಿರುದ್ಧ ಸೊಂಟದ ಕೆಳಗಿನ ಭಾಷೆ ಬಳಸಿ ಪ್ರಚಾರಕ್ಕಿಳಿದಿದ್ದ ಆಂಜನೇಯ ಸ್ವಾಮಿ ದೇವಸ್ಥಾನದ ನಾಗರಿಕ ಸಮಿತಿ ಹೆಸರಲ್ಲಿ ದೇವಸ್ಥಾನದ -ನಿವೇಶನಗಳನ್ನು ಮಾರಿಕೊಂಡದ್ದು, ಪ್ರತಿ ವರ್ಷ ಕಾರ್ತಿಕ ಮಾಸದ ಪೂಜೆಯ ಹೆಸರಲ್ಲಿ ಹಣ ಎತ್ತುವುದು ಈತನ ಚಾಳಿ.




ನ್ಯಾಯವಾಗಿ ಈ ವಾರ್ಡಿನಿಂದ ನಗರಸಭೆಯ ಮಾಜಿ ಅಧ್ಯಕ್ಷ, ಸಜ್ಜನಿಕೆಯ ಎಚ್.ಸಿ. ನಿರಂಜನಮೂರ್ತಿ ಸ್ಪರ್ಧಿಸಬೇಕಿತ್ತು, ನಿರಂಜನಮೂರ್ತಿಯ ಪಕ್ಷ ನಿಷ್ಠೆಗೆ ಕವಡೆಕಾಸಿನ ಕಿಮ್ಮತ್ತೂ ಕೊಡದ ತಿಪ್ಪಾರೆಡ್ಡಿ ಅನ್ವರ್ ಶಿವು ಮಾತು ಕೇಳಿ ಸಾಯಿ ರುದ್ರಪ್ಪನಿಗೆ ಟಿಕೆಟ್ ದಯಪಾಲಿಸಿದ್ದಾರೆ.


ಅನ್ವರ್ ಶಿವು

ಇಪ್ಪತ್ತನೇ ವಾರ್ಡಿನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಜಬ್ಬಾರ್ ಕೂಡಾ ದೋ ನಂಬರ್ ದಂಧೆಯವನೇ. ಮೂಲತಃ ಸೀಮೆಎಣ್ಣೆ ವ್ಯಾಪಾರಿಯಾದ ಈತ ಮಟ್ಕಾ ದಂಧೆಗಿಳಿದು ದುಡ್ಡು ಮಾಡಲಾರಂಭಿಸಿದ ಮೇಲೆ ಹಿಂತಿರುಗಿ ನೋಡಿದವನಲ್ಲ, ತಿಪ್ಪಾರೆಡ್ಡಿ ನಿಷ್ಠೆ ಹಣದ ಥೈಲಿ ಬಿಟ್ಟರೆ ಬೇರಿನ್ನಾವ ಅರ್ಹತೆಯೂ ಇಲ್ಲ.



ಎರಡು, ನಾಲ್ಕು, ಐದನೇ ವಾರ್ಡಿನಿಂದ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುವ ರಾಜೇಶ್ ಅಲಿಯಾಸ್ ಗವಾ, ವೆಂಕಟೇಶ್ ಅಲಿಯಾಸ್ ಚಿಲಿಲಿ, ಸುರೇಶ್ ಅಲಿಯಾಸ್ ಸೂರಿ ಇವರ ಬಗ್ಗೆ ಸಾರ್ವಜನಿಕರಲ್ಲಿ ಸದಭಿಪ್ರಾಯಗಳಿಲ್ಲ, ನಗರಸಭೆ ಮಾಜಿ ಅಧ್ಯಕ್ಷ ಸಿ.ಟಿ. ಕೃಷ್ಣಮೂರ್ತಿಯ ನೆರಳಲ್ಲೇ ಬೆಳೆದ ಈ ಎಲಿಮೆಂಟುಗಳನ್ನು ಆತನ ವಿರುದ್ಧವೇ ಎತ್ತಿಕಟ್ಟುವ ಉದ್ದೇಶದಿಂದ ತಿಪ್ಪಾರೆಡ್ಡಿ ಇವರನ್ನು ದಾಳಗಳನ್ನಾಗಿ ಬಳಸಿಕೊಂಡಿದ್ದಾರೆ. ಆದರೆ ತಿಪ್ಪಾರೆಡ್ಡಿಯ ಲೆಕ್ಕಾಚಾರ ಸರಿಹೊಂದುವ ಲಕ್ಷಣಗಳೇ ಕಾಣುತ್ತಿಲ್ಲ.



ಎರಡನೇ ವಾರ್ಡಿನಿಂದ ಜೆಡಿಎಸ್ ಅಭ್ಯರ್ಥಿಯಾಗಿ ಕಾಂಗ್ರೆಸ್‌ನ ಜಿ.ಪಂ. ಸದಸ್ಯ ಸೋಮಣ್ಣನ ಪುತ್ರ ಭಾಸ್ಕರ್ ಸ್ಪರ್ಧಿಸಿದ್ದಾನೆ. ಈತ ಚೆಲ್ಲುವ ಹಣದ ಮುಂದೆ ರಾಜೇಶ್ ಈಜುವುದು ತುಂಬಾ ಕಷ್ಟ. ನಾಲ್ಕನೇ ವಾರ್ಡಿನಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಎಚ್.ಕೆ. ಖಾದರ್‌ಖಾನ್ ಕಣಕ್ಕಿಳಿದಿದ್ದಾರೆ. ಈತ ಕೌನ್ಸಿಲ್‌ನಲ್ಲಿ ದಿಟ್ಟವಾಗಿ ಮಾತನಾಡುವ ಸಾಮರ್ಥ್ಯವಿರುವಾತ. ಬಿಜೆಪಿಯಿಂದ ಸ್ಪರ್ಧಿಸಿರುವ ಶಿವಣ್ಣಾಚಾರ್ ಬಗ್ಗೆ ಕೂಡಾ ಒಳ್ಳೆಯ ಮಾತುಗಳು ಕೇಳಿಬರುತ್ತಿವೆ. ಇವರೀರ್ವರ ನಡುವೆ ಈ ವಾರ್ಡಿನಲ್ಲಿರುವ ಸಜ್ಜಾಕಾರಿ ಜನ ಸುರೇಶ್‌ನನ್ನು ಸ್ವೀಕರಿಸುವುದು ಕಷ್ಟದ ಮಾತು.

ನಾಲ್ಕನೇ ವಾರ್ಡಿನಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಸಿ.ಟಿ. ಕೃಷ್ಣಮೂರ್ತಿ ಮುನ್ಸಿಪಲ್ ಕೌನ್ಸಿಲ್‌ನಲ್ಲಿ ಅನುಭವಿ. ಇದುವರೆಗೂ ಮೂರು ಬಾರಿ ಬೇರೆಬೇರೆ ವಾರ್ಡುಗಳನ್ನು ಪ್ರತಿನಿಧಿಸಿ ಕೌನ್ಸಿಲರ್ ಆಗಿದ್ದ ಸಿ.ಟಿ.ಕೆ. ಉತ್ತಮ ಕೆಲಸಗಳನ್ನು ಮಾಡಿಸಿ, ಕೆಲಸಗಾರನೆಂಬ ಇಮೇಜು ಪಡೆದಿದ್ದಾರೆ. ಸಿ.ಟಿ.ಕೆ. ವಿರುದ್ಧ ಸ್ಪರ್ಧಿಸಿರುವ ಚಿಲಿಲಿಗೆ ರೌಡಿಸಂ ಹಿನ್ನೆಲೆ, ಖರ್ಚು ಮಾಡಲಿರುವ ದುಡ್ಡೇ ಬಂಡವಾಳ. ಇದು ಸಿ.ಟಿ.ಕೆ.ಗೆ ಒಂದಿಷ್ಟು ಡಿಸ್ಟರ್ಬ್ ಮಾಡುವ ಸಾಧ್ಯತೆ ಇದೆ.

ಹಾಲಿ ಚುನಾವಣೆಯಲ್ಲಿ ಹದಿನೆಂಟನೇ ವಾರ್ಡಿನಲ್ಲಿ ಜೆಡಿಎಸ್‌ನ ಸುನಿತಾ ಮಲ್ಲಿಕಾರ್ಜುನ್ ವಿರುದ್ಧ ಕಾಂಗೈನ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಭಾಗ್ಯಲಕ್ಷ್ಮಿ ಕುರಿತು ಒಳ್ಳೆಯ ಅಭಿಪ್ರಾಯವಿದೆ. ಸಜ್ಜನಿಕೆ-ಸುಶಿಕ್ಷಿತ ಹಿನ್ನೆಲೆಯ ಭಾಗ್ಯಲಕ್ಷ್ಮಿ ಹಣದ ಹೊಳೆ ಹರಿಸುವ ಸುನೀತಾ ಮಲ್ಲಿಕಾರ್ಜುನ್‌ಗೆ ಸವಾಲಂತೂ ಆಗಿದ್ದಾರೆ.

ಉಳಿದಂತೆ ಕಾಂಗೈನಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳಲ್ಲಿ ಮೂರನೇ ವಾರ್ಡಿನಿಂದ ಸ್ಪರ್ಧಿಸಿರುವ ಎಚ್. ಶ್ರೀನಿವಾಸ್, ಎಂಟನೇ ವಾರ್ಡಿನಿಂದ ಸ್ಪರ್ಧಿಸಿರುವ ಪದ್ಮನಾಭ ರೆಡ್ಡಿ ಆರನೇ ವಾರ್ಡಿನಿಂದ ಸ್ಪರ್ಧಿಸಿರುವ ಸಿ.ಟಿ. ಶ್ರೀನಿವಾಸ್, ಇಪ್ಪತ್ತೊಂಭತ್ತನೇ ವಾರ್ಡಿನಿಂದ ಸ್ಪರ್ಧಿಸಿರುವ ಮಾಧರಿ ಬೆಟರ್ ಚಾಯ್ಸ್.

ಇನ್ನೂ ಜೆಡಿಎಸ್‌ನಿಂದ ಸ್ಪರ್ಧಿಸಿರುವವರೆಲ್ಲಾ ಸದ್ಗುಣ ಸಂಪನ್ನರೇನಲ್ಲ, ಆದರೆ ಬಹಳಷ್ಟು ಜನ ಅಭ್ಯರ್ಥಿಗಳು ಸಾರ್ವಜನಿಕವಾಗಿ ತಕರಾರು ಇಲ್ಲದವರು. ಅಷ್ಟರ ಮಟ್ಟಿಗೆ ಈ ಬಾರಿ ಎಸ್.ಕೆ. ಬಸವರಾಜನ್ ಪ್ಲಾನ್ ಮಾಡಿ ಟಿಕೆಟ್ ಹಂಚಿದ್ದಾರೆ.

ಇಪ್ಪತ್ಮೂರನೇ ವಾರ್ಡಿನಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಫಯಾಜ್ ಸಭ್ಯ ಮನುಷ್ಯ. ಚುನಾವಣಾ ಮಾತುಗಾರಿಕೆಯಲ್ಲಿ ನಿಸ್ಸೀಮನಾಗಿರುವ ಕಾಂಗ್ರೆಸ್‌ನ ಸರ್ದಾರ್ ಯಾವ ದಾಳ ಹಾಕುತ್ತಾನೆಂಬುದು ಕಾದು ನೋಡಬೇಕು. ಡಬ್ಬಲ್ ಗೇಮ್ ಆಡುವ ಸರ್ದಾರ್ ಈ ಸಾರಿ ದಡ ಸೇರುವುದು ಕಷ್ಟ ಎಂಬ ಮಾತುಗಳೇ ಹೆಚ್ಚಾಗಿ ಕೇಳಿಬರುತ್ತಿವೆ.

ಮುನಿಸಿಪಾಲಿಟಿ ಗಾದಿಗೆ ಯಾರು ಹತ್ತಿರ ಎಂಬುದನ್ನು ಈಗಲೇ ಹೇಳಲಾಗದು. ಅಬ್ಬರದಲ್ಲಿ ಕಾಂಗ್ರೆಸ್ ಒಂದು ಹೆಜ್ಜೆ ಮುಂದಿದೆ. ಜೆಡಿಎಸ್‌ನ ಫೀಲ್ಡ್ ವರ್ಕ್ ಇನ್ನೂ ಲೋ-ಕೀನಲ್ಲಿದೆ. ■

ಕಾಂಗೈ ನಿರಾಶ್ರಿತರಿಗೆ ಜೆಡಿಎಸ್ ಆಶ್ರಯ


ಉದಾಸಿ

ವಿಧಾನಸೌಧಕ್ಕೆ ಫಸ್ಟ್ ಟೈಮ್ ಎಂಟ್ರಿ ಕೊಟ್ಟಿರುವ ನಾಲ್ಕು ಜನ ಶಾಸಕರನ್ನು ಹಿಂದಿಟ್ಟುಕೊಂಡು ಜಿಲ್ಲೆಯಲ್ಲಿ ಚಡ್ಡಿಗಳ ತಳ ಗಟ್ಟಿಗೊಳಿಸಲು ಹೊರಟಿರುವ ಬಿಜೆಪಿ ಮಂತ್ರಿಮಂಡಲದ ಮುದಿ ಮಂತ್ರಿ ಸಿ.ಎಂ. ಉದಾಸಿ ಇಪ್ಪತ್ತು ತಿಂಗಳಲ್ಲಿ ಗಳಿಸಿರುವ ಪರ್ಸೆಂಟೇಜ್ ದುಡ್ಡನ್ನೇ ಇನ್ವೆಸ್ಟ್ ಮಾಡಿ ಚುನಾವಣೆಗಿಳಿಯಿರಿ ಎಂದು ಖದೀಮ ಶಾಸಕರಿಗೆ ಫರ್ಮಾನು ಹೊರಡಿಸಿದ್ದಾರಂತೆ. ಅಜ್ಜನ ಮಾತಿಗೆ ಲಜ್ಜೆಗೆಟ್ಟವರಂತೆ ಎರಡು ನಗರಸಭೆ, ಐದು ಪುರಸಭೆ ಹಾಗೂ ಒಂದು ಪಟ್ಟಣ ಪಂಚಾಯತಿಯ ಅಧಿಕಾರ ಗದ್ದುಗೆಗಾಗಿ ಗಲ್ಲಿಗಲ್ಲಿಗಳಲ್ಲಿ ದುಡ್ಡು ಸುರಿಯಲು ಮುಂದಾಗಿದ್ದಾರೆ.


ಕೋಳಿವಾಡ

ಹಣ ಹೆಂಡದ ಮದದಲ್ಲಿ ಹತ್ತು ವರ್ಷ ಹಾವೇರಿ, ರಾಣೆಬೆನ್ನೂರು ನಗರಸಭೆಗಳನ್ನು ತಿಂದು ಮುಕ್ಕಿರುವ ಕಾಂಗ್ರೆಸ್‌ನ ಖದೀಮ ಕೌನ್ಸಿಲರುಗಳನ್ನು ಮತ್ತೆ ಅಧಿಕಾರಕ್ಕೆ ತರಲು ಸೋತು ಮನೆ ಸೇರಿರುವ ಮಾಜಿ ಮಂತ್ರಿಗಳಾದ ಕೆ.ಬಿ. ಕೋಳಿವಾಡ, ಬಿ.ಎನ್. ಶಿವಣ್ಣನವರ ಮತ್ತು ಜಿಲ್ಲಾ ಅಧ್ಯಕ್ಷ ಮಾಜಿ ಸಂಸದ ಐ.ಜಿ. ಸನದಿ ಹೆಣಗಾಡುತ್ತಿದ್ದಾರೆ. 'ಲೂಟ್ ಕೆ ಲಾವ್ರೋ, ಬಾಂಟ್ ಕೆ ಖಾವ್ರೋ' ಎನ್ನುತ್ತಾ ಕಾಂಗ್ರೆಸ್ಸಿಗರಿಗೆ 'ಬಿ ಫಾರ್ಮ್' ಬಿಕರಿ ಮಾಡಿಕೊಂಡಿದ್ದರಿಂದ ಬೇಸತ್ತ ಅನೇಕರು ಪಕ್ಷಕ್ಕೆ ಗುಡ್‌ಬೈ ಹೇಳಿದ್ದಾರೆ. ಬಿಜೆಪಿ-ಕಾಂಗ್ರೆಸ್‌ನಿಂದ ನಿರಾಶ್ರಿತರಾದವರಿಗೆ ಆಶ್ರಯ ಕೊಟ್ಟು ಅಖಾಡಕ್ಕಿಳಿಸಿರುವ ಜೆಡಿಎಸ್ ರಿಡಿ ಫ್ರೆಶ್ಸ್ ಸಿಕ್ಕಿತು ಎಂಬಂತೆ ತೃಪ್ತಗೊಂಡಿದೆ. ಜಿಲ್ಲೆಯ ಏಕೈಕ ದಳ ಶಾಸಕ, ಪಾರ್ಟ್ ಟೈಮ್ ನಟ ಬಿ.ಸಿ. ಪಾಟೀಲ್ ಇಬ್ಬರ ಜಗಳದ ಲಾಭ ಪಡೆಯಲು ಫಿಲ್ಮಿ ಗಿಮಿಕ್ ಶುರು ಹಚ್ಚಿಕೊಂಡು ರಾಜ್ಯ ರಾಜಕಾರಣದಂತೆ ಇಲ್ಲಿಯೂ ಜೆಡಿಎಸ್-ಬಿಜೆಪಿ ಮೈತ್ರಿ ಮಾಡಿಕೊಂಡು ಸಮ್ಮಿಶ್ರ ಆಡಳಿತ ನಡೆಸುವ ಕನಸು ಕಾಣುತ್ತಿದ್ದಾನೆ.


ಶಿವಣ್ಣ

ಮಂಡಕ್ಕಿಯಿಂದ ಮಟನ್‌ಗೆ ಪ್ರಮೋಶನ್

ಒಂದು ಕಾಲದಲ್ಲಿ ಅಧಿಕಾರವಿಲ್ಲದೇ ಮಂಡಕ್ಕಿ (ಕಳ್ಳೆಪುರಿ) ತಿಂದು ಎಲೆಕ್ಷನ್ ಮಾಡುತ್ತಿದ್ದ ಇಲ್ಲಿನ ಬಿಜೆಪಿ ಇಂದು ಜಿಲ್ಲೆಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದು ಹಡಬೆ ದುಡ್ಡಿನಲ್ಲಿ ಮತದಾರರಿಗೆ ಮಟನ್ ಪ್ರಸಾದ ಹಂಚಲು ಮುಂದಾಗಿದೆ. ಹಣೆಗೆ ತಿಲಕ ಇಟ್ಟುಕೊಂಡು, ಕೇಸರಿ ಶಾಲು ಹಾಕಿಕೊಂಡು ಪುರೋಹಿತರಂತೆ ಓಡಾಡಿಕೊಂಡಿದ್ದ ಚಡ್ಡಿ ಜನ ಈಗ ನಾನ್‌ವೆಜ್ ಕಬಾಬುಗಳಾಗಿ ಹೋಗಿದ್ದಾರೆ.


ಜಿಲ್ಲೆಯ ಹಿರಿಯ ನಗರಸಭೆಯಾದ ರಾಣೆಬೆನ್ನೂರು ಮತ್ತು ಹಾವೇರಿಗಳಲ್ಲಿನ ಕಾಂಗ್ರೆಸ್ ಕಿತ್ತಾಟ ಬಿಜೆಪಿಗೆ ವರವಾಗಿದೆ. ರಾಣೆಬೆನ್ನೂರಿನಲ್ಲಿ ಮಾಜಿ ಮಂತ್ರಿ ಕೆ.ಬಿ. ಕೋಳಿವಾಡನ ಅವಾಂತರಗಳಿಂದ ಬೇಸತ್ತ ಕಾಂಗ್ರೆಸ್ಸಿಗರನ್ನು ಶಾಸಕ ಜಿ. ಶಿವಣ್ಣ ಫಾಲೋ ಮಾಡುತ್ತಿದ್ದು ಅವರನ್ನೆಲ್ಲಾ ಬಿಜೆಪಿಗೆ ಎಳೆತರುವ ಪ್ರಯತ್ನ ನಡೆಸಿದ್ದಾರೆ. ವಿಧಾನಸಭಾ ಚುನಾವಣೆಯ ಸಮಯದಲ್ಲಿ ಹೋಳಾಗಿದ್ದ ಬಿಜೆಪಿ ಈಗ ಮತ್ತೆ ಒಂದಾಗಿರುವುದು ಚಡ್ಡಿಗಳಿಗೆ ಪ್ಲಸ್ ಪಾಯಿಂಟ್ ಆಗಿದ್ದರೆ ಜೆಡಿಎಸ್ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗಾಡುತ್ತಿದೆ.

ಹಳೇ ಕಾಂಗ್ರೆಸ್ಸಿಗರು ಹೊಸ ಬಿಜೆಪಿಯತ್ತ

ಜನತಾದಳ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಶಿವಣ್ಣನವರ್ ಕಾಂಗ್ರೆಸ್ ಸೇರಿದ ನಂತರವೂ ಮಂತ್ರಿಗಿರಿ ಸಿಗದ ಅಸಮಾಧಾನದಲ್ಲಿ ಸ್ಥಳೀಯ ಲಿಂಗಾಯತರನ್ನು ರಾಜಕೀಯವಾಗಿ ಮುಗಿಸಲು ಮುಂದಾದರು ಎಂಬ ಆರೋಪ ಈಗ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ವಿರೋಧಿ ಜೆಡಿಎಸ್-ಬಿಜೆಪಿಗಳಿಗೆ ಚುನಾವಣಾ ಅಸ್ತ್ರವಾಗಿದೆ. ಮಾಜಿ ಜಿ.ಪಂ. ಅಧ್ಯಕ್ಷ ಕೊಟ್ರೇಶ್ ಬಸೆಗಣ್ಣಿ ಎಸ್.ಎಫ್.ಎನ್. ಗಾಜಿಗೌಡರ್, ರಾಜಶೇಖರ್ ಮಾಗಾವಿ, ಆರ್.ಬಿ. ಗಿಜ್ಜಿ, ಷಣ್ಮುಖಪ್ಪ ಹತ್ತಿಯಂತಹ ಹಳೇ ಕಾಂಗ್ರೆಸ್ಸಿಗರು ಇವನ ಉಪಟಳಕ್ಕೆ ಬೇಸತ್ತು ಪಕ್ಷದಿಂದ ದೂರ ಉಳಿದಿದ್ದರು. ಈಗ ಅವರೆಲ್ಲ ಮತ್ತೆ ಚುರುಕಾಗಿ ತೆರೆಮರೆಯಲ್ಲಿಯೇ ಬಿಜೆಪಿಯನ್ನು ಗೆಲ್ಲಿಸುವ ತಂತ್ರ ಶುರು ಹಚ್ಚಿಕೊಂಡಿದ್ದಾರೆ. ಕಾಂಗ್ರೆಸ್ ಅತೃಪ್ತರನ್ನು ಸೆಳೆಯಲು ಬಿಜೆಪಿ-ಜೆಡಿಎಸ್ ನಡುವೆ ಪೈಪೋಟಿ ಏರ್ಪಟ್ಟಿದ್ದು ಕಾಂಗ್ರೆಸ್ ಖಾಲಿಯಾಗುವ ಸಂಭವವಿದೆ.

ಕಾಂಗ್ರೆಸ್‌ನಲ್ಲಿ ಬಿ ಫಾರ್ಮ್ ಬಿಕರಿ

ಒಂದು ಕಾಲದಲ್ಲಿ ಹಾವೇರಿ ಬಸ್ಟ್ಯಾಂಡ್‌ನಲ್ಲಿ ಕ್ಲೀನರ್ ಆಗಿದ್ದ ಐ.ಯು. ಪಠಾಣ್ ಎಂಬ ಹರಾಮಿ 94ರ ಚುನಾವಣೆಯಲ್ಲಿ ಶಿವಣ್ಣನವರ ಆಶೀರ್ವಾದದಿಂದ ನಗರಸಭಾ ಸದಸ್ಯ ಉಪಾಧ್ಯಕ್ಷ, ಪಾರ್ಟಿಯ ಶಹರ ಅಧ್ಯಕ್ಷ ಏನೆಲ್ಲಾ ಆಗಿಹೋದ. ಈ ಬಾರಿಯ ನಗರಸಭಾ ಚುನಾವಣೆಗಳ ಬಿ ಫಾರ್ಮ್ ಹಂಚುವ ಜವಾಬ್ದಾರಿಯನ್ನೂ ಇವನಿಗೆ ವಹಿಸಲಾಗಿತ್ತು, ಮನಸ್ಸಿಗೆ ಬಂದಂತೆ ರೇಟ್ ಫಿಕ್ಸ್ ಮಾಡಿ ಅವುಗಳನ್ನು ಈತ ಬೇಕಾದವರಿಗೆಲ್ಲ ಮಾರಿಕೊಂಡಿದ್ದಾನೆ. ರೇಟು ನೋಡೇ ಕೆಲವರು ಬಿ ಫಾರ್ಮ್ ಬೇಡ ಎಂದರಂತೆ! ಪರಿಣಾಮವಾಗಿ ಏನಾಗಿದೆ ಎಂದರೆ ಬಿಜೆಪಿಯ ಪ್ರಬಲ ಅಭ್ಯರ್ಥಿಗಳಾದ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹನುಮಂತ ನಾಯ್ಕ ಬಾದಾಮಿ ಹಾಗೂ ಮಾಜಿ ಅಧ್ಯಕ್ಷ ಶೋಭಾ ಮಾಗಾವಿಯ ವಿರುದ್ಧ ಕಾಂಗ್ರೆಸ್‌ನಿಂದ ದುರ್ಬಲರು ನಿಲ್ಲುವಂತಾಗಿದೆ. ಹಾಗಾಗಿ ಈ ಕ್ಷೇತ್ರಗಳಲ್ಲಿ ಪಠಾಣ್ ಮಾಡಿದ ಘನಂದಾರಿ ಕೆಲಸದಿಂದ ಕಾಂಗ್ರೆಸ್ ಮಣ್ಣುಮುಕ್ಕಿದರೂ ಆಶ್ಚರ್ಯವಿಲ್ಲ.


ಬಿ.ಸಿ. ಪಾಟೀಲ್


ನಿರಾಶ್ರಿತರಿಗೆ ಜೆಡಿಎಸ್ ಆಶ್ರಯ

ಶಾಸಕ ಕಮ್ ನಟ ಬಿ.ಸಿ.ಪಾಟೀಲ್‌ನ ದರ್ಬಾರು ಈಗ ಕೇವಲ ಹಿರೇಕೆರೂರಿಗೆ ಮಾತ್ರ ಸೀಮಿತವಾಗಿ ಉಳಿದಿಲ್ಲ, ಈತ ಅಧಿಕಾರದ ಅಮಲಿನಲ್ಲಿರುವ ಚಡ್ಡಿ ಶಾಸಕರಿಂದ ಅನ್ಯಾಯಕ್ಕೊಳಗಾದ ಬಿಜೆಪಿ ಕಾರ್ಯಕರ್ತರಿಗೆ ಮತ್ತು ಅತೃಪ್ತ ಕಾಂಗ್ರೆಸ್ಸಿಗರಿಗೆ ಜೆಡಿಎಸ್‌ನಲ್ಲಿ ಆಶ್ರಯ ಕಲ್ಪಿಸಿದ್ದಾನೆ. ನಗರಸಭೆ ಮಾಜಿ ಸದಸ್ಯ ಬಿಜೆಪಿಯ ಅಶೋಕ್ ಮುದಗಲ್, ಶಿಗ್ಗಾವಿಯ ಮಾಜಿ ಜಿ.ಪಂ. ಸದಸ್ಯ ಡಾ. ಬಿ.ಹೆಚ್.ವೀರಣ್ಣ ಕೊಟ್ರಪ್ಪ ನಡೂರ್,

ಯಾರೀ... ಅನ್ವರ್ ಶಿವು

ಗಾಂಧೀವೃತ್ತದಿಂದ ಬೇಳಗುದ್ದವವರೆಗೆ ಬರುವ ಸುಮಾರು ಅರ್ಧ ಸಿಟಿಯಲ್ಲಿ ಅನ್ವರ್ ಶಿವು ಎಂಬುವವನ ಭಾರೀ ಕಟೌಟ್‌ಗಳದ್ದೇ ಕಾರು-ಬಾರು. ಇವನು ಯಾವ ಮಹಾಘನತೆವೆತ್ತ ನಾಯಕ ಎಂದು ಈತನ ಇತಿಹಾಸ ಹುಡುಕುತ್ತಾ ಹೋದರೆ ಅಲ್ಲೆಲ್ಲಾ ಬರೀ ದೋ ನಂಬರ್ ದಂಧೆಯ ಘಮಲು. ಮಂಡಕ್ಕಿ ಭಟ್ಟಿಯಲ್ಲಿ ಸಾಮಾನ್ಯ ಕಾರ್ಮಿಕನಾಗಿದ್ದ ಇವನ ಬೆಳವಣಿಗೆಗೆ ಮೆಟ್ಟಿಲಾಗಿದ್ದು ಗ್ಯಾಂಬ್ಲಿಂಗ್ ದಂಧೆ. ಆ ದಿನಗಳಲ್ಲಿ ಸಣ್ಣಪುಟ್ಟ ಗ್ಯಾಂಬ್ಲಿಂಗ್‌ಗಳಲ್ಲಿ ಭಾಗವಹಿಸಿ ಪಳಗಿದ ಅನ್ವರ್ ಅದನ್ನೇ ವೃತ್ತಿಯನ್ನಾಗಿ, ಜೀವನ ಮಾರ್ಗವನ್ನಾಗಿ ಮಾಡಿಕೊಂಡವನು.

ರಾಜ್ಯದ ಬೇರೆಬೇರೆ ಕಡೆ ಇವನ ಗ್ಯಾಂಬ್ಲಿಂಗ್ ಹಸ್ತಗಳು ಚಾಚಿಕೊಂಡಿವೆ. ದೊಡ್ಡಬಳ್ಳಾಪುರದ ಬೂದಿಗೆರೆ, ದಾವಣಗೆರೆ, ಶಿರಾ ಬಳಿಯೊಂದರ ಹಳ್ಳಿಯಲ್ಲಿ ನಡೆಯುವ ಗ್ಯಾಂಬ್ಲಿಂಗ್ ಅಡ್ಡೆಗಳಲ್ಲಿ ಈತ ಕಾಯಂ ಗಿರಾಕಿ. ಬೆಂಗಳೂರು-ಬೆಳಗಾವಿಯ ಬೃಹತ್ ಗ್ಯಾಂಬ್ಲರುಗಳ ಜೊತೆ ಇವನ ಸಂಪರ್ಕಗಳಿವೆ. ಇದು ಹೊರಗಿನ ಮಾತಾದರೆ ಚಿತ್ರದುರ್ಗದ ಆಸುಪಾಸಿನಲ್ಲಿ ಭೀಮಸಮುದ್ರದ ಕೆಲ ಅಡಿಕೆ ತೋಟಗಳ ಮಾಲೀಕರನ್ನು ಬುಕ್ ಮಾಡಿಕೊಂಡು ಗ್ಯಾಂಬ್ಲಿಂಗ್ ದಂಧೆ ನಡೆಸುತ್ತಾನೆ. ಗರ್ಲ್ಸ್ ಜೂನಿಯರ್ ಕಾಲೇಜಿನ ಅಟೆಂಡರ್ ಸತೀಶ, ಮಾರ್ಕೆಟ್ ಕುಮಾರ್ ಎಂಬುವರ ಹೆಸರುಗಳೂ ಈ ದಂಧೆಯಲ್ಲಿ ಕೇಳಿಬರುತ್ತಿದೆ.


ಅನ್ವರ್ ಶಿವುನ ಗ್ಯಾಂಬ್ಲಿಂಗ್

ಗ್ಯಾಂಬ್ಲಿಂಗ್ ದಂಧೆ ಇವನನ್ನು ಅಗಾಧವಾಗಿ ಬೆಳೆಸಿಬಿಟ್ಟಿದೆ. ಈಗ ಏನಿಲ್ಲವೆಂದರೂ ಕನಿಷ್ಠ ಇಪ್ಪತ್ತೈದರಿಂದ ಮೂವತ್ತು ಜನರನ್ನು ಈ ದಂಧೆಯನ್ನು ನಿಭಾಯಿಸಲಿಕ್ಕಾಗಿಯೇ ಸಾಕುತ್ತಿದ್ದಾನೆ. ದುಡ್ಡಿರುವ ಮಿಕ ಕಂಡರೆ ತಾನೇ ಐದಾರು ಜನರ ತಂಡವೊಂದನ್ನು ಆಟಕ್ಕೆ ಕಳುಹಿಸಿ, ನಿಕಾಲಿ ಮಾಡಿಸಿಬಿಡುತ್ತಾನೆ.


ಗ್ಯಾಂಬ್ಲಿಂಗ್ ಬಲಿನಲ್ಲಿ ಮುಳುಗಿದವರಿಗೆ ದಿನಕ್ಕೆ, ನೂರಕ್ಕೆ, ಹತ್ತರಂತೆ ಮೀಟರ್ ಬಡ್ಡಿಗೆ ಹಣ ಕೊಡುತ್ತಾನೆ. ಬೆಳಿಗ್ಗೆ 10 ಸಾವಿರ ತೆಗೆದುಕೊಂಡರೆ ಸಂಜೆ ಹೊತ್ತಿಗೆ 11 ಸಾವಿರ ಕಕ್ಕಬೇಕು. ಇಂತಹದೇ ಬಡ್ಡಿ ವ್ಯವಹಾರಕ್ಕೆ ಹೊಳಲ್ಕೆರೆ ರಸ್ತೆಯಲ್ಲಿ ಸನಂ ಫೈನಾನ್ಸ್ ಮಾಡಿದ್ದಾನೆ.

ಮೂರ್‍ನಾಲ್ಕು ಲಾರಿಗಳು, ಮೂವತ್ತು-ನಲವತ್ತು ಲಕ್ಷ ಬೆಲೆ ಬಾಳುವ ಭವ್ಯ ಬಂಗಲೆ, ಹೊಳಲ್ಕೆರೆ ರಸ್ತೆಯ ಬಲಭಾಗದಲ್ಲಿ ಹತ್ತನ್ನೆರಡು ನಿವೇಶನಗಳು, ನಗರದ ಹೊರವಲಯದ ಇದೇ ಹೊಳಲ್ಕೆರೆ ರಸ್ತೆಯಲ್ಲಿ ಕೋಟಿಗಟ್ಟಲೆ ಬೆಲೆಬಾಳುವ ಹನ್ನೆರಡು ಎಕರೆ ಜಮೀನಿನ ಮಾಲೀಕತ್ವ ಇದೆ. ಎಕರೆಗೆ 2 ಲಕ್ಷ ಸುರಿದು ಖರೀದಿಸಿರುವ ಈ ಜಮೀನಿನ ಅಭಿವೃದ್ಧಿಗೆ ಶಾಸಕ ಜಿ.ಎಚ್. ತಿಪ್ಪಾರೆಡ್ಡಿಯ ಶಾಸಕರನಿಧಿ ಹಾಗೂ ಜಿಲ್ಲಾ ಪಂಚಾಯತ್ ಬೇನಾಮಿ ಕಾಮಗಾರಿಗಳ ಹೆಸರಿನಲ್ಲಿ ಅಂದಾಜು ಇಪ್ಪತ್ತು ಲಕ್ಷ ಸುರಿಯಲಾಗಿದೆ ಎಂದು ಹೇಳಲಾಗುತ್ತಿದೆ.

ಇಷ್ಟೆಲ್ಲಾ ಆಸ್ತಿ-ಪಾಸ್ತಿಯ ಜೊತೆ ಅದೆಂತದೋ ರೇಷನ್‌ಕಾರ್ಡ್ ಟೈಪಿನ ಟೋಪಿ ಸ್ಕೀಮೊಂದನ್ನು ಮಾಡಿದ್ದಾನೆ. ಈ ಸ್ಕೀಮಿನಲ್ಲಿ ಸದಸ್ಯರಾಗುವವರ ಹಣವನ್ನೂ ತಾನೇ ಕಟ್ಟುತ್ತಾನೆ. ಈ ಸ್ಕೀಮಿನಲ್ಲಿ ಸದಸ್ಯರಾದವರು ಇವನು ಹೇಳಿದ ಅಂಗಡಿಗಳಲ್ಲೇ ರೇಷನ್ನು, ಚಿಕನ್ನು ಖರೀದಿಸಬೇಕಂತೆ. ಜನರು ಮಾಡಿದ ಖರೀದಿಯಿಂದ ಇವನ ಜೇಬಿಗೆ ಕಮಿಷನ್ ಹಣ ಹರಿದು ಬರುತ್ತದೆ. ಇದರ ಅರಿವಿರದ ಜನ ಎಂತದ್ದೋ ರೇಷನ್‌ಕಾರ್ಡ್ ಕೊಡಿಸುತ್ತಾನೆಂದು ನಂಬಿ ಹಳ್ಳಕ್ಕೆ ಬೀಳುತ್ತಿದ್ದಾರೆ. ಜನ ಹಳ್ಳಕ್ಕೆ ಬಿದ್ದಷ್ಟೂ ಅನ್ವರ್ ಶಿವುಗೆ ಲಾಭ.

ಅಧಿಕೃತವಾಗಿ ಎರಡು ಮದುವೆಯಾಗಿರುವ ಈ ಪುಣ್ಯಾತ್ಮ ಮೂರನೆ ಸಂಸಾರವೊಂದನ್ನು ಮೆಯಿಂಟೇನ್ ಮಾಡುತ್ತಿದ್ದಾನಂತೆ. ಎಸ್‌ಟಿಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಹುಡುಗಿಯೊಬ್ಬಳನ್ನು ಬಲೆಗೆ ಹಾಕಿಕೊಂಡು ಬಿಸಿಆರ್ ಬಡಾವಣೆಯ ಗಣಪತಿ ದೇವಸ್ಥಾನದ ಏರಿಯಾದಲ್ಲಿ ಆಕೆಗೊಂದು ಬಂಗಲೆಯನ್ನೂ ಕಟ್ಟಿಸಿಕೊಟ್ಟಿದ್ದಾನೆ.

ಇಂದು ಅನ್ವರ್ ಶಿವುಗಿರುವ ಶ್ರೀಮಂತಿಕೆ, ನಡೆಸುತ್ತಿರುವ ಅಂದಾದುಂದಿ ದರ್ಬಾರಿಗೆಲ್ಲಾ ಜೂಜು ಮತ್ತು ದೋ ನಂಬರ್ ದಂಧೆಗಳೇ ಬಂಡವಾಳ. ಕಳೆದೆರಡು ಚುನಾವಣೆಗಳಲ್ಲಿ ತಿಪ್ಪಾರೆಡ್ಡಿಗೆ ಕೆಲಸ ಮಾಡಿದ್ದ ಅನ್ವರ್ ಕಾಂಗ್ರೆಸ್‌ಗೆ ಕಾರ್ಯಕರ್ತನೂ ಅಲ್ಲ, ಸದಸ್ಯನೂ ಅಲ್ಲ, ಏನೆಂದೂ ಅಲ್ಲದ ದೋನಂಬರ್ ದಂಧೆಯ ಅನ್ವರ್ ಶಿವು ಕೈಗೆ ಐದಾರು ಬಿ. ಫಾರಂಗಳನ್ನು ಕೈಗಿಟ್ಟಿರುವ ಶಾಸಕ ತಿಪ್ಪಾರೆಡ್ಡಿಯ ಉದ್ದೇಶ ಏನಿರಬಹುದು? ಇಂತಹ ಐನಾತಿ ಆಸಾಮಿಗೆ ಮನ್ನಣೆ ನೀಡುವ ತಿಪ್ಪಾರೆಡ್ಡಿ ತಮ್ಮನ್ನು ಬೆಂಬಲಿಸ್ಟ್ಟುವವರಿಗೆ ಯಾವ ರೀತಿಯ ಸಂದೇಶ ಕೊಡುತ್ತಿದ್ದಾರೆ? ■


ಸನದಿ ಪಠಾಣ್ ಶಿವಣ್ಣನವರ್


ಮರೆತಿರಲಿಲ್ಲ. ಈಗ ಹಾವೇರಿಯ 21ನೇ ವಾರ್ಡಿನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ರತ್ನಾಗೆ ತನ್ನ ಖಾಸಾ ಸೊಸೆ ಲೇಡಿ ಲಾಡೆನ್ ಮಂಜುಳಾ ಕರಿಬಸಮ್ಮನವರೇ ಎದುರಾಳಿ! ಬ್ಯಾಂಕಿನವರಿಗೆ, ಬಂಗಾರ ದಾಗೀನು ಅಡವಿಟ್ಟ ಪ್ರಕರಣದಲ್ಲಿ ಚೀಟಿಂಗ್ ಮಾಡಿದ್ದ ಮಂಜುಳಾ ಜನರಿಗೆ ಸಾಲ, ರೇಶನ್ ಕಾರ್ಡು ಕೊಡಿಸುವ ಭರವಸೆ ಕೊಟ್ಟು, ಸಾಕಷ್ಟು ದುಡ್ಡು ತಿಂದವಳು. ಹಿಂದೊಂದು ಪ್ರಕರಣದಲ್ಲಿ ತಹಶೀಲ್ದಾರರನ್ನೇ ಹೊಡೆಯಲು ಹೋಗಿ ಕ್ರಿಮಿನಲ್ ಕೇಸು ಹಾಕಿಸಿಕೊಂಡ (ಕೇ.ನಂ. 29/2006) ಈಕೆ ನಗರಸಭೆಗೆ ಆರಿಸಿ ಬಂದರೆ ಏನೆಲ್ಲಾ ಮಾಡಬಹುದು ನೀವೇ ಯೋಚಿಸಿ. ಒಟ್ಟಿನಲ್ಲಿ ಅತ್ತೆ ಸೊಸೆಯರ ನಡುವಿನ ಹಣಾಹಣಿ ಸಾಕಷ್ಟು ಕುತೂಹಲ ಕೆರಳಿಸಿರುವುದಂತೂ ಸತ್ಯ.

ದಲಿತರನ್ನೇ ಸುಲಿದು ತಿಂದ ದಲಿತ ತಗಡಿಮನಿ ಹೊನ್ನಪ್ಪ ಲಿಂಗಾಯತರನ್ನೇ ದೋಚಿದ ಇಟಗಿ ವೆಂಕಟೇಶ, ಪರಶುರಾಮ ಮೈಲಾರಪ್ಪನವರ, ನತ್ತುಲಾಲ ಮಲ್ಲೇಶಪ್ಪ ಬಸಲಿಂಗಪ್ಪ ಪಟ್ಟಣಶೆಟ್ಟರ್, ಬಿಜೆಪಿಯ ಶಹರ ಅಧ್ಯಕ್ಷ ಪಕ್ಕಾ ಚೆಡ್ಡಿ ವಿಜಯಕುಮಾರ್ ಚನ್ನಿಕಟ್ಟಿಯಂತಹ ಡಕಾಯತರು ಈಗ ಕಣದಲ್ಲಿದ್ದಾರೆ. ಇವರಿಗೇನಾದರೂ ನಗರಸಭೆ ಅಧಿಕಾರ ಸಿಕ್ಕರೆ ಹಾವೇರಿಗೆ ಹತ್ತಿರುವ ಹೊಲಸು ಮುಂದೆ ಹೇಸಿಗೆಯಾಗುವುದಂತೂ ಸತ್ಯ.

ಸದಾಶಿವ ಕಂಕನವಾಡ, ಕುರುಬ ಸಂಘದ ಕೊಂಬಳಿ ಮುಂತಾದವರು ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಅಂಗಳಕ್ಕೆ ಬಂದಾಗಿದೆ. ಆರಂಭದಲ್ಲಿ ಅಭ್ಯರ್ಥಿಗಳಿಗಾಗಿ ಹಪಹಪಿಸುತ್ತಿದ್ದ ಜೆಡಿಎಸ್‌ನಲ್ಲಿ ಈಗ ಗೆಲ್ಲುವ ಕುದುರೆಗಳು ಜಾಸ್ತಿಯಾದಂತಿವೆ.

ಕಾಂಗ್ರೆಸ್-ಬಿಜೆಪಿಗಳ ಅಧ್ವಾನಗಳನ್ನು ಬಗಲಲ್ಲಿಟ್ಟುಕೊಂಡು ತಾರಾ ಪ್ರಭಾವದೊಂದಿಗೆ ಬೀದಿಗಿಳಿದಿರುವ ಬಿ.ಸಿ. ಪಾಟೀಲ್ ಕುಮಾರಸ್ವಾಮಿಯನ್ನು ಜಿಲ್ಲೆಗೆ ಕರೆತಂದಿದ್ದಾರೆ. ಮೂರು ವರ್ಷಗಳಿಂದ ಒಬ್ಬ ಜಿಲ್ಲಾಧ್ಯಕ್ಷನಿಲ್ಲದೇ ಮೂಲೆಗುಂಪಾಗಿದ್ದ ಜೆಡಿಎಸ್‌ಗೆ ಈ ನಗರಸಭಾ ಚುನಾವಣೆ ಮತ್ತೆ ಮೇಲೇರಲು ಒಂದು ಅವಕಾಶ ಕಲ್ಪಿಸಲಿದೆ. ಹಾವೇರಿ ನಗರಸಭೆಯಲ್ಲಿ ಕನಿಷ್ಠ ಹತ್ತು ಸ್ಥಾನಗಳು ಮತ್ತು ಹಿರೇಕೆರೂರು, ಶಿಗ್ಗಾಂವಿ ಪುರಸಭೆಗಳು ಜೆಡಿಎಸ್ ಪಾಲಾಗಬಹುದು.


ದಕ್ಷ ಅತ್ತೆಗೆ ಭಕ್ಷ ಸೊಸೆಯ ಪೈಪೋಟಿ


ರತ್ನಾ

ಒಂದಿನ ಅವಧಿಯಲ್ಲಿ ಅಧಿಕಾರ ನಡೆಸಿದ ಅಧ್ಯಕ್ಷರುಗಳಲ್ಲಿ ರತ್ನಾ [illegible] [illegible] [illegible] ಕೊರತೆ [illegible] ರತ್ನಾ [illegible] ಹಣ ದುಡ್ಡು ತಿನ್ನಲಿಲ್ಲ [illegible]

ಜಿಲ್ಲಾ ಪಂಚಾಯತ್ ಅಧ್ಯಕ್ಷ ಗಾದಿಯನ್ನು ಕಳೆದುಕೊಂಡ ಕಾಂಗ್ರೆಸ್‌ಗೆ ಈ ಚುನಾವಣೆಯ ಮೂಲಕ ಒಂದಿಷ್ಟು ಮರ್ಯಾದೆಯನ್ನು ಗಳಿಸಿಕೊಳ್ಳುವುದು ಅವಶ್ಯವಾಗಿದ್ದರೆ, ವಾಜಪೇಯಿ ಗಾಳಿಯಲ್ಲಿ ತೇಲಿ ಬಂದ ನಾಲ್ಕು ಜನ ಶಾಸಕರನ್ನು, ಒಬ್ಬ ಸಚಿವನನ್ನು ಹೊಂದಿರುವ ಬಿಜೆಪಿಗೆ ಹಾಗೂ ಸಿಎಂನನ್ನು ಕರೆಸಿ ಪ್ರಚಾರ ಮಾಡಿಸಿದ ಜೆಡಿಎಸ್‌ಗೂ ಕೂಡ ಈ ಚುನಾವಣೆ ಒಂದು ಪ್ರತಿಷ್ಠೆಯ ಪ್ರಶ್ನೆಯೇ ಆಗಿದೆ.

■ ಹುರುಳಿಕುಪ್ಪಿ ವಿನಯ್




ರಾಮನಗರ-ಕನಕಪುರ-ದೊಡ್ಡಬಳ್ಳಾಪುರ


ಕುಮಾರಸ್ವಾಮಿಗೆ ಕಾದಿದೆ ಸೋಲು

ದುಡ್ಡು ಚೆಲ್ಲಿ ಜನರನ್ನು ಖರೀದಿಸಬಹುದೆಂದು ನಂಬಿಕೊಂಡಿರುವ ಮುಖ್ಯಮಂತ್ರಿ ಕುಮಾರಸ್ವಾಮಿಗೆ ಅವರ ಸ್ವಕ್ಷೇತ್ರವಾದ ರಾಮನಗರದಲ್ಲೇ ಬಹುಸಂಖ್ಯಾತ ಮುಸ್ಲಿಮರು ಪಾಠ ಕಲಿಸಲು ರೆಡಿಯಾಗುತ್ತಿದ್ದಾರೆ.

ಅಭಿವೃದ್ಧಿಯ ವಿಚಾರಕ್ಕೆ ಬಂದರೆ ರಾಮನಗರಕ್ಕೆ ಅಜೀರ್ಣವಾಗುವಷ್ಟು ಹಣ ಈಗಾಗಲೇ ಹರಿದುಬಂದಿದೆ. ಆದರೆ ರಾಮನಗರದ 31 ವಾರ್ಡುಗಳ ಪೈಕಿ 14 ರಲ್ಲಿ ಮುಸ್ಲಿಂ ಮತದಾರರದ್ದೇ ಮೆಜಾರಿಟಿ. ಅವರು ಕುಮಾರಸ್ವಾಮಿ ಮುಸ್ಲಿಂ ದ್ವೇಷಿ ಬಿಜೆಪಿಗಳೊಂದಿಗೆ ಸ್ನೇಹದಿಂದಿರುತ್ತಾ ಮುಸ್ಲಿಮರ ವಿರುದ್ಧದ ಗಲಾಟೆ ದೊಂಬಿಗಳಿಗೆ ಪರೋಕ್ಷ ಕುಮ್ಮಕ್ಕು ಕೊಟ್ಟುಕೊಂಡು ಬರುತ್ತಿರುವುದನ್ನೆಲ್ಲಾ ನೋಡಿಕೊಂಡು ಬಂದಿದ್ದಾರೆ. ಹಾಗಿರುವಾಗ ಜೆಡಿಎಸ್‌ಗೆ ನಿರಾಳವಾಗಿ ಬೆಂಬಲಿಸುತ್ತಾರೆಂಬುದು ಕೇವಲ ಭ್ರಮೆ ಅಷ್ಟೇ. ಅಸಲಿಗೆ ಒಬ್ಬ ಶೇಷಾದ್ರಿ ಬರದೇ ಹೋಗಿದ್ದರೆ ರಾಮನಗರ ಟೌನಿನಲ್ಲಿ ಜೆಡಿಎಸ್ ಮರ್ಯಾದೆ ಉಳಿಸಬಲ್ಲ ಇನ್ನೊಬ್ಬ ನಾಯಕನೇ ಇರಲಿಲ್ಲ. ಇಡೀ ಟೌನಿನಲ್ಲಿ ಕಾಂಗ್ರೆಸ್ ಜೆಡಿಎಸ್ ನಡುವೆ ನೇರ ಸ್ಪರ್ಧೆ ಇದ್ದು ಬಿಜೆಪಿಗಳು ವಾರ್ಡ್ ನಂ. 7 ಅಥವಾ 8 ರಲ್ಲಿ ಒಂದು ಗೆಲ್ಲಬಹುದಷ್ಟೇ. ವನಮಾಲ ರೆಡ್ಡಿ ಹಾಗೂ ನಾಗೇಶ್ ಇಲ್ಲಿ ಬಿಜೆಪಿ ಅಭ್ಯರ್ಥಿಗಳಾಗಿದ್ದಾರೆ. ಶೇಷಾದ್ರಿ ವಿರುದ್ಧ ಕಾಂಗ್ರೆಸ್‌ನಿಂದ ರೈಡ್ ನಾಗರಾಜ್ ನಿಂತಿದ್ದು ಸಮಬಲದ ಪೈಪೋಟಿ ನಡೆದಿದೆ. ಮತ್ತೊಂದೆಡೆ ಇನ್ನೊಂದು ವಾರ್ಡಿನಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿದ್ದ ಕಿಜರ್‌ಪಾಷ 'ಜೆಡಿಎಸ್‌ಗೆ ಮುಸ್ಲಿಮರು ಓಟು ಹಾಕಲ್ಲ'ವೆಂದು ಹೆದರಿ ನಾಮಪತ್ರವನ್ನೇ ವಾಪಸ್ ತೆಗೆದುಬಿಟ್ಟಿದ್ದಾನೆ. ಕಾಂಗ್ರೆಸ್ ಅಲ್ಲಿ ಈಗಾಗಲೇ ಗೆದ್ದಿದೆ.


ಸಿ.ಎಂ. ಲಿಂಗಪ್ಪ

ಡಿ.ಕೆ. ಶಿವಕುಮಾರ್ ಹಾಗೂ ಮಾಜಿ ಶಾಸಕ ಸಿ.ಎಂ. ಲಿಂಗಪ್ಪ ಬಿರುಸಾಗಿ ಓಡಾಡುತ್ತಾ ಕುಮಾರಸ್ವಾಮಿಯ ಕೋಟೆಯಲ್ಲಿ ಸಾಕಷ್ಟು ಬಿರುಕು ಮೂಡಿಸಿದ್ದಾರೆ. ರಾಮನಗರ ಜಿಲ್ಲೆಯಾದ ನಂತರ ಹೊಸ ಜಿಲ್ಲಾ ಪಂಚಾಯಿತಿ ಅಧ್ಯಕ್ಷರ ಆಯ್ಕೆಗೆ ಮೊನ್ನೆ ಚುನಾವಣೆ ನಿಗದಿಯಾಗಿತ್ತು, ಆದರೆ ಜೆಡಿಎಸ್‌ನವರಿಗೆ ಸೋಲುವ ಭೀತಿ ಉಂಟಾಗಿ ಮಾಗಡಿ ಶಾಸಕ ಬಾಲಕೃಷ್ಣ, ಎಂಎಲ್‌ಸಿ ಪುಟ್ಟಣ್ಣ ಹಾಗೂ ಬೆಂಗಳೂರು ಡೈರಿಯ ಲಿಂಗೇಶ್ ಕುಮಾರ್ ಗಲಾಟೆಯೆಬ್ಬಿಸಿ ಚುನಾವಣೆಯನ್ನೇ ಮುಂದೂಡುವಂತೆ ದುಷ್ಕೃತ್ಯ ನಡೆಸಿದ್ದಾರೆ. ಮುಂದೆ ಎಲೆಕ್ಷನ್ ಆದರೂ ಜೆಡಿಎಸ್ ಸೋತು ಜಿಲ್ಲಾ ಪಂಚಾಯಿತಿ ಕಾಂಗ್ರೆಸ್ ಹತೋಟಿಗೆ ಬರುವುದು ಖಚಿತ. ಹಾಗಾಗಿ ಮುನಿಸಿಪಾಲಿಟಿಯನ್ನಾದರೂ ಉಳಿಸಿಕೊಳ್ಳಬೇಕೆಂದು, ಇದು ಕುಮಾರಸ್ವಾಮಿಯ ಮರ್ಯಾದೆ ಪ್ರಶ್ನೆ ಎಂತಲೂ ಜೆಡಿಎಸ್‌ನವರು ಏನೇನೊ ಲಾಗ ಹಾಕುತ್ತಿದ್ದಾರೆ.


ಶೇಷಾದ್ರಿ

ಆದರೆ ಮತದಾರ ಅವರನ್ನು ನಂಬುತ್ತಿಲ್ಲ.


ದೊಡ್ಡಬಳ್ಳಾಪುರ: ಯಡವಟ್ಟು ರಾಜೇಂದ್ರ

ಒಟ್ಟು 31 ವಾರ್ಡುಗಳಿರುವ ದೊಡ್ಡಬಳ್ಳಾಪುರ ಪುರಸಭಾ ಚುನಾವಣೆಯಲ್ಲಿ ಕಾಂಗ್ರೆಸ್-ದಳ ನಡುವೆ ನೇರ ಪೈಪೋಟಿ ಇದೆ. ಇಲ್ಲಿ ಕಾಂಗ್ರೆಸ್‌ನವರ ಪಾಲಿಗೆ ಶತ್ರುವಾಗಿರುವುದು ಸ್ವತಃ ಕಾಂಗ್ರೆ ಸಂಸದ ಜಾಲಪ್ಪನ ಮಗ ರಾಜೇಂದ್ರ. ಮಾಜಿ ಪ್ರೆಸಿಡೆಂಟ್ ಆದ ರಾಜೇಂದ್ರ ಅಭ್ಯರ್ಥಿಗಳ ಆಯ್ಕೆಯಲ್ಲಿ ಯಡವಟ್ಟು ಕೆಲಸ ಮಾಡಿರುವ ಕಾರಣ ಕೆಲ ವಾರ್ಡುಗಳಲ್ಲಿ ಜೆಡಿಎಸ್‌ಗೆ ತಂತಾನೆ ಗೆಲುವು ಸಿಗಲಿದೆ. 21 ನೇ ವಾರ್ಡಿನಲ್ಲಿ ಮಾಜಿ ಸದಸ್ಯೆ ಗೌರಮ್ಮನವರನ್ನು ಕಾಂಗ್ರೆಸ್‌ನಿಂದ ನಿಲ್ಲುವಂತೆ ಹೇಳಿದ್ದ ರಾಜೇಂದ್ರ, ಆಮೇಲೆ ಚೂಡಾಮಣಿ ಎಂಬುವವರಿಗೆ ಟಿಕೆಟ್ ಮಾರಿಕೊಂಡಿದ್ದಾನೆ. ಅಲ್ಲೀಗ ಜೆಡಿಎಸ್‌ನಿಂದ ವಿಮಲಮ್ಮ, ಕಾಂಗ್ರೆನಿಂದ ಚೂಡಾಮಣಿ, ಬಿಜೆಪಿಯಿಂದ ರಾಜಲಕ್ಷ್ಮಿ ಸ್ಪರ್ಧಿಸಿದ್ದಾರಾದರೂ ಸ್ವತಂತ್ರ ಅಭ್ಯರ್ಥಿ ಗೌರಮ್ಮನವರೇ ಗೆಲ್ಲುವುದು ಖಚಿತವಾಗಿದೆ. ಉಳಿದಂತೆ ಕನ್ನಡ ಪಕ್ಷದ ತ.ನಾ. ಪ್ರಭುದೇವ್ ಈಗ ಕನ್ನಡ ಹೋರಾಟ ಬಿಟ್ಟು ಜೆಡಿಎಸ್ ಸೇರಿ ಕಾಂಗ್ರೆನ ಶ್ರೀನಿವಾಸ್ ವಿರುದ್ಧ ಸೆಣಸಾಡುತ್ತಿದ್ದಾರೆ. ಜಾಲಪ್ಪನವರ ಇನ್ನೋರ್ವ ಮಗ ನರಸಿಂಹಸ್ವಾಮಿಯೇ ಕಾಂಗ್ರೆಸ್ ಶಾಸಕರಾಗಿದ್ದರೂ ಟೌನಿನಲ್ಲಿ ಮೊದಲಿಂದಲೂ ಕಾಂಗ್ರೆಸ್ ಪ್ರಭಾವ ಕಡಿಮೆ ಇದೆ. ಅಂಥದರಲ್ಲೂ ಅವಿವೇಕಿ ರಾಜೇಂದ್ರ ಸೋಲುವ ಜನರನ್ನೇ ಹುಡುಕಿ ಹುಡುಕಿ ಟಿಕೆಟ್ ಕೊಟ್ಟಿರುವುದರಿಂದ ಇಲ್ಲಿ ಕಾಂಗ್ರೆಸ್‌ನವರು ತಿಣುಕಾಡುತ್ತಿದ್ದಾರೆ.


ಗೌರಮ್ಮ

ಕನಕಪುರದಲ್ಲಿ ಜಿದ್ದಾಜಿದ್ದಿ

27 ವಾರ್ಡ್‌ಗಳಿರುವ ಕನಕಪುರ ಪುರಸಭೆಯಲ್ಲಿ ಮೊದಲಿನಿಂದಲೂ ಕಾಂಗ್ರೆಸ್‌ನದ್ದೇ ಮೇಲುಗೈ. ಪ್ರತಿ ಸಲದಂತೆ ಈ ಬಾರಿಯೂ ಜಾತಿ, ತೋಳ್ಬಲ, ಗ್ರಾನೈಟ್ ದುಡ್ಡಿನ ಮಸ್ತಿಯಲ್ಲಿ ಅಭ್ಯರ್ಥಿಗಳು ಅಖಾಡಕ್ಕಿಳಿದಿದ್ದಾರೆ. ಬಹುತೇಕ ಕಡೆ ಕಾಂಗ್ರೆಸ್-ಜೆಡಿಎಸ್ ನಡುವೆ ನೇರ ಸ್ಪರ್ಧೆ ಇದೆ. ಇದೇ ಮೊದಲ ಬಾರಿಗೆ ಬಹುಜನ ಸಮಾಜ ಪಕ್ಷದ ಶಂಕರನಾರಾಯಣ್ (ವಾರ್ಡ್ 21) ಕುರುಪೇಟೆಯಲ್ಲಿ ಗೆದ್ದು ಪಕ್ಷದ ಖಾತೆ ತೆರೆಯಲಿದ್ದಾರೆ. ವಾರ್ಡ್ ನಂ. 2 ರಲ್ಲಿ ದಳದಿಂದ ಪುಟ್ರಾಜ ಹಾಗೂ ಕಾಂಗ್ರೆನಿಂದ ಕೈಲಾಸ ಭವನದ ಮಹೇಶ್ ಸ್ಪರ್ಧಿಸಿದ್ದು ಹೆಚ್ಚು ಕುತೂಹಲ ಕೆರಳಿಸಿರುವ ವಾರ್ಡ್ ಇದು. ಒಳ್ಳೆ ಮಾತು ನಾಗರಿಕತೆ ಇರುವ ಮಹೇಶ್‌ರನ್ನು ಗೆಲ್ಲಿಸಿದರೆ ಟೌನಿನ ಜನರ ನೆಮ್ಮದಿ ಉಳಿಯಬಹುದು. ವಾರ್ಡ್ ನಂಬರ್ 4 ರಲ್ಲಿ ಕಾಂಗ್ರೆಸ್‌ನಿಂದ ದಿಲೀಪ್ ಹಾಗೂ ದಳದಿಂದ ಸ್ವಾಮಿ ಸ್ಪರ್ಧಿಸಿದ್ದಾರೆ. ಜಾತಿ ಲೆಕ್ಕಾಚಾರವೇ ಇಲ್ಲಿ ಪ್ರಮುಖವಾಗಿದ್ದು ಬಣಜಿಗರ ಸ್ವಾಮಿಗೆ ದಲಿತರ ಬೆಂಬಲ ಸಿಕ್ಕರೆ ದಿಲೀಪನಿಗೆ ಕಷ್ಟ. ಅಥವಾ ಬಣಜಿಗರನ್ನು ಹೊರತುಪಡಿಸಿ ಒಕ್ಕಲಿಗರು, ದಲಿತರು, ಮುಸ್ಲಿಮರು ಕಾಂಗ್ರೆಸ್ ಕಡೆ ತಿರುಗಿದರೆ ದಿಲೀಪ್ ಗೆಲ್ಲಬಹುದು. ಉಳಿದಂತೆ ಸೀನಿಯರ್ ಲೀಡರ್‌ಗಳಾದ ಕಾಂಗ್ರೆಸ [illegible] ಕೃಷ್ಣಮೂರ್ತಿ, ದಳದ ಚಿಕ್ಕಣ್ಣ ಯಾನೆ ನಾಗರಾಜ್ [illegible] ಗೆಲ್ಲುತ್ತಾರೆ.



ಸಿಂಧ್ಯಾ ಈಗ ದಳ [illegible] ಕಾಂಗ್ರೆಗೇ [illegible] ಪರಿಸ್ಥಿತಿ ಇದೆ.

ಡಿ.ಕೆ.ಗೂ ಇದು ಅಳಿವು ಉಳಿವಿನ ಪ್ರಶ್ನೆಯಲ್ಲವೇ? ■

ಬಿಜಾಪುರ

ಬಿಜಾಪುರದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣಾ ಬಿಸಿಯೀಗ ಏರಿದೆ. ಪ್ರಮುಖ ರಾಜಕೀಯ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಮತ್ತು ಕಾಂಗ್ರೆಸ್‌ಗಳ ಮಧ್ಯೆ ಹಣಾಹಣಿಗೆ ರಂಗ ಸಜ್ಜಾಗಿದೆ.

ಬಿಜೆಪಿ ತನ್ನ ಒಳಗೇ ನಡೆಯುತ್ತಿರುವ ಆಂತರಿಕ ಕದನದಿಂದಾಗಿ ತನ್ನ ಅಸ್ತಿತ್ವ ಕಾಪಾಡಿಕೊಳ್ಳುವುದಕ್ಕೂ ತಿಣುಕಾಡುತ್ತಿದೆ. ರಾಜ್ಯ ಬಿಜೆಪಿ ಅನಂತಕುಮಾರ್ ಮತ್ತು ಯಡ್ಡಿ ನಡುವೆ ಹೋಳಾಗಿರುವಂತೆ ಇಲ್ಲೂ ಯಡ್ಡಿ ಶಿಷ್ಯ ಅಪ್ಪು ಪಟ್ಟಣಶೆಟ್ಟಿ ಮತ್ತು ಅನಂತೂ ಶಿಷ್ಯ ಸಂಸದ ಬಸವನಗೌಡ ಪಾಟೀಲ್ ಯತ್ನಾಳ್ ಮತ್ತವನ ಮರಿಶಿಷ್ಯ ವಿಠ್ಠಲ ಕಟಕದೊಂಡ ನೇತೃತ್ವದಲ್ಲಿ ಎರಡು ಬಣಗಳಾಗಿ ಒಡೆದಿದೆ. ಈ ಬಾರಿಯ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಹುಪಾಲು ಟಿಕೆಟ್ಟುಗಳು ಪಟ್ಟಣ ಶೆಟ್ಟಿ ಬಣಕ್ಕೆ ಸಿಕ್ಕಿರುವುದು ವೈಷಮ್ಯ ಇನ್ನಷ್ಟು ತೀವ್ರಗೊಳ್ಳಲು ಕಾರಣ ವಾಗಿದೆ. ಹೀಗಿದ್ದರೂ ಅಪ್ಪುವಿನ ಕುಲಬಾಂಧವರಾದ ಬಣಜಿಗರಿಗಿಂತ ಯತ್ನಾಳನ ಕುಲಬಾಂಧವರಾದ ಪಂಚ ಮಸಾಲಿಗಳೇ ಜಿಲ್ಲೆಯಲ್ಲಿ ಪ್ರಬಲ ರಾಗಿರುವುದರಿಂದ ಪಟ್ಟಣಶೆಟ್ಟಿಯ ಚಡ್ಡಿ ಉದುರುವ ಮುನ್ಸೂಚನೆಗಳು ಕಾಣುತ್ತಿವೆ.


ಸುಣಗಾರ್

ಈ ಒಳಕದನವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುವ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಇಲ್ಲ. ಏಕೆಂದರೆ ಖುದ್ದು ಕಾಂಗ್ರೆಸ್ ಕೂಡ ಇಂತಹ ಒಂದು ಒಳತಿಕ್ಕಾಟವನ್ನು ಅನುಭವಿಸುತ್ತಿದೆ. ತಿಕೋಟ ಕ್ಷೇತ್ರದ ಶಾಸಕ ಎಂ.ಬಿ. ಪಾಟೀಲ್ ಮತ್ತು ಬಸವನಬಾಗೇವಾಡಿ ಕ್ಷೇತ್ರದ ಶಾಸಕ ಶಿವಾನಂದ ಪಾಟೀಲ್ ನಡುವಿನ ಘರ್ಷಣೆ ತಾರಕಕ್ಕೇರಿ ಇವರಿಬ್ಬರ ಮಧ್ಯೆ ಜಿಲ್ಲಾಧ್ಯಕ್ಷ ಸುಣಗಾರ್ ಅಪ್ಪಚ್ಚಿಯಾಗಿಹೋಗಿದ್ದಾನೆ. ಕಾಂಗ್ರೆಸ್‌ನ್ನು ಒಂದುಗೂಡಿಸುವ ಕೆಲಸ ಸುಣಗಾರ್‌ನಿಂದ ಸದ್ಯಕ್ಕೆ ಸಾಧ್ಯವಿಲ್ಲ. ಆತನ ಹ್ಯಾಪುಮೋರೆಗೆ ಜಿಲ್ಲೆಯಲ್ಲಿ ಕವಡೆಯಷ್ಟು ಬೆಲೆಯಿಲ್ಲ. ಇದು ಈಗಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಮೇಲೆ ಪ್ರಭಾವ ಬೀರುವುದಂತೂ ಸತ್ಯ.

ಕಾಂಗ್ರೆಸ್ ಪಾಲಿಗೆ ವರದಾನಗಳು

ನರಸತ್ತ ನಾರಾಯಣನಂತಿರುವ ಮಲ್ಲಿಕಾರ್ಜುನ ಯಂಡಿಗೇರಿ ಜಿಲ್ಲಾಧ್ಯಕ್ಷನಾಗಿರುವ ಜೆಡಿಎಸ್ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಸ್ಥಿತಿಗೆ ಬಂದಿದೆ. ಈತ ಬಿಜಾಪುರದಲ್ಲಿ ಇರುವುದಕ್ಕಿಂತ ಬೆಂಗಳೂರಿನಲ್ಲಿರುವುದೇ ಹೆಚ್ಚು. ಕುಮಾರುಸ್ವಾಮಿ ಮತ್ತು ಮುದ್ದೆಗೌಡರು ಯಂಡಿಗೇರಿಯ ಮೂಲಕ ಲಿಂಗಾಯತರನ್ನು ಪಕ್ಷದತ್ತ ಸೆಳೆಯಬೇಕು ಎಂಬ ಭ್ರಮೆಯಲ್ಲಿ ಅವನಿಗೆ ಅಧ್ಯಕ್ಷ ಸ್ಥಾನ ಕೊಟ್ಟಿದ್ದಾರೆ. ವಾಸ್ತವದಲ್ಲಿ ಯಂಡಿಗೇರಿಗೆ ತನ್ನ ಜಾತಿಯಲ್ಲಿಯೇ ತೀವ್ರ ವಿರೋಧವಿದೆ. ಇವನನ್ನೇ ನಂಬಿಕೊಂಡು ಚುನಾವಣೆ ಎದುರಿಸುತ್ತಿರುವ ಜೆಡಿಎಸ್ ಬಿಜಾಪುರ ಮಾತ್ರವಲ್ಲ ಉಳಿದ ಐದು ಪುರಸಭೆಗಳಲ್ಲಿಯೂ ಠೇವಣಿ ಉಳಿಸಿಕೊಳ್ಳಲು [illegible]ಣಗಾಡಬೇಕಾದ ಸ್ಥಿತಿ ಬಂದಿದೆ. [illegible]ಜಾಪುರದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಮುಸ್ಲಿಮರು ಕಾಂಗ್ರೆಸ್‌ನಲ್ಲಿ ಸ್ಥಾನ ಸಿಗದೇ ಜೆಡಿಎಸ್‌ಗೆ ಹಾರಿಬಂದಿದ್ದಾರೆ. ಜೆಡಿಎಸ್‌ಗೆ ಇದೊಂದು ಪ್ಲಸ್ ಪಾಯಿಂಟ್ ಆಗಬಹುದು.


ಯಂಡಿಗೇರಿ


ವಿಠ್ಠಲ್

[illegible]ನೇ ಆದರೂ ಸರಿ ಬಿಜಾಪುರ ನಗರಸಭೆಯನ್ನು ಬಿಡಬಾರದು ಎಂಬ ಜಿದ್ದಿನಿಂದ ಬಿಜೆಪಿ ಹೋರಾಡುತ್ತಿದೆ. ಆದರೆ ಅದರ ಒಳಜಗಳದ ಕಾರಣ ನಗರಸಭೆ ಈ ಬಾರಿ ಕಾಂಗ್ರೆಸ್ ತೆಕ್ಕೆಗೆ ಹೋಗುವ ಸೂಚನೆಗಳೇ ಕಾಣುತ್ತಿವೆ.

ಉಳಿದಂತೆ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಐದು ಪುರಸಭೆಗಳ ಪೈಕಿ ಇಂಡಿಯಲ್ಲಿ ಜೆಡಿಎಸ್ ಶಾಸಕ ರವಿಕಾಂತ್ ಪಾಟೀಲ್‌ನ ಪ್ರಭಾವವಿದೆ. ಆದರೆ ಇತ್ತೀಚೆಗೆ ಇವನ ರೌಡಿ ಪಡೆ ನಡೆಸುತ್ತಿರುವ ದೌರ್ಜನ್ಯದಿಂದಾಗಿ ಜನರಲ್ಲಿ ಇವನ ಬಗ್ಗೆ ಒಂದಿಷ್ಟು ವಿರೋಧವೂ ಶುರುವಾಗಿದೆ. ಇದನ್ನೇ ಬಳಸಿಕೊಳ್ಳಲು ಬಿಜೆಪಿಯ ಡಾ. ಸಾರ್ವಭೌಮ ಬಗಲಿ ಪ್ರಯತ್ನಿಸುತ್ತಿದ್ದಾನೆ. ಜತೆಗೆ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಕಾಂಗ್ರೆಸ್‌ನ ಬಿ.ಜಿ. ಪಾಟೀಲ್ (ಹಲಸಂಗಿ) ಈಗ ಅಷ್ಟು ಪ್ರಭಾವಶಾಲಿಯಾಗಿಲ್ಲದಿರುವುದರಿಂದ ಕಾಂಗ್ರೆಸ್‌ಗೆ ಅಲ್ಲಿ ಹಿನ್ನಡೆಯಾಗುವ ಸಂಭವವಿದೆ. ಹಾಗಾಗಿ, ಇಂಡಿಯಲ್ಲಿ ಹಣಾಹಣಿ ನಡೆಯುವುದು ಬಿಜೆಪಿ-ಜೆಡಿಎಸ್ ಮಧ್ಯದಲ್ಲಿಯೇ ಎಂಬುದಂತೂ ಸತ್ಯ.


ಸಿಂಧಗಿ ಪುರಸಭೆಯಲ್ಲಿ ಕಾಂಗ್ರೆಸ್ ಗೆಲ್ಲುವ ಸಂಭವವಿದೆ. ಏಕೆಂದರೆ ಜಿಲ್ಲಾಧ್ಯಕ್ಷ ಸುಣಗಾರ್ ಮೂಲತಃ ಇದೇ ಊರಿನವನಾಗಿರುವುದಲ್ಲದೇ ಬಿಜೆಪಿ ಶಾಸಕ ಶಹಾಪೂರ್‌ನ ವಿರೋಧಿ ಅಲೆ ಇದೆ. ಇಲ್ಲಿ ದಳವಂತೂ ಹೇಳಹೆಸರಿಲ್ಲದಂತೆ ಹೋಗುತ್ತದೆ.


ಬಸವನ ಬಾಗೇವಾಡಿಯಲ್ಲಿ ನಕಲಿ ಸಾರಾಯಿ ತಯಾರಿಸುವ ನಿಸ್ಸೀಮ ಶಾಸಕ ಶಿವಾನಂದ ಪಾಟೀಲ್‌ನ ಹವಾ ಜೋರಾಗಿದೆ. ಪಕ್ಷಗಳನ್ನೂ, ಕ್ಷೇತ್ರಗಳನ್ನೂ ಬದಲಿಸುವಲ್ಲಿ ನಿಸ್ಸೀಮನಾದ ಈತ ಸದ್ಯಕ್ಕೆ ಕಾಂಗ್ರೆಸ್‌ನಲ್ಲಿದ್ದಾನೆ. ಈತನಿಗೆ ಪೈಪೋಟಿ ನೀಡುವುದಕ್ಕಾಗಿ ಬಿಜೆಪಿಯ ಬೆಳ್ಳುಬ್ಬಿ ಇದ್ದರೂ ಅದು ಶಿವಾನಂದನ ರೌಡಿ ಪಡೆಗಳ ಮುಂದೆ ನಿಲ್ಲುವುದಿಲ್ಲ. ಹಾಗಾಗಿ ಬಸವನ ಬಾಗೇವಾಡಿಯಲ್ಲಿ ಬಿಜೆಪಿಯದ್ದು ತಿರುಕನ ಕನಸೇ ಸರಿ.


ಇನ್ನು ಮುದ್ದೇಬಿಹಾಳದಲ್ಲಿ ಚಾಕು ಸಂಸ್ಕೃತಿಯನ್ನೇ ಮೈಗೂಡಿಸಿಕೊಂಡಿರುವ ಕಾಂಗ್ರೆಸ್‌ನ ಅಪ್ಪಾ ಸಾಹೇಬ್ ನಾಡಗೌಡ ಅಥವಾ ಸಿ.ಎಸ್. ನಾಡಗೌಡ ಎನ್ನುವ ಆಸಾಮಿಗೆ ತನ್ನ ಸ್ವಂತ ವರ್ಚಸ್ಸಿಗಿಂತ ಅವನ ವಿರೋಧಿ ಗುಂಪು ಸಂಘಪರಿವಾರವೇ ಸಹಾಯಕ್ಕೆ ಬರಬಹುದು. ಅವನ ಇನ್ನೊಬ್ಬ ವಿರೋಧಿ ವಿಮಲಾಭಾಯಿ ದೇಶಮುಖ್ ಎಂಬ ಜೆಡಿಎಸ್ ಧುರೀಣೆ ಕೂಡ ನೀರಸವಾಗಿ ಓಡಾಡುತ್ತಿರುವುದೂ ನಾಡಗೌಡನಿಗೆ ಪ್ಲಸ್ ಪಾಯಿಂಟ್ ಆಗಿ ಪರಿಣಮಿಸಬಹುದು. ಕೇವಲ ದುಡ್ಡು ದರ್ಪಗಳನ್ನೇ ಬಂಡವಾಳ ಮಾಡಿಕೊಂಡಿರುವ ವಿಮಲಾಭಾಯಿ ನೇತೃತ್ವದ ಜೆಡಿಎಸ್ ಪುರಸಭೆ ಚುನಾವಣೆಯಲ್ಲಿ ಮಣ್ಣು ಮುಕ್ಕುವುದು ಗ್ಯಾರಂಟಿ. ಬಿಜೆಪಿಯ ಅಸ್ತಿತ್ವವೂ ಅಷ್ಟಕ್ಕಷ್ಟೇ ಇದ್ದುದರಿಂದ ಕಾಂಗ್ರೆಸ್ ಗೆಲ್ಲಲಿದೆ.


ಒಟ್ಟಿನಲ್ಲಿ ನೆರೆಹಾವಳಿಯಿಂದ ತತ್ತರಿಸಿರುವ ಬಿಜಾಪುರದಲ್ಲಿ ಚುನಾವಣಾ ಪ್ರಚಾರವ ನೀರಸವಾಗಿದ್ದರೂ ಮಳೆ ಕಡಿಮೆಯಾದಂತೆ ಚುನಾವಣಾ ಕಾವು ಏರತೊಡಗಿದೆ.

■ ಮೇಘರಾಜ್


ಶಿರಿಯಣ್ಣವರ್


ಹಿಂಡಸಗೇರಿ


ಜಬ್ಬಾರ್‌ಖಾನ್ ಹೊನ್ನಳ್ಳಿ


ಜೋ[illegible]

ಹುಬ್ಬಳ್ಳಿ-ಧಾರವಾಡ
ಬಿಜೆಪಿಯನ್ನು ಗೆಲ್ಲಿಸುತ್ತಿರುವ ಕಾಂಗ್ರೆಸ್

ಇಷ್ಟು ದಿನ ಮೂಲೆಯಲ್ಲಿ ಧೂಳು ತಿನ್ನುತ್ತಾ ಕುಳಿತಿದ್ದ ಬಿಳಿ ಅಂಗಿ, ಜುಬ್ಬಾಗಳು ಸ್ಥಳೀಯ ಸಂಸ್ಥೆಗಳ ಚುನಾವಣಾ ಪ್ರಕಟಣೆಯೊಂದಿಗೆ ಬೀದಿಗೆ ಬಂದುಬಿಟ್ಟಿವೆ. ಧಾರವಾಡ ಹುಬ್ಬಳ್ಳಿಯಲ್ಲಂತೂ ಕಳೆದ ಕೆಲವು ದಿನಗಳಿಂದ ಸುರಿದ ಭಾರೀ ಮಳೆಯಿಂದಾಗಿ ನೂರಾರು ಮನೆಗಳು ನೆಲಸಮವಾಗಿ, ಸಾವಿರಾರು ಜನರ ಬದುಕು ನೀರಿನಲ್ಲಿ ಮುಳುಗಿ ಹೋಗಿದ್ದರೂ ಯಾವೊಬ್ಬ ರಾಜಕಾರಣಿಯೂ ಅತ್ತ ತಲೆ ಹಾಕದೆ ತಮ್ಮತಮ್ಮ ಚುನಾವಣಾ ಲೆಕ್ಕಾಚಾರದಲ್ಲಿ ಟಿಕೆಟ್ ಪಡೆಯುವ ಭರಾಟೆಯಲ್ಲಿ ತೊಡಗಿದ್ದರು. ಈಗ ಯಾರ್‍ಯಾರಿಗೆ ಟಿಕೆಟ್ ಸಿಕ್ಕಿದೆಯೋ ಅವರು ಮಾತ್ರ ಜನರ ಬಳಿ ಬಂದು ಪೊಳ್ಳು ಭರವಸೆಗಳನ್ನು ನೀಡಲಾರಂಭಿಸಿದ್ದಾರೆ. ವಾಸ್ತವದಲ್ಲಿ ನೆರೆಹಾವಳಿ ಬಂದದ್ದು ಈ ರಾಜಕಾರಣಿಗಳಿಗೆ ಪೊಳ್ಳು ಭರವಸೆ ನೀಡಲು ಅನುಕೂಲವಾಗಿಬಿಟ್ಟಿದೆ.

ಚುನಾವಣೆ ಪ್ರಕಟಗೊಳ್ಳುತ್ತಿದ್ದಂತೆಯೇ ಕಾಂಗ್ರೆಸ್ ಪಾಳೆಯದಲ್ಲಿನ ಒಳಜಗಳ ತಾರಕಕ್ಕೇರಿದೆ. ಅನೇಕ ವರ್ಷಗಳಿಂದ ಪಕ್ಷಕ್ಕಾಗಿ ದುಡಿದ ಭಾಸ್ಕರ್ ಜಿತೂರಿ, ರಾಜಶೇಖರ್ ಮೆಣಸಿನಕಾಯಿ, ಶಫಿ, ಶೀಲಾ ಮಿರ್ಜಿ, ಅನ್ನಪೂರ್ಣ ಕಲಾಲ, ಅನಸೂಯ ಅರಕೇರಿ, ಮಾಜಿ ಮಹಾಪೌರರಾದ ಫಿರೋಜ್ ಕೊಣ್ಣೂರ್ ಮುಂತಾದ ಘಟಾನುಘಟಿಗಳಿಗೆ ಹುಬ್ಬಳ್ಳಿ ಶಹರದ ಕಾಂಗ್ರೆಸ್ ಅಧ್ಯಕ್ಷ ಹೊನ್ನಳ್ಳಿ ಈ ಬಾರಿ ಮಣ್ಣು ತಿನ್ನಿಸಿದ್ದಾನೆ. ಹೀಗಾಗಿಯೇ, ಫಿರೋಜ್ ಕೊಣ್ಣೂರ್ ಮತ್ತು ಐ.ಎಂ. ಜವಳಿ ರಾಜೀನಾಮೆ ಕೊಟ್ಟು ಕಾಂಗ್ರೆಸ್‌ಗೆ ಗುಡ್‌ಬೈ ಹೇಳಿದ್ದಾರೆ.

ಒಳಜಗಳದ ವಿಚಾರದಲ್ಲಿ ಬಿಜೆಪಿ ಕೂಡ ಹೊರತಲ್ಲ. ಶೆಟ್ಟರ್ ಈ ಬಾರಿ ವೀರಭದ್ರಪ್ಪ ಹಾಲಬಾವಿ, ವಾಘ[illegible] ಮೋಡೆಯಂತಹ ದಿಗ್ಗಜರಿಗೇ ಖೋ ಕೊಟ್ಟು ಕಳಿಸಿದ್ದಾರೆ. ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ವಂಚಿತರಾದವರನ್ನೇ ನಂಬಿಕೊಂಡು ಜೆಡಿಎಸ್, ಜೆಡಿಯು ಕಣಕ್ಕಿಳಿದಿವೆ.

ಬಿ ಫಾರ್ಮ್‌ಗಾಗಿ ಚಪ್ಪಲಿ ಹೊಡೆದಾಟ!

ಪ್ರಾಯಶಃ ಇಂತಹ ಘಟನೆ ರಾಜ್ಯದ ಬೇರೆ ಕಡೆ ನಡೆದಿಲ್ಲ ಅಂತ ಕಾಣುತ್ತೆ. ಹುಬ್ಬಳ್ಳಿಯ ನವೀನ್ ಹೋಟೆಲ್‌ನಲ್ಲಿ ಬಿ ಫಾರ್ಮ್ ಹಂಚಲು ಕಾಂಗ್ರೆಸ್ ವೀಕ್ಷಕ ಜಯಸಿಂಹ ಬಂದು ಕುಳಿತಿದ್ದ. ಬೆಂಗಳೂರು ಸಭೆಯಲ್ಲಿ ಅಂತಿಮವಾಗಿದ್ದ ಪಟ್ಟಿಯ ವಾರ್ಡ್ ನಂಬರ್ 39ಕ್ಕೆ ಶೀಲಾ ಮಿರ್ಜಿಯನ್ನೇ ನಿಲ್ಲಿಸಬೇಕಿತ್ತು. ಆದರೆ ಹೊನ್ನಳ್ಳಿ ಅದನ್ನು ಅವಳಿಂದ ಕಿತ್ತುಕೊಂಡು ಆ ವಾರ್ಡಿಗೆ ಸಂಬಂಧವೇ ಇಲ್ಲದ ಪೂಜಾ ಪಂಚಾಕ್ಷರಿಮಠ್ ಎಂಬ ಮಹಿಳೆಗೆ ಮಾರಿಕೊಂಡಿದ್ದ. ಇದನ್ನು ಪ್ರಶ್ನಿಸಿದ್ದಕ್ಕೆ ಮಾರಾಮಾರಿ ನಡೆದು ಕೊನೆಗೆ ಬಲಾನ ಎಂಬ ಮಹಿಳೆಯು ಹೊನ್ನಳ್ಳಿ, ಮಹಿಳೆಯರಾದ ಶೀಲಾಮೂರ್ತಿ ಮತ್ತು ಅನ್ನಪೂರ್ಣ ಕಲಾಲ್‌ಗೆ ಚಪ್ಪಲಿ ಸೇವೆ ಮಾಡಿಯೇ ಬಿಟ್ಟರು.


ಇನ್ನು ಮಹ್ಮದ್ ಭದ್ರಾಪೂರ್ ಎಂಬುವನು ಜಯಸಿಂಹನ ಎದೆಪಟ್ಟಿ ಹಿಡಿದು ಬಿ ಫಾರ್ಮ್ ಕಸಿದುಕೊಂಡು ಕಾಂಗ್ರೆಸ್‌ನಿಂದಲೇ ಸ್ಪರ್ಧಿಸಿದ್ದಾನೆ. ರಜನಿ ಬಿಜವಾಡ್‌ನ ಆರ್ಭಟಕ್ಕೆ ಹೆದರಿ ಅವನಿಗೂ ವಾರ್ಡ್ ಸಂಖ್ಯೆ 55ರ ಬಿ ಫಾರ್ಮ್ ಕೊಡಲಾಯಿತು. ಆದರೆ, ಅದು ಡೂಪ್ಲಿಕೇಟ್

ಬಿಜೆಪಿ ಎಷ್ಟು ಕಸಿಯುತ್ತೆ

ಬಾಗಲಕೋಟೆ ಜಿಲ್ಲೆಯಲ್ಲಿ ಬಾದಾಮಿ ಮತ್ತು ಬಾಗಲಕೋಟೆ ನಗರಸಭೆ, ಎಂಟು ಪುರಸಭೆ ಮತ್ತು ಮೂರು ಪಟ್ಟಣ ಪಂಚಾಯತಿಗಳಲ್ಲಿ ಭಾರಿ ಸದ್ದುಗದ್ದಲ ನಡೆದಿದೆ.

ಬಾಗಲಕೋಟೆ-ಬಾದಾಮಿ

ಬಾಗಲಕೋಟೆಯಿಂದ ಎಮ್ಮೆಲ್ಲೆ ಆಗಿ ಆಯ್ಕೆಯಾಗಿರುವ ಬಿಜೆಪಿಯ ಚರಂತಿಮಠ್ ಈ ಬಾರಿಯ ಚುನಾವಣೆಯಲ್ಲಿ ಇಡೀ ಬಾಗಲಕೋಟೆ ನಗರಸಭೆಯನ್ನು ಚಡ್ಡಿಮಯ ಮಾಡಬೇಕೆಂದು ತಿಣುಕುತ್ತಿದ್ದಾನೆ. ಆದರೆ ಅದು ಅಷ್ಟು ಸುಲಭವಾಗಿ ಕೈಗೂಡುವಂತೆ ಕಾಣುತ್ತಿಲ್ಲ, ಏಕೆಂದರೆ ಸಂಘಪರಿವಾರದ ಭಜರಂಗಿ ಪಡೆಯೇ ಈಗ ಇವನ ವಿರುದ್ಧ ತಿರುಗಿಬಿದ್ದಿದೆ. ಅಲ್ಲದೆ, ಬಹುತೇಕ ಲಿಂಗಾಯತ ಕೋಮಿನವರು ಚರಂತಿಮಠನನ್ನು ಚರಂಡಿಗಟ್ಟಬೇಕೆಂದು ಅವಕಾಶ ಹುಡುಕುತ್ತಿದ್ದಾರೆ. ಅದರಲ್ಲೂ ಬಸವೇಶ್ವರ ಬ್ಯಾಂಕ್‌ನ ಛೇರ್ಮನ್ ಪ್ರಕಾಶ್ ತಪಶೆಟ್ಟಿ ಕೂಡ ಈ ಬಾರಿ ಚರಂತಿಮಠನನ್ನು ಬಗ್ಗುಬಡಿಯುವುದಕ್ಕಾಗಿ ಕಾಯುತ್ತಿದ್ದಾನೆ. ಪ್ರಕಾಶ್ ತಪಶೆಟ್ಟಿ ಪ್ರತೀ ಬಾರಿ ನಗರಸಭೆ ಸದಸ್ಯನಾಗಿ ಆಯ್ಕೆಯಾಗುವ ಗೆಲ್ಲುವ ಕುದುರೆ. ಅಷ್ಟೇ ಅಲ್ಲ, ಚರಂತಿಮಠ ಶಾಸಕನಾಗುವುದಕ್ಕೂ ಅವನ ಸಕ್ರಿಯ ಬೆಂಬಲವೇ ಕಾರಣ. ಏರಿದ ಏಣಿಯನ್ನೇ ಒದೆಯುವ ಚಾಳಿಯಿರುವ ಚರಂತಿಮಠ ಶಾಸಕನಾದ ಮೇಲೆ ತಪಶೆಟ್ಟಿಗೇ ಫಿಟಿಂಗ್ ಇಟ್ಟಿದ್ದರಿಂದ ಈ ಬಾರಿ ಚರಂತಿಮಠ್‌ಗೆ ಅವನ ಬೆಂಬಲ ಸಿಗುವುದಿಲ್ಲ.


ಕಾರಜೋಳ

ಬಾಗಲಕೋಟೆಯ 31 ವಾರ್ಡ್‌ಗಳಲ್ಲಿ ಬಿಜೆಪಿಗೆ ಕೊಂಚ ಪೈಪೋಟಿ ನೀಡಬಹುದಾದ ಪಕ್ಷವೆಂದರೆ ಜೆಡಿಎಸ್. ಇಲ್ಲಿ ಜೆಡಿಎಸ್‌ಗಿಂತ ಅದರ ಹಾಲಿ ಜಿಲ್ಲಾಧ್ಯಕ್ಷ ಮತ್ತು ಬಿಜೆಪಿಯ ಮಾಜಿ ಶಾಸಕ ಪಿ.ಎಚ್.ಪೂಜಾರ್ ವರ್ಚಸ್ಸೇ ಜಾಸ್ತಿ ಇದೆ. ಹೀಗಾಗಿ ಜೆಡಿಎಸ್ ಬಿಜೆಪಿಗೆ ಪ್ರಬಲ ಪೈಪೋಟಿ ನೀಡುವಲ್ಲಿ ಈತನ ಪಾತ್ರ ಗಣನೀಯವಾಗಿರುತ್ತದೆ.

ಇನ್ನು ಕಾಂಗ್ರೆಸ್ ಪಾಡು ನಾಯಕನಿಲ್ಲದೆ ಅಸ್ಪಷ್ಟವಾಗಿದೆ. ಬಿ.ಬಿ. ಚಿಮ್ಮನಕಟ್ಟಿ ತಾನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎನ್ನುವುದನ್ನು ಮರೆತು ಬಾದಾಮಿಯಲ್ಲಿ ಗೂಟ ಹೊಡೆದುಕೊಂಡು ಕುಳಿತಿದ್ದಾನೆ. ವಿಧಾನ ಪರಿಷತ್ ಸದಸ್ಯ ಎಸ್.ಆರ್.ಪಾಟೀಲ್‌ಗೆ ಪಕ್ಷಕ್ಕಿಂತ ಸ್ವಹಿತಾಸಕ್ತಿಯೇ ಪ್ರಧಾನ. ಇಂಥ ಕಾಂಗ್ರೆಸ್ ನಾಯಕರಿಂದಾಗಿ ಅನಾಥ ಭಾವನೆಯನ್ನು ಹೊಂದಿರುವ ಅಭ್ಯರ್ಥಿಗಳು ತಮ್ಮ ಸ್ವಂತ ಸಾಮರ್ಥ್ಯದಿಂದಲೇ ಸ್ಪರ್ಧಿಸಿದ್ದಾರೆ.

ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಗಳಲ್ಲಿ ಸೋತು ಸುಣ್ಣವಾಗಿರುವ ಬಿಜೆಪಿಗಳಿಂದ ಈ ಚುನಾವಣೆಯಲ್ಲಿ ಏನು ಕಿಸಿಯೋಕೆ ಆಗುತ್ತೆ ಎಂಬ ದಡ್ಡ ನಂಬಿಕೆಯಲ್ಲಿ ಕಾಂಗ್ರೆಸ್ ನಾಯಕರು ಇದ್ದಂತಿದೆ. ಇನ್ನೊಂದೆಡೆ ಚರಂತಿಮಠನನ್ನು ರಾಜಕೀಯವಾಗಿ ಮುಗಿಸಲು ಭಜರಂಗಿಗಳೇ ಇರುವಾಗ ಏಕೆ ಚಿಂತೆ ಎಂದು ಜೆಡಿಎಸ್ ಮೌನವಾಗಿದೆ. ಈ ಎರಡೂ ಪಕ್ಷಗಳ ನಿರ್ಲಕ್ಷ್ಯದಿಂದ ಬಿಜೆಪಿ ಮೇಲೆದ್ದರೂ ಆಶ್ಚರ್ಯವಿಲ್ಲ.

ಬಾದಾಮಿ ನಗರಸಭೆಯಾಗಿ ಮೊದಲ ಬಾರಿಗೆ ಚುನಾವಣೆ ಎದುರಿಸುತ್ತಿದೆ. ಬಿಜೆಪಿ ಶಾಸಕ ಮಹಾ[illegible] ಗುಂಡಪ್ಪ ಪಟ್ಟಣಶೆಟ್ಟಿಯ ಅವಾಂತರಗಳು ಈ ಚುನಾವಣೆಯ ಮೇಲೆ ಪ್ರಭಾವ ಬೀರಲಿವೆ. ಕ್ಯಾಪಿಟೇಶನ್‌[illegible]ಗಾಗಿಯೇ ಶಿಕ್ಷಣ ಸಂಸ್ಥೆ ತೆರೆದ ಚಡ್ಡಿ ಈತ. ಬಡ[illegible] ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಏಕೈಕ ಸರ್ಕಾರಿ[illegible] ಸರ್ಕಾರಿ ಜೂನಿಯರ್ ಕಾಲೇಜನ್ನು ರದ್ದುಪಡಿಸಿ, 25[illegible]

ವಾಸ್ತವದಲ್ಲಿ ಅಸಲಿ ಬಿ ಫಾರ್ಮ್‌ಗಳನ್ನು ತನ್ನ ಬಾಲಬಡುಕ ಕಾರ್ಪೊರೇಟ್ ಶಿರಗುಪ್ಪಿಗೆ ಎರಡು ಲಕ್ಷಕ್ಕೆ ಮಾರಿಕೊಂಡಾಗಿತ್ತು. ನಿಜ ಹೇಳಬೇಕೆಂದರೆ, ಹೊನ್ನಳ್ಳಿ ಹಂಚಿದ್ದೆಲ್ಲಾ ಪೇಮೆಂಟ್ ಸೀಟುಗಳೇ. ಪ್ರತೀ ಬಿ ಫಾರ್ಮ್‌ಗೆ ಆತ ಎರಡು ಲಕ್ಷ ಫಿಕ್ಸ್ ಮಾಡಿ ಮಾರಿಕೊಂಡಿದ್ದಾನೆ.

ಇನ್ನು ಬಿ ಫಾರ್ಮ್ ಪಡೆದು 36ನೇ ವಾರ್ಡಿನಿಂದ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಅರುಣ ಪವಾರ್ ಜೆಡಿಎಸ್‌ನ ಸಂತೋಷ್ ಹಿರೇಕೆರೂರ್‌ಗೆ ಹೆದರಿ ಕನಿಷ್ಠ ಹೊನ್ನಳ್ಳಿಗೂ ಹೇಳದೆ ವಾಪಾಸ್ಸು ಪಡೆದುಬಿಟ್ಟ. 27ನೇ ವಾರ್ಡಿನಿಂದ ಸುರಯ್ಯಾ ನವಾಜ್‌ಗೆ ಸ್ಪರ್ಧಿಸಲು ಹೇಳಿದ ಹೊನ್ನಳ್ಳಿ ಕೊನೆಗೆ ಜೆಡಿಎಸ್‌ನಿಂದ ಪ್ರೂದ ತಿಂದು ಬಿ ಫಾರ್ಮ್ ಕೊಟ್ಟಿದ್ದು ಅಶ್ವಿನಿಗೆ!

ಮಾಜಿ ಮಹಾಪೌರ ಫಿರೋಜ್ ಕೊಣ್ಣೂರ್ 47ನೇ ವಾರ್ಡಿನಿಂದ, ಪಿ.ಎಸ್. ಪ್ರಕಾಶ್ ೪೮ನೇ ವಾರ್ಡಿನಿಂದ, ಶೀಲಾ ಮಿರ್ಜಿ 39ನೇ ವಾರ್ಡಿನಿಂದ, ರೆಹಮಾನ್ ಲಕ್ಕುಂಡಿ 40ನೇ ವಾರ್ಡಿನಿಂದ, ರುಕ್ಮಿಣಿ ಚಲವಾದಿ 62ನೇ ವಾರ್ಡಿನಿಂದ, ಅನ್ನಪೂರ್ಣ ಕಲಾಲ್ 66ನೇ ವಾರ್ಡಿನಿಂದ ಕಾಂಗ್ರೆಸ್‌ನ ವಿರುದ್ಧ ಬಂಡೆದ್ದು ಸ್ಪರ್ಧಿಸಿದ್ದಾರೆ. ಇನ್ನು ಕಾಂಗ್ರೆಸ್‌ನ ಸುದರ್ಶನ್ ಮತ್ತು ಮುಸ್ತಾಕ್ ಜವಳಿ ಜೆಡಿಎಸ್ ಮನೆ ಸೇರಿ ಟಿಕೆಟ್ ಪಡೆದಿದ್ದಾರೆ.

ಹೀಗೆ ಕಾಂಗ್ರೆಸ್ ಬಂಡೆದ್ದ ಜನಗಳಿಂದ ಕಂಗಾಲಾಗಿ ಹೋಗಿದೆ. ಆದರೆ, ಬಿಜೆಪಿಯಲ್ಲಿ ಜಗದೀಶ್ ಶೆಟ್ಟರ್ ನಿಷ್ಠರಿಗೆ ಟಿಕೆಟ್ ಸಿಕ್ಕಿದ್ದು ಅಲ್ಲಿ ಈ ರೀತಿಯ ಬಂಡುಕೋರರ ಹಾವಳಿ ಸಾಪೇಕ್ಷವಾಗಿ ಕಡಿಮೆ ಇದೆ. ಜೆಡಿಎಸ್‌ನ ಬಸವರಾಜ್ ಹೊರಟ್ಟಿ ಪ್ರತ್ಯೇಕವಾಗಿ ಸ್ಪರ್ಧಿಸಿ, ದೇವೇಗೌಡರಿಗೆ ತನ್ನ ಸಾಮರ್ಥ್ಯವನ್ನು ತೋರಿಸಿ ಆನಂತರ ಒಂದಾಗುವ ತಂತ್ರ ರೂಪಿಸಿದ್ದಾರೆ.

ಚುನಾವಣೆಯ ಒಟ್ಟಾರೆ ಚಿತ್ರಣವನ್ನು ನೋಡುವುದಾದರೆ, ಕಾಂಗ್ರೆಸ್‌ನ ಒಳಜಗಳ ಮತ್ತು ಬಂಡುಕೋರರರ ಹಾವಳಿಯಿಂದ ತತ್ತರಿಸಿದೆ. ಇನ್ನೊಂದೆಡೆ, ಜೆಡಿಎಸ್‌ಗೆ ಹಿರೇಕೆರೂರ್‌ನಂತಹ ಗಿಮಿಕ್ ಟಾನಿಕ್ ಬಿಟ್ಟರೆ ಸಮರ್ಥ ನಾಯಕರ ಕೊರತೆ ಇದೆ. ಬಿಜೆಪಿಗೆ ಇವೆರಡೂ ಪ್ಲಸ್ ಪಾಯಿಂಟ್ ಆಗಿವೆ. ವಾಸ್ತವದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳೇ ಬಿಜೆಪಿಯನ್ನು ಗೆಲ್ಲಿಸುತ್ತಿವೆ. ಹಾಗಾಗಿ ಬಿಜೆಪಿ ಈ ಬಾರಿಯ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ತನ್ನ ತೆಕ್ಕೆಗೆ ಹಾಕಿಕೊಂಡರೆ ಆಶ್ಚರ್ಯವಿಲ್ಲ. ಕಾಂಗ್ರೆಸ್ ಎರಡನೇ ಸ್ಥಾನಕ್ಕೂ ಜೆಡಿಎಸ್ ಮೂರನೇ ಸ್ಥಾನಕ್ಕೂ ತೃಪ್ತಿಪಟ್ಟುಕೊಳ್ಳಬೇಕಷ್ಟೆ.

■ ವರದಿಗಾರ


ಸಿದ್ದನಗೌಡರ್


ಎಂ.ಎಸ್.ಅಕ್ಕಿ


ಶಿವಾನಂದ ಅಂಬಡಗಟ್ಟಿ

ಪುರಸಭೆಗಳ ಕಥೆ

ಅಣ್ಣಿಗೆರೆ ಪುರಸಭೆಯ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷದ ಚುನಾವಣಾ ವೀಕ್ಷಕರನ್ನಾಗಿ ಡಿ.ಕೆ. ಶಿವಕುಮಾರ್ ಶಿಷ್ಯ ಸತೀಶ್ ಮೆಹರವಾಡೆಯನ್ನು ಕಳಿಸಿಕೊಡುವ ಮೂಲಕ ಆ ಪ್ರದೇಶದ ಮೇಲೆ ಹಿಡಿತ ಹೊಂದಿರುವ ಎಚ್ಕೆ ಪಾಟೀಲ್‌ಗೆ ಮುಖಭಂಗ ಮಾಡಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡ ಕಾಂಗ್ರೆಸ್ ಬಿಜೆಪಿ, ಜೆಡಿಎಸ್‌ಗೆ ಅಣ್ಣಿಗೆರೆಯನ್ನು ಕಳೆದುಕೊಳ್ಳುವ ಸಂಭವವಿದೆ. ಅಳ್ನಾವರ್ ಪಟ್ಟಣಪಂಚಾಯತಿಯಲ್ಲಿ ಆರ್.ವಿ. ದೇಶಪಾಂಡೆ, ವಿನಯ ಕುಲಕರ್ಣಿ ಮತ್ತು ಶಿವಾನಂದ ಅಂಬಡಗಟ್ಟಿ ಗುಂಪುಗಳು ಅಧಿಕಾರ ಗದ್ದುಗೆಗೇರಲು ಪ್ರಯತ್ನಿಸುತ್ತಿವೆ. ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದ ಶಿವಾನಂದ ಅಂಬಡಗಟ್ಟಿ ಈಗಾಗಲೇ ಪಕ್ಷ ತೊರೆದು ಜೆಡಿಎಸ್ ಅಂಗಳದಲ್ಲಿದ್ದಾರೆ. ಆರ್.ವಿ.ದೇಶಪಾಂಡೆ ಮತ್ತು ವಿನಯ ಕುಲಕರ್ಣಿಗೆ ಇದು ಪ್ರತಿಷ್ಠೆಯ ಪ್ರಶ್ನೆಯಾಗಿದೆ.

ಕಲಘಟಕಿ ಪಟ್ಟಣ ಪಂಚಾಯತಿಯನ್ನು ಸಂಪೂರ್ಣ ಹಿಡಿತದಲ್ಲಿಟ್ಟುಕೊಳ್ಳಲು ಶಾಸಕ ಎಸ್.ಐ. ಚಿಕ್ಕನಗೌಡ್ರು ಪ್ರಯತ್ನಿಸುತ್ತಿದ್ದಾರೆ. ಬಂದೂಕು ಬಾಬು, ಜೆಡಿಎಸ್‌ನ ಪಿ.ಸಿ. ಸಿದ್ದನಗೌಡ್ರ ಗುಂಪು ಇದಕ್ಕೆ ವಿರುದ್ಧವಾಗಿ ಸೆಡ್ಡು ಹೊಡೆದು ತಮ್ಮ ತಮ್ಮ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿವೆ.

ಕುಂದಗೋಳ ಪಟ್ಟಣ ಪಂಚಾಯತಿಯನ್ನು ವಶಪಡಿಸಿಕೊಳ್ಳಲು ಜೆಡಿ(ಯು)ನ ಶಾಸಕ ಎಂ.ಎಸ್. ಅಕ್ಕಿ ಪ್ರಯತ್ನಿಸುತ್ತಿದ್ದಾರೆ. ಅದಕ್ಕೆ ಜೆಡಿಎಸ್‌ನ ಜಿ.ಎನ್ ಶ್ಯಾಗೋಟಿ, ಮಾಜಿ ಶಾಸಕ ಸಿ.ಎಸ್. ಶಿವಳ್ಳಿ ಹಾಗೂ ಅರವಿಂದ ಕಟಗಿ ಜಗಳವಾಡಿ ದೂರವಾಗಿದ್ದರಾದರೂ ಈಗ ಒಂದಾಗಿ ಜೆಡಿ(ಯು), ಜೆಡಿಎಸ್ ಹೋರಾಟ ನಡೆಸಿದ್ದಾರೆ. ಸಿ.ಎಸ್. ಶಿವಳ್ಳಿಯ ಗುಂಪೇ ಹೆಚ್ಚು ಸ್ಥಾನಗಳನ್ನು ಗೆಬರಿಕೊಳ್ಳುವ ನಿರೀಕ್ಷೆ ಇದೆ.

ಗದಗ - ಬೆಟಗೇರಿ ನಗರಸಭೆ ಚುನಾವಣೆ
ಜಿದ್ದೂ ಇಲ್ಲ, ಜಂಗಿ ಕುಸ್ತಿಯೂ ಇಲ್ಲ!

ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಅಣಕಿಸುವಂತಿರುವ ಗದಗ ಎಂಬ ಮಿನಿ ಬಿಹಾರದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ಗೆಲ್ಲಲು ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಎಂಬ ರಾಜಕೀಯ ಪಕ್ಷಗಳು ಅಖಾಡಕ್ಕಿಳಿದಿವೆ.

ರಾಜ್ಯ ರಾಜಕಾರಣದಲ್ಲಿ ಬಿಜೆಪಿ ಎಂಬ ಫ್ಯಾಸಿಸ್ಟ್ ಪಡೆಯನ್ನು ವಿರೋಧಿಸುವ, ಕಾಂಗ್ರೆಸ್‌ನ ಮುತ್ಸದ್ದಿ ಎಂದು ಕರೆಸಿಕೊಳ್ಳುವ ಎಚ್ಕೆ ಪಾಟೀಲ್‌ರು ತೀರ ಅನಿರೀಕ್ಷಿತವಾಗಿ ಗದಗ ಉಸ್ತುವಾರಿ ಮಂತ್ರಿಯಾಗಿ ವಕ್ಕರಿಸಿಕೊಂಡ ಬಳ್ಳಾರಿಯ ಗಣಿ ಕುಳ ಶ್ರೀರಾಮುಲುರೊಂದಿಗೆ ಶಾಮೀಲಾಗಿರುವ ಗುಸುಗುಸು ಕೇಳಿಬರುತ್ತಿದೆ. ಇದರೊಂದಿಗೆ, ಬಾಂಬ್ ದಾಳಿಗೆ ಸಿಕ್ಕ ಇರಾಕ್‌ನಂತಾಗಿಹೋಗಿದ್ದ ಗದಗ ಜಿಲ್ಲೆಯಲ್ಲಿ ಕಳೆದ ಐದಾರು ತಿಂಗಳಲ್ಲಿ ಶ್ರೀರಾಮುಲು ಚೂರೋಪಾರೋ ಕೆಲಸ ಮಾಡಿಸಿದ್ದು ಇವತ್ತು ಇದನ್ನೇ ಬಿಜೆಪಿಗಳು ಸ್ಥಳೀಯ ಸಂಸ್ಥೆಗಳ ಚುನಾವಣಾ ಪ್ರಚಾರಕ್ಕಾಗಿ ಬಳಸಿಕೊಳ್ಳುತ್ತಿರುವುದೂ ಚೆಡ್ಡಿಗಳಿಗೆ ಲಾಭ ತಂದುಕೊಡುವಂತಾಗಿದೆ.



ಯಾವುದೇ ಸೈದ್ಧಾಂತಿಕ ನಿಲುವುಗಳನ್ನು ಹೊಂದಿರದ ಶ್ರೀರಾಮುಲು ಗದಗಿಗೆ ಕಾಲಿಟ್ಟ ಕೆಲವೇ ದಿನಗಳಲ್ಲಿ ಅಭಿವೃದ್ಧಿ ಎಂಬ ತನ್ನ ರೋಡ್ ಶೋ ಗಿಮಿಕ್ ಪ್ರಾರಂಭಿಸಿ ಜನಪ್ರಿಯತೆ ಪಡೆದ. ಇದನ್ನು ಕಂಡು ಎಚ್ಕೆ ಪಾಟೀಲ್ ಎದೆಯಲ್ಲಿ ಅವಲಕ್ಕಿ ಕುಟ್ಟಿದಂತಾಗಿದ್ದು ನಿಜ. ಅಷ್ಟರಲ್ಲಿ ಪಕ್ಕದ ಆಂಧ್ರದ ಮುಖ್ಯಮಂತ್ರಿ ರಾಜಶೇಖರ್ ರೆಡ್ಡಿಯವರೊಂದಿಗೆ ಅದೇನು ಮಾತುಕತೆಗಳು ನಡೆದವೋ ಏನೋ, "ಎಚ್ಕೆ ಪಾಟೀಲ್ ಮತ್ತು ಶ್ರೀರಾಮುಲು ಎಂಬ ರಾಜಕೀಯ ಕಡುವೈರಿಗಳು ಭಾಯಿ ಭಾಯಿ ಆಗಿಬಿಟ್ಟಿದ್ದಾರೆ" ಎಂದು ಇಲ್ಲಿನ ಚೆಡ್ಡಿಗಳೇ ಆರೋಪಿಸುತ್ತಿವೆ.



ಈಗ ಸ್ಥಳೀಯ ಬಿಜೆಪಿಯಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಈ ಆರೋಪಗಳನ್ನು ಪುಷ್ಟೀಕರಿಸುವಂತಿವೆ. ಬಿಜೆಪಿಯ 'ಬಿ' ಫಾರ್ಮ್‌ಗಳೆಲ್ಲವನ್ನೂ ಹೆಚ್ಚೂಕಡಿಮೆ ಎಚ್ಕೆ-ಡಿ.ಆರ್. ಪಾಟೀಲರೇ ಫೈನಲ್ ಮಾಡಿದ್ದರಿಂದ ಬಿಜೆಪಿಗಾಗಿ ರಕ್ತ ಹರಿಸಲೂ ತಯಾರಾಗಿದ್ದ ಕಮಂಗಿ ಸಿರಾಜ್ ಬಳ್ಳಾರಿ, ವಸೂಲಿ ಗಿರಾಕಿಗಳಾದ ಅರವಿಂದ ಹುಲ್ಲೂರ್, ಕೊಟ್ರೇಶ್ ಅಬ್ಬಿಗೇರಿ, ಚೆಡ್ಡಿ ಗರ್ಲ್ ಜಯಶ್ರೀ ಪವಾರ್ ಸೇರಿದಂತೆ ಹಲವಾರು ಕರಸೇವಕರಿಗೆ ಬಿ ಫಾರ್ಮ್ ಸಿಗದೇ ಕಂಗಾಲಾಗಿದ್ದಾರೆ. ಮಾತ್ರವಲ್ಲ, ಇವರೆಲ್ಲ ಈಗ ಬಂಡಾಯ ಅಭ್ಯರ್ಥಿಗಳಾಗಿ ಅವತಾರವೆತ್ತಿದ್ದಾರೆ. ಅದೂಅಲ್ಲದೇ, ಸ್ಥಳೀಯ ಸಂಸ್ಥೆಗಳ ಚುನಾವಣೆ ಮುಗಿಯುವ ತನಕ ಶ್ರೀರಾಮುಲು ಗದಗಿಗೆ ಕಾಲಿಡುವುದಿಲ್ಲ ಎಂಬ ವದಂತಿ ಸಂಘಪರಿವಾರದಲ್ಲೇ ದಟ್ಟವಾಗಿ ಹಬ್ಬಿಬಿಟ್ಟಿದೆ. ಇದರಿಂದಾಗಿ ಆತನ ವರ್ಚಸ್ಸನ್ನೇ ನಂಬಿಕೊಂಡು ಚುನಾವಣಾ ಅಖಾಡಕ್ಕಿಳಿದಿರುವ ಚೆಡ್ಡಿ ಪಡೆ ಈಗ ದಿಗಿಲುಗೊಂಡು ಕುಂತಿದೆ.

ಇನ್ನು ಜೆಡಿಎಸ್ ಕಥೆಯಂತೂ ಹದಗೆಟ್ಟು ಹೋಗಿದೆ. ಕಾಂಗ್ರೆಸ್‌ನ ಏಜಂಟರಂತಿರುವ ಸದಾನಂದ ಪಿಳ್ಳೆ, ಎಸ್.ಟಿ. ಮೇಲಗಿರಿ, ಸಿ.ಎಸ್. ಮುತ್ತಿನ ಪೆಂಡಿಮನಿಗಳಿಂದಾಗಿ ಜನತಾದಳದಲ್ಲಿ ಮೈದಾಳಿರುವ ದಾಯಾದಿ ಕಲಹ ಹೊರಪೋಟಕ್ಕೆ ಕಾಣದಿದ್ದರೂ ಬೂದಿ ಮುಚ್ಚಿದ ಕೆಂಡದಂತಿದೆ. ಸ್ವಯಂಘೋಷಿತ ಲಿಂಗಾಯತ ಲೀಡರುಗಳಾಗಿರುವ ಇವರೆಲ್ಲರ ಕಮಂಗಿತನದಿಂದಾಗಿ ಜಿಲ್ಲೆಯಲ್ಲಿ ಜನತಾದಳ ಕಾಲೂರಲು ಬೆವರು ಸುರಿಸಿದ ದಾಮುಲ್ ಮುಳಗುಂದ, ಬಸವರಾಜ ಅಪ್ಪಣ್ಣನವರ್, ರಮೇಶ್ ಕಲಬುರ್ಗಿಗಳೆಂಬ ಗೆಲ್ಲುವ ಕುದುರೆಗಳಿಗೆ 'ಬಿ ಫಾರ್ಮ್' ಕೈತಪ್ಪಿಹೋಗಿದೆ. ಅವರ ಜಾಗದಲ್ಲಿ ಅಪರಿಚಿತ ಮುಖಗಳಿಗೆ ಟಿಕೆಟ್ ನೀಡಿ ಜನತಾದಳ ತನ್ನ ಗೋರಿಯನ್ನು ತಾನೇ ತೋಡಿಕೊಂಡಿದೆ. ಅಲ್ಲದೆ, "ನಮ್ಮ ಜಾತಿರಾಜಕಾರಣಕ್ಕೆ ಅಡ್ಡ ಬಂದವರಿಗೆ ಇದೇ ಗತಿ" ಎಂಬ ಸಂದೇಶವನ್ನೂ ಪಿಳ್ಳೆ ಪಟಾಲಂ ಈ ಮೂಲಕ ರವಾನಿಸಿದೆ. ಸುಮಾರು 26 ವಾರ್ಡುಗಳಲ್ಲಿ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿರುವ ದಳ ತನ್ನ ಗರ್ಭದಲ್ಲಿ ನಡೆಯುತ್ತಿರುವ ಹಗ್ಗ ಜಗ್ಗಾಟದ ಕಾರಣದಿಂದ ಬೆರಳೆಣಿಕೆಯಷ್ಟು ವಾರ್ಡ್‌ಗಳನ್ನು ಗೆದ್ದು ಅಷ್ಟಕ್ಕೇ ತೃಪ್ತಿಪಟ್ಟುಕೊಳ್ಳಬೇಕಷ್ಟೆ.


ಇನ್ನು ಬಂಗಾರಪ್ಪರ ಸಮಾಜವಾದಿ ಪಕ್ಷ ಬಿಜೆಪಿಯಿಂದ ಟಿಕೆಟ್ ವಂಚಿತ ರಾಮಭಕ್ತೆ ಜಯಶ್ರೀ ಪವಾರ್‌ಗೆ ಮಣೆಹಾಕಿ ಸಮಾಜವಾದಿ ಎಂಬ ಪದವನ್ನೇ ಹರಾಜಿಗಿಟ್ಟಿದೆ. ಅದರಲ್ಲೇನು ವಿಶೇಷವಿಲ್ಲ ಬಿಡಿ. ಬಿಜೆಪಿ ಎಂಬ ಕೋಮುವಾದಿ ಪಕ್ಷಕ್ಕೆ ಹೋಗಿ ಬಂದ ಅವಕಾಶವಾದಿ ಬಂಗಾರಪ್ಪನೇ ಅದರ ಅಧಿನಾಯಕನಾಗಿರುವಾಗ ಸಮಾಜವಾದಿ ಪಕ್ಷದಿಂದ ಮತ್ತೇನನ್ನು ನಿರೀಕ್ಷಿಸಲು ಸಾಧ್ಯ? ಈ ಹಿಂದೆ ಬಿಜೆಪಿಯಿಂದ ನಗರಸಭೆಗೆ ಆಯ್ಕೆಯಾಗಿದ್ದ ಜಯಶ್ರಿ ಪವಾರ್ ಇಡೀ ಮುನಿಸಿಪಾಲ್ಟಿಯನ್ನು ಗುಡಿಸಿ ಗುಂಡಾರ ಮಾಡಿದ್ದು ಜನರಿಗೆ ಇನ್ನೂ ಹಸಿಹಸಿಯಾಗಿ ನೆನಪಿದೆ. ಈಗ ಮತ್ತೆ ಅವಳನ್ನು ಗೆಲ್ಲಿಸುವ ಘೋರ ತಪ್ಪನ್ನು 33ನೇ ವಾರ್ಡಿನ ಜನ ಖಂಡಿತ ಮಾಡುವುದಿಲ್ಲ. ಸಮಾಜವಾದಿ ಪಕ್ಷದಲ್ಲಿನ ಎಮ್.ಎಸ್. ಹೂಗಾರ್ ಮತ್ತು ಅಶೋಕ ಜವಳಿಗಳೆಂಬ ಶನಿಸಂತಾನಗಳ ಮಂಗಾಟದಿಂದಾಗಿ ಸಮಾಜವಾದಿ ಪಕ್ಷದ ಸೈಕಲ್ ಬಿಡಿಬಿಡಿಯಾಗಿ ಮುರಿದು ಬೀಳುವುದು ಖಚಿತ.

ಒಟ್ಟಿನಲ್ಲಿ, ದಳದೊಳಗೇ ನಡೆಯುತ್ತಿರುವ ದಾಯಾದಿ ಕಲಹದ ಹಗ್ಗಜಗ್ಗಾಟ, ನರಸತ್ತ ಸಮಾಜವಾದಿ ಪಕ್ಷದ ದೌರ್ಬಲ್ಯ ಇವೆಲ್ಲವುಗಳ ಪರಿಣಾಮವಾಗಿ ಹುಲಕೋಟಿ ಪಾಟೀಲರು ಪ್ರತಿನಿಧಿಸುವ ಕಾಂಗ್ರೆಸ್ ಪಕ್ಷವೇ ವಿನ್ನರ್ ಆಗಿ ಹೊರಹೊಮ್ಮುವ ಲಕ್ಷಣಗಳು ಕಾಣುತ್ತಿವೆ.

■ ಹುರುಳಿಕುಪ್ಪಿ ವಿನಯ್

ವಿದ್ಯಾರ್ಥಿಗಳ ಭವಿಷ್ಯವನ್ನು ಆತಂಕ್ಕೆ ದೂಡಿ ಅವರೆಲ್ಲ ತನ್ನ ಕಾಲೇಜಿನಲ್ಲಿಯೇ ದುಡ್ಡು ಕೊಟ್ಟು ಓದುವ ಪರಿಸ್ಥಿತಿ ತಂದ ವಂಚಕ. ಅಲ್ಲದೇ ತನ್ನ ಸ್ವಜಾತಿ ಕುಲಬಾಂಧವರಿಗೇನೇ ಪ್ರತೀ ಕಾಮಗಾರಿಯನ್ನು ನೀಡುವ ಈತ ಡೀಲಿಂಗ್ ಚತುರ. ಈಗ ಇವೆಲ್ಲ ನಗರಸಭೆ ಚುನಾವಣೆಯಲ್ಲಿ ಇವನ ವಿರುದ್ಧ ಜನ ಅಲೆ ಏಳಲು ಕಾರಣವಾಗಿವೆ.

ಇನ್ನೊಂದೆಡೆ ಪಟ್ಟಣಶೆಟ್ಟಿಯೆಂಬ ಖದೀಮನನ್ನು ಬಯಲುಗೊಳಿಸಿ ಚುನಾವಣಾ ಲಾಭ ಪಡೆಯುವ ತಂತ್ರಗಾರಿಕೆಯೂ ಕಾಂಗ್ರೆಸ್ಸಿಗಿಲ್ಲ. ಚಿಮ್ಮನಕಟ್ಟಿ ತನ್ನ ಸೋಲಿನ ಪೆಟ್ಟಿನಿಂದ ಇನ್ನೂ ಚೇತರಿಸಿಕೊಂಡಿಲ್ಲ. ತನ್ನ ಸೋಲಿಗೆ ತನ್ನ ಕುಲಬಾಂಧವರಾದ ಕುರುಬರೇ ಕಾರಣ ಎಂದು ಬಹಿರಂಗವಾಗಿ ಹೇಳಿಕೊಂಡು ತಿರುಗಾಡುತ್ತಿದ್ದಾನೆ. ಹೀಗಾಗಿ, ಕಾಂಗ್ರೆಸ್‌ಗೆ ಚುನಾವಣೆಯಲ್ಲಿ ನೇತೃತ್ವ ವಹಿಸುವ ತಾಕತ್ತು ಈಗ ಅವನಲ್ಲಿ ಉಳಿದಿಲ್ಲ.


ಪಿ.ಎಚ್. ಪೂಜಾರ್

ಇನ್ನು ಜೆಡಿಎಸ್ ಮುಚಗೆಂಡಯ್ಯ, ಹಂಗರಗಿಯಂಥ ನರಪೇತಲನ ಕೈಯಲ್ಲಿ ಸಿಕ್ಕು ನಲುಗುತ್ತಿದೆ. ತಾಲ್ಲೂಕು ಅಧ್ಯಕ್ಷನಾದ ಈತ ಎಂ.ಪಿ. ಪ್ರಕಾಶ್ ತನ್ನ ಕುಲಬಾಂಧವ ಎಂದು ಹೇಳಿಕೊಂಡು ಡೀಲಿಂಗ್‌ಗಳಲ್ಲಿಯೇ ಕಾಲ ಕಳೆಯುತ್ತಾನೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಠೇವಣಿ ಕೂಡ ಉಳಿಸಿಕೊಳ್ಳಲು ಆಗದ ಇವನನ್ನು ಮುದ್ದೇಗೌಡರು ಶಾಸನ ನಿಯಮ ಸಂಯಮ ಮಂಡಳಿಗೆ ಅಧ್ಯಕ್ಷನನ್ನಾಗಿ ಮಾಡಿದ್ದರು. ಇಂಥ ನಾಲಾಯಕ್ ನಾಯಕನನ್ನು ಇಟ್ಟುಕೊಂಡು ನಗರಸಭೆ ಚುನಾವಣೆಗಿಳಿದ ಜೆಡಿಎಸ್ ನೆಲಕಚ್ಚುವುದು ಗ್ಯಾರಂಟಿ.

ಈ ಎಲ್ಲ ಕಾರಣಗಳಿಂದ ಚೆಡ್ಡಿ ಪಟ್ಟಣಶೆಟ್ಟಿಗೆ ಲಾಭವಾಗುತ್ತಿದೆ.

ಬೀಳಗಿಯ ಚೆಡ್ಡಿ ಶಾಸಕ ಯಡ್ಡಿ ಶಿಷ್ಯ ಮುರುಗೇಶ್ ನಿರಾಣಿ ಅಧಿಕಾರವನ್ನೆಲ್ಲಾ ತನ್ನ ಬಿಸಿನೆಸ್ ಡೆವಲಪ್ ಮಾಡಲು ಉಪಯೋಗಿಸಿಕೊಂಡ. ಗೆಲ್ಲುವಾಗ ಇವನ ಹಿಂದಿದ್ದ ಭುಜಬಲಿ ಹುಂಡೇಕರ ಗುಂಪು ಈಗಿಲ್ಲ. ಹಾಗಾಗಿ ಜನಶಕ್ತಿಗಾಗಿ ಸಂಪಾದಿಸಿದ ಹರಾಮಿ ದುಡ್ಡಿನ ಬಲದಿಂದಲೇ ಈ ಬಾರಿಯ ಚುನಾವಣೆಗೆ ಕ್ಯಾಂಡಿಡೇಟ್‌ಗಳನ್ನು ನಿಲ್ಲಿಸಿದ್ದಾನೆ. ಇನ್ನೊಂದೆಡೆ ಕಾಂಗ್ರೆಸ್‌ನ ಜೆ.ಟಿ. ಪಾಟೀಲ್ ಬೇರೆ ಇದರ ಲಾಭ ಪಡೆಯಲು ಹವಣಿಸುತ್ತಿದ್ದಾನೆ. ಇನ್ನು ಜೆಡಿಎಸ್ ಇಲ್ಲಿ ಲೆಕ್ಕಕ್ಕಿಲ್ಲ.

ಹುನಗುಂದ, ಇಳಕಲ್‌ಗಳಲ್ಲಿ ಬಿಜೆಪಿಯ ದೊಡ್ಡಗೌಡ ಪಾಟೀಲ್ ಕೇವಲ ಗ್ರಾನೈಟ್ ಉದ್ಯಮಿಗಳ ದುಡ್ಡಿನಿಂದಲೇ ಚುನಾವಣೆ ನಡೆಸುತ್ತಿದ್ದಾನೆ. ಇವನ ರಾಜಕೀಯ ವೈರಿ ಕಾಶಪ್ಪನವ ವಿಜಯ ಕುಮಾರ್‌ಗೆ ರಾಜಕೀಯದ ಗಂಧಗಾಳಿ ಗೊತ್ತಿಲ್ಲ. ಕಾಂಗ್ರೆಸ್‌ನ ಗುಂಪುಗಾರಿಕೆಯೇ ದೊಡ್ಡಗೌಡನಿಗೆ ವರವಾಗಿ ಪರಿಣಮಿಸಲಿದೆ. ಇನ್ನು ಜೆಡಿಎಸ್ ಹವಾ ಕೂಡ ಒಂದಿಷ್ಟಿದ್ದರೂ ಅದು ಅವನಿಗೆ ಅಷ್ಟೊಂದು ಪೈಪೋಟಿ ನೀಡಲಾರದು.


ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ್‌ನ ಕಾರ್ಯಕ್ಷೇತ್ರವಾದ ಮುಧೋಳ್ ಮತ್ತು ಮಹಾಲಿಂಗಪುರ ಪುರಸಭೆಗಳಲ್ಲಿ ಈತ ದಿನಕ್ಕೊಂದು ಕೊಡುವ ಭರವಸೆಗಳಿಂದ ಜನ ರೋಸಿಹೋಗಿದ್ದಾರೆ. ಇನ್ನೊಂದೆಡೆ ಪಕ್ಷದ ಹಣಕ್ಕಾಗಿ ಮಾತ್ರ ತಲೆಕೆಡಿಸಿಕೊಂಡಿರುವ ಜೆಡಿಎಸ್ ನಾಯಕರುಗಳು ಚುನಾವಣೆಗಾಗಿ ಚುರುಕಾಗಿ ಓಡಾಡುತ್ತಿಲ್ಲ. ಹಾಗಾಗಿ ಜನ ಮತ್ತೆ ಕಾಂಗ್ರೆಸ್ ಕಡೆ ವಾಲುವ ಪರಿಸ್ಥಿತಿಯೇ ಜಾಸ್ತಿ ಇದೆ.

ಜಿಲ್ಲೆಯ ಬಿಜೆಪಿ ಅಧ್ಯಕ್ಷ ಮತ್ತು ಶಾಸಕ ಸಿದ್ದು ಸವದಿ ಜಮಖಂಡಿಯಲ್ಲಿ ಬಿರುಸಾಗಿ ಓಡಾಡುತ್ತಿದ್ದಾನೆ. ಆದರೆ ಅವನು ಮಾಡಿದ ಘನಂದಾರಿ ಕೆಲಸಗಳನ್ನು ಜನ ಮರೆತಿಲ್ಲ. ಹೀಗಾಗಿ ಆತ ಎಷ್ಟೇ ಕೂಗಿಕೊಂಡರೂ ಈ ಬಾರಿ ಜನ ಅವನ ಮಾತು ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ಕಾಂಗ್ರೆಸ್‌ನ ಕಲುತಿ ರಾಮಣ್ಣ ಇಂಥ ಛಾನ್ಸನ್ನು ತಪ್ಪಿಸಿಕೊಳ್ಳುವಷ್ಟು ದಡ್ಡನೂ ಅಲ್ಲ, ಪೆದ್ದನೂ ಅಲ್ಲ.

ಒಟ್ಟಾರೆಯಾಗಿ ಹೇಳುವುದಾದರೆ, ಬಿಜೆಪಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ಗಳಲ್ಲಿ ಸೋತು ಸುಣ್ಣವಾಗಿದೆ. ಅವರಿಂದ ಈ ಚುನಾವಣೆಯಲ್ಲೂ ಏನೂ ಆಗುವುದು ಸಾಧ್ಯವಿಲ್ಲ ಎಂಬ ಹುಂಬತನವನ್ನು ಬಿಟ್ಟು ಕಾಂಗ್ರೆಸ್ ಚುರುಕಾಗಿ ಕೆಲಸ ಮಾಡದಿದ್ದರೆ ಅದಕ್ಕೆ ಭಾರಿ ನಷ್ಟವೇ ಆಗುತ್ತದೆ.

■ ವರದಿಗಾರ

ಕಣದಲ್ಲಿ ಖದೀಮರು!


ಚಂದಾವರಿ

ಗದಗ ಬೆಟಗೇರಿ ನಗರಸಭೆಯನ್ನು ಹರಾಜು ಹಾಕುವುದನ್ನಷ್ಟೇ ಬಾಕಿ ಉಳಿಸಿಹೋಗಿದ್ದ ಮಾಜಿಗಳಾದ ಎಲ್.ಡಿ. ಚಂದಾವರಿ, ಶಿವಣ್ಣ ಮುಳಗುಂದ, ಪರಶುರಾಮ್ ಕೊಪ್ಪದಗಳಂತಹ ದುರುಳರೇ ಈಗ ಮತ್ತೆ ಚುನಾವಣಾ ಕಣದಲ್ಲಿ ಇದ್ದಾರೆ. ಇವರನ್ನೇನಾದರೂ ಗೆಲ್ಲಿಸುವ ತಪ್ಪನ್ನು ಜನ ಮತ್ತೊಮ್ಮೆ ಮಾಡಿದರೆ ನಗರಸಭೆಯನ್ನು ಹರಾಜು ಹಾಕುವ ಅವರ ಬಾಕಿ ಕೆಲಸವನ್ನು ಈ ಬಾರಿ ಮಾಡಿಮುಗಿಸುತ್ತಾರಷ್ಟೆ. ಇವರೆಲ್ಲ ತಮ್ಮ ಹಿಂದಿನ ಅವಧಿಯಲ್ಲಿ ಸಾರ್ವಜನಿಕರಿಗಾಗಿಯೇ ಮೀಸಲಾಗಿದ್ದ ಹಲವಾರು ಯೋಜನೆಗಳನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡ ಖದೀಮರು.

ಮೂಲತಃ ಶೋಕಿಲಾಲನಾಗಿರುವ ಎಲ್.ಡಿ. ಚಂದಾವರಿ ಎಂಬ ಆನೆಮರಿ ಸರ್ಕಾರಿ ಜಾಗಗಳನ್ನೆಲ್ಲ ತಮ್ಮಪ್ಪನ ಆಸ್ತಿ ಎಂದುಕೊಂಡಂತಿದೆ. ತನ್ನ 29ನೇ ವಾರ್ಡಿನಲ್ಲಿರುವ ಮೇನ್ ರೋಡಿಗೆ ಅಡ್ಡಗೋಡೆ ನಿರ್ಮಿಸಿ ಐಷಾರಾಮಿ ಗೆಸ್ಟ್‌ಹೌಸ್ ಕಟ್ಟಿಸಿಕೊಂಡಿದ್ದಾನೆ. ಈ ಹಿಂದೆ ತಾನು ನಗರಸಭೆ ಅಧ್ಯಕ್ಷನಾಗಿದ್ದ ಸಮಯದಲ್ಲಿ ತನ್ನ ಓಣಿಯಲ್ಲಿರುವ ಎಲ್ಲಾ ಸರ್ಕಾರಿ ಜಾಗಗಳಿಗೆ ಬೇಲಿ ಸುತ್ತಿ ಲೈಬ್ರರಿ, ಸಮುದಾಯ ಭವನಗಳನ್ನು ಸರ್ಕಾರಿ ಅನುದಾನದ ಮೇಲೆ ಕಟ್ಟಿಸಿದ್ದಾನೆ. ಒಳ್ಳೆ ಕೆಲಸವನ್ನೇ ಮಾಡಿದ್ದಾನೆ ಎಂದು ತಪ್ಪು ತಿಳಿಯಬೇಡಿ. ಆತ ಅವುಗಳನ್ನೆಲ್ಲಾ ಕಟ್ಟಿಸಿರುವುದು ಸಾರ್ವಜನಿಕ ಉಪಯೋಗಕ್ಕಲ್ಲ, ತನ್ನ ಸ್ವಂತ ಉಪಯೋಗಕ್ಕೆ. ಅವುಗಳಿಗೆ ಬೀಗ ಜಡಿದು ಜೇಬಿನಲ್ಲಿ ಕೀ ಹಾಕಿಕೊಂಡು ಹೋಗುತ್ತಾನೆ. ಈತನ ಇನ್ನೊಂದು ಮಹತ್ಸಾಧನೆ ಎಂದರೆ ಅಕ್ರಮ ಇಸ್ಪೀಟ್ ಅಡ್ಡೆಗಳನ್ನು ಬೀದಿ ಬೀದಿಗಳಲ್ಲಿ ತೆರೆದು ಜನರನ್ನು ಸುಲಿಯುತ್ತಿರುವುದು.

ಇನ್ನು ಈತನ ಗೆಳೆಯ ಶಿವಣ್ಣ ಎಂಬಾತನ ಮೂಗುಬೊಟ್ಟು ಕತೆಗಳು ಇಡೀ ಊರಿಗೇ ಗೊತ್ತಿರುವಂಥವು. ಇದನ್ನು ಕಂಡೇ ಗದುಗಿನ ಜನ ಅವನಿಗೆ ಜೋಕುಮಾರ ಎಂಬ ಅನ್ವ ಹೆಸರಿನಿಂದ ಕರೆಯುತ್ತಾರೆ. ತನ್ನ ಹೆಂಡತಿ ಹೆಸರು ನಾಗರತ್ನ ಹಾಗೂ ತನ್ನ ಹೆಸರು ಶಿವಣ್ಣ ಎರಡನ್ನೂ ಶಾರ್ಟಾಗಿ ಕತ್ತರಿಸಿ 'ಶಿವನಾಗ ನಗರ' ಎಂಬ ಹೆಸರಿನ ಬೋರ್ಡ್ ಬರೆಸಿ ತನ್ನ ವಾರ್ಡಿಗೆ ತಗಲು ಹಾಕಿದ್ದಾನೆ. ತನ್ನ ವಾರ್ಡಿನ ಜನರಿಗೆ ಮೀಟರ್ ಬಡ್ಡಿ ಸಾಲ ಕೊಟ್ಟು ಸುಲಿಯುವ ಸುಲಿಗೆ ಕೋರನೀತ. ಅಲ್ಲದೇ ಈ ಹಿಂದೆ ಈತ ನಗರಸಭೆ ಸದಸ್ಯನಾಗಿದ್ದ ಸಂದರ್ಭದಲ್ಲಿ ಸಾರ್ವಜನಿಕ ಬೀದಿ ದೀಪಗಳನ್ನು ಖಾಸಗಿ ಅಂಗಡಿಗಳಿಗೆ ಮಾರಿಕೊಂಡು ಜನರನ್ನು ಕತ್ತಲೆಯಲ್ಲಿಟ್ಟಿದ್ದ ಖದೀಮ.

ಹನ್ನೊಂದನೇ ವಾರ್ಡಿನ ಪರಶುರಾಮ ಕೊಪ್ಪದ್ ಎಂಬ ದುರುಳನ ಕಥೆ ಇವರಿಬ್ಬರಿಗಿಂತ ಭಿನ್ನವಾಗಿಯೇನೂ ಇಲ್ಲ. ಈತ ಕೂಡ ಸಾರ್ವಜನಿಕ ಹಣವನ್ನು ಸಕತ್ತಾಗಿ ತಿಂದು ಕೊಬ್ಬಿದ ಖದೀಮನೆ.

ಈಗ ಇವರೆಲ್ಲ ಮತ್ತೊಂದು ಸುತ್ತು ಮೇಯಲು ಸಜ್ಜಾಗಿ ಚುನಾವಣಾ ಕಣಕ್ಕಿಳಿದಿದ್ದಾರೆ. ಜನರು ಇಂಥವರಿಗೆ ಅದ್ಯಾವ ರೀತಿ ಪಾಠ ಕಲಿಸುತ್ತಾರೋ ನೋಡಬೇಕು.

ಅಧಿಕಾರ ಹಸ್ತಾಂತರಕಿಂತ ಈಗಿರದೆ ಚನ್ನಾಗ್ಯದೆ ಕಂಡ್ಳ

ಅಲ್ಲೊಂದಿಷ್ಟು ಮೌನ ಆವರಿಸಿತ್ತು. ಚಿಕ್ಕಣ್ಣ ಒಲೆಯ ಬೆಂಕಿ ಕೆದಕುತ್ತ ಕುಳಿತಿದ್ದರೆ, ಸೀರನೂ ಬೆಂಕಿ ಕಾವಿಗೆ ಮೈ ಒಡ್ಡಿ ಶರೀರವನ್ನು ತಮಟೆ ಕಾಸಿದಂತೆ ಬೆಚ್ಚಗೆ ಮಾಡುತ್ತಿದ್ದ. ಕಾಳಮಾವ ಆಳವಾಗಿ ಬೀಡಿ ಎಳೆಯುತ್ತಾ ಗೊತ್ತುಗುರಿಯಿಲ್ಲದೆ ಕಣ್ಣುಬಿಡುತ್ತಿದ್ದ. ಆಗ ದುತ್ತನೆ ಕಾಣಿಸಿಕೊಂಡ ವಾಟಿಸ್ಸೆ,

"ದ್ವಾಪ್ಪ ಅಧಿಕಾರ ಹಸ್ತಾಂತರದ ಬಗ್ಗೆ ನೀನೇನೇಳ್ತೀ?" ಎಂದು ಟಿವಿ ಹುಡುಗರಂತೆ ತನ್ನ ಮುಂಗೈಯನ್ನು ಕಾಳಮಾವನ ಮುಸುಡುಗಿಡಿದ.

"ಯಾಕೆ ಗುರುಗುಟ್ಟುತ್ತ ನಿಂಗೆ ತಗಿಯಲೆ ಕೈಯ್ಯ."

"ಒಟ್ಟಾಗಬ್ಯಾಡ ದ್ವಡಪ್ಪ ನನ್ನನ್ನೇ ಮಾದ್ಯಮದವುನು ಅಂತ ತಿಳಕೊಂಡು ಉತ್ರ ಕೊಡು."

ಬಯಲು ಸೀಮೆಯ ಕಟ್ಟೆ ಪುರಾಣ

ಬಿ. ಚಂದ್ರೇಗೌಡ

"ಯಾವ ಮಧ್ಯಮದೋನ್ನ ನೀನು?"

"ಟ.ವಿ.ಯವನು ಅಂತ ತಿಳಕೊ ಅಥವಾ ಪೇಪರ್ ನೋನು ಅಂತಲೆ ತಿಳಕೊ."

"ಈ ಪೇಪರ್‌ನೋರು, ಟಿವಿಯೋರು ಮಾಡಿರೊ ಅನಾಹುತ ನೋಡಿದ್ರೆ ದ್ಯಾವೇಗೌಡ ಬಿಜೆಪಿಗಳಿಗೆ ಅಧಿಕಾರನೆ ಕೊಡಬಾರ್ದು ಅಂಗೆ ಮಾಡ್ಯವುರೆ ಕಣಮಾವ" ಎಂದ ಉಗ್ರಿ.

"ಅವುರೇನು ಮಾಡಿದ್ದರ್ಲ?" ಎಂದಳು ಜುಮ್ಮಿ.

"ಅಪ್ಪ ಮಕ್ಕಳು ಅಧಿಕಾರ ಕೊಡ್ತರೊ ಇಲ್ಲವೊ ಅಂತ ಬರದೂ ಬರದೂ ಯಾಕಾದ್ರು ಈ ಬಿಜೆಪಿಗಳ ಜೊತೆ ಸೇರಿದ್ವೊ ಅನ್ನಂಗೆ ಮಾಡ್ಯವ್ರೆ ಕಣೇ" ಎಂದು ಉಗ್ರಿ ವಿವರಿಸುತ್ತಿದ್ದಾಗ, ವಾಟಿಸ್ಸೆ ಸೀರನ ಮುಂದೆ ಕೈಹಿಂದಿದು,

"ನೀನೇಳು ಚಿಗಪ್ಪ ಬಿಜೆಪಿಗಳಿಗೆ ಅಧಿಕಾರ ಕೊಡದು ಸರಿಯೋ ತಪ್ಪೋ ಹೇಳು?" ಎಂದ.

"ಸರಿ ತಪ್ಪೇಳಕ್ಕೆ ನಾನ್ಯಾರ್ಲ? ಅಧಿಕಾರ ಅಸ್ತಾಂತರಕಿಂತ ಈಗಿರದೆ ಚನ್ನಗ್ಯದೆ. ಹಿಂಗೆ ನ್ಯಡಕಂಡೋಗಕ್ಕೇನೂ" ಎಂದ ಸೀರ.

"ಓಹ್ ಓ, ನಮ್ಮ ಚಿಗಪ್ಪ ಯಥಾಸ್ಥಿತಿವಾದಿ. ಅವುನಿಗೆ ಎಡೂರಪ್ಪ ಮುಖ್ಯಮಂತ್ರಿಯಾಗದು ಬೇಕಾಗಿಲ್ಲ, ನೀನೇನೇಳ್ತಿ ಯಕ್ಕಾ?"

"ನಾನೇನೇಳನ್ನ, ಮಾತು ಕೊಟ್ಟಂಗೆ ನ್ಯಡಕಬೇಕು. ಅದೇ ನನ್ನ ಮಾತು" ಎಂದಳು ಜುಮ್ಮಿ. ಕೂಡಲೇ ಉಗ್ರಿ ಎದುರು ಬಂದ ವಾಟಿಸ್ಸೆ.

"ವಾಟೀಸಿವರ್ ಒಪೀನಿಯನ್ ಉಗ್ರಿ?" ಎಂದ.

"ಏನೋಪೀನಿಯನ್ನೊ?"

"ಅದೇ ಪವರ್ ಟ್ರಾನ್ಸ್‌ಪರ್ ಬಗ್ಗೆ."

"ಅದಕಟಗಂಡು ನಿನಿಗೇನೂ?"

"ನಾನು ಮಾಧ್ಯಮದವುನು ಅಂತ ತಿಳಕೊ"



"ಅವತ್ತು ಕುಮಾರಸ್ವಾಮಿನೂ ಎಡೂರಪ್ಪನೂ ಅಧಿಕಾರ ಹಂಚಿಕೆ ಮಾಡಿಕಳುವಾಗ ಮಾಧ್ಯಮದವರ ಕೇಳಿದ್ರ ಅಥವಾ ಟಿವಿಯವರ ಕೇಳಿದ್ರ?"

"ಕೇಳಿರಲಿಲ್ಲ, ಆದ್ರು ರೂಲಿಂಗ್ ಪಾರ್ಟಿಯಷ್ಟೇ ಜವಾಬ್ದಾರಿ ನಮಗೂ ಆದೆ."

"ನಿನ್ನ ಜವಾಬ್ದಾರಿ, ಏನಾಯ್ತದೆ ಅದ ಜನಗಳಿಗೆ ಹೇಳದಷ್ಟೇ ಕಣೊ. ಇಲ್ಲದ ಪುಲಾರನ್ನಲ್ಲ ಬರಿಯದಲ್ಲ."

"ಮಿಷ್ಟರ್ ಉಗ್ರಿ, ನಿನಿಗಿನ್ನೂ ಮಾಧ್ಯಮದ ಸ್ವಾತಂತ್ರ ಗೊತ್ತಿಲ್ಲ ಅಂತ ಕಾಣ್ತದೆ, ಇದೇ ದ್ಯಾವೇಗೌಡ ಸೋನಿಯಾಗಾಂಧಿ ಜ್ವತೆ ಮಾತಾಡಬೇಕಾದ್ರೆ, ಪೇಪರ್ ತಗಂಡೋಗಿ ಇವುರಿಂಗೆ ಬರದವುರೆ ಅವುರೂ ಹಿಂಗೇ ಬರದವುರೆ. ಇದೇ ನನ್ನ ಅಭಿಪ್ರಾಯ ಅಂತ ಹೇಳೋನು. ನೀನು ಮಾಧ್ಯಮನ ಕಂಡೆಂ ಮಾಡಬ್ಯಾಡ."

"ನಾನು ಕಂಡೆಂ ಮಾಡ್ತಯಿಲ್ಲ ಕಣೊ, ಹಾದಿಬೀದಿಲಿ ಹೋಗೋರನ್ನಲ್ಲ ಅಧಿಕಾರ ಹಸ್ತಾಂತರದ ಬಗ್ಗೆ ನೀವೇನಂತಿರಿ ನೀವೇನೇಳ್ತಿರಿ ಅಂತ ಕೇಳತ ಅವುರಲ್ಲಾ, ಇದು ಸರಿಯಲ್ಲ ಅಂತ ಹೇಳ್ದಿನಿ."

"ಯಾಕ್ ಸರಿಯಲ್ಲಾ?"

"ಎಡೂರಪ್ಪ ಕುಮಾರಸ್ವಾಮಿಗಿಂತ ಯರಡು ಕತ್ತೆ ವಯಸು ದೊಡ್ಡೋನು ಅನ್ನದ ಒಪ್ಪಿಗತಿಯ?"

"ದ್ಯಪನೆಟ್ಟಿ."

"ವಿರೋಧ ಪಕ್ಷದ ನಾಯಕ ಆಗಿ ಪಾರ್ಟಿ ಕಟ್ಟಿ ಚಳವಳಿ ಮಾಡಿರದ್ರಲ್ಲಿ ಕುಮಾರಸ್ವಾಮಿಗಿಂತ ಅನುಭವಿ ಅನ್ನದ ಒಪ್ಪತಿಯಾ?"

"ಸೂರ್‍ಲಿ."

"ಮತ್ತೆ ಅಂಥಾ ಮನ್ಸ ತಮಗಿಂತ್ಲೂ ಕಡಮೆ ಸಂಖ್ಯೆಲಿರೊ ಶಾಸಕರ ಪಕ್ಷಕ್ಕೆ ಅಧಿಕಾರ ಕೊಟ್ಟು, ತನಗಿಂತ ಕಿರಿ ಹುಡುಗನ್ನ ಮುಖ್ಯಮಂತ್ರಿ ಮಾಡಕ್ಕೆ ಒಪ್ಪತದೆ ಅಂದ್ರೆ ಅವರು ಯಂಥಾ ಅವುಮಾನಕೂ ತಯಾರಾದೋರು ಅಂತ ತಾನೆ?"

"ಅವುಮಾನಲ್ಲ ತ್ಯಾಗ" ಎಂದು ವಾಟಿಸ್ಸೆ ನಕ್ಕ.

"ಏನು ತ್ಯಾಗನೊ, ಅದೂ ಒಂದು ತ್ಯಾಗನೆ. ಗತಿಗೆಟ್ಟ ಗೌಡ ಆದೇನ್ನೊ ಕ್ವಸ್ತ ಅಂತ ಗತಿಗೆಟ್ಟೋರು ಮಾಡೊ ರಾಜಕಾರಣ. ಇಂತ ಗತಿಗೆಟ್ಟೋರಿಗೆ ದ್ಯಾವೇಗೌಡ ಅಧಿಕಾರ ಕೊಟ್ರು, ಕೊಟ್ಟೆ ಇಲ್ದೆಯಿದ್ರಿಲ್ಲಾ ಅಂತನೆ. ಸರಿಯಲವೆ ಇದು?"

"ಅಧಿಕಾರ ಕೊಟ್ರು ಕೊಡ್ತಿವಿ ಇಲ್ದೆಯಿದ್ರೆ ಇಲ್ಲ ಅಂತ ಮಿರಾಜುದ್ದೀನ್ ಪಟೇಲ್‌ನೂ ಹೇಳ್ತ ಅವುನೆ ಕಣೊ."

"ಮಿರಾಜುದ್ದೀನ್ ಪಟೇಲ ಅಂದ್ರೆ ಅವುನ್ಯಾರ್ಲ?" ಎಂದಳು ಜುಮ್ಮಿ.

ರಾಮಸೇತು ಉಳಿವಿಗಾಗಿ ಅಳಿಲು ಸೇವೆ!

ಮರ್ಯಾದಾ ಪುರುಷೋತ್ತಮ ಶ್ರೀರಾಮ ನಿರ್ಮಿಸಿದ ಪವಿತ್ರ ರಾಮಸೇತು ಉಳಿವಿಗಾಗಿ ಹಲವು ಆಸಕ್ತರನ್ನೊಳಗೊಂಡಂತೆ ಮಾಧ್ಯಮಗಳು ತಮ್ಮ ಅಳಿಲು ಸೇವೆ ಸಲ್ಲಿಸುತ್ತಿರುವುದು ಸಮಾಧಾನದ ಸಂಗತಿ. ಕನ್ನಡಿಗರ ನೆಚ್ಚಿನ ದಿನಪತ್ರಿಕೆ 'ಪ್ರಜಾವಾಣಿ' ಇದಕ್ಕೆ ಹೊರತಾಗಿಲ್ಲ ವೆಂಬುದಕ್ಕೆ ದಿನಾಂಕ 13.9.2007 ರ ಪತ್ರಿಕೆಯೇ ಧೀಮಂತ ಸಾಕ್ಷಿ. ವಿವಿಧೆಡೆ ಬಂಧನ, ಲಾಠಿಪ್ರಹಾರ ಎಂಬ ಸುದ್ದಿ ಮುಖಪುಟದಲ್ಲಿಯೇ ರಾರಾಜಿಸಿತು. ಯಾತಕ್ಕಾಗಿ ಇವೆಲ್ಲ? ಪತ್ರಿಕೆಯೇ ಸಾರಿತು–ಸೇತು ಸಮುದ್ರಂ: ಪ್ರತಿಭಟನೆ ತೀವ್ರ. ಒಳಸುದ್ದಿಯ ಮೊದಲಿಗೇ ಸೇತುಸಮುದ್ರಂ ಯೋಜನೆ ಕುರಿತು ಎದ್ದಿರುವ ರಾಜಕೀಯ ವಿವಾದದ ಬೆನ್ನಲ್ಲಿಯೇ, ಶ್ರೀರಾಮ ಅಥವಾ ರಾಮಾಯಣದ ಇತರ ವ್ಯಕ್ತಿಗಳ ಅಸ್ತಿತ್ವ ಸಾಬೀತು ಮಾಡಲು ಸಾಕ್ಷ್ಯಾಧಾರಗಳು ಇಲ್ಲ ಎಂದು ಕೇಂದ್ರ ಸರ್ಕಾರ ಬುಧವಾರ ಸುಪ್ರೀಂಕೋರ್ಟಿಗೆ ತಿಳಿಸಿದೆ ಎಂದು ಸಾರಿತು. ಕೆಲವು ವೃತ್ತಿನಿರತ ಪತ್ರಕರ್ತರಿಗೆ ಶೀರ್ಷಿಕೆಯೂ ಇದಕ್ಕೆ ಸಂಬಂಧಪಟ್ಟದ್ದೇ ಇರಬೇಕಿತ್ತಲ್ಲವೇ ಎಂಬ ಸಂಶಯ ಮೂಡುವುದು ಸಹಜವೇ. ಅಂತಹ ಅಜ್ಞಾನಿಗಳಿಗೆ ಒಂದು ಸಮಾಧಾನದ ಮಾತು. ನೀವು ಹೇಳುವುದು ಪತ್ರಿಕಾ ಧರ್ಮ ಇರಬಹುದು. ಇಲ್ಲಿ ನಂಬಿಕೆಯ ಧರ್ಮ ದೊಡ್ಡದೋ ಪತ್ರಿಕಾ ಧರ್ಮ ದೊಡ್ಡದೋ ಎಂಬ ಪ್ರಶ್ನೆ ಉದ್ಭವಿಸುತ್ತದೆ. ರಾಮಸೇತು ಒಡೆಯುವುದು ಮುಖ್ಯವೋ ಉಳಿಸುವುದು ಮುಖ್ಯವೋ ಇದುವೆ ಸಮಸ್ಯೆ ಇದರ ಪರಿಹಾರಾರ್ಥವಾಗಿ ಈ ಧೀಮಂತ ಪತ್ರಿಕೆಯು ಶೀರ್ಷಿಕೆಯನ್ನು ಹಾಗೂ ಸುದ್ದಿಯನ್ನು ಹೀಗೂ ಪ್ರಕಟಿಸಿದೆ. ಮುಂದುವರೆದು ಸುಪ್ರೀಂಕೋರ್ಟಿಗೆ ಸರ್ಕಾರ ಸಲ್ಲಿಸಿರುವ ಪ್ರಮಾಣಪತ್ರವನ್ನು ವಿರೋಧಿಸಿ ದೇಶದ ವಿವಿಧ ಭಾಗಗಳಲ್ಲಿ ನಡೆದ ಪ್ರತಿಭಟನೆಯನ್ನು ಸಾದ್ಯಂತವಾಗಿ ವಿವರಿಸಿದೆ. ಹೀಗಾಗಿ ನೇರ, ದಿಟ್ಟ, ನಿಷ್ಠುರ ಸುದ್ದಿ ತಿಳಿಸುವ ಪತ್ರಿಕೆ ರಾಮಸೇತು ಉಳಿಸಲು ತನ್ನ ಅಳಿಲು ಸೇವೆಯನ್ನು ಸಲ್ಲಿಸಿದೆ. ಇತರ ಹಲವು ಪತ್ರಿಕೆಗಳಂತೆ ಈ ಪತ್ರಿಕೆಯೂ ಸದಾ 'ಹಿಂದೂತ್ವ'ದ ಉದ್ಧಾರಕ್ಕಾಗಿ ಪಣತೊಡದಿದ್ದರೂ ಆಯಕಟ್ಟಿನ ಸಂದರ್ಭಗಳಲ್ಲಿ ಈ ಮನೋಭಾವ ತೋರುತ್ತಿರುವುದನ್ನು ಪ್ರಜ್ಞಾವಂತ ಓದುಗರು ಗಮನಿಸಿರಬಹುದು. ವಿಷಯಕ್ಕೆ ಸಂಬಂಧಿಸದ ಶೀರ್ಷಿಕೆ ನೀಡುವುದು 'ಪ್ರಜಾವಾಣಿ' ಪತ್ರಿಕಾ ಪ್ರಪಂಚಕ್ಕೆ ನೀಡಿದ ಕೊಡುಗೆಯಾಗಿದೆ!

ಸುದ್ದಿ ಮಾಧ್ಯಮಗಳು ಈ ರೀತಿ ತಮ್ಮ ಅಳಿಲು ಸೇವಾ ಕೈಂಕರ್ಯದಲ್ಲಿ ತೊಡಗಿರುವಾಗ ಏನಕೇನ ಪ್ರಕಾರೇಣ ಹಿಂದೂತ್ವದ ಉಳಿವಿಗಾಗಿ ಶ್ರಮಿಸುತ್ತಿರುವ ಭಜರಂಗಿಗಳು ಎಂಬ ಬಾಹುಬಲಿಗಳು ತಮ್ಮದೇ ಆದ ವಿಧಾನದಲ್ಲಿ ಸೇವೆ ಸಲ್ಲಿಸುತ್ತಿವೆ. ತಮಿಳುನಾಡಿನ ಮುಖ್ಯಮಂತ್ರಿ ಕರುಣಾನಿಧಿ ಈ ದೇಶದ ಜನರ ನಂಬಿಕೆ, ವಿಶ್ವಾಸಗಳನ್ನೇ ಬುಡಮೇಲು ಮಾಡುವಂತೆ 'ಈ ರಾಮ ಯಾವ ಇಂಜನಿಯರಿಂಗ್ ಕಾಲೇಜಿನಿಂದ ಡಿಗ್ರಿ ಪಡೆದುಕೊಂಡ' ಎಂದು ಉಚಾಯಿಸಿ ಮಾತನಾಡಿರುವುದು ಭಜರಂಗಿಗಳ



ಬುದ್ಧಿ ಕೆಡಿಸಿದೆ. ಅಲ್ಲಿಗೇ ಹೋಗಿ ಆ ಪಾಷಂಡಿಗೆ ಬುದ್ಧಿ ಕಲಿಸುವ ಹಾಗೆ ಇಲ್ಲ, ಅಲ್ಲಿರುವ ಭಜರಂಗಿಗಳೇ ಈ ಕೃತ್ಯ ಎಸಗಬಹುದಿತ್ತಲ್ಲಾ ಅಂದರೆ.... ಹಾಳಾದವರು ಅಲ್ಲಿ ರಾಕ್ಷಸ ವಂಶದವರೇ ಹೆಚ್ಚು. ಆ ಪರಮಾತ್ಮನಾದ ಪರಮಾತ್ಮನಿಗೇ ಚಪ್ಪಲಿಯಲ್ಲಿ ಹೊಡೆಯುತ್ತಾ ಮೆರವಣಿಗೆ ಮಾಡಿದ ಆ ದುರುಳ ಪೆರಿಯಾರರ ಶಿಷ್ಯ ಕೋಟಿಯವರಲ್ಲವೇ ಅವರು. ವೈರಿಗಳ ದೌರ್ಬಲ್ಯ ನೋಡಿ ಹಲ್ಲೆ ಮಾಡಬೇಕು ಎಂಬುದು ಯುದ್ಧ ತಂತ್ರ. ಕರ್ನಾಟಕದಲ್ಲಾದರೋ ತಮ್ಮದೇ ಸರ್ಕಾರ ಇದೆ. ಪೊಲೀಸರ ಮನವಿಯನ್ನು ಧಿಕ್ಕರಿಸಿ ವಿಶ್ವಹಿಂದೂ ಸಮ್ಮೇಳನದ ಹೆಸರಿನಲ್ಲಿ ಧರ್ಮದ ಉಳಿವಿಗಾಗಿ ತಾವೆಸಗಿದ ಎಲ್ಲ ಪುಂಡಾಟಗಳನ್ನೂ ಮನ್ನಿಸಿದ ಮಹಾಶಯರೇ ಮುಖ್ಯಮಂತ್ರಿಗಳಾಗಿದ್ದಾರೆ. ಕರುಣಾನಿಧಿಯ ಮೇಲೆ ಸೇಡು ತೀರಿಸಿಕೊಳ್ಳಲು ಕರ್ನಾಟಕವೇ ಅತ್ಯುತ್ತಮ ಸ್ಥಳ ಎಂದು ನಿರ್ಧರಿಸಿ ರಾತ್ರಿಯ ವೇಳೆ ಅವರ ಮಗಳ ಮನೆಯ ಮೇಲೆ ದಾಳಿ ನಡೆಸಿದರು. ಕಿಟಕಿ ಗಾಜು ಪುಡಿಪುಡಿ ಮಾಡಿದರು. ಪೆಟ್ರೋಲ್ ಬಾಂಬ್ ಎಸೆದು ಕ್ಷಣ ಮಾತ್ರದಲ್ಲಿ ಪರಾರಿಯಾದರು.

ಕರುಣಾನಿಧಿಯವರ ಮಗಳ ಮನೆಯ ವಿಳಾಸ ಅವರಿಗೆ ಎಲ್ಲಿ ದೊರೆಯಿತು ಎಂಬ ಸಂಶಯ ಬೇಕಿಲ್ಲ, ಹಿಂದೂ ಧರ್ಮನಿಂದಕರ ವಿಳಾಸಗಳೆಲ್ಲವೂ ಭಜರಂಗದಳದ ಹತ್ತಿರ ದೊರೆಯುತ್ತದೆ! ಗುಜರಾತಿನಲ್ಲಿ ಹೀಗೇ ಅಲ್ಲವೇ ಅಲ್ಪಸಂಖ್ಯಾತರ ಸೊಕ್ಕು ಮುರಿದದ್ದು!

ಇಷ್ಟಕ್ಕೇ ಅವರ ಹಿಂದೂಧರ್ಮ ಬಿಡುಗೊಡಲಿಲ್ಲ. ತಮಿಳುನಾಡಿಗೆ ಹೊರಟಿದ್ದ ಬಸ್ಸು ಹಿಡಿದರು. ಬೆಂಕಿ ಹಾಕಿ ಸುಟ್ಟರು. ಪ್ರಯಾಣಿಕರಲ್ಲಿ ಇಬ್ಬರು ಅಗ್ನಿಗೆ ಆಹುತಿಯಾದರು.

ಮರ್ಯಾದಾ ಪುರುಷೋತ್ತಮನ ಇಂಜನಿಯರಿಂಗ್ ಡಿಗ್ರಿ ಕೇಳಿದ್ದಕ್ಕೆ ತಕ್ಕ ಶಾಸ್ತಿ ಮಾಡಿ ಆತ್ಮತೃಪ್ತಿ ಪಡೆದರು!

ಅಲ್ಲ, ಕರುಣಾನಿಧಿ ಅಪರಾಧವೇ ಮಾಡಿದ್ದರು ಅನ್ನೋಣ. ಅದಕ್ಕೆ ಅವರ ಮಗಳು ಹೇಗೆ ಹೊಣೆ? ಅಮಾಯಕ ಪ್ರಯಾಣಿಕರು ಏನು ಪಾಪ ಮಾಡಿದ್ದರು? ಇಂತಹ ಮಾತುಗಳು ಬೇಕಿಲ್ಲ, ತಲೆ ಕೆಟ್ಟ ತಮಿಳನೊಬ್ಬ ತಪ್ಪು ಮಾಡಿದರೆ ತಮಿಳರೆಲ್ಲರೂ ಅಪರಾಧಿಗಳು! ಕುಮಾರಸ್ವಾಮಿ ತಪ್ಪು ಮಾಡಿದರೆ ಇಡೀ ಕರ್ನಾಟಕಕ್ಕೆ ಶಿಕ್ಷೆ! ನಮ್ಮ ಖ್ಯಾತ ಕಾದಂಬರಿಕಾರ ಎಸ್.ಎಲ್. ಭೈರಪ್ಪ ಅವರೇ ತಮ್ಮ 'ಆವರಣ' ಕಾದಂಬರಿಯಲ್ಲಿ ಹಿಂದೆ ಮುಸಲ್ಮಾನ ದೊರೆಗಳು ಮಾಡಿರಬಹುದಾದ ದುಷ್ಕೃತ್ಯಗಳಿಗೆ ಎಲ್ಲಾ ಮುಸಲ್ಮಾನರೂ ಕ್ಷಮೆ ಕೋರಬೇಕು ಎಂದು ಸುತ್ತಪಡಿಸಿದ್ದಾರಲ್ಲ!

'ರಾಮಸೇತು ನಿರ್ಮಿಸಿದವರಾರು? 'ಈ ಪ್ರಶ್ನೆಯನ್ನು ಗೌರಿ ಎತ್ತಿದ್ದಾರೆ. 'ಕಪಿಗಳು ಅಂದರೆ ದಕ್ಷಿಣ ಭಾರತೀಯರು ಕಪಿಗಳಾ' ಎಂಬುವುದು ಅವರ ಪ್ರಶ್ನೆ. ನೀವಲ್ಲದೆ ಇರಬಹುದು. ಭಜರಂಗಿಗಳ ಆಟ ನೋಡಿದರೆ ದೈಹಿಕವಾಗಲ್ಲದಿದ್ದರೂ ಮಾನಸಿಕವಾಗಿ ಇರಬಹುದೇನೋ ಎಂಬ ಅನುಮಾನಪಡುವವರೂ ಇರಬಹುದು. ಇಂತಹ ಅನುಮಾನ ಪಿಶಾಚಿಗಳಿಗೇನು ಮಾಡಬೇಕು? ನೇಣು ಹಾಕಬೇಕು!

ದೈವನಿಂದಕರಿಗೆ ಇದುವೇ ಸರಿಯಾದ ಶಿಕ್ಷೆ!

ಮನಸ್ಸಿಗೆ ತೃಪ್ತಿತರುವ ಒಂದು ಸಂಗತಿ ತಿಳಿಸಲೇಬೇಕಾಗಿದೆ. ಅದೆಂದರೆ ಇವತ್ತಿನ (19.9.2007) 'ಪ್ರಜಾವಾಣಿ' ಪತ್ರಿಕೆಯಲ್ಲಿ ಭಜರಂಗಿಗಳು ನಡೆಸಿದ ಧೀರ ಕೃತ್ಯಗಳ ಕುರಿತು ಯಾವ ಸುದ್ದಿಯೂ ಪ್ರಕಟ ಆಗಿಲ್ಲ! ಮಂಡ್ಯ ಆವೃತ್ತಿಯಲ್ಲಂತೂ ಇಲ್ಲ! ಮರೆವು, ಪಾಪ ಜಾಣ ಮರೆವು ಇರಬೇಕು!

ರಾಮಸೇತು, ಭಜರಂಗಿಗಳ ಉಳಿವು, ಬೆಳವುಗಾಗಿ 'ಪ್ರಜಾವಾಣಿ'ಯ ಅಳಿಲ ಸೇವೆ ಇದು ಆಗಿರಬೇಕು! ಇದನ್ನು 'ಅಳಿಲಸೇವೆ, ಪ್ರಜಾವಾಣಿ ಭಕ್ತಿ' ಅನ್ನಬಹುದೇನೋ!

ಅಣಕ

ಎಚ್.ಎಲ್. ಕೇಶವಮೂರ್ತಿ

ಇತ್ತೀಚೆಗೆ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಒಂದು ವ್ಯಂಗ್ಯ ಚಿತ್ರ ನೋಡಿದೆ.

ಜೈರಾಮ್ ರಮೇಶ್ ಅವರ ಮನೆ.

ಮನೆಯ ಮುಂದೆ ಕಾವಲುಗಾರ.

ಓರ್ವ ಸನ್ಯಾಸಿ ಅವನನ್ನು ಕೇಳುತ್ತಾನೆ: 'ಜೈರಾಂ ರಮೇಶ್ ಅನ್ನುವ ಮಂತ್ರಿ ಕಂಡು ಆಶೀರ್ವಚನ ನೀಡಬೇಕು.'

ಅರೆರೆ ಈ ಸಾಧು ಸನ್ಯಾಸಿಗಳೇನಿದ್ದರೂ ಹಿಂದೂತ್ವ ಪ್ರತಿಪಾದಕರ ಮನೆಬಾಗಿಲಿಗೆ ಹೋಗುವವರು. ಇವರ ಮನೆ ಬಾಗಿಲಿಗೆ ಯಾಕೆ ಬಂದರು ಈ ಮಹಾಪುರುಷರು ಅಂತ ಒಳಹೊಕ್ಕು ನೋಡಲಾಗಿ... ಸುಪ್ರೀಂಕೋರ್ಟಿಗೆ ಸಲ್ಲಿಸಲಾದ ಪ್ರಮಾಣಪತ್ರದಲ್ಲಿ ರಾಮಸೇತು ಹಾಗಿರಲಿ, ಅಲ್ಲಿರುವ ಪಾತ್ರಗಳು ಯಾವುವೂ ಇರಲೇ ಇಲ್ಲ ಅಂತ ಹೇಳಿತ್ತಲ್ಲ ಅದನ್ನು ಕೇಳಿ ಕೃದ್ಧರಾದ ಸಚಿವರ್ಯರು ಈ ಪ್ರಮಾಣಪತ್ರಕ್ಕೆ ಕಾರಣೀಭೂತವಾದ ಸಂಸ್ಕೃತಿ ಸಚಿವೆ ಅಂಬಿಕಾ ಸೋನಿ ರಾಜೀನಾಮೆಗೆ ಆಗ್ರಹಿಸಿದ್ದರು. ಸಂಪುಟದ

"ಅವನೊಬ್ಬ ಹಳೇ ಸಾಬಿ ಕಣೆ. ಅವನೊಂತರ ಚರ್ಮದ ಯಾಪಾರಿ ಇದ್ದಂಗೆ. ಇತ್ತಗೂ ಮಾತಾಡ್ತನೆ, ಅತ್ತಗೂ ಮಾತಾಡ್ತನೆ. ಇಂತ ಟೇಮಿಗೆ ಅಂಥೋನೆ ಬೇಕು ಅಂತ ದ್ಯಾವೇಗೌಡ ಅವುನ್ನ ಹಿಡುದು ಜೆಡಿಎಸ್ ಅಧ್ಯಕ್ಷನ್ನ ಮಾಡಿ ತನ್ನ ಮಾತ ಅವುನ ಕೈಲಿ ಆಡುಸ್ತ ಅವುನೆ."

"ಅಂಗಾರೆ ಪ್ರಕಾಶ್ ಈಗದ್ಯಕ್ಕಲ್ಲಾ ಅನ್ನು?"

"ಪ್ರಕಾಶನ ಕ್ಯಲ್ಸ ಇಲ್ಲಿಗೆ ಮುಗಿತು ಕಣೆ, ಅವುನ ಕೈಲಿ ಮಿರಾಜುದ್ದೀನ್ ಪಟೇಲ ಆಡೋ ಮಾತಾಡ್ಸಕ್ಕೆ ಆಗದಿಲ್ಲ ಅಂತ ದ್ಯಾವೇಗೌಡ ಬದ್ಲಾಯ್ಸವುನೆ."

"ಇನ್ನು ಏನೇನವುತಾರ ಅಧ್ಯನ್ನ ದ್ಯಾವೇಗೌಡ?" ಎಂದ ಪೀರ.

"ಬಹುಶಃ ಇದು ಕೊನೆ ಅಂಕ ಚಿಗಪ್ಪ, ಈ ಕ್ಯನೆ ಅಂಕದಲ್ಲಿ ಅವುನು ಕಾಸಿಗೆ ಕಡಿಯಾದ ಆಟ ಆಡಿ ಸುಮ್ಮನಾಯ್ತನೆ" ಎಂದ ವಾಟಿಸ್ಸೆ.

"ಅವುನೆಲ್ಲಿ ಸುಮ್ಮನಾಯ್ತನೊ, ಅವುನು ಮಗ್ಗುಲು ಕೊಡಬೇಕು ಅವತ್ತು ಸುಮ್ಮನಾಗಬೇಕು" ಎಂದ ಉಗ್ರಿ.

"ನೀನೇನೆ ಅನ್ನು ಕಲಿಪುರುಸ ಕಂಡ್ಯ ಅವುನು" ಎಂದ ಕಾಳಮಾವ ಕಣ್ಣುಮಿನುಗಿಸಿದ.

"ತಗಳಪ್ಪ, ನಮ್ಮ ದ್ವಡಪ್ಪ ದ್ಯಾವೇಗೌಡರಿಗೆ ಕೊಟ್ಟ ಸರ್ಟಿಫಿಕೇಟ್ ನೋಡಿದ, ದ್ಯಾವೇಗೌಡ ಕಲಿ ಪುರುಸನಂತೆ" ಎಂದ ವಾಟಿಸ್ಸೆ ನಕ್ಕ.

"ಇರಬವುದು ಬುಡು. ಆ ಸಿದ್ಧರಾಮಯ್ಯನ್ನ ಗುದ್ದಕ್ಕೆ ಅಂತ ಬೆಳಗಾವಿಯಿಂದ ಒಂದು ತಗರು ತಂದು ಬುಟ್ಟವುನೆ. ಬಜೆಪಿ ಬೈಯಕ್ಕೆ ಅಂತ ಮೀರಾಜುದ್ದೀನ್ ಪಟೇಲನ್ನ ತಂದು ಮಡಿಕಂಡ. ಎಂ.ಪಿ. ಪ್ರಕಾಶ್ ಇದ್ರೆ ಇರಬವುದು ಹೋದ್ರೆ ಹೋಗಬವುದು ಅಂಗೆ ಮಾಡಿ, ಆ ಸಿಂಧ್ಯಾ ಮಾಯಾವತಿ ಮನೆ ಕದ ತಟ್ಟಂಗೆ ಮಾಡಿದ ಅಂದ್ರೆ, ಕಾಳಮಾವನ ಭಾಗಕ್ಕೆ ದ್ಯಾವೇಗೌಡ ಕಲಿಪುರುಸನೇ ಇರಬೇಕು."

"ರಿಯಲಿ ವಂಡ್ರುಪುಲ್ಲು."

ಯಾರೇ ಇಂತಹ ಪ್ರಮಾಣಪತ್ರ ಸಲ್ಲಿಸಿದರೆ ಅದು ಸಂಪುಟದ ಸಾಮೂಹಿಕ ಜವಾಬ್ದಾರಿ ಎಂದು ಅರಿತೂ ಹೀಗೆ ಕೆಂಡ ಕಾರಿದ್ದರು! (ಹೀಗೆ ಹೇಳಿಕೆ ನೀಡಿದ ನಂತರ ಸೋನಿಯಾ ಕಡೆ ತಿರುಗಿ ನೋಡಲಾಗಿ ಎಲ್ಲೋ ಯಡವಟ್ಟಾಗಿದೆ ಅನ್ನಿಸಿ ಆಮೇಲೆ ಕ್ಷಮಾಪಣೆ ಕೋರಿದ್ದು ಬೇರೆ.) ರಾಮ ಸೇತುವಿಗಾಗಿ ಇವರದ್ದೂ ಅಳಿಲು ಸೇವೆ!

ದೇವರನ್ನು ಮುಂದೆ ಮಾಡಿ ಮತ ಯಾಚಿಸದ ಇಂತಹವರೇ ರಾಮಸೇತುವೆಗಾಗಿ ಅಳಿಲುಸೇವೆ ಸಲ್ಲಿಸುತ್ತಿರ ಬೇಕಾದರೆ ಆತನ ಹೆಸರಿನ ಮಹತ್ವದ ಮೇಲೇ ಅಧಿಕಾರದ ಗದ್ದುಗೆ ಏರಿದ್ದ, ಏರಬೇಕಾಗಿರುವ ಹಿಂದೂ ಧರ್ಮ ಚಿಂತಕರು ಸುಮ್ಮನಿರಲು ಸಾಧ್ಯವೇ ಇಲ್ಲ. ಅವರಾಗಲೇ ರಾಮಸೇತುವನ್ನು ಹಿಡಿದು ದೇಶಾದ್ಯಂತ ಪ್ರತಿಭಟನೆ ಮಾಡಲು ಸಿದ್ಧರಿದ್ದಾರೆ. ಅವರ ಧುರೀಣರು ಶ್ರೀರಾಮನನ್ನು ಕುರಿತಂತೆ ಹಲವು ಸಂಶೋಧನೆಗಳಲ್ಲಿ ತೊಡಗಿದ್ದಾರೆ. ಜಾತ್ಯತೀತ ಎನ್ನುವ ಸಂವಿಧಾನದಲ್ಲಿ ಅಗೋಚರವಾಗಿ ರಾಮ, ಕೃಷ್ಣ ಅವರ ಚಿತ್ರಗಳು ಅವರಿಗೆ ಗೋಚರಿಸಿವೆ. ಭಗವಂತನು ಎಲ್ಲರಿಗೂ ದರ್ಶನ ನೀಡುವುದಿಲ್ಲ, ಕೇವಲ ಭಕ್ತರಿಗೆ ಮಾತ್ರ ನೀಡುತ್ತಾನೆ ಎಂಬುದನ್ನು ಮುಖ್ಯವಾಗಿ ಗಮನಿಸಬೇಕು. ಹಾಗೆಯೇ ಸಂವಿಧಾನದಲ್ಲಿ ರಾಮ, ಕೃಷ್ಣರ ಚಿತ್ರಗಳು ಅವರ ಭಕ್ತರಿಗೆ ಮಾತ್ರ ಗೋಚರಿಸಿವೆ!

ಮಹಾತ್ಮಾ ಗಾಂಧಿ ಎನ್ನುವ ಮನುಷ್ಯನನ್ನು ಹಿಂದೂತ್ವವಾದಿಗಳೇ ಕೊಂದಿರಬಹುದು. ಆದರೆ ಈ ಮನುಷ್ಯನನ್ನು ದೈವಸ್ವರೂಪಿ ಎಂದು ನಂಬುವವರು ಇದ್ದಾರೆ. ಜನರ ನಂಬಿಕೆ, ವಿಶ್ವಾಸಕ್ಕೆ ದ್ರೋಹ ಬಗೆಯ ಬಾರದು. ಅದಕ್ಕೆ ಗಾಂಧೀಜಿ ಹೆಸರನ್ನು ಇಲ್ಲಿ ಹೇಳಬೇಕಾಗಿದೆ. ಆತನೇ ಈ ದೇಶ 'ರಾಮರಾಜ್ಯ' ಆಗಬೇಕು ಅಂದಿದ್ದಾನೆ. ರಾಮನೇ ಇಲ್ಲ ಅಂದಮೇಲೆ ರಾಮರಾಜ್ಯ ಎಲ್ಲಿರುತ್ತೆ? ಗಾಂಧೀಜಿನೇ ಸುಳ್ಳು ಹೇಳಿದ ಅಂದಹಾಗೆ ಅಲ್ವಾ....

ವಿಚಾರವಾದಿಗಳು, ಬುದ್ಧಿಜೀವಿಗಳು ಎಂಬ ಹೆಸರಿನಿಂದ ಮೆರೆಯುತ್ತಿರುವ ಕೆಲವರು ಗಾಂಧೀಜಿಯ, ಜನಮಾನಸದ ರಾಮನೇ ಬೇರೆ, ಹಿಂದೂತ್ವ ರಾಮನೇ ಬೇರೆ ಅನ್ನುತ್ತಾರಲ್ಲ...ಹಿಂದೆ ದೇಶದಲ್ಲಿ ಶಾಂತಿ, ಸಮೃದ್ಧಿ ಇತ್ತು, ರಾಮ ಸೌಮ್ಯಮೂರ್ತಿ ಆಗಿದ್ದ. ಈ ಕಲಿಯುಗದಲ್ಲಿ ಎಲ್ಲೆಲ್ಲೂ ಧರ್ಮಗ್ಲಾನಿಯಾಗುತ್ತಿದೆ. ಆ ಭಗವಂತನೇ ಹೇಳಿಲ್ಲವೆ ಇಂತಹ ಸ್ಥಿತಿ ಉದ್ಭವಿಸಿದರೆ ನಾನು ಈ ಭೂಖಂಡದಲ್ಲಿ ಅವತಾರ ಎತ್ತುತ್ತೇನೆ ಎಂದು. ಈಗ ಧರ್ಮಗ್ಲಾನಿ ಆಗಿದೆ. ಶಾಂತ ಸ್ವರೂಪಿ ರಾಮನಿಂದ ಏನಾಗುತ್ತದೆ. ಅದಕ್ಕೆ ರೌದ್ರಾವತಾರ ರಾಮನಾಗಿದ್ದಾನೆ!

ರೌದ್ರಮೂರ್ತಿ ರಾಮನಿಗೆ ಇದೋ ನಮ್ಮ ಅಳಿಲು ಸೇವೆ!

ಮರೆಯುವ ಮುನ್ನ



■ ಪಿ. ಲಂಕೇಶ್ -ಮಾರ್ಚ್ 26,1989

ಈ ಇಬ್ಬರು....




ಈ ಇಬ್ಬರು ಮುಸ್ಲಿಮರು ಅಚ್ಚರಿ ಹುಟ್ಟಿಸುತ್ತಾರೆ. ಒಬ್ಬನ ಹೆಸರು ಮೈಸೂರುಸಾಬು; ಮಾಹುತನ ಮಗನಾಗಿದ್ದ ಈತನನ್ನು 1936ರಲ್ಲಿ ಇಂಗ್ಲಿಷ್ ಚಿತ್ರ ನಿರ್ದೇಶಕನೊಬ್ಬ ಇಂಗ್ಲೆಂಡಿಗೆ ಕರೆದೊಯ್ದ; ಈತ ಮೈಸೂರಿನ ಹುಡುಗ. ಇಂಗ್ಲೆಂಡಿಗೆ ಹೋದ ಸಾಬು ಚಿತ್ರನಟನಾದ. ಅನಕ್ಷರಸ್ಥನಾಗಿದ್ದ ಸಾಬು ಅಪಾರ ಖ್ಯಾತಿ, ಹಣ ಮಾಡಿದ; ತನ್ನ ಮುಗ್ಧತೆ, ಆಕರ್ಷಕ ನಟನೆಯಿಂದ ಜಗತ್ತಿನ ಅಸಂಖ್ಯಾತ ಚಿತ್ರರಸಿಕರ ಮನಸ್ಸು ಗೆದ್ದ.

ಇನ್ನೊಬ್ಬ ಮುಸ್ಲಿಂ ಕೂಡ ಅನಕ್ಷರಸ್ಥ. ಈತನ ಹೆಸರು ಮಹಮದ್ ಇಮ್ತಿಯಾಜ್. ಈತ ನಮ್ಮ ಸಮಕಾಲೀನ; ಈಗ ಸುದ್ದಿಯಲ್ಲಿರುವ ಪ್ರತಿಭಾವಂತ. ಇತ್ತೀಚೆಗೆ ಅಂತರರಾಷ್ಟ್ರೀಯ ಮಟ್ಟದ ಗೋಲ್ಡನ್ ಫೋರ್ಕ್ ಗೆದ್ದಿರುವ ಇಮ್ತಿಯಾಜ್ ಲಕ್ನೋದಲ್ಲಿ ಹುಟ್ಟಿ ಬೆಳೆದು ದಿಲ್ಲಿಯ ಪಂಚತಾರಾ ಹೋಟೆಲಿನಲ್ಲಿ ಶ್ರೇಷ್ಠ ಪಾಕಕಲಾವಿದನಾಗಿರುವ ವ್ಯಕ್ತಿ. ಇದು ಒಲಂಪಿಕ್ಸ್ ಸ್ವರ್ಣಪದಕವಿದ್ದಂತೆ.

ಪಾಕಶಾಸ್ತ್ರವೆನ್ನುವುದು ವಿಜ್ಞಾನ ಮತ್ತು ಕಲೆಯ ಸಮ್ಮಿಳನ. 'ಅಡಿಗೆಯನ್ನು ಹೃದಯದಿಂದ ಮಾಡಬೇಕು' ಎನ್ನುವ ಇಮ್ತಿಯಾಜ್ ಪ್ಯಾರಿಸ್‌ನಲ್ಲಿ ಈಚೆಗೆ ನಡೆದ ಪಾಕಸ್ಪರ್ಧೆಯಲ್ಲಿ ಗೆದ್ದ. ಮಾಂಸ, ತರಕಾರಿ, ಧಾನ್ಯ ಸಾಂಬಾರ್ ಪದಾರ್ಥಗಳು-ಎಲ್ಲದರ ಸಾರವನ್ನರಿತ ಇಮ್ತಿಯಾಜ್‌ನ ಅಡಿಗೆಯ ರುಚಿ ನೋಡಿದ ವಿದೇಶಿ ತೀರ್ಪುಗಾರರು ಅಚ್ಚರಿಗೊಂಡು ದಿಲ್ಲಿಗೆ ಬಂದು ಇಮ್ತಿಯಾಜ್‌ನ ಹಿನ್ನೆಲೆಯನ್ನು ಅಭ್ಯಸಿಸಿದರು; ಆತನ ಪ್ರತಿಭೆಗೆ ಮಾರುಹೋದರು. ಜಗತ್ತಿನ ಶ್ರೇಷ್ಠ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

"ಹೈ ಹೋಪ್ಸ್"



ನಮ್ಮ ಸಿನಿಮಾ ಬಸವಳಿದಿರಲು ನನಗನ್ನಿಸುವ ಕಾರಣ ಇಲ್ಲಿಯ ಸಾರ್ವಜನಿಕ ಜೀವನದ ಬರಡುತನವಾಗಲಿ, ಅಪ್ರಾಮಾಣಿಕತೆಯಾಗಲಿ ಸಿನಿಮಾದಲ್ಲಿ ಹೊಮ್ಮುವುದಿಲ್ಲ; ವೈಯಕ್ತಿಕ ಜೀವನದ ನೋವು ಕೃತಿಯಾಗಿ ರೂಪುಗೊಳ್ಳುವುದಿಲ್ಲ. ರಾಜಕಾರಣಿಗಳ ಕ್ರಿಯೆಯ ಆಳದಲ್ಲಿ ನಿಗೂಢ ಸ್ಫೂರ್ತಿಗಳಿವೆ; ವ್ಯಕ್ತಿಯ ನೋವು, ಅವಮಾನದಲ್ಲಿ ರಾಜಕೀಯ ಪ್ರಭಾವವಿದೆ.

ಇದೆಲ್ಲ ಹೇಳಲು ನನಗೆ ಈ ಕ್ಷಣದ ಸ್ಫೂರ್ತಿ ಇತ್ತೀಚೆಗೆ ಇಂಗ್ಲೆಂಡಿನ ತೆರೆಗೆ ಬಂದಿರುವ ಒಂದು ಚಿತ್ರ 'ಹೈ ಹೋಪ್ಸ್.' ಮೈಕ್ ಲೀ ಎಂಬ ನಿರ್ದೇಶಕ ಬರೆದು ಪ್ರದರ್ಶಿಸುತ್ತಿರುವ ಈ ಸಿನಿಮಾದಲ್ಲಿ ಇಂಗ್ಲೆಂಡಿನ ಪ್ರಧಾನಿ ಥ್ಯಾಚರ್ ಇಂಗ್ಲೆಂಡನ್ನು ಜಡಗೊಳಿಸಿರುವ, ಅಮಾನವೀಯಗೊಳಿಸಿರುವ ಚಿತ್ರಣವಿದೆ. ಸೋಷಲಿಸ್ಟರ ನುಡಿಕಟ್ಟು ಮೊಂಡಾಗಿವೆ; ಶ್ರೀಮಂತರ ಶೈಲಿ ತೇಗಿನಿಂದ ಕೂಡಿವೆ. ಭವ್ಯ ರಾಷ್ಟ್ರದ ಕನಸು ಅನುಭವಿಸುತ್ತಲೇ ಜನರು ತಮ್ಮ ಮನುಷ್ಯತ್ವಕ್ಕೆ ತಿಲಾಂಜಲಿ ಕೊಡುತ್ತಿದ್ದಾರೆ.

ನಮ್ಮಲ್ಲಿ ರಾಜಕೀಯ ಸಿನಿಮಾ ಎಂದರೆ ಪ್ರಹಸನ, ರಾಜಕಾರಣಿ ಎಂದರೆ ತಮಾಷೆಗೆ ಮಾತ್ರ ಗುರಿಯಾಗಬೇಕಾದ ವ್ಯಕ್ತಿ. ಆದರೆ ಇಂಗ್ಲೆಂಡ್‌ನಲ್ಲಿ ಜನರನ್ನು ನಗಿಸುತ್ತಲೇ ಅವರ ವಿಷಾದ ವಲಯಕ್ಕೆ ಕರೆದೊಯ್ಯಬಲ್ಲ ನಿರ್ದೇಶಕರೂ, ನಟರೂ ಇದ್ದಾರೆ.

ವಸ್ತುಗಳೆಲ್ಲ ತೀರಿಕೊಂಡಿವೆ ಎಂದು ಎಲ್ಲರೂ ತಿಳಿದಿದ್ದಾಗಲೇ ಅದ್ಭುತ ಕೃತಿ ನೀಡಿ ಅಚ್ಚರಿಗೊಳಿಸುವ ಸಮಾಜ ನಿಜಕ್ಕೂ ಜೀವಂತ ಸಮಾಜ.

ಮೈ, ಮನಗಳ ಸುಳಿ



ನೀವು ಗಮನಿಸುತ್ತಿರಬಹುದು.... ಸಲ್ಮಾನ್ ರಶ್ದಿಯ ಮುಖ ಡಿಸಾಲ್ವ್ ಆಗುತ್ತಿದ್ದಂತೆ ಪಾಮೇಲಾ ಎಂಬ ಹೆಣ್ಣಿನ ಅಂಗಾಂಗಗಳು ತೆರೆಯ ಮೇಲೆ ಕಂಗೊಳಿಸುತ್ತಿವೆ.

ಪಾಮೇಲಾ ಸಿಂಗ್, ಪಾಮೇಲಾ ಬಾರ್ಡೆಸ್, ಪಾಮೇಲಾ ಚೌಧುರಿ.. ಹುಸೇನ್ ಉರುಫ್ ಚಾಕೊವಾಲಾ ಉರುಫ್ ಗಿಲ್ಡಾ ಹುಸೇನ್ ಎಂಬಂತೆ; ಅಥವಾ ಆಟೋ ಶ್ಯಾಮ್ ಉರುಫ್ ಗಿಡ್ಡು ಶ್ಯಾಮ್ ಉರುಫ್ ರೋಮಿಯೋ ಶ್ಯಾಮ್ ಎಂದು ಪೊಲೀಸರು ಪತ್ರಿಕೆಗಳಿಗೆ ಸುದ್ದಿ ಕೊಡುವಂತೆ. ರಶ್ದಿಯ ಕತೆಯಲ್ಲಿ ರಸಿಕತೆ ಕಮ್ಮಿ. ಇಬ್ಬರೇ ಪಾತ್ರಧಾರಿಗಳು-ತಲೆ ಬಕ್ಕಗೊಳ್ಳುತ್ತಿರುವ ರಶ್ದಿ ಮತ್ತು ಬೆಂಕಿ ಕಾರುವ ಮುಲ್ಲಾ ಖೊಮೀನಿ. ನಿಜಕ್ಕೂ 'ಮೀನೀ'(meanie) ಅನ್ನಿಸಿಕೊಳ್ಳಬಲ್ಲ ಖೊಮೀನಿ ಕತೆ ಕೇಳುವಾಗಲೆಲ್ಲ ಭಯಕ್ಕೆ ನಿದ್ರೆ ಬಾರದಿರಬಹುದು; ಆದರೆ ರಂಜನೆಗೆ ಎದ್ದು ಕುಣಿಯುವುದು ಕಷ್ಟ.

ಪಾಮೇಲಾ ನಿಗೂಢ ಹುಡುಗಿ. ತೆಳ್ಳಗೆ ಎತ್ತರವಾಗಿ ಕಣ್ಣು ಝಳಪಿಸುವ ಪಾಮೇಲಾ ಇವತ್ತು ಇಂಗ್ಲೆಂಡಿನಲ್ಲಿ ಅದ್ಭುತ ಹುಡುಗಿ. ಥ್ಯಾಚರ್ ಕ್ಯಾಬಿನೆಟ್‌ನ ಮಂತ್ರಿಯೊಬ್ಬನ ಜೊತೆಗೆ, ಅನೇಕ ಕನ್ಸರ್ವೇಟಿವ್ ರಾಜಕಾರಣಿಗಳ ಜೊತೆಗೆ, ಇಬ್ಬರು ಖ್ಯಾತ ಸಂಪಾದಕರ ಜೊತೆಗೆ, ಅಂತರರಾಷ್ಟ್ರೀಯ ಶಸ್ತ್ರಾಸ್ತ್ರ ಬ್ರೋಕರ್‌ಗಳ ಜೊತೆಗೆ, ಲಿಬಿಯಾದ ಗಡ್ಡಾಫಿಯ ನೆಂಟನೊಬ್ಬನ ಜೊತೆಗೆ ಬಾನಗಡಿ ನಡೆಸಿರುವುದಾಗಿ ಹೇಳಲಾಗುತ್ತಿರುವ ಪಾಮೇಲಾ ವಿಶ್ವಸುಂದರಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದಳು; ಭಾರತದ ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದಿದ್ದಳು. ಕೋಟ್ಯಂತರ ಪೌಂಡ್, ನೂರಾರು ಗಣ್ಯರನ್ನು ಬೆರಳಿನ ಸುತ್ತ ತಿರುಗಿಸಿದಳು. "ನನ್ನ ಕತೆಯಲ್ಲಿ ನಾನೇ ನಟಿಸಿದರೆ ಮಾತ್ರ ಎಲ್ಲವನ್ನೂ ಹೇಳಲು ಒಪ್ಪುತ್ತೇನೆ" ಎಂದು ಹೇಳುವ ಪಾಮೇಲಾ ಇಪ್ಪತ್ತೈದು ವರ್ಷದ ಹಿಂದೆ ಪ್ರಫ್ಯೂಮೊ ಎಂಬ ಮಂತ್ರಿಯನ್ನು ಬೀಳಿಸಿದ ಕ್ರಿಸ್ಟೀನ್ ಕೀಲರ್‌ಗಿಂತ ಅವಾಂತರದ ಹೆಣ್ಣು; ಕೀಲರ್ ಬಗ್ಗೆ ತಯಾರಾದ ಚಿತ್ರ ಬಿಡುಗಡೆಯಾಗಿದ್ದಾಗಲೇ ಸುದ್ದಿಗೆ ಮೈಥುನದ ಆಯಾಮ ನೀಡಿರುವ ಹುಡುಗಿ.

ಕಾಲ್‌ಗರ್ಲ್ ಅಥವಾ ವೇಶ್ಯೆ ಎಂದು ಈಕೆಯನ್ನು ಎಲ್ಲರೂ ಕರೆಯುತ್ತಿದ್ದಾರೆ. ಅಪಾರ ಹಣ ಗಳಿಸಿರುವ ಹುಡುಗಿ ಎಂದು ಹೇಳುತ್ತಿದ್ದಾರೆ. ಪತ್ರಕರ್ತನೊಬ್ಬನನ್ನು ಐನೂರು ಪೌಂಡ್‌ಗೆ ಹಾಸಿಗೆಗೆ ಆಹ್ವಾನಿಸಿದಳೆಂದು ಹೇಳಲಾಗುತ್ತಿದೆ. ಇದೆಲ್ಲಾ ಪಾಮೇಲಾಳ ಖ್ಯಾತಿಯನ್ನು, ಶಕ್ತಿಯನ್ನು ತೋರಬಹುದು. ಆದರೆ ಇದಕ್ಕೆ ಇನ್ನೊಂದು ಮುಖವಿದೆ. ಹೆಣ್ಣೊಬ್ಬಳು ಈ ಖ್ಯಾತಿ, ಹಣಕ್ಕಾಗಿ ತಾನು ವೇಶ್ಯೆ ಎಂದು ಒಪ್ಪಿಕೊಳ್ಳುವುದು ಇವತ್ತಿನ ಪರಿಸರದ ಬಗ್ಗೆ ಖಚಿತ ಮಾಹಿತಿ ನೀಡುತ್ತದೆ. ಅಂತರರಾಷ್ಟ್ರೀಯ ರಾಜಕೀಯ ರಂಗ ಹೊಲಸಾಗಿದೆ; ಸಾಂಸ್ಕೃತಿಕ ವಾತಾವರಣ ತನ್ನ ಮೌಲ್ಯವನ್ನೆಲ್ಲ ಕಳೆದುಕೊಂಡಿದೆ. ಹೇಳಿಕೊಳ್ಳುವಂಥ ಅರ್ಥಪೂರ್ಣ ನಾಯಕರು ಕಂಡುಬರುತ್ತಿಲ್ಲ. ಇಂಥಲ್ಲಿ ಹಣ, ಖ್ಯಾತಿ, ಮೈಥುನ ಮಿಕ್ಕೆಲ್ಲ ಸಂಗತಿಗಳಿಗಿಂತ ಮುಖ್ಯವಾಗುವುದು ಸ್ವಾಭಾವಿಕ. ಐದು ಪೈಸೆಗೆ ಮಾರಿಕೊಳ್ಳಬಲ್ಲ ವ್ಯಕ್ತಿಗೂ ಐದು ಬಿಲಿಯನ್ ಡಾಲರ್‌ಗೆ ಬಿಕರಿಯಾಗುವ ವ್ಯಕ್ತಿಗೂ ವ್ಯತ್ಯಾಸವಿಲ್ಲ ಎನ್ನುವ ಕಟುಸತ್ಯವನ್ನು ಮರೆಮಾಚಲಾಗಿದೆ.

ಪಾಮೇಲಾ ಕೇವಲ ಆಕರ್ಷಕ ರಕ್ತಮಾಂಸವಾಗುವುದು ಆಧುನಿಕ ಜಗತ್ತಿನ ನೀಚತನಕ್ಕೆ, ಆಕೆ ಪ್ರತಿಪಾದಿಸುವ ಲೈಂಗಿಕ ಸಾಹಸದ ದುಷ್ಟತನಕ್ಕೆ ದ್ಯೋತಕ.

"ಗಂಡಸಾಗಿದ್ದರೆ...."




ನೀವು ನಮ್ಮಲ್ಲಿ ಬರುತ್ತಿರುವ 'ಆರ್‌ಎಸ್‌ಎಸ್ ಅಂತರಂಗ' ಗಮನಿಸಿರಬಹುದು. ಎ.ಕೆ. ಸುಬ್ಬಯ್ಯ ಈ ಪುಸ್ತಕವನ್ನು ರೋಷದಿಂದ ಬರೆದಿಲ್ಲ, ನಿರಾಶೆ ಮತ್ತು ನೋವಿನಿಂದ ಬರೆದಿದ್ದಾರೆ. ಈ ಪುಸ್ತಕಕ್ಕೆ ಪ್ರತಿಕ್ರಿಯೆ ತೋರುತ್ತಿರುವ ನೂರಾರು ಜನ ಓದುಗರು ಇದನ್ನು ಕಂಡಿದ್ದಾರೆ. ಆದರೆ ಹಲವರು ಆರ್‌ಎಸ್‌ಎಸ್‌ಗಳು ಸಿಟ್ಟಿನಿಂದ ನಮಗೆ ಕಾಗದ ಬರೆದಿದ್ದಾರೆ. ಹಲವರಂತೂ ಏಕವಚನದಲ್ಲಿ, ಕೆಟ್ಟ ಮಾತುಗಳಲ್ಲಿ ನನ್ನನ್ನು ಬೈದಿದ್ದಾರೆ. ಮಂಗಳೂರಿನ ಒಬ್ಬ ತನ್ನ ಸಣ್ಣತನವನ್ನೆಲ್ಲ ಕಾರಿಕೊಂಡಿದ್ದಾನೆ. ಬೆದರಿಕೆ, ಭಯೋತ್ಪಾದನೆಯ ಮಾತುಗಳೆಲ್ಲ ಕೆಲವರ ಪತ್ರಗಳಲ್ಲಿವೆ. ಇಂಥವರ ವರಸೆ ನಿಮಗೆ ಗೊತ್ತು. "ನಿನ್ನಲ್ಲಿ ಗಂಡಸುತನವಿದ್ದರೆ, ನೀನು ಧೈರ್ಯವಂತನಾಗಿದ್ದರೆ ಇದನ್ನು ಪ್ರಕಟಿಸು" ಎಂದು ಕೆಲವರು ಅರಚಿದ್ದಾರೆ. ಇವರಿಗೆ ಗೊತ್ತಿರಲಾರದು, ಸಂಪಾದಕನ ಕೆಲಸ ಗಂಡಸುತನ ತೋರುವ ಕೆಲಸವಲ್ಲ, ವಿಷಯವನ್ನು ಜನಕ್ಕೆ ಹೇಳುವ ಕೆಲಸ. ನಿಮಗೆ ತಿಳಿದಿದೆ, ಈ ಪತ್ರಿಕೆಯ ಮೂರು ಮಾತಿನ ಉದ್ದೇಶ; ಬೋಧನೆ, ರಂಜನೆ, ಪ್ರಚೋದನೆ.

ಹೀಗಿದ್ದರೂ ಆಕ್ಷೇಪಿಸುವ ಕೆಲವರ ಮಾತುಗಳಲ್ಲಿ ಸತ್ಯಾಂಶವಿದೆ. ಆರ್‌ಎಸ್‌ಎಸ್‌ನಲ್ಲಿರುವ ಎಲ್ಲರೂ ಬುದ್ಧಿಮಾಂದ್ಯದ, ಮಿದುಳಿಗೆ ಅಂಕುಶ ಹಾಕಿಕೊಂಡ ಹುಡುಗರಿರಲಾರರು; ಕೆಲವರಲ್ಲಿ ಒಳ್ಳೆಯ ಉದ್ದೇಶಗಳಿರುತ್ತವೆ, ಕೆಲವರು ಸ್ವಯಂ ಸೇವಕರು ನಾಯಕರ ರಮ್ಯ ಮಾತುಗಳಿಗೆ ಮರುಳಾಗಿರುತ್ತಾರೆ. ಇವರು ನೊಂದಿದ್ದರೆ ಈ ಬಗ್ಗೆ ನನ್ನಲ್ಲಿ ವಿಷಾದವಿದೆ.

ನಾನು ವೈಯಕ್ತಿಕವಾಗಿ ಯಾರನ್ನೂ ದ್ವೇಷಿಸುವುದಿಲ್ಲ, ಕೆಟ್ಟವರ ಒಳ್ಳೆಯತನವನ್ನು ಸುಬ್ಬಯ್ಯ ಉದ್ದೀಪಿಸುವಂತಾಗಲಿ.

ದಮನದ ಫಲಶ್ರುತಿ



ನನ್ನೆದುರು ಪೌಲೋ ಫ್ರೀಯರ್ ಎಂಬ ಬ್ರೆಜಿಲ್ ದೇಶದ ಚಿಂತಕನ ಪುಸ್ತಕವಿದೆ. ಅದರ ಹೆಸರು 'ತುಳಿತಕ್ಕೊಳಗಾದ ಜನರ ಶಿಕ್ಷಣ.'

ಅದರಲ್ಲಿ ಒಂದು ಮಾತು ನನ್ನಲ್ಲಿ ಪ್ರತಿಧ್ವನಿಸುತ್ತಿದೆ. ತುಳಿವವರ ವಿರುದ್ಧ ಪ್ರತಿಭಟಿಸಿ ಹೋರಾಡಬೇಕಾದ್ದು ತುಳಿಸಿಕೊಂಡವರ ಕರ್ತವ್ಯ. ಈ ಹೋರಾಟ ಉಗ್ರವಾಗಬಹುದು ಅಥವಾ ಸಾಮಾನ್ಯ ಹೋರಾಟವಾಗಬಹುದು. ಆದರೆ ತುಳಿಸಿಕೊಂಡವನು ಈ ಹೋರಾಟದಲ್ಲಿ ತೊಡಗುವ ಮೂಲಕ ತನ್ನ ವ್ಯಕ್ತಿತ್ವ ನಾಶವಾಗದಂತೆ ನೋಡಿಕೊಳ್ಳಬೇಕು. ದಮನಕಾರನ ವ್ಯಕ್ತಿತ್ವ ತಮಗೇ ಬಾರದಂತೆ ನೋಡಿಕೊಳ್ಳಬೇಕು. ಪ್ರತಿಭಟನೆ ನಮಗೆ ಎಲ್ಲ ವಿಧದಲ್ಲೂ ಸಹಾಯಕವಾಗುವಂತೆ ನಡೆಯಬೇಕು.

ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ವಿರುದ್ಧ ಹೋರಾಡುತ್ತಿರುವ ನೀಗ್ರೋಗಳಲ್ಲಿ ಈ ಎಚ್ಚರವಿದೆ; ವಿನ್ನಿ ಮಾಂಡೇಲಾಳ ಕ್ರೌರ್ಯವನ್ನು ಖಂಡಿಸಿರುವ ಇವರು ನಡೆಯುತ್ತಿರುವ ದಾರಿ ಅರ್ಥಪೂರ್ಣವಾದದ್ದು. ದಕ್ಷಿಣ ಆಫ್ರಿಕಾದ ಪಕ್ಕದ ರೊಢೀಸಿಯಾದಲ್ಲಿ (ಈಗಿನ ಜಿಂಬಾಬ್ವೆ) ಬಿಳಿಯರನ್ನು ಸೋಲಿಸಿದ ಜನ ಆ ಬಿಳಿಯರನ್ನು ತಿದ್ದಲಿಲ್ಲ; ತಮ್ಮನ್ನು ರೂಪಿಸಿಕೊಳ್ಳುವ ಬಗ್ಗೆ ಎಚ್ಚರ ವಹಿಸಲಿಲ್ಲ. ಹೀಗಾಗಿ ರೊಢೀಸಿಯಾದಿಂದ ಬಿಳಿಯರು ಕಾಲು ಕೀಳುತ್ತಿದ್ದಾರೆ.

ಅಫ್ಘಾನಿಸ್ತಾನದ ದಂಗೆ ಎಲ್ಲರ ಗಮನ ಸೆಳೆಯುತ್ತಿದೆ.

ಅಲ್ಲಿಯ ಹೋರಾಟ, ಕ್ರಾಂತಿ ಮತ್ತು ಮಾನವೀಯತೆಯಲ್ಲಿ, ಆರೋಗ್ಯವಂತ ಮನುಷ್ಯರನ್ನು ಸೃಷ್ಟಿಸುವಲ್ಲಿ ಅಂತ್ಯಗೊಂಡರೆ ಎಷ್ಟು ಚೆನ್ನ.



ರಮ್ಯಾಳಿಗೆ ಕೋಕ್!

ರಕ್ಷಿತಾ ಮತ್ತು ರಾಧಿಕಾಳ ಗೈರು ಹಾಜರಿಯಲ್ಲಿ ಊರಿಗೊಬ್ಬಳೇ ಪದ್ಮಾವತಿ ಎಂಬ ಭ್ರಮೆಯಲ್ಲಿ ಮಿಂಚುತ್ತಿದ್ದ ನಾಯಕಿ ರಮ್ಯಾಗೆ ಒಂದು ಚಿಕ್ಕ ಸೆಟ್‌ಬ್ಯಾಕ್ ಆಗಿದೆ. ಒಂದೇ ಲೈನ್‌ನಲ್ಲಿ ಹೇಳಬೇಕಾದರೆ ಹೊಸ ಪ್ರತಿಭೆಗಳು ಚಿತ್ರರಂಗಕ್ಕೆ ಮುನ್ನುಗ್ಗುತ್ತಿರುವ ಬಿಸಿ ರಮ್ಯಾಳಿಗೂ ತಟ್ಟಿದೆ. 'ಮುಂಗಾರು ಮಳೆ ಭಾಗ-2' ಚಿತ್ರದಲ್ಲಿ ಗಣೇಶ್ ಜೊತೆ ರಮ್ಯಾ ನಾಯಕಿಯಾಗಿ ನಟಿಸುತ್ತಾಳೆ ಎಂದು ಬಹಳ ಹಿಂದೆಯೇ ಅನೌನ್ಸ್ ಮಾಡಲಾಗಿತ್ತು, ಸ್ವತಃ ರಮ್ಯಾ ಅನೇಕ ಸಂದರ್ಶನಗಳಲ್ಲಿ ಇದರ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಳು. ಆದರೆ ನವೆಂಬರ್‌ನಲ್ಲಿ ಸೆಟ್ಟೇರಲಿರುವ ಈ ಚಿತ್ರದಲ್ಲಿ ಆಕೆ ನಟಿಸುತ್ತಿಲ್ಲ ಎಂಬ ಹೊಸ ಸುದ್ದಿ ಈಗ ಗಾಂಧಿನಗರದಿಂದ ಬಂದಿದೆ.

ಇದಕ್ಕೆ ಕಾರಣ 'ಎಳೆಯ ಹುಡುಗ' ಗಣೇಶ್ ಎದುರಿಗೆ ಈಕೆ ಸ್ವಲ್ಪ 'ಮೆಚ್ಯೂರ್ಡ್' ಆಗಿ ಕಾಣಿಸುತ್ತಾಳೆ ಎಂಬುದು. ಸಿನಿಮಾ ಭಾಷೆಯಲ್ಲಿ ಮೆಚ್ಯೂರ್ಡ್ ಅಂದರೆ 'ಹಿರಿಯ ನಟಿ' ಎಂದೇ ಅರ್ಥ ಎಂದು ಬೇರೆ ಹೇಳಬೇಕಿಲ್ಲ ತಾನೆ? ಆದರೆ ವಾಸ್ತವವಾಗಿ ರಮ್ಯಾಳಿಗಿಂತ ನವ ನಟರಾದ ಗಣೇಶ್, ಪ್ರೇಮ್ ಮತ್ತು ವಿಜಯ್ ವಯಸ್ಸಿನಲ್ಲಿ ಹಿರಿಯರು ಮಾತ್ರವಲ್ಲ, ಕೊನೆಯ ಇಬ್ಬರು ವಿವಾಹಿತರು ಮತ್ತು ಎರಡು/ ಮೂರು ಮಕ್ಕಳ ತಂದೆಯರು!

ಆದರೇನಂತೆ, ಗಾಂಧಿನಗರದವರ ಪ್ರಕಾರ ಈ ಮೂವರಿಗಿಂತ ಮೊದಲೇ ರಮ್ಯಾ ಚಿತ್ರರಂಗವನ್ನು ಪ್ರವೇಶಿಸಿದ್ದರಿಂದ ಆಕೆಗೆ 'ಹಿರಿಯ ನಟಿ' ಸ್ಥಾನವನ್ನು ನೀಡುತ್ತಿದ್ದಾರೆ ಮಾತ್ರವಲ್ಲ, ಈಗ 'ಮಳೆ ಭಾಗ-2'ಕ್ಕೆ ಒಂಬತ್ತು ಅಥವಾ ಹತ್ತನೆ ತರಗತಿಯಲ್ಲಿರುವ ಟೀನೇಜ್ ಹುಡುಗಿಗಾಗಿ ಶೋಧ ನಡೆಸುತ್ತಿದ್ದಾರೆ. ಅಲ್ಲಿಗೆ ಮತ್ತೊಬ್ಬ ಅಮೂಲ್ಯ ಚಿತ್ರರಂಗಕ್ಕೆ ಬರುವಂತಾಗಿದೆ.

ಇದನ್ನು ಕೇಳಿ ಪ್ರಮಿಳಾ ನೇಸರ್ಗಿ ಮೇಡಂ ಈಗಲೇ ತಮ್ಮ ನಾಲಿಗೆಗೆ ಪ್ರಾಕ್ಟೀಸ್ ನೀಡಲಾರಂಭಿಸಿದ್ದರೆ ಅಚ್ಚರಿ ಇಲ್ಲ!



ಲಲಿತಾ ನಾಯಕ್‌ರ ಸಕಲಕಲಾ ಪುತ್ರ

ಮಾಜಿ ಸಚಿವೆ ಮತ್ತು ಮಾಜಿ ಬರಹಗಾರ್ತಿ ಬಿ.ಟಿ. ಲಲಿತಾ ನಾಯಕ್ ಅವರ ಸುಪುತ್ರ ಓಂಪ್ರಕಾಶ್ ಚಿತ್ರರಂಗಕ್ಕೆ ಧುಮುಕುತ್ತಿದ್ದಾರೆ. ಅದೂ ಯಾವುದೊ ಒಂದು ಪಾತ್ರದಲ್ಲಿ ಅಥವಾ ಒಂದು ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಾಮಾನ್ಯ ಕಾಯಕದ ಮೂಲಕವಲ್ಲ!!

'ಒಂದು ಕೊಲೆಯ ಸುತ್ತ' ಎಂಬ ಚಿತ್ರ 24ರಂದು ಸೆಟ್ಟೇರಲಿದ್ದು ಇದರ ಕಥೆ, ಚಿತ್ರಕತೆ, ಸಂಭಾಷಣೆ, ನಿರ್ದೇಶನ, ನಿರ್ಮಾಣ ಮತ್ತು ನಾಯಕನಟನ ಜವಾಬ್ದಾರಿಗಳನ್ನು ಸ್ವತಃ ಓಂಪ್ರಕಾಶ್ ನಿರ್ವಹಿಸುತ್ತಿದ್ದಾರೆ. ಹೀಗೆ ಮೊದಲನೆ ಪ್ರಯತ್ನದಲ್ಲೇ ಸಕಲ ಕಲಾವಲ್ಲಭನಾಗಲು ಹೊರಟಿರುವ ಓಂ ಪ್ರಕಾಶ್ ಆರೇ ದಿನಗಳಲ್ಲಿ ಚಿತ್ರವನ್ನು ಮುಗಿಸಲಿದ್ದಾರಂತೆ. ಮೊನ್ನೆ ಮೊನ್ನೆಯಷ್ಟೇ ನಿಧನ ಹೊಂದಿದ 'ತನಿಖೆ' ಖ್ಯಾತಿಯ ಗುಲ್ಜಾರ್ ಖಾನ್ ಸ್ಥಾನವನ್ನು ಓಂ ಪ್ರಕಾಶ್ ತುಂಬಲು ಹೊರಟಂತಿದೆ. ಆದರೂ ಲಲಿತಾನಾಯಕ್ ರವರ ಪುತ್ರನಾದ ಈತ ರಚನಾತ್ಮಕವಾದ ಚಿತ್ರ ಮಾಡುತ್ತಾರೆಂಬ ನಿರೀಕ್ಷೆಯನ್ನು ಹುಸಿಯಾಗಿಸದಿರಲಿ ಎಂದಷ್ಟೇ ಹೇಳಬಹುದು.

ಮಚ್ಚುದಾನ ಮತ್ತು ರಕ್ತದಾನ

ಮುಂದಿನವಾರ ಕೆಂಪೇಗೌಡ ರಸ್ತೆಯಲ್ಲಿ 'ರಕ್ತದಾನ' ಮತ್ತು 'ಮಚ್ಚುದಾನ' ಸಮಾರಂಭಗಳು ನಡೆಯಲಿವೆ.

ಅಂದರೆ 'ಗುಣ' ಮತ್ತು 'ಅಗ್ರಹಾರ' ಎಂಬ ರಕ್ತದೋಕುಳಿ ಹರಿಸುವ ಎರಡು ಚಿತ್ರಗಳು ಒಂದೇ ದಿನ ಬಿಡುಗಡೆಯಾಗಲಿವೆ. ಮೇನಕದಲ್ಲಿ 'ಗುಣ' ಮತ್ತು ಅಪರ್ಣದಲ್ಲಿ 'ಅಗ್ರಹಾರ' ತೆರೆಕಾಣುತ್ತಿರುವುದರಿಂದ ಈ ಎರಡು ಚಿತ್ರಮಂದಿರಗಳ ನಡುವೆ ಎಲ್ಲೆಲ್ಲೂ ರಕ್ತದೋಕುಳಿ ಗ್ಯಾರಂಟಿ. ಯಾರಿಗಾದರೂ ರಕ್ತದ ಅಗತ್ಯವಿದ್ದರೆ ಅವರು ಅಲ್ಲೇ ಸಂಬಂಧಪಟ್ಟವರನ್ನು ಸಂಪರ್ಕಿಸಬಹುದು.

ಇವೆರಡೂ ಮಚ್ಚು ಮತ್ತು ಲಾಂಗು ಕಥಾವಸ್ತುವಿನ ಚಿತ್ರಗಳು. 'ಗುಣ' ಚಿತ್ರಕ್ಕೆ ನಾಜ್ ನಿರ್ದೇಶಕರಾದರೆ 'ಅಗ್ರಹಾರ'ವನ್ನು ಅಕ್ಷಯ್ ಎಂಬುವವರು ನಿರ್ದೇಶಿಸಿದ್ದಾರೆ. ಪಾರ್ವತಿಪುರದ ಯರ್ರ ಅಲಿಯಾಸ್ ಯರ್ರಾಸ್ವಾಮಿ ಎಂಬ 'ಬಹುಮುಖ ಪ್ರತಿಭೆ' 'ಗುಣ' ಚಿತ್ರದ ನಾಯಕನಾಗಿರುವುದು ಮತ್ತೊಂದು ವಿಶೇಷ.

ಅದೇನೇ ಇರಲಿ, ಹೊಸಬರು ಇಂತಹ ಹಿಂಸಾತ್ಮಕ ಚಿತ್ರಗಳ ಬದಲಿಗೆ ಹೆಚ್ಚು ಕ್ರಿಯಾಶೀಲರಾಗಿ ಹೊರಬರಲಿ ಎಂಬುದೇ ನಮ್ಮ ಆಶಯ.

ಗಿಮಿಕ್ ನಟನ ಗಿಮಿಕ್ ಹುಟ್ಟುಹಬ್ಬ



ಚಿತ್ರತಾರೆಯರು ತಮ್ಮ ಅಭಿಮಾನಿಗಳ ಸಮ್ಮುಖದಲ್ಲಿ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುವುದು ಹೊಸ ವಿಷಯವೇನೂ ಅಲ್ಲ. ಆದರೆ ಕಳೆದವಾರ ಉಪೇಂದ್ರ ತಮ್ಮ ಹುಟ್ಟು ಹಬ್ಬವನ್ನು ಆಚರಿಸಿಕೊಂಡ ರೀತಿ ಮಾತ್ರ ಎಂಥವರಲ್ಲೂ ಅಸಹ್ಯ ಹುಟ್ಟಿಸುವಂತಿತ್ತು.

ಮೊದಲನೆಯದಾಗಿ, ಜನರ ಅಭಿಮಾನ ಸಹಜವಾಗಿಯೇ ಮೂಡಿಬರಬೇಕೇ ವಿನಃ ಅದಕ್ಕೆ ಪ್ರಾಯೋಜಕತ್ವದ ಬೆಂಬಲ ಇರಬಾರದು. ಈ ಹಿಂದೆ ಉಪ್ಪಿ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡಾಗ ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿದ್ದ ಅಭಿಮಾನಿಗಳು ಬೆಳಗಿನಿಂದಲೇ ಅವರ ಮನೆಗೆ ಮುತ್ತಿಗೆ ಹಾಕಿದ್ದರು. ಆದರೆ ಈ ಬಾರಿ 92.7 ಎಫ್.ಎಂ. ಸಂಸ್ಥೆಯವರು ಸುಮಾರು ಹದಿನೈದು ದಿನಗಳಿಂದ ಉಪ್ಪಿಯ ಹುಟ್ಟು ಹಬ್ಬದ ಬಗ್ಗೆ ಗಂಟೆಗೊಮ್ಮೆ ಪ್ರಚಾರ ನೀಡಿ ಶ್ರೋತೃಗಳನ್ನು ಅವರ ಹುಟ್ಟುಹಬ್ಬಕ್ಕೆ ಆಹ್ವಾನಿಸಿದ್ದರು.

ಈ ಪ್ರಚಾರಾಂದೋಲನವನ್ನು ಅವರು ಎಷ್ಟು ಕೀಳು ಅಭಿರುಚಿಯಿಂದ ಮಾಡಿದ್ದರು ಗೊತ್ತಾ? ಉಪ್ಪಿ ಹುಟ್ಟಿದ ಹಬ್ಬಕ್ಕೆ ಬರಲು ಆಸಕ್ತಿ ಇರುವವರು ಕೈಯೆತ್ತಿ ಎನ್ನುವ ಬದಲು ಅವರು ತಮ್ಮ ಕಾರ್ಯಕ್ರಮದಲ್ಲಿ 'ಕಾಲೆತ್ತಿ' ಎಂದೇ ಹೇಳುತ್ತಿದ್ದರು. ಕನ್ನಡದಲ್ಲಿ ಕಾಲೆತ್ತಿ ಎಂಬುದರ ಗೂಡಾರ್ಥ ಗೊತ್ತಿಲ್ಲದ ಎಫ್.ಎಂ. ಜಾಕಿಗಳು ಕೊನೆಗೆ ಕೇಳುಗರಿಂದ ಮತ್ತು ಪತ್ರಕರ್ತರಿಂದ ಉಗಿಸಿಕೊಂಡರು. ಅವರೆಲ್ಲರೂ ಆ ಪದದ ನಿಜ ಅರ್ಥ ಹೇಳಿದ ನಂತರ ಅವರು ಕ್ಷಮೆ ಕೇಳಿದರು.

ಉಪ್ಪಿ 92.7 ಎಫ್.ಎಂ.ನ ಅಧಿಕೃತ ರಾಯಭಾರಿಯಾಗಿದ್ದರಿಂದ ಅವರು ಸ್ವಲ್ಪ ಅತ್ಯುತ್ಸಾಹದಲ್ಲೇ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರಲ್ಲಿ ತಪ್ಪೇನಿಲ್ಲ. ಆದರೆ ಉಪೇಂದ್ರ ಕನ್ನಡ ಚಿತ್ರರಂಗ ಕಂಡ ಶತಮಾನದ ನಟ ಎಂಬ ರೀತಿಯಲ್ಲಿ ಆತನನ್ನು ಬಿಂಬಿಸಿದ್ದು ಮಾತ್ರ ಎಂಥವರನ್ನೂ ಗಾಬರಿಗೊಳಿಸುವಂತಿತ್ತು. ಕೊನೆಗೆ ಇದೆಲ್ಲ ಎಷ್ಟು ತಲೆನೋವು ತಂದಿತೆಂದರೆ 92.7 ಎಫ್.ಎಂ. ಚಾನೆಲ್ ಆಫ್ ಮಾಡಿದ ಅದೆಷ್ಟೋ ಶ್ರೋತೃಗಳು ಇನ್ನೆಂದೂ ಅದನ್ನು ಕೇಳುವುದಿಲ್ಲ ಎನ್ನುವಷ್ಟರ ಮಟ್ಟಿಗೆ ಆ ಚಾನೆಲ್ ಉಪ್ಪಿಮಯವಾಗಿತ್ತು.

ಉಪ್ಪಿ ಹುಟ್ಟುಹಬ್ಬಕ್ಕೆ ಜನರನ್ನು ಆಹ್ವಾನಿಸಿದ್ದರು, ಆದರೆ ಅಕಸ್ಮಾತ್ ಜನ ಬಾರದಿದ್ದರೆ? ಅದಕ್ಕೆಂದೇ ಎಫ್.ಎಂ ಚಾನೆಲ್‌ರವರು ಸುಮಾರು ಐದು ಬಸ್‌ಗಳಲ್ಲಿ ಜನರನ್ನು ತುಂಬಿಕೊಂಡು ದೊಡ್ಡ ಆಲದ ಮರದ ಹತ್ತಿರವಿರುವ ಉಪ್ಪೇಂದ್ರರ 'ರುಪ್ಪೀಸ್' ರೆಸಾರ್ಟಿಗೆ ಕರೆದುಕೊಂಡು ಬಂದಿದ್ದರು. ರಾಜಕಾರಣಿಗಳು ತಮ್ಮ ಸಭೆ ಸಮಾರಂಭಗಳಿಗೆ ಬಾಡಿಗೆ ಜನರನ್ನು ಕರೆತರುತ್ತಾರಲ್ಲ ಹಾಗಿತ್ತು ಉಪ್ಪಿಯ ಬರ್ತ್‌ಡೇಗೆ ಜನರನ್ನು ಕರೆತಂದದ್ದು.

ಸಾಮಾನ್ಯವಾಗಿ ರಾಜಕೀಯ ಕಾರ್ಯಕ್ರಮವಾದ ನಂತರ ಬಾಡಿಗೆ ಜನರನ್ನು ಕೇಳುವವರೇ ಇಲ್ಲದಂತಾಗುತ್ತದಲ್ಲ, ಅವತ್ತೂ ಹಾಗೆಯೇ ಆಯಿತು ಉಪ್ಪಿ ಹುಟ್ಟುಹಬ್ಬಕ್ಕೆ ಬಂದಿದ್ದ ಬಾಡಿಗೆ ಅಭಿಮಾನಿಗಳ ಪರಿಸ್ಥಿತಿ. ಅಂದಹಾಗೆ, ಉಪ್ಪಿಯ ಬರ್ತ್‌ಡೇಗಾಗಿ ಆ ಚಾನೆಲ್‌ನವರು ಇಪ್ಪತ್ತು ಲಕ್ಷ ರೂಪಾಯಿ ಮೀಸಲಿಟ್ಟಿದ್ದರಂತೆ. ಈಗ ಆ ಇಪ್ಪತ್ತು ಲಕ್ಷ ಹೇಗೆ ಖರ್ಚಾಯಿತು ಎಂಬುದರ ಬಗ್ಗೆ ಚಾನೆಲ್‌ನಲ್ಲೇ ಹೊಸ ವಿವಾದ ಸೃಷ್ಟಿಯಾಗಿದೆಯಂತೆ.

ಅದೆಲ್ಲ ಇರಲಿ, ಉಪ್ಪಿಗಾದರೂ ಈ ರೀತಿ ತನ್ನ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುವ ಹುಚ್ಚು ಯಾಕಾಯಿತೋ ಗೊತ್ತಿಲ್ಲ. ಇವತ್ತು ಗಣೇಶ್, ವಿಜಯ್ ತರಹದ ಯುವ ನಟರು ಯಾವುದೇ ಗಾಡ್‌ಫಾದರ್‌ಗಳ ಸಹಾಯವಿಲ್ಲದೆ ನಂ.1 ಸ್ಥಾನಕ್ಕೆ ದಾಳಿಯಿಟ್ಟಿರುವ ಸಂದರ್ಭದಲ್ಲಿ ಉಪೇಂದ್ರನಂತಹ ನಟ ಇನ್ನೂ ಇಂತಹ ಕೀಳು ದರ್ಜೆಯ ಗಿಮಿಕ್‌ಗಳಲ್ಲೇ ಕಾಲ ಕಳೆಯುತ್ತಿರುವುದು ಆಶ್ಚರ್ಯವೆನಿಸುತ್ತದೆಯಲ್ಲವೇ?



ನೇಸರ್ಗಿ ಎಂಬ ಪ್ರಚಾರಪ್ರಿಯೆ

ಕೆಲಸವಿಲ್ಲದ ಬಡಗಿ ಅದೇನೋ ಮಾಡಿದನಂತೆ..... ಎಂಬಂತಿದೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮಿಳಾ ನೇಸರ್ಗಿಯವರ ಸ್ಥಿತಿ. ಆದರೆ ಅವರಿಗೆ ಕೆಲಸವಿಲ್ಲ ಎಂದು ಹೇಳುವಂತಿಲ್ಲ, ಕೆಲಸವಿದೆ, ಆದರೆ ಅವರು ಅದನ್ನು ಬಿಟ್ಟು ಬೇರೆಲ್ಲ ತಲೆಹರಟೆ ಕೆಲಸಗಳಲ್ಲೇ ತೊಡಗುತ್ತಾರೆ. ಮೊನ್ನೆ 'ಚೆಲುವಿನ ಚಿತ್ತಾರ' ಕುರಿತಂತೆ ಅವರು ಎತ್ತಿರುವ ರಾಗ ಅದಕ್ಕೆ ಒಂದು ಉದಾಹರಣೆ.. ಆ ಚಿತ್ರದಲ್ಲಿ ಅಪ್ರಾಪ್ತ ವಯಸ್ಸಿನ ಹುಡುಗಿಯನ್ನು ಬಿಸಿ ಬಿಸಿ ಪ್ರಣಯದ ದೃಶ್ಯಗಳಲ್ಲಿ ತೋರಿಸಿದ್ದಕ್ಕೆ ನಿರ್ದೇಶಕ ನಾರಾಯಣ್‌ಗೆ ನೇಸರ್ಗಿ ನೋಟೀಸ್ ನೀಡಿದ್ದಾರೆ.

ಈ ಹಿಂದೆ ಸಮಾರಂಭವೊಂದರಲ್ಲಿ ಶಿಲ್ಪಾ ಶೆಟ್ಟಿಯನ್ನು ರಿಚರ್ಡ್ ಗೇರ್ ಚುಂಬಿಸಿದ್ದನ್ನು ಖಂಡಿಸಿದ್ದ ನೇಸರ್ಗಿ ಅವಕಾಶ ಸಿಕ್ಕಲೆಲ್ಲ ಭಾರತೀಯ ಸಂಸ್ಕೃತಿಯ ಬಗ್ಗೆ ದೊಡ್ಡ ದೊಡ್ಡ ಭಾಷಣಗಳನ್ನು ಬಿಗಿದಿದ್ದರು.. ಆನಂತರ 'ಆನು ದೇವಾ...' ಕೃತಿಗೆ ಸಂಬಂಧಪಟ್ಟಂತೆ ಅದರಲ್ಲಿ ಹನ್ನೊಂದನೆ ಶತಮಾನದಲ್ಲಿ ಜೀವಿಸಿದ್ದ ಮಹಿಳೆಯರನ್ನು ಅವಮಾನಿಸಲಾಗಿದೆ ಎಂದು ಆರೋಪಿಸಿ ಅಂದಿನ ಕಾಲದ ಮಹಿಳೆಯರ ಪರವಾಗಿ ಲೇಖಕ ಬಂಜಗೆರೆ ಜಯಪ್ರಕಾಶರ ವಿರುದ್ಧ ಕ್ರಮ ಜರುಗಿಸುವು ದಾಗಿಯೂ ಘೋಷಿಸಿದ್ದರು.

ಗತಕಾಲದ ಮಹಿಳೆಯರು, ದೂರದ ನಟಿಯರ ಮಾತಿರಲಿ, ಇಲ್ಲಿ ನಮ್ಮ ನಾಡಿನಲ್ಲಿ ಇವತ್ತು ಶೋಷಣೆಗೆ ಗುರಿಯಾಗಿರುವ ಮಹಿಳೆಯರಿಗೆ ಮೊದಲು ನ್ಯಾಯ ಕೊಡಿಸಮ್ಮ ಎಂದರೆ ನೇಸರ್ಗಿ ಮೇಡಂ ಗಪ್ ಚುಪ್!! ಚೆಡ್ಡಿಗಳ ಸಂಘ ಪರಿವಾದರ ಸದಸ್ಯೆಯಾಗಿರುವ ನೇಸರ್ಗಿ,, ನರ್ಸ್ ಜಯಲಕ್ಷ್ಮಿ ಪ್ರಕರಣದಲ್ಲಿ ಮಹಿಳೆಯ ಪರ ವಹಿಸುವ ಬದಲಾಗಿ ಚೆಡ್ಡಿ ಚತುರ ರೇಣುಕಾಚಾರ್ಯನ ವಕಾಲತ್ತು ವಹಿಸಿದ್ದು ಇದಕ್ಕೊಂದು ಉದಾಹರಣೆ.. ಈಕೆಯನ್ನು ಭಾರತೀಯ ನಾರಿ ಎಂದು ಕರೆಯಬೇಕೋ ಅಥವಾ ಭಾರತ ಮಹಿಳೆಯರ ಪಾಲಿಗೆ ಮಾರಿ ಎಂದು ಕರೆಯಬೇಕೋ ಗೊತ್ತಾಗುತ್ತಿಲ್ಲ!

ಅದೆಲ್ಲ ಇರಲಿ, "ಒಂದು ಸಿನಿಮಾ ಪ್ರದರ್ಶನಕ್ಕೆ ಸೆನ್ಸಾರ್ ಮಂಡಳಿಯ ಸರ್ಟಿಫಿಕೇಟೇ ಮುಖ್ಯವಾಗುತ್ತದೆ.. ಅಲ್ಲಿ ಎಲ್ಲಾ ನೀತಿ ನಿಯಮಗಳನ್ನೂ ಪಾಲಿಸಿಯೇ ಪ್ರದರ್ಶನಕ್ಕೆ ಯೋಗ್ಯವೋ ಇಲ್ಲವೋ ಎಂಬ ನಿರ್ಧಾರವಾಗುತ್ತದೆ. ಸೆನ್ಸಾರ್ ಅನುಮತಿ ನೀಡಿದ ನಂತರ ಈಕೆ ದೊಣ್ಣೆ ನಾಯಕಿ ಥರ ಮತ್ತೆ ಕ್ಯಾತೆ ತೆಗೆದಿರುವುದು ಯಾಕೆ" ಎಂದು ಚಿತ್ರರಂಗದವರು ಪಕಪಕನೆ ನಗಾಡುತ್ತಿದ್ದಾರೆ.

ಅಂದಹಾಗೆ ವಕೀಲೆಯೂ ಆಗಿರುವ ನೇಸರ್ಗಿ ಹೀಗೆ ಪುಕ್ಕಟೆ ಪ್ರಚಾರ ಪಡೆಯುವುದನ್ನು, ಸದಾ ಸುದ್ದಿಯಲ್ಲಿರುವುದನ್ನು ಕಂಡು ಚಿತ್ರರಂಗದ ನಾಯಕಿಯರೇ ದಂಗಾಗಿ ಹೋಗಿದ್ದಾರಂತೆ. ಸದ್ಯದಲ್ಲೇ ಅವರೆಲ್ಲ ಆಕೆಯ ನೆರವು, ಸಲಹೆ ಪಡೆಯಲು ಮುಂದಾದರೆ ಅಚ್ಚರಿ ಇಲ್ಲ, ಅಲ್ಲವೆ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate